## ಅಧ್ಯಾಯ – ೧೭

# ಪ್ರೇಕ್ಷಣೀಯ ಸ್ಥಳಗಳು

ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯು ವೈವಿಧ್ಯತೆಯಿಂದ ಕೂಡಿದ್ದು, ಶ್ರೀಮಂತವಾಗಿದೆ. ಭೌಗೋಳಿಕವಾಗಿ ಬಯಲುಸೀಮೆಯಲ್ಲಿದ್ದರೂ ಬಸವನಬೆಟ್ಟ, ನಾರಾಯಣಗಿರಿ, ಬೇಬಿಬೆಟ್ಟ, ಆದಿಚುಂಚನಗಿರಿ, ಹದ್ದಿನಕಲ್ಲು ಹನುಮಪ್ಪನ ಬೆಟ್ಟ, ಕೋಟೆಬೆಟ್ಟ, ತಿಪ್ಪೂರುಬೆಟ್ಟ, ಕುಂದೂರುಬೆಟ್ಟ, ಅಲತಿಗಿರಿ, ಕುಂತಿಬೆಟ್ಟ, ಕರಿಘಟ್ಟ, ಗಜರಾಜಗಿರಿ, ಅಂತರವಳ್ಳಿಬೆಟ್ಟ, ಕೋಳಿರಾಯನಬೆಟ್ಟ ಮುಂತಾದವು ನಿಸರ್ಗ ಪ್ರೇಮಿಗಳಿಗೆ, ಚಾರಣಾಸಕ್ತರಿಗೆ ಮುದ ನೀಡುತ್ತವೆ. ಕಾವೇರಿ ಮತ್ತದರ ಉಪನದಿಗಳಾದ ಹೇಮಾವತಿ, ಲೋಕಪಾವನಿ, ಶಿಂಷಾ ಹಾಗೂ ವೀರವೈಷ್ಣವಿ ನದಿಗಳಿಂದಾಗಿ ಈ ಜಿಲ್ಲೆಯನ್ನೂ ಪಂಚನದಿಗಳ ನಾಡೆಂದು ಕರೆಯಬಹುದಾಗಿದೆ. ಕಾವೇರಿಗೆ ಕನ್ನಂಬಾಡಿ ಬಳಿ ಕೃಷ್ಣರಾಜಸಾಗರ ಅಣೆಕಟ್ಟೆ ನಿರ್ಮಾಣವಾಗುವುದಕ್ಕೆ ಮೊದಲು ಪ್ರಧಾನವಾಗಿ ಮಳೆ ಆಶ್ರಿತ ಕೃಷಿಯನ್ನು ಅವಲಂಬಿಸಿದ್ದ ಈ ಜಿಲ್ಲೆಯು, ಆನಂತರದಲ್ಲಿ ಹಸಿರು ನಾಡಾಗಿ, ಬತ್ತ–ಕಬ್ಬುಗಳನ್ನು ಬೆಳೆಯುವ ಹೊನ್ನಾಡಾಗಿ ಕೃಷಿಕರ ಬದುಕನ್ನು ಹಸನಾಗಿಸುವಲ್ಲಿ ಸಾಕಷ್ಟು ಸಫಲವಾಗಿದೆ.

ಜಿಲ್ಲೆಯ ಪ್ರಾಚೀನ ಶಾಸನಗಳಲ್ಲಿ, ಅಂದಿನ ದಿನಗಳಲ್ಲಿ ರೂಢಿಯಲ್ಲಿದ್ದ ಹಲವಾರು ಆಡಳಿತ ವಿಭಾಗಗಳು ಉಲ್ಲೇಖಿತಗೊಂಡಿವೆ. ಜಿಲ್ಲೆಯಲ್ಲಿರುವ ಗಂಗ ಶಾಸನಗಳಲ್ಲಿ ಕಲ್ಬಪ್ಪು–೧೦೦೦, ಕೊಂಗಾಲ್ನಾಡುಗಳ ಪ್ರಸ್ತಾಪವಿದ್ದರೂ, ಈ ಭಾಗವು ಗಂಗವಾಡಿ–೯೬೦೦೦ ಪ್ರಾಂತಕ್ಕೆ ಸೇರಿದ ಕ(ಕಿ)ಳಲೆ–೧೦೦೦, ಕಬ್ಬಾಹು–೧೦೦೦, ಕಲ್ಕುಣಿ–೩೦೦ ಹಾಗೂ ಬಡಗೆರೆ – ೩೦೦ ನಾಡುಗಳ ನಡುವೆ ಹಂಚಿಹೋಗಿದ್ದು, ಮಂಡ್ಯದ ಬಳಿ ಇರುವ ಕೆರಗೋಡು, ಗಂಗರ ಕಾಲದಲ್ಲಿ 'ಕೆರಗೋಡು ವಿಷಯ' ಎಂಬ ಆಡಳಿತ ಘಟಕದ ಕೇಂದ್ರವಾಗಿತ್ತು. ಕಳಲೆ–೧೦೦೦ಕ್ಕೆ ಸೇರಿದ ಚಿಕ್ಕಗಂಗವಾಡಿ ನಾಡಿನ ರಾಜಧಾನಿ ನೆರೆಯ ಚನ್ನಪಟ್ಟಣ ತಾಲೂಕಿನಲ್ಲಿರುವ ಹೊಂಗನೂರು (ಶಾಸನೋಕ್ತ ಪುಂಗನೂರು) ಆಗಿತ್ತು. ಚೋಳರ ಆಡಳಿತಾವಧಿಯಲ್ಲಿ ಈ ಪ್ರದೇಶವನ್ನು ಮುಡಿಗೊಂಡ ಚೋಳಮಂಡಲ ಹಾಗೂ ದಡಿಗಪಾಡಿ ಪ್ರಾಂತವೆಂದು ಕರೆಯಲಾಗುತ್ತಿತ್ತು. ಮುಂದೆ ಹೊಯ್ಸಳರ ಆಳ್ವಿಕೆಗೆ ಒಳಪಟ್ಟ ನಂತರ ಹೊಯ್ಸಣ ನಾಡೆಂದೇ ಇದು ಖ್ಯಾತಿ ಹೊಂದಿದ್ದ ಅಂಶವನ್ನು ಅವರ ಕಾಲದ ಶಾಸನಗಳು ವ್ಯಕ್ತಪಡಿಸುತ್ತವೆ. ವಿಜಯನಗರದ ಮತ್ತು ನಂತರದ ಅರಸರ ಕಾಲದಲ್ಲಿ

ಈ ಪ್ರದೇಶದ ವಿವಿಧ ಭಾಗಗಳನ್ನು ಕುರುವಂಗನಾಡು, ಹೊಯ್ಸಣ ನಾಡು, ಹೆಬ್ಬೆಟ್ಟನಾಡು, ಬಡಗರೆನಾಡು ಎಂದು ಕರೆಯಲಾಗುತ್ತಿದ್ದು, ಜಿಲ್ಲೆಯ ಕುಂದೂರು, ಮದ್ದೂರು, ಆರಣಿ, ಬಸುರವಾಣ (ಬಸರಾಳು), ದೇವಲಾಪುರ, ಬೆಳಕವಾಡಿ, ಹುಲಿವಾನ, ಬೆಸಗರಹಳ್ಳಿ, ಕಿರುಗವರೆ (ಕಿರುಗಾವಲು) ಮುಂತಾದವು ಸೀಮೆ/ಸ್ಥಳ ಎಂಬ ಆಡಳಿತ ಘಟಕಗಳ ಕೇಂದ್ರಸ್ಥಾನಗಳಾಗಿದ್ದ ಅಂಶ ಅವರ ಕಾಲದ ಶಾಸನಗಳಿಂದ ವೇದ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಾಯದುದ್ದಕ್ಕೂ ಕಂಡುಬರುವ ವಿವಿಧ ನಾಡುಗಳ ಪ್ರಸ್ತಾಪವನ್ನು ಮಾಡಲಾಗಿದ್ದು, ಅಂದಿನ ದಿನಗಳಲ್ಲಿ ಆಯಾ ಸ್ಥಳಗಳಿದ್ದ ಆಡಳಿತ ಘಟಕಗಳ ಬಗ್ಗೆ ಕೂಡ ಇದರಿಂದ ಅರಿಯಬಹುದಾಗಿದೆ.

ಜಿಲ್ಲೆಯ ಸಾಂಸ್ಕೃತಿಕ ಬದುಕಿಗೆ ಉತ್ತಮ ಅಡಿಪಾಯ ಹಾಕಿದ ತಲಕಾಡಿನ ಗಂಗರ ಕಾಲದ ದೇವಾಲಯಗಳು ಜಿಲ್ಲೆಯ ಆತಕೂರು, ಆಲೇನಹಳ್ಳಿ ಮುಂತಾದೆಡೆಗಳಲ್ಲಿವೆ. ಅಲ್ಲದೆ, ಅವರ ಕಾಲದ ಸಪ್ತಮಾತೃಕಾ ಗುಡಿ ಹಾಗೂ ಶಿಲ್ಪಗಳು ಗುತ್ತಲು, ಬೇಲೂರು, ಹೊಳಲು, ಹಲ್ಲೇಗೆರೆ, ಕೆರಗೋಡು, ಕಾಡಕೊತ್ತನಹಳ್ಳಿ, ಕೊಮ್ಮೇರಹಳ್ಳಿ, ಬೆಳಗೊಳ ಮುಂತಾದೆಡೆಗಳಲ್ಲಿವೆ. ಚೋಳರ ಕಾಲದ ದೇವಾಲಯಗಳು ಬಲಮುರಿ, ಮಾರೇಹಳ್ಳಿ, ವೈದ್ಯನಾಥಪುರ, ದಡಗ, ಕನ್ನಂಬಾಡಿ (ಹಿನ್ನೀರು) ಮುಂತಾದೆಡೆಗಳಲ್ಲಿವೆ. ಹೊಯ್ಸಳರ ಕಾಲದ ಸುಂದರ ವಾಸ್ತು ಕಲಾಕೃತಿಗಳು ಹೊಸಹೊಳಲು, ಕಂಬದಹಳ್ಳಿ, ಗೋವಿಂದನಹಳ್ಳಿ, ಕಿಕ್ಕೇರಿ, ಬಸರಾಳು, ಸಿಂದಘಟ್ಟ, ಬೆಳ್ಳೂರು, ನಾಗಮಂಗಲ, ಕೆರೆತೊಣ್ಣೂರು, ಮೇಲುಕೋಟೆ, ಹೊಸಬೂದನೂರು, ಮದ್ದೂರು, ಅರಕೆರೆ, ಬೆಳಗೊಳ, ಮಾಚಘಟ್ಟ, ಲಾಳನಕೆರೆ, ಅಘಲಯ, ಅಗ್ರಹಾರ ಬಾಚಹಳ್ಳಿ, ತೆಂಗಿನಘಟ್ಟ, ಭೈರಾಪುರ, ಸಂತೇಬಾಚಹಳ್ಳಿ, ಸುಂಕಾತೊಣ್ಣೂರು, ಹೊಸಕೋಟೆ, ದಡಗ, ಮುಂತಾದ ಪ್ರಸಿದ್ಧ ಸ್ಥಳಗಳ ಜೊತೆಗೆ ತೊಣಚಿ, ಸಾಸಲು, ಶ್ರೀರಂಗಪುರ, ಕುಂದನಹಳ್ಳಿ, ದೊಡ್ಡಗಾಡಿಗನಹಳ್ಳಿ, ಚಟ್ಟಂಗೆರೆ, ಹೆಮ್ಮನಹಳ್ಳಿ, ದೊಡ್ಡಜಟಕಾ, ಹೊನ್ನೇನಹಳ್ಳಿ, ಹರಿಹರಪುರ, ಮೆಳ್ಳಹಳ್ಳಿ, ಭಾರತೀಪುರ ಮುಂತಾದೆಡೆಗಳಲ್ಲಿಯೂ ಇವೆ. ವಿಜಯನಗರದ ಅರಸರ ಕಾಲದ ದೇವಾಲಯಗಳು ಸಂತೇಬಾಚಹಳ್ಳಿ, ಮಾದಾಪುರ, ಹರವು, ಶ್ರೀರಂಗಪಟ್ಟಣ, ನಾಗಮಂಗಲ ಮುಂತಾದ ಸ್ಥಳಗಳಲ್ಲಿವೆ. ಮೈಸೂರು ಅರಸರ ಕಾಲದ ದೇವಾಲಯಗಳು ಜಿಲ್ಲೆಯಾದ್ಯಂತ ಕಂಡುಬರುತ್ತಿದ್ದು, ಕರಿಘಟ್ಟ, ಮಹಾದೇವಪುರ, ಶ್ರೀರಂಗಪಟ್ಟಣ, ತಿರುಗನಹಳ್ಳಿ, ಮುಂತಾದವನ್ನು ಉದಾಹರಿಸಬಹುದಾಗಿದೆ.

ಧಾರ್ಮಿಕ ಸಾಮರಸ್ಯಕ್ಕೆ ಹೆಸರಾಗಿರುವ ಈ ಜಿಲ್ಲೆಯಲ್ಲಿ ಬಹು ಹಿಂದಿನಿಂದಲೂ ಜೈನಧರ್ಮದ ಪ್ರಭಾವ ಅಧಿಕವಾಗಿದ್ದು, ಗಂಗರ ಕಾಲದಲ್ಲಿ ಅರೆತಿಪ್ಪೂರು, ಕಂಬದಹಳ್ಳಿ, ಗುತ್ತಲು, ಶ್ರೀರಂಗಪಟ್ಟಣ, ಮುಂತಾದವು; ಹೊಯ್ಸಳರ ಕಾಲದಲ್ಲಿ ಕೆರೆತೊಣ್ಣೂರು, ಕೆಲಗೆರೆ, ಬೋಗಾದಿ, ದಡಗ, ಸೂರನಹಳ್ಳಿ, ಹಟ್ಟಣ, ಸುಖದೆರೆ, ಹೊಸಹೊಳಲು ಮುಂತಾದವು ಪ್ರಮುಖ ಜೈನಕೇಂದ್ರಗಳಾಗಿದ್ದವು. ಶ್ರೀವೈಷ್ಣವ ಯತಿ, ಆಚಾರ್ಯ ರಾಮಾನುಜರಿಗೆ ಆಶ್ರಯ ನೀಡಿದ ಈ ಜಿಲ್ಲೆಯ ಕೆರೆತೊಣ್ಣೂರು ಹಾಗೂ ಮೇಲುಕೋಟೆಗಳು ಅವರ ತಪೋಕರ್ಮಭೂಮಿಗಳಾಗಿದ್ದವು. ಸುಮಾರು ೧೨ ವರ್ಷ ಇಲ್ಲಿದ್ದ ರಾಮಾನುಜರಿಂದಾಗಿ ದಕ್ಷಿಣ ಭಾರತದ ಪಂಚ ಶ್ರೀವೈಷ್ಣವ ಕ್ಷೇತ್ರಗಳಲ್ಲಿ ಒಂದಾದ ಮೇಲುಕೋಟೆಯು ಮುಕ್ತಿಕ್ಷೇತ್ರವೆಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಲಕ್ಷ್ಮೀನರಸಿಂಹನ ಗುಡಿಯಿರುವ ದುದ್ದ, ಅರಕೆರೆ, ಮಾರೇಹಳ್ಳಿ, ಕಿಕ್ಕೇರಿ, ಅಕ್ಕಿಹೆಬ್ಬಾಳು, ಶ್ರೀರಂಗಪಟ್ಟಣ, ಸೋಮನಹಳ್ಳಿ ಕೊಪ್ಪಲು ಮತ್ತು ದಡಗ; ಕಂಬದ ನರಸಿಂಹನ ಗುಡಿಯಿರುವ ಸಾತನೂರು, ಅಳೀಸಂದ್ರ, ನವಿಲೆ, ಪಾಲಗ್ರಹಾರ ಮತ್ತು ದೊಡ್ಡ ಗರುಡನಹಳ್ಳಿ; ಉಗ್ರನರಸಿಂಹನ ಗುಡಿಯಿರುವ ಮದ್ದೂರು; ಯೋಗಾನರಸಿಂಹನ ಗುಡಿಯಿರುವ ಕೆರೆತೊಣ್ಣೂರು, ಕಿಕ್ಕೇರಿ, ನಾಗಮಂಗಲ ಹಾಗೂ ಮೇಲುಕೋಟೆಗಳು ಜಿಲ್ಲೆಯ ಪ್ರಮುಖ ನರಸಿಂಹ ಕ್ಷೇತ್ರಗಳಾಗಿವೆ. ಶ್ರೀರಂಗಪಟ್ಟಣದ ಆದಿರಂಗ ಮತ್ತು ಜಿಲ್ಲಾ ಗಡಿಯಲ್ಲಿರುವ ಮಧ್ಯರಂಗ, ಶ್ರೀರಂಗನಾಥ ಕ್ಷೇತ್ರಗಳೆಂದೇ ಪ್ರಸಿದ್ಧವಾಗಿವೆ.

ಅರೆತಿಪ್ಪೂರು (ಕ್ರಿ.ಶ. ೯೧೮) ಹಾಗೂ ಬಸ್ತಿಹೊಸಕೋಟೆ (ಕ್ರಿ.ಶ. ೧೧೧೪) ಗಳಲ್ಲಿರುವ ಬಾಹುಬಲಿ ಶಿಲ್ಪ, ಮದ್ದೂರಿನ ವರದರಾಜ/ಅಲ್ಲಾಳನಾಥ (ಕ್ರಿ.ಶ. ೧೧೨೦) ಹಾಗೂ ವರಾಹನಾಥ ಕಲ್ಲಹಳ್ಳಿಯ ವರಾಹನಾಥ (ಕ್ರಿ.ಶ. ೧೩೩೪) ಶಿಲ್ಪಗಳು ಉತ್ಕೃಷ್ಟ ಕಲಾಕೃತಿಗಳಾಗಿವೆ. ಹತ್ತು ತಲೆಗಳನ್ನು ಹೊಂದಿದ್ದು, ಕೈಯಲ್ಲಿ ಖಡ್ಗ–ಗುರಾಣಿ ಹಿಡಿದ ಸ್ಥಾನಕ ಭಂಗಿಯ ವಿವಿಧ ಪ್ರಮಾಣದ ರಾವಣೇಶ್ವರ ಶಿಲ್ಪಗಳು ಜಿಲ್ಲೆಯ ನಗರಕೆರೆ, ಹೊಸಬೂದನೂರು, ನೀಲಕಂಠನಹಳ್ಳಿ, ಚೋಳನಹಳ್ಳಿ, ನಿಡಘಟ್ಟ, ಕಲ್ಕುಣಿ, ಸರಗೂರು, ಕಾಡುಕೊತ್ತನಹಳ್ಳಿ, ರಾವಂದೂರು ಮುಂತಾದೆಡೆಗಳಲ್ಲಿ ಕಂಡುಬರುತ್ತಿದ್ದು, ನಗರಕೆರೆ, ಕಲ್ಕುಣಿ, ಚೋಳನಹಳ್ಳಿ, ನಿಡಘಟ್ಟಗಳಲ್ಲಿ ಆ ದೇವರ ಗುಡಿಗಳೂ ಇರುವುದು ಮತ್ತೊಂದು ವಿಶೇಷವಾಗಿದೆ. ಪ್ರಾಚೀನರ ಶೌರ್ಯ ಪರಂಪರೆಯನ್ನು ಮಾರ್ದನಿಸುವ ವೀರಗಲ್ಲು– ಮಾಸ್ತಿಕಲ್ಲುಗಳು ಜಿಲ್ಲೆಯ ಕೊತ್ತತ್ತಿ, ಸಂತೇಕಸಲಗೆರೆ, ಆಲೂರು, ಬೇಲೂರು, ಸಣಬ, ಅರುವನಹಳ್ಳಿ, ಹಾಗಲಹಳ್ಳಿ, ನೀಲಕಂಠನಹಳ್ಳಿ, ಗದ್ದೆಭೂವನಹಳ್ಳಿ, ನಿಟ್ಟೂರುಹಲಸಳ್ಳಿ, ದಳವಾಯಿಕೋಡಿಹಳ್ಳಿ, ರಾವಂದೂರು, ಸರಗೂರು, ಕಲ್ಕುಣಿ, ಸುಂಕಾತೊಣ್ಣೂರು, ಚಿಕ್ಕಗಂಗವಾಡಿ, ಗುಡಗನಹಳ್ಳಿ ಮುಂತಾದ ನೂರಾರು ಗ್ರಾಮಗಳಲ್ಲಿದ್ದು, ಹುಲಿಬೇಟೆ ವೀರಗಲ್ಲುಗಳೂ ನಾಲ್ಕಾರು ಕಡೆಗಳಲ್ಲಿವೆ. ಇದರ ಮತ್ತೊಂದು ಪ್ರಕಾರವಾದ ಆತ್ಮಾಹುತಿ ಸ್ಮಾರಕಗಳು ಅಗ್ರಹಾರಬಾಚಹಳ್ಳಿ, ಬಸರಾಳು, ಕೆಲಗೆರೆಗಳಲ್ಲಿದ್ದು, ಜಿಲ್ಲೆಯ ಉದ್ದಗಲಕ್ಕೂ ಹರಡಿಕೊಂಡಿರುವ ವೀರಗಲ್ಲುಗಳ ತುಲನಾತ್ಮಕ ಅಧ್ಯಯನಕ್ಕೆ ಅವಕಾಶವಿದೆ.

ಕವಿ ಷಡಕ್ಷರದೇವರ (೧೬೫೫–೧೭೦೦) ಧನಗೂರು ಹಾಗೂ ಡಿ.ಹಲಸಳ್ಳಿ, ವಚನಕರರಾದ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರರ ಕಾಪನಹಳ್ಳಿ ಮುಂತಾದವು ಜಿಲ್ಲೆಯ ವೀರಶೈವ ಕ್ಷೇತ್ರಗಳಾದರೆ, ಪ್ರಾಚೀನ ಕಾಲದಿಂದಲೂ ನಾಥಪಂಥದ ಕೇಂದ್ರವಾಗಿರುವ ಆದಿಚುಂಚನಗಿರಿಯು ಒಕ್ಕಲಿಗರೂ ಸೇರಿದಂತೆ ಎಲ್ಲಾ ಜನಾಂಗದವರಿಗೂ ಪವಿತ್ರ ತಾಣವಾಗಿದೆ. ಮೇಲುಕೋಟೆಯ ವೈರಮುಡಿ ಉತ್ಸವ, ಶ್ರೀರಂಗಪಟ್ಟಣದ ರಂಗಮುಡಿ ಉತ್ಸವ, ಆದಿಚುಂಚನಗಿರಿಯ ಭೈರವ, ಹೇಮಗಿರಿಯ ರಂಗನಾಥ, ಮುತ್ತತ್ತಿಯ ಮುತ್ತೆತ್ತರಾಯ ಮತ್ತು ಸಾಸಲಿನ ಮಾನಿಕಸೆಟ್ಟಿ ಜಾತ್ರೆಗಳೊಂದಿಗೆ ಹೇಮಗಿರಿ ಹಾಗೂ ಬೇಬಿಬೆಟ್ಟಗಳಲ್ಲಿ ನಡೆಯುವ ದನದ ಜಾತ್ರೆಗಳೂ ಜಿಲ್ಲೆಯ ವಿಶೇಷ ಆಕರ್ಷಣೆಗಳಾಗಿವೆ. ಜಾತ್ರೆ ಸಂದರ್ಭದಲ್ಲಿ ಅರಕೆರೆ, ಕಿಕ್ಕೇರಿಗಳಲ್ಲಿ ಸಾಗುವ ದಿಮ್ಸಾಲೆ ಕುಣಿತ, ಅರಕೆರೆಯ ಶೂಲದ ಹಬ್ಬ, ಅರಕೆರೆ, ಹಲ್ಲೇಗೆರೆ, ಹುಲಿಗೆರೆ, ಮುಂತಾದೆಡೆಗಳಲ್ಲಿ ನಡೆಯುವ ಸಿಡಿಸೇವೆಗಳೂ ವಿಶಿಷ್ಟವಾಗಿರುತ್ತವೆ. ಮಂಟೇಸ್ವಾಮಿ ಸಂಪ್ರದಾಯಕ್ಕೆ ನಾಂದಿ ಹಾಡಿದ ಮಂಟೇಸ್ವಾಮಿಯ ಸಮಾಧಿ ಇರುವ ಬೊಪ್ಪಗೌಡನಪುರ, ಶಿಷ್ಯ ಸಿದ್ಧಪ್ಪನ ಜನ್ಮಸ್ಥಳವಾದ ನಿಡಘಟ್ಟ ಹಾಗೂ ಪವಾಡ ಮೆರೆದ ಹಲಗೂರುಗಳೂ ಜಿಲ್ಲೆಯಲ್ಲಿವೆ. ಇಸ್ಲಾಂ ಧರ್ಮೀಯರಿಗೆ ಕೆರೆತೊಣ್ಣೂರು, ಶಿವಸಮುದ್ರ, ನಿಡಘಟ್ಟ, ಶ್ರೀರಂಗಪಟ್ಟಣಗಳು ಪ್ರಮುಖ ಕ್ಷೇತ್ರಗಳಾದರೆ, ಚಿಕ್ಕರಸಿನಕೆರೆ, ಪಾಲಹಳ್ಳಿ, ಶ್ರೀರಂಗಪಟ್ಟಣ, ಪಾಂಡವಪುರ, ಕದಲೂರು ಮುಂತಾದೆಡೆಗಳಲ್ಲಿರುವ ಪುರಾತನ ಇಗರ್ಜಿಗಳು ಕ್ರಿಶ್ಚಿಯನ್ನರಿಗೆ ಪವಿತ್ರವಾಗಿವೆ.

ಪ್ರಕೃತಿ ಪ್ರೇಮಿಗಳಿಗೆ ಪ್ರಿಯವಾದ, ಜಿಲ್ಲೆಯ ಗಗನಚುಕ್ಕಿ ಹಾಗೂ ಶಿಂಷಾ ಜಲಪಾತ, ವಿಶ್ವವಿಖ್ಯಾತ ರಂಗನತಿಟ್ಟು, ಜನಪದ ಪಕ್ಷಿಧಾಮ ಕೊಕ್ಕರೆ ಬೆಳ್ಳೂರು, ಆದಿಚುಂಚನಗಿರಿಯ ನವಿಲುಧಾಮ, ಹೇಮಗಿರಿ ಮತ್ತು ಗೆಂಡೆಹೊಸಹಳ್ಳಿ ಪಕ್ಷಿಧಾಮಗಳು; ಕಾವೇರಿಗೆ ಆಣೆ ಕಟ್ಟಿರುವ ಕೃಷ್ಣರಾಜಸಾಗರ, ಸುರಂಗ ಕಾಲುವೆ ಇರುವ (ಬುಗೆ) ಕಾಳೇನಹಳ್ಳಿ–ಹುಲಿಗೆರೆ; ಹೇಮಾವತಿ ಅಣೆಕಟ್ಟೆ ಇರುವ ಹೇಮಗಿರಿ, ಮಂದಗೆರೆ; ಶಿಂಷಾ ಅಣೆಕಟ್ಟೆಯಿರುವ ಅಣೆದೊಡ್ಡಿ (ತಗ್ಗಹಳ್ಳಿ); ಜಲವಿದ್ಯುತ್ ಉತ್ಪಾದನೆಗೆ ಹೆಸರಾದ ಶಿವಸಮುದ್ರ (ಬ್ಲಫ್) ಹಾಗೂ ಶಿಂಷಾ ಜಲವಿದ್ಯುದಾಗಾರ ಕೇಂದ್ರಗಳು ಉಲ್ಲೇಖಾರ್ಹವಾಗಿವೆ.

ಅಲ್ಲದೆ ಜಿಲ್ಲೆಯ ಚಾರಿತ್ರಿಕ, ಸಾಂಸ್ಕೃತಿಕ ಅಧ್ಯಯನದಲ್ಲಿ ತೊಡಗಿರುವ ಶೈಕ್ಷಣಿಕ ಆಸಕ್ತರಿಗೆ, ಸಂಶೋಧಕರಿಗೆ ಮತ್ತು ವಿದ್ವಾಂಸರಿಗೆ ಜಿಲ್ಲೆಯಲ್ಲಿರುವ ಅಂಕನಾಥಪುರ, ಅಮೃತಿ, ಅನುವಾಳ, ಅಬಲವಾಡಿ, ಆಲದಹಳ್ಳಿ, ಕಬ್ಬಾರೆ, ಕದಲೂರು, ಕಾಚೇನಹಳ್ಳಿ, ಕ್ಯಾತಘಟ್ಟ, ಕಿರುಗಾವಲು, ಕೈಗೋನಹಳ್ಳಿ, ಕೊತ್ತತ್ತಿ, ಕೊಪ್ಪ, ಗುತ್ತಲು, ಚಟ್ಟನಹಳ್ಳಿ, ಚಾಕೇನಹಳ್ಳಿ, ಜಾಕನಕೆರೆ, ತಗ್ಗಹಳ್ಳಿ, ದಳವಾಯಿ ಕೋಡಹಳ್ಳಿ, ದೊಡ್ಡಂಕನಹಳ್ಳಿ, ನೀಲಕಂಠನಹಳ್ಳಿ, ನಿಟ್ಟೂರುಹಲಸಳ್ಳಿ, ಪಡವಲಪಟ್ಟಣ, ಪೂರಿಗಾಲಿ, ಬನ್ನಂಗಡಿ, ಬಳೆಅತ್ತಿಕುಪ್ಪೆ, ಬೆಳ್ಳಾಳೆ, ಬೇಲೂರು, ಬೊಪ್ಪಸಂದ್ರ, ಮರಲ್ಗಳ್ಳಿ, ಮುದಗುಂಡೂರು, ಮುದಿಗೆರೆ, ಮೊಳ್ಳೇನಹಳ್ಳಿ, ಶಂಭುನಹಳ್ಳಿ, ಸಂಗಾಪುರ, ಸೀರನಹಳ್ಳಿ, ಸಂಗಾಪುರ, ಸೋಮನಾಥಪುರ, ಸುಬ್ಬರಾಯನಕೊಪ್ಪಲು, ಹಂಗರಹಳ್ಳಿ, ಹಗಾದೂರು, ಹಲಸಳ್ಳಿ, ಹಾಗಲಹಳ್ಳಿ, ಹುಬ್ಬಹಳ್ಳಿ, ಹುಲಿವಾನ, ಹುಸ್ಕೂರು, ಎಚ್.ಹೊನ್ನಲಗೆರೆ, ಹೋತನಮಡು, ಕೆ. ಹೊನ್ನಲಗೆರೆ, ಮುಂತಾದ ನೂರಾರು ಸ್ಥಳಗಳು ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಲು ಪ್ರೇರೇಪಿಸುತ್ತವೆ. ಹೀಗೆ ಪ್ರಾಕೃತಿಕವಾಗಿ, ಚಾರಿತ್ರಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಶಿಷ್ಟ ಪರಂಪರೆಯನ್ನು ಹೊಂದಿರುವ ಮಂಡ್ಯ ಜಿಲ್ಲೆಯಲ್ಲಿರುವ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಮಹತ್ವದ ಆಯ್ದ ಸ್ಥಳಗಳನ್ನಿಲ್ಲಿ 'ಅ'ಕಾರಾದಿಯಲ್ಲಿ ಪರಿಚಯಿಸಲಾಗಿದ್ದು, ಕೆಲವನ್ನು ಸಮೀಪದ ಸ್ಥಳಗಳಿಗೆ ಜೋಡಿಸಲಾಗಿದೆ. ೧೯೯೧ರ ಜನಗಣತಿಯನ್ನಾಧರಿಸಿದ ಆಯಾ ಸ್ಥಳದ ಜನಸಂಖ್ಯೆಯನ್ನೂ ಆವರಣದಲ್ಲಿ ನೀಡಲಾಗಿದೆ. ಆದರೆ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಿಗೆ ಸಂಬಂಧಿಸಿದಂತೆ ೨೦೦೧ರ ಜನಗಣತಿಯ ತಾತ್ಕಾಲಿಕ ಜನಸಂಖ್ಯೆಯನ್ನು ಆವರಣದಲ್ಲಿ ನೀಡಲಾಗಿದೆ.

**ಅಕ್ಕಿಹೆಬ್ಬಾಳು (೩೩೬೧)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೫ ಕಿ.ಮೀ. ನೈಋತ್ಯಕ್ಕಿರುವ ಹೋಬಳಿ ಕೇಂದ್ರ. ಇಲ್ಲಿಂದ ಒಂದೂವರೆ ಕಿ.ಮೀ. ದೂರದಲ್ಲಿರುವ ಹಳೆ ಊರಿದ್ದ ಜಾಗದಲ್ಲಿ ಪ್ರಾಚೀನ ಕಾಲದ ಕೊಂಕಣೇಶ್ವರ, ಲಕ್ಷ್ಮೀನರಸಿಂಹ ಹಾಗೂ ಚನ್ನಕೇಶವ ದೇವಾಲಯಗಳಿವೆ. ಕೊಂಕಣೇಶ್ವರ ದೇವಾಲಯದಲ್ಲಿರುವ ಸುಮಾರು ೧೨-೧೩ನೆಯ ಶತಮಾನದ ಶಾಸನದಲ್ಲಿ ಊರಿನ ಹೆಸರು ಹೆಬ್ಬೊಳಲು (ಹಿರಿದಾದ ಪೊಳಲು ಅಂದರೆ ದೊಡ್ಡ ಪಟ್ಟಣ) ಎಂದು ಉಲ್ಲೇಖಿತಗೊಂಡಿದೆ. ಪೂರ್ವಾಭಿಮುಖವಾಗಿರುವ ಇಲ್ಲಿಯ ಕೊಂಕಣೇಶ್ವರ (ಶಾಸನೋಕ್ತ ಕೊಂಗಳೇಶ್ವರ) ದೇವಾಲಯವು ದ್ವಿಕೂಟವಾಗಿದ್ದು ಅಕ್ಕಪಕ್ಕಕ್ಕಿರುವ ಎರಡು ಪ್ರತ್ಯೇಕ ಗರ್ಭಗೃಹ ಹಾಗೂ ತೆರೆದ ಅಂತರಾಳಗಳಿಗೆ ಸೇರಿದಂತೆ, ಮುಂದೆ ವಿಶಾಲವಾದ ಒಂದೇ ನವರಂಗವಿದ್ದು, ಹೊರಗಿರುವ ಹಜಾರ ನಂತರದ ಸೇರ್ಪಡೆಯಾಗಿದ್ದು ನವರಂಗಕ್ಕೆ ಎರಡು ಪ್ರವೇಶದ್ವಾರಗಳಿವೆ. ಕಳೆದ ಶತಮಾನದಂಚಲ್ಲಿ ಜೀರ್ಣೋದ್ಧಾರಗೊಂಡಿರುವ ಈ ನಿರಾಡಂಬರ ದೇವಾಲಯದಲ್ಲಿ ಶಿವಲಿಂಗ, ನಂದಿ, ಗೋಪಾಲಕೃಷ್ಣ ಹಾಗೂ ಪಾರ್ವತಿಯ ಶಿಲ್ಪಗಳಿದ್ದು, ಮೇಲೆ ಗಾರೆ ಶಿಖರಗಳಿವೆ. ನವರಂಗದ ಕಂಬಗಳು ಸರಳವಿದ್ದು ಛತ್ತನ್ನು ಕಮಲಗಳಿಂದ ಅಲಂಕರಿಸಲಾಗಿದೆ. ಈ ದೇವಾಲಯದ ಬಲಭಾಗವು ಹೊಯ್ಸಳರ ಕಾಲದ ರಚನೆಯನ್ನು ನೆನಪಿಸಿದರೆ, ಎಡಭಾಗವು ನಂತರದ ಸೇರ್ಪಡೆಯಾಗಿದ್ದು, ಹಿಂದೆ ಊರಾಚೆ ತೋಪಿನಲ್ಲಿ ಪಾಳುಬಿದ್ದಿದ್ದ ಸೋಮೇಶ್ವರ ಗುಡಿಯ ಲಿಂಗವನ್ನು ತಂದು ಇಲ್ಲಿ ಪ್ರತಿಷ್ಠಾಪಿಸಲಾಗಿದ್ದು, ಈ ದೇವರ ಜಾತ್ರೆಯು ಮಾಘ ಮಾಸದಲ್ಲಿ ಜರುಗುತ್ತದೆ.

ಈ ಗುಡಿಯ ಬದಿಯಲ್ಲೇ ಪಶ್ಚಿಮಾಭಿಮುಖವಾಗಿ ನಿಂತಿರುವ ಇಲ್ಲಿಯ ಲಕ್ಷ್ಮೀನರಸಿಂಹ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ೨೪ ಕಂಬಗಳುಳ್ಳ ವಿಶಾಲವಾದ ನವರಂಗ, ಮುಖಮಂಟಪ ಹಾಗೂ ದ್ವಾರಗೋಪುರವುಳ್ಳ ಪ್ರಾಕಾರವಿದ್ದು, ಇದು ವಿಜಯನಗರೋತ್ತರ (ಹೊಳೆನರಸೀಪುರದ ಪಾಳೆಯಗಾರ ನರಸನಾಯಕ?) ಕಾಲದ ರಚನೆಯಾಗಿದೆ. ಗರ್ಭಗೃಹದಲ್ಲಿ ಗರುಡ ಪೀಠದ ಮೇಲಿರುವ ಆರು ಅಡಿ ಎತ್ತರದ ಭವ್ಯ ಲಕ್ಷ್ಮೀನರಸಿಂಹಮೂರ್ತಿಯು ಅಸೀನ ಭಂಗಿಯಲ್ಲಿದ್ದು, ಚತುರ್ಭುಜಧಾರಿ ನರಸಿಂಹನ ಎಡತೊಡೆಯ ಮೇಲೆ ದ್ವಿಭುಜಧಾರಿ ಲಕ್ಷ್ಮಿಯು ಆಲಿಂಗನ ಭಂಗಿಯಲ್ಲಿ ಅಸೀನಳಾಗಿದ್ದು, ಎಡಗೈಯಲ್ಲಿ ಅಮೃತ ಕಳಶ ಹಿಡಿದಿದ್ದಾಳೆ. ಅತ್ಯಂತ ಆಕರ್ಷಕವಾಗಿರುವ ಈ ಶಿಲ್ಪ

ಹೊಯ್ಸಳ ಶೈಲಿಯಲ್ಲಿದೆ. ಗರ್ಭಗೃಹದ ಮೇಲೆ ನವೀನ ಗಾರೆ ಶಿಖರವಿದೆ. ನವರಂಗದ ದೇವಕೋಷ್ಠಗಳಲ್ಲಿ, ವಿಶ್ವಕಸೇನ ಹಾಗೂ ಆಳ್ವಾರರ ಶಿಲ್ಪಗಳಿದ್ದು, ಕಂಬಗಳು ಸರಳವಾಗಿವೆ. ಈ ದೇವಾಲಯದ ಎಡ–ಬಲಭಾಗಗಳಲ್ಲಿ ಅಮ್ಮನವರು ಹಾಗೂ ಆಳ್ವಾರರ ಗುಡಿಗಳಿದ್ದು, ಪ್ರಾಕಾರದ ದ್ವಾರಗೋಪುರವನ್ನು ಗಾರೆಶಿಲ್ಪಗಳಿಂದ ಅಲಂಕರಿಸಲಾಗಿದೆ. ಈ ದೇವಾಲಯದ ಮುಂಬದಿಯಲ್ಲಿ ಪ್ರಹ್ಲಾದ ಮಂಟಪ, ಕೋಟೆರಾಯನ ಮಂಟಪ ಹಾಗೂ ವೃಂದಾವನಗಳಿದ್ದು, ಈ ದೇವರ ಜಯಂತಿ ಉತ್ಸವವು ಜುಲೈ ತಿಂಗಳಲ್ಲಿ ನಡೆಯುತ್ತದೆ. ಪೂರ್ಣ ಶಿಥಿಲಾವಸ್ಥೆಯಲ್ಲಿದ್ದ ಈ ದೇವಾಲಯ ಸಂಕೀರ್ಣವು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಸಮಿತಿಯ ಅರ್ಥಿಕ ಮತ್ತು ತಾಂತ್ರಿಕ ಸಹಕಾರದಿಂದಾಗಿ ಇಂದು ಸುಸ್ಥಿತಿಯಲ್ಲಿದೆ. ಇದರ ಎಡಕ್ಕಿರುವ ಚನ್ನಕೇಶವ ದೇವಾಲಯದ ಗರ್ಭಗೃಹ, ಅಂತರಾಳಗಳಷ್ಟೇ ಉಳಿದಿದ್ದು, ಹಿಂದೆ ಅಲ್ಲಿದ್ದ ಕಿರು ಪ್ರಮಾಣದ ಚನ್ನಕೇಶವ ಹಾಗೂ ಸರಸ್ವತಿ ಶಿಲ್ಪಗಳನ್ನು ಇಂದು ಧರ್ಮಸ್ಥಳದಲ್ಲಿ ಸಂರಕ್ಷಿಸಿಡಲಾಗಿದೆ ಎಂದು ತಿಳಿದುಬರುತ್ತದೆ. **ಮಂಚಿಬೀಡು (೩೪೯)** : ಅಕ್ಕಿಹೆಬ್ಬಾಳಿನಿಂದ ಎಂಟು ಕಿ.ಮೀ. ದೂರವಿರುವ ಇಲ್ಲಿಂದ ಈವರೆಗೆ ಸುಮಾರು ಕ್ರಿ.ಶ. ೧೧ ಹಾಗೂ ೧೪ನೆಯ ಶತಮಾನದ ಎರಡು ವೀರಗಲ್ಲು ಶಾಸನಗಳು ವರದಿಯಾಗಿವೆ. ಸುಮಾರು ಕ್ರಿ.ಶ. ೧೧ ನೆಯ ಶತಮಾನಕ್ಕೆ ಸೇರಿದ ಇಲ್ಲಿಯ ಈಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ಹೊಯ್ಸಳ ಶೈಲಿಯಲ್ಲಿದೆ. ಮೂಲತ: ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದ ಇದರ ಬಲಭಾಗ ಇಂದು ಪೂರ್ಣ ಶಿಥಿಲಗೊಂಡಿದ್ದು ಎಡಭಾಗ ಮಾತ್ರ ಸುಸ್ಥಿತಿಯಲ್ಲಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲವಾಡ ಸರಳವಾಗಿದೆ. ದೇವಾಲಯದ ಭಿತ್ತಿಗೆ ಅಲಂಕಾರಿಕ ಕಂಬಗಳಿದ್ದ ಅಂಶ ಅಳಿದುಳಿದಿರುವ ಭಿತ್ತಿ ಭಾಗದಿಂದ ವೇದ್ಯವಾಗುತ್ತದೆ. ಉಳಿದಂತೆ ಇಲ್ಲಿ ಇತ್ತೀಚಿನದಾದ ಬಸವಣ್ಣ, ವೀರಭದ್ರ ಹಾಗೂ ಮಾರಮ್ಮನ ಗುಡಿಗಳಿವೆ. **ಆಲೇನಹಳ್ಳಿ (೧೨೮೧)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೨೩ ಕಿ.ಮೀ. ಪಶ್ಚಿಮಕ್ಕಿದ್ದು, ಊರ ಮುಂದಿನ ಶಂಭುಲಿಂಗೇಶ್ವರ ದೇವಾಲಯದಲ್ಲಿರುವ ಏಕೈಕ ಶಾಸನವು ಗಂಗ ಅರಸ ನೀತಿವಾಕ್ಯ ಪೆರ್ಮಾನಡಿಯ ಕಾಲದಲ್ಲಿ, 'ಕಲವುರ ಕಾಳಗ'ದಲ್ಲಿ ಕಾದಾಡಿ ಮಡಿದ ಬಮ್ಮ (ಬ್ರಹ್ಮಯ್ಯ)ನ ಕುಟುಂಬದವರಿಗೆ ಕಲ್ನಾಟಾಗಿ ಭೂಮಿಯನ್ನು ದಾನ ನೀಡಿದ ಅಂಶವನ್ನು ದಾಖಲಿಸುತ್ತದೆ. ಇಲ್ಲಿಯ ಶಂಭುಲಿಂಗೇಶ್ವರ ದೇವಾಲಯವು ಮೂಲತಃ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಉತ್ತರ–ದಕ್ಷಿಣಗಳಿಂದ ನವರಂಗಕ್ಕೆ ಪ್ರವೇಶವಿದ್ದು, ನಂತರದಲ್ಲಿ ಉತ್ತರದ ದ್ವಾರಕ್ಕೆ ಹೊಂದಿಸಿ ಇನ್ನೊಂದು ಗರ್ಭಗೃಹವನ್ನು ಸೇರಿಸಲಾಗಿದೆ. ಮೂಲ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಅದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು, ಛತ್ತಿನಲ್ಲಿ ಕಮಲಾಲಂಕಾರವಿದೆ. ಗರ್ಭಗೃಹದ ಶಿಖರಕ್ಕೆ ಗಾರೆಶಿಲ್ಪಗಳಿದ್ದು, ತೆರೆದ ಅಂತರಾಳದಲ್ಲಿ ಗಣಪ ಹಾಗೂ ನಂದಿ ಮೂರ್ತಿಗಳಿವೆ. ನವರಂಗದ ಕಂಬಗಳು ಗಿಡ್ಡವಾಗಿದ್ದು ನಡುವಣ ಛತ್ತು ಕಮಲಗಳಿಂದ ಅಲಂಕೃತವಾಗಿದೆ. ಪೂರ್ವದ ಭಿತ್ತಿಗೆ ಅಷ್ಟಕೋನಾಕಾರದ ಜಾಲಂಧ್ರವಿದೆ. ನವರಂಗದ ಎಡಭಾಗಕ್ಕೆ, ನಂತರದಲ್ಲಿ ಸೇರ್ಪಡೆಯಾಗಿರುವ ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ನಾಲ್ಕೂವರೆ ಅಡಿ ಎತ್ತರದ ಶಂಖ, ಚಕ್ರ, ಗದಾ, ಪದ್ಮಾಧಾರಿ ಕೇಶವನ ಸ್ಥಾನಕ ಭಂಗಿಯ ಶಿಲ್ಪವಿದೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು, ವಲ್ಲಭಿ–ಕಪೋತ ಭಾಗವನ್ನು ಗಾರೆಶಿಲ್ಪ, ಕಿರುಗೂಡುಗಳಿಂದ ಅಲಂಕರಿಸಲಾಗಿದೆ. ಸುಮಾರು ಒಂಬತ್ತನೆಯ ಶತಮಾನಕ್ಕೆ ಸೇರಿರಬಹುದಾದ ಗಂಗರ ಕಾಲದ ಈ ದೇವಾಲಯವು ಸಾಕಷ್ಟು ದುರಸ್ತಿಗೊಂಡಿದ್ದರೂ ಮೂಲಸ್ವರೂಪವಿನ್ನೂ ಉಳಿದುಕೊಂಡಿದೆ. ಈ ದೇವಾಲಯದ ಆವರಣದಲ್ಲಿರುವ ಗಂಗರ ಕಾಲದ ವೀರಗಲ್ಲು ಶಾಸನದ ಶಿಲ್ಪವೂ ಗಮನಾರ್ಹವಾಗಿದೆ. ಉಳಿದಂತೆ ಊರಿನಲ್ಲಿ ಇತ್ತೀಚಿನದಾದ ಬೀರಪ್ಪ, ಕೆರೆಕೋಡಿ ಬೀರಪ್ಪ, ಸಿಂಗಮ್ಮ, ಮಾರಮ್ಮ ಮುಂತಾದ ಕಿರುಗುಡಿಗಳಿವೆ. **ಹೊನ್ನೇನಹಳ್ಳಿ (೮೨೦):** ಅಲೇನಹಳ್ಳಿಗೆ ಎರಡು ಕಿ.ಮೀ. ಅಂತರದಲ್ಲಿರುವ ಇಲ್ಲಿಂದ ಈವರೆಗೆ ಗಂಗ ದೊರೆ ಎರೆಯಪ್ಪನ ಉಲ್ಲೇಖವಿರುವ ವೀರಗಲ್ಲು ಶಾಸನ ವರದಿಯಾಗಿದೆ. ಇಲ್ಲಿಯ ಬಸವೇಶ್ವರ ಮಂಟಪದ ಬಳಿಯಿರುವ ಮೂರು ವೀರಗಲ್ಲುಗಳಲ್ಲಿ ಎರಡರಲ್ಲಿದ್ದ ಶಾಸನಗಳು ಸವೆದಿವೆ. ಹಿಂದೆ ಪ್ರಾಚೀನ

ದೇವಾಲಯವೊಂದರ ನಿವೇಶನ ಇದಾಗಿರಬಹುದಿದ್ದು, ಇಂದು ಮಂಟಪವಷ್ಟೇ ಉಳಿದಿದ್ದು, ಅಲ್ಲಿ ಹೊಯ್ಸಳರ ಕಾಲದ ಶಿವಲಿಂಗ, ನಂದಿ ಹಾಗೂ ವೀರಗಲ್ಲುಗಳಿವೆ. ಉಳಿದಂತೆ ಭೈರವ, ಆಂಜನೇಯ, ಲಕ್ಷ್ಮೀದೇವಿ, ಮಾರಮ್ಮ ಮುಂತಾದ ನವೀನ ಗುಡಿಗಳೂ ಇಲ್ಲಿವೆ.

**ಅಗ್ರಹಾರ ಬಾಚಹಳ್ಳಿ (೧೮೪೮)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ಆರು ಕಿ.ಮೀ. ಈಶಾನ್ಯಕ್ಕಿದ್ದು, ಹೊಯ್ಸಳರ ಕಾಲದಲ್ಲಿ ಪ್ರಚಲಿತವಿದ್ದ ಗರುಡ-ಲೆಂಕ ಸಂಪ್ರದಾಯವನ್ನು ಬಿಂಬಿಸುವ ಅಪೂರ್ವ ಅತ್ಮಾಹುತಿ ಶಾಸನಶಿಲ್ಪ ಸ್ತಂಭಗಳಿಂದಾಗಿ ಪ್ರಸಿದ್ಧವಾಗಿದೆ. ಪ್ರಾಚೀನ ಶಾಸನಗಳಲ್ಲಿ ಬಾಚಿಯಹಳ್ಳಿ (ಕ್ರಿ.ಶ.೧೨೪೪), ಬಾಚೆಯಹಳ್ಳಿ (ಕ್ರಿ.ಶ.೧೨೫೬ ಹಾಗೂ ಕ್ರಿ.ಶ.೧೨೯೧ರ ಶಾಸನ) ಎಂದು ಮಾತ್ರ ಉಲ್ಲೇಖಿತಗೊಂಡಿರುವ ಇದು, ಹಿಂದೆ ಕಬ್ಬಾಹು ನಾಡಿನಲ್ಲಿತ್ತು. ಇಲ್ಲಿಂದ ಈವರೆಗೆ ಒಟ್ಟು ಏಳು ಹೊಯ್ಸಳ ಶಾಸನಗಳು ವರದಿಯಾಗಿವೆ. ಇಲ್ಲಿಯ ಹುಣಿಸೇಶ್ವರ ದೇವಾಲಯವು ಹೊಯ್ಸಳರ ಕಾಲದ ರಚನೆಯಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಊರ ನಡುವೆ ಎತ್ತರದ ಸ್ಥಳದಲ್ಲಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದರೆ, ಅಂತರಾಳದಲ್ಲಿ ನಂದಿಶಿಲ್ಪವಿದೆ. ನವರಂಗದ ನಡುವಣ ಛತ್ತು ಹಾಗೂ ಪ್ರಧಾನ ದ್ವಾರಗಳು ಆಕರ್ಷಕವಾಗಿದ್ದು, ಗರ್ಭಗೃಹಕ್ಕೆ ದ್ರಾವಿಡ ಶಿಖರವಿದೆ. ನವರಂಗದ ಹೊರಭಿತ್ತಿಯಲ್ಲಿ ದೇವಕೋಷ್ಠಗಳಿದ್ದು, ಮುಖಮಂಟಪಕ್ಕೆ ಮೂರು ಕಡೆಗಳಿಂದಲೂ ಪ್ರವೇಶವಿದ್ದು, ಸೋಪಾನಗಳಿವೆ. ಇದರ ಎಡಭಾಗದಲ್ಲಿರುವ ವೀರಗಲ್ಲೊಂದಕ್ಕೆಂದೇ ವೀರರಗುಡಿಯನ್ನು ನಿರ್ಮಿಸಲಾಗಿದೆ. ಈ ಪರಿಸರದಲ್ಲಿರುವ ಇತರ ಐದು ವೀರಗಲ್ಲುಗಳು ಬೇರೆ ಬೇರೆ ಸಂದರ್ಭಗಳಲ್ಲಿ ಹೋರಾಡುತ್ತಾ ಮಡಿದ ವೀರರ ಸ್ಮಾರಕಗಳಾಗಿವೆ. ಈ ದೇವಾಲಯದ ದಕ್ಷಿಣ ಭಾಗದಲ್ಲಿರುವ, ಸುಮಾರು ೧೫ ಅಡಿ ಎತ್ತರದ ಮೂರು ಅಪೂರ್ವ ಶಾಸನ ಸ್ತಂಭಗಳು, ಒಂದನೆಯ ಬಲ್ಲಾಳನಿಂದ-ಮುಮ್ಮಡಿ ನರಸಿಂಹನ ಕಾಲಾವಧಿ (ಕ್ರಿ.ಶ. ೧೧೦೦-೧೨೯೧)ಯವರೆಗೆ ಹೊಯ್ಸಳ ಸಾಮ್ರಾಜ್ಯದ ಅಭ್ಯುದಯಕ್ಕಾಗಿ ದುಡಿದು, ಅರಸರಿಗಾಗಿ ಆತ್ಮಾರ್ಪಣೆ ಮಾಡಿಕೊಳ್ಳುವಷ್ಟು ಅಚಲ ಸ್ವಾಮಿನಿಷ್ಠೆಯನ್ನು ಮೆರೆದ ಕಬ್ಬಾಹುನಾಡ ಪ್ರಭು, ಬಾಚಿಹಳ್ಳಿಯ ಮುಗಿಲ ಕುಲದ ಬಣಂಜು ವಂಶಕ್ಕೆ ಸೇರಿದ, ಏಳು ತಲೆಮಾರಿನ ಗರುಡರ ಆತ್ಮಾಹುತಿಯ ಚಾರಿತ್ರಿಕ ಘಟನೆಗಳನ್ನು ಸ್ಮರಿಸಿ ದಾಖಲಿಸಿರುವ ಅಪೂರ್ವ ದಾಖಲೆಗಳಾಗಿವೆ. ಇಲ್ಲಿಯ ಸ್ತಂಭಗಳ ಮೇಲಿರುವ ಶಿಲ್ಪಗಳು ಸಂಬಂಧಪಟ್ಟ ಗರುಡನಾಯಕರು, ತಮ್ಮ ನಾಯಕಿತಿ, ಲೆಂಕ-ಲೆಂಕತಿಯರೊಡಗೂಡಿ ಆನೆಯ ಮೇಲೆ ಕುಳಿತು ಗರುಡನನ್ನಪ್ಪಲು ಅಮಿತೋತ್ಸಾಹದಿಂದ ಹೊರಟ ದೃಶ್ಯದ ತುಣುಕೊಂದನ್ನು ಪ್ರತಿನಿಧಿಸುವಂತೆ ತೋರುತ್ತದೆ. ಇಲ್ಲಿಯ ಈಶ್ವರ (ಎರಡು), ಚನ್ನಕೇಶವ ಹಾಗೂ ಬೋರೆದೇವರ ಗುಡಿಗಳು ಹೊಯ್ಸಳರ ಕಾಲದ ರಚನೆಗಳಾಗಿದ್ದು, ನಂತರದಲ್ಲಿ ಜೀರ್ಣೋದ್ಧಾರಗೊಂಡಿವೆ. ಉಳಿದಂತೆ ಇಲ್ಲಿ ಬಾಚಳಮ್ಮ, ಮಾರಮ್ಮ, ಮಹಾಲಕ್ಷ್ಮಿ, ನಿಂಗಮ್ಮ, ಶನಿದೇವರು ಮುಂತಾದ ಇತ್ತೀಚಿನ ಗುಡಿಗಳಿದ್ದು, ಅನತಿ ದೂರದಲ್ಲೇ ವಿಶಾಲವಾದ ಪ್ರಾಚೀನ ಕೆರೆಯೂ ಇದೆ.

**ಅಘಲಯ (೧೪೨೫)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೨೫ ಕಿ.ಮೀ. ಉತ್ತರಕ್ಕಿದ್ದು, ಭಕ್ತರ ಪಾಪ ನಾಶ ಮಾಡುವ (ಅಘ-ಪಾಪ, ಲಯ-ನಾಶ) ಪವಿತ್ರ ಸ್ಥಳವಾಗಿದೆ. ಇಲ್ಲಿಯ ಏಕೈಕ ಶಾಸನವೂ ಸೇರಿದಂತೆ ನೆರೆಯ ಶ್ರವಣಬೆಳಗೊಳದ ಸುಮಾರು ಎಂಟನೆಯ ಶತಮಾನದ ಒಂದು ಹಾಗೂ ಕ್ರಿ.ಶ. ೧೧೨೦ರ ಇನ್ನೊಂದು ಶಾಸನದಲ್ಲೂ ಊರ ಹೆಸರು 'ಅಗಳೆ' ಎಂದೇ ಉಲ್ಲೇಖಿತಗೊಂಡಿದ್ದು, ಅವುಗಳಿಂದಾಗಿ ಇದು ಹಿಂದೆ ಜೈನ ಕೇಂದ್ರವಾಗಿದ್ದ ಅಂಶ ಸ್ಪಷ್ಟವಾಗುತ್ತದೆ. ಮಿಗಿಲಾಗಿ ಇಲ್ಲಿ ತೀರ್ಥಂಕರ ಮೂರ್ತಿಯೊಂದು ಇತ್ತೆಂಬ ಸ್ಥಳೀಯ ಅಭಿಪ್ರಾಯವೂ ಇದೆ. ಎತ್ತರದ ಸ್ಥಳದಲ್ಲಿ ಜಗತಿಯ ಮೇಲೆ ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿರುವ ಇಲ್ಲಿಯ ಮಲ್ಲೇಶ್ವರ ದೇವಾಲಯ (ಸುಮಾರು ಕ್ರಿ.ಶ.೧೨೬೦)ವು ಸುಮಾರು ೧೦೦ × ೨೫ ಅಡಿ ವಿಸ್ತಾರವಾಗಿದ್ದು, ಒಂದೇ ಸಾಲಿನಲ್ಲಿ ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು, ಎಲ್ಲಕ್ಕೂ ಸೇರಿದಂತೆ

ಇರುವ ವಿಶಾಲ ನವರಂಗದ ದ್ವಾರಕ್ಕೆ ಎರಡಂಕಣದ ಮುಖಮಂಟಪವಿದೆ. ಗೋವಿಂದನಪಳ್ಳಿಯ ಪಂಚಲಿಂಗೇಶ್ವರ ದೇವಾಲಯವನ್ನು ನೆನಪಿಸುವ ಈ ದೇವಾಲಯದ ಮೂರೂ ಗರ್ಭಗೃಹಗಳ ಬಾಗಿಲುವಾಡಗಳ ಲಲಾಟದಲ್ಲಿ ಗಜಲಕ್ಷ್ಮಿ, ತೊಲೆಯಲ್ಲಿ ತಾಂಡವೇಶ್ವರ ಹಾಗೂ ಇಕ್ಕೆಲದಲ್ಲಿ ಅಲಂಕೃತ ಜಾಲಂಧ್ರಗಳಿದ್ದು, ಚಿತ್ತಾಕರ್ಷಕವಾಗಿವೆ. ಒಳಗೆ ಕ್ರಮವಾಗಿ ಚಂದ್ರಮೌಳೀಶ್ವರ, ಮಲ್ಲಿಕಾರ್ಜುನ ಹಾಗೂ ಸಿದ್ಧಲಿಂಗೇಶ್ವರ ನಾಮಾಂಕಿತ ಶಿವಲಿಂಗಗಳಿವೆ. ಆದರೆ ಗರ್ಭಗೃಹಗಳಿಗಿದ್ದ ಶಿಖರಗಳು ಇಂದು ಹಾಳಾಗಿವೆ. ಅಂತರಾಳದ ಬಾಗಿಲುವಾಡದ ಲಲಾಟದಲ್ಲಿ ಉಮಾಮಹೇಶ್ವರ ಕೆತ್ತನೆ ಇದ್ದು, ಬುಡದಲ್ಲಿ ದ್ವಾರಪಾಲಕರಿದ್ದಾರೆ. ಕಮಲಾಲಂಕೃತ ಛತ್ತಿರುವ ನವರಂಗದಲ್ಲಿ ೩೦ ಆಕರ್ಷಕ ಕಂಬಗಳಿದ್ದು, ಅಲ್ಲಿಯ ಏಳು ದೇವಕೋಷ್ಠಗಳಲ್ಲಿ ದ್ವಾದಶಾದಿತ್ಯ ಆವೃತ ಪ್ರಭಾವಳಿಯುಳ್ಳ ಸೂರ್ಯ, ವೀರಭದ್ರ, ಸಪ್ತಮಾತೃಕಾ, ನಾಗಾರ್ಜುನ, ಷಣ್ಮುಖನ ಎರಡು, ಗಣಪತಿಯ ಮೂರು, ಮಹಿಷಮರ್ಧಿನಿಯ ಎರಡು, ನಾಗಶಿಲ್ಪ, ಸರಸ್ವತಿ, ಉಮಾಮಹೇಶ್ವರ ಹಾಗೂ ಕೇಶವ ಶಿಲ್ಪಗಳ ಜೊತೆಗೆ ನಂದಿಯ ಮೂರು ವಿಗ್ರಹಗಳಿವೆ. ನವರಂಗದಂಚಲ್ಲಿ ಕಕ್ಷಾಸನವಿದೆ. ದೇವಾಲಯದ ಪ್ರಧಾನ ದ್ವಾರದ ಬಾಗಿಲುವಾಡವೂ ಆಕರ್ಷಕವಾಗಿದ್ದು, ಮುಖಮಂಟಪಕ್ಕೆ ಹಿಂದೆ ಕಕ್ಷಾಸನವಿತ್ತು. ಬಳಪದ ಕಲ್ಲನ್ನು ಬಳಸಿ ನಿರ್ಮಿಸಲ್ಪಟ್ಟಿರುವ ಈ ದೇವಾಲಯದ ಭಿತ್ತಿಯನ್ನು ವಿಶಾಲವಾದ ಜಾಲಂಧ್ರ, ಅಲಂಕಾರಿಕ ಸ್ತಂಭಗಳೊಂದಿಗೆ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ರಾಮ, ಬಲರಾಮ, ಕೃಷ್ಣ, ವಿಷ್ಣು, ಬುದ್ಧ, ಕಲ್ಕಿ, ಶಿವಪಾರ್ವತಿ ಮುಂತಾದ ಸುಂದರ ಕಿರು ಶಿಲ್ಪಗಳಿಂದ ಅಲಂಕರಿಸಲಾಗಿದೆ. ಪ್ರತೀ ಶಿವರಾತ್ರಿ ಹಾಗೂ ಶ್ರಾವಣ ಸಂದರ್ಭದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಆದರೆ ಈ ದೇವಾಲಯವಿಂದು ಜೀರ್ಣಾವಸ್ಥೆಯಲ್ಲಿದ್ದು, ಅದರ ಸಂರಕ್ಷಣೆಗೆ ಪುರಾತತ್ವ ಇಲಾಖೆ ಹಾಗೂ ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್ ಜಂಟಿಯಾಗಿ ಮುಂದಾಗಿವೆ. ಇಲ್ಲಿಯ ಲಕ್ಷ್ಮೀನಾರಾಯಣ ದೇವಾಲಯವು ಇನ್ನೊಂದು ಪ್ರಾಚೀನ ರಚನೆಯಾಗಿದೆ. ಉಳಿದಂತೆ ಊರಿನಲ್ಲಿ ಪಾಳು ಬಿದ್ದಿರುವ ಈಶ್ವರ; ಬಸವಣ್ಣ, ವಿಘ್ನೇಶ್ವರ, ಆಂಜನೇಯ, ಮಾರಿಕಾಂಬ, ದೇವಮ್ಮ, ಹೊನ್ನಾದೇವಿ, ಮುಂತಾದ ಗುಡಿಗಳಿವೆ. ಬಸವಣ್ಣನ ಗುಡಿ ಬಳಿ ನಾಲ್ಕಾರು ವೀರಗಲ್ಲುಗಳಿವೆ. ಊರಾಚೆ ಇರುವ ಕಾಲಭೈರವ ದೇವರ ಪರಸೆ ಐದು ವರ್ಷಗಳಿಗೊಮ್ಮೆ ಕಾಮನ ಹುಣ್ಣಿಮೆಯಂದು ಜರುಗುತ್ತದೆ. ಇಲ್ಲಿಯ ವಿಶಾಲ ಕೆರೆ ಆಕರ್ಷಕವಾಗಿದೆ.

**ಅಂತರವಳ್ಳಿ (೧೬೬೨) :** ತಾಲೂಕು ಕೇಂದ್ರ ಮಳವಳ್ಳಿಯಿಂದ ೧೫ ಕಿ.ಮೀ. ಈಶಾನ್ಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ಅಂತರವಳ್ಳಿ' , 'ಅನ್ತ್ರವಳ್ಳಿ' , 'ಅನ್ನದಾನಪಳ್ಳಿ' ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಈವರೆಗೆ ಸುಮಾರು ೧೨-೧೩ನೇ ಶತಮಾನಕ್ಕೆ ಸೇರಿದ ತಮಿಳಿನ ಒಂದು ಹಾಗೂ ಕನ್ನಡದ ಎರಡು ಶಾಸನಗಳು ಇಲ್ಲಿಂದ ವರದಿಯಾಗಿವೆ. ಅವುಗಳಲ್ಲಿ ಸೋಮೇಶ್ವರ ಗುಡಿಯ ತಳಪಾದಿ ಕಲ್ಲಲ್ಲಿರುವ ತಮಿಳು ಶಾಸನ, ಹಿಂದೆ ಪಿರಿಯಬಿಟ್ಟಿದೇವನು ಅಗ್ರಹಾರವಾಗಿ ಉಂಬಳಿ ನೀಡಿದ್ದ ಕಳಲೆ ನಾಡಿನ ಅನ್ನದಾನಪಳ್ಳಿಯ ಕೈಲಾಸ ದೇವಸ್ಥಾನದಲ್ಲಿ ಚಂದ್ರಮೂಲಿಯಣ್ಣನು ಚಂದ್ರಮೂಲೀಶ್ವರ ಲಿಂಗವನ್ನು ಪ್ರತಿಷ್ಠಾಪಿಸಿ, ವಿಣ್ಣಾಯಾಂಡರನ ಮಗ ಮಾದೇವನನ್ನು ದೇವಾಲಯದ ಸ್ಥಾನಪತಿಯನ್ನಾಗಿ ಮಾಡಿ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ಶಾಸನಗಳಲ್ಲಿ ಉಕ್ತವಾಗಿರುವ ಕೈಲಾಸೇಶ್ವರ, ಚಂದ್ರಮೂಲೀಶ್ವರ, ರಾಮೇಶ್ವರ ದೇವಾಲಯಗಳಲ್ಲಿ ಊರಾಚೆ ಇರುವ ಸೋಮೇಶ್ವರ (ಚೋಳರ) ಗುಡಿಯೊಂದಷ್ಟೆ ಉಳಿದಿದೆ. ಸಾಕಷ್ಟು ಜೀರ್ಣೋದ್ಧಾರಗೊಂಡಿರುವ ಇದು ಗರ್ಭಗೃಹ ಹಾಗೂ ಆಯತಾಕಾರದ ಸಭಾಮಂಟಪಗಳನ್ನು ಹೊಂದಿದ್ದು, ಇಮ್ಮಡಿ ಬಲ್ಲಾಳನ ಶಾಸನಗಳಿರುವುದು ಅಲ್ಲೇ. ನಿರಾಡಂಬರವಾದ ಈ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗ, ನಂದಿ, ಗಣಪತಿ ಹಾಗೂ ಸೂರ್ಯನ ಮುಕ್ಕಾದ ಶಿಲ್ಪಗಳಿವೆ. ಊರ ಹೆಬ್ಬಾಗಿಲ ಬಳಿ ಇರುವ ಉಪ್ಪರಿಗೆ ಬಸವೇಶ್ವರ ಗುಡಿಯು ನಂದಿ ಕಂಬವನ್ನು ಹೊಂದಿದ್ದು, ಸ್ತಂಭದ ಮೇಲಿರುವ ನಂದಿ ಆರಾಧಿಸಲ್ಪಡುತ್ತದೆ. ಅಲ್ಲೇ ೧೬ನೇ ಶತಮಾನದ ನಾಲ್ಕು ವೀರಗಲ್ಲುಗಳಿವೆ. ಬಯಲಲ್ಲಿರುವ ವೀರಭದ್ರನ ಗುಡಿಯಲ್ಲಿ ವೀರಭದ್ರನ ಶಿಲ್ಪವಿದ್ದು ಬಳಿಯಲ್ಲೇ ವೀರಗಲ್ಲು ಹಾಗೂ ಪನುಮಮುದ್ರೆ ಕಲ್ಲುಗಳಿವೆ. ಇಲ್ಲಿಯ ಸೈಯದ್ ಕರೀಮುಲ್ಲಾ ಷಾ ಖಾದ್ರಿ ದರ್ಗಾದ ಉರುಸು ಮೊಹರಂ

ಆದ ೧೯ನೆಯ ದಿನಕ್ಕೆ ಜರಗುತ್ತಿದ್ದು ಆಗ ಹುಲ್ಲಹಳ್ಳಿಯ ಅಮೀರ್ ಸಾಬರ ಮನೆಯಿಂದ ಗಂಧ ಬರುತ್ತದೆ. ಊರ ಬಳಿಯಿರುವ ಸಿದ್ಧೇಶ್ವರ ಬೆಟ್ಟದ ಮೇಲಕ್ಕೇರಲು ಉದ್ದಕ್ಕೂ ಕಬ್ಬಿಣದ ಸಲಾಕೆಗಳನ್ನು ಒದಗಿಸಲಾಗಿದೆ. ಬೆಟ್ಟದಲ್ಲಿ ಹಲವಾರು ಗವಿಗಳಿವೆ. ಗುರುವಾರ, ಭಾನುವಾರಗಳಂದು ಮಾತ್ರ ಪೂಜೆ ನಡೆಯುವ ಇಲ್ಲಿಯ ಶಂಭುಲಿಂಗನ ಗುಡಿಯ ಗರ್ಭಗೃಹದಲ್ಲಿ ಮರುಳು ಸಿದ್ಧೇಶ್ವರ ಹಾಗೂ ರಸಸಿದ್ಧೇಶ್ವರರ ವಿಗ್ರಹಗಳಿದ್ದು ಗುಡ್ಡದಲ್ಲಿ ಪವಿತ್ರ ಮಜ್ಜಿಗೆ ಕೊಳವಿದ್ದು, ಬುಡದಲ್ಲಿ ಕುಂಟ ಭೈರವನ ಗುಡಿಯಿದೆ. ಹರಕೆ ಹೊತ್ತ ಭಕ್ತರು ಈ ದೇವರ ಉತ್ಸವಮೂರ್ತಿಗಳನ್ನು ತಮ್ಮ ಊರುಗಳಿಗೆ ಕೊಂಡೊಯ್ದು ಮೆರವಣಿಗೆ – ಉತ್ಸವಗಳನ್ನು ನಡೆಸುತ್ತಾರೆ.

**ಅರಕೆರೆ (೬೫೦)** : ತಾಲೂಕು ಕೇಂದ್ರ ಶ್ರೀರಂಗಪಟ್ಟಣದಿಂದ ೧೮ ಕಿ.ಮೀ. ಪೂರ್ವಕ್ಕಿರುವ ಹೋಬಳಿ ಕೇಂದ್ರವಾಗಿದ್ದು, ಪ್ರಾಚೀನ ಶಾಸನಗಳಲ್ಲೂ 'ಅರಕೆರೆ' (ಕ್ರಿ.ಶ. ೧೧೦೮) ಎಂದಿದ್ದು, ಸರ್ವನಮಸ್ಯದ ಪಟ್ಟದ ಮಹಾಅಗ್ರಹಾರ ಸರ್ವಜ್ಞ ಶ್ರೀ ವೀರನರಸಿಂಹಪುರ (ಕ್ರಿ.ಶ. ೧೨೫೪), ಅಗ್ರಹಾರ ಮಲೆಯಾಳನ ಅರಕೆರೆ (ಕ್ರಿ.ಶ. ೧೫೧೨) ಎಂಬ ಅಭಿದಾನವನ್ನೂ ಹೊಂದಿದ್ದು, ಹಿಂದೆ ಇಡ್ಯೆನಾಡಿಗೆ ಸೇರಿತ್ತು. ಇಲ್ಲಿಂದ ಈವರೆಗೆ ವರದಿಯಾಗಿರುವ ಸುಮಾರು ೧೨–೧೮ ನೇ ಶತಮಾನಕ್ಕೆ ಸೇರಿದ ೧೭ ಶಾಸನಗಳಲ್ಲಿ ನಾಲ್ಕು ತಮಿಳಿನಲ್ಲಿದ್ದರೆ ಉಳಿದವು ಕನ್ನಡದಲ್ಲಿದ್ದು, ಕೇಶವ, ಮರಳೇಶ್ವರ, ನರಸಿಂಹ ದೇವರು ಹಾಗೂ ಊರ ಕೆರೆಗೆ, ಬೇರೆ ಬೇರೆ ಕಾಲದಲ್ಲಿ ದತ್ತಿ ನೀಡಿದ್ದನ್ನು ದಾಖಲಿಸಿವೆ. ಊರ ದುರ್ಗದ ಬೀದಿಯಲ್ಲಿರುವ ಚನ್ನಕೇಶವ (ಶಾಸನೋಕ್ತ ಕೇಶವ) ದೇವಾಲಯವು ಸುಮಾರು ೧೨ನೆಯ ಶತಮಾನದ ರಚನೆಯಾಗಿದ್ದು, ಚೋಳಶೈಲಿಯಲ್ಲಿದ್ದು, ಗರ್ಭಗೃಹ, ಅಂತರಾಳ, ತೆರೆದ ಅರ್ಧಮಂಟಪ, ನವರಂಗ, ವಿಶಾಲವಾದ ಸಭಾಮಂಟಪ, ಮೊಗಸಾಲೆ, ಪ್ರಾಕಾರ ಹಾಗೂ ದ್ವಾರಮಂಟಪಗಳನ್ನು ಹೊಂದಿದ್ದು, ಸಾಕಷ್ಟು ಮಾರ್ಪಾಡುಗಳೊಂದಿಗೆ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಲ್ಲಿರುವ ವಿಷ್ಣು ಶಿಲ್ಪ ಇತ್ತೀಚಿನದಾಗಿದ್ದು, ಬಾಗಿಲವಾಡಕ್ಕೆ ತ್ರಿಶಾಖಾಲಂಕಾರವಿದ್ದು, ಅಂತರಾಳದಲ್ಲಿ ರಾಮಾನುಜ ಶಿಲ್ಪವಿದೆ. ನವರಂಗದಲ್ಲಿ ದೇವಿ ಶಿಲ್ಪವಿದ್ದು, ನಡುವಣ ಛತ್ತು ಕಮಲದಿಂದ ಅಲಂಕೃತವಾಗಿದೆ. ಮುಖಮಂಟಪದಲ್ಲಿ ಕೇಶವನ ಮುಕ್ಕಾದ ಮೂಲ ಶಿಲ್ಪವಿದೆ. ಪ್ರಾಕಾರದ ದ್ವಾರಮಂಟಪವು ನಂತರದ ಸೇರ್ಪಡೆಯಾಗಿದ್ದು, ಮುಂದೆ ಗರುಡಗಂಬವಿದೆ. ಈ ದೇವಾಲಯದ ಎಡಭಾಗದಲ್ಲಿದ್ದ ಅಮ್ಮನವರ ಗುಡಿಯ ಕಂಬಗಳಷ್ಟೇ ಉಳಿದಿದ್ದರೆ, ಬಲಭಾಗದಲ್ಲಿ ಉತ್ಸವ ಮಂಟಪವಿದೆ. ಊರಾಚೆ ಚೋಳ ಶೈಲಿಯಲ್ಲಿರುವ ಮರಳೇಶ್ವರ (ಶಾಸನೋಕ್ತ ಮಣಲೇಶ್ವರ) ಗುಡಿಗೆ ಗರ್ಭಗೃಹ, ಅಂತರಾಳಗಳಿದ್ದು ವಿಶಾಲವಾದ ನವರಂಗಕ್ಕೆ ಪೂರ್ವ ಹಾಗೂ ದಕ್ಷಿಣ ಭಾಗಗಳಲ್ಲಿ ಮುಖಮಂಟಪವುಳ್ಳ ದ್ವಾರಗಳಿವೆ. ಬಹುಕೋನಾಕಾರದ ತಳವಿನ್ಯಾಸವನ್ನುಳ್ಳ ಗರ್ಭಗೃಹದಲ್ಲಿ ಪ್ರಾಚೀನ ಶಿವಲಿಂಗವಿದ್ದರೆ, ನವರಂಗದಲ್ಲಿ ಮಹಿಷಮರ್ದಿನಿ, ಗಣಪತಿ ಹಾಗೂ ದೇವಿಯರ ಶಿಲ್ಪಗಳಿದ್ದು, ದಕ್ಷಿಣದ್ವಾರಕ್ಕೆ ಅಭಿಮುಖವಾಗಿ ಇರುವ ಒಂದಂಕಣದ ಗುಡಿಯಲ್ಲಿ ದೇವಿಯ ಶಿಲ್ಪವಿದೆ. ನವರಂಗದ ಕಂಬಗಳ ಮೇಲೆ ಹಾಗೂ ಮುಖಮಂಟಪದ ಛತ್ತಿನಲ್ಲಿ ಕಮಲಾಲಂಕಾರವಿದೆ. ಈ ಗುಡಿಯ ಸಂರಕ್ಷಣಾ ಕಾರ್ಯ ನಡೆದಿದೆ. ಊರಾಚೆ ತೋಟವೊಂದರಲ್ಲಿರುವ ಲಕ್ಷ್ಮೀನರಸಿಂಹನ (ಕ್ರಿ.ಶ. ೧೫೧೬ ರ ಶಾಸನೋಕ್ತ ನರಸಿಂಹ) ಗುಡಿಗೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮೊಗಸಾಲೆಗಳಿದ್ದು, ಜೀರ್ಣಾವಸ್ಥೆಯಲ್ಲಿದೆ. ಗರ್ಭಗೃಹದಲ್ಲಿ ಸುಂದರವಾದ ಲಕ್ಷ್ಮೀನರಸಿಂಹನ ಸರ್ವಾಭರಣಾಲಂಕೃತ ಶಿಲ್ಪವಿದೆ. ಪ್ರಾಚೀನ ಶಿವಲಿಂಗವಿರುವ ಇಲ್ಲಿಯ ರಾಮಲಿಂಗೇಶ್ವರ ಗುಡಿಯು ಜೀರ್ಣೋದ್ಧಾರಗೊಂಡಿದೆ. ಕೆರೆಯಾಚೆ ದೂರದಲ್ಲಿ ಕಾಣುವ ಹುಚ್ಚರಾಯನ ಬೆಟ್ಟದ ಮೇಲೆ ಮುತ್ತುರಾಯನ ಗುಡಿ ಇದೆ.

ಇಲ್ಲಿಯ ಬಿಸಿಲು ಮಾರಮ್ಮನ ಗುಡಿ ನವೀಕೃತಗೊಂಡಿದ್ದು ಮೂರು ವರ್ಷಕ್ಕೊಮ್ಮೆ ಅದರ ಜಾತ್ರೆಯಾಗುತ್ತದೆ. ಜಾತ್ರೆಯ ಸಂದರ್ಭದಲ್ಲಿ ನಡೆಯುವ ಶೂಲದ ಹಬ್ಬ ಮೈನವಿರೇಳಿಸುವಂತಿರುತ್ತದೆ. ದೇವರಿಗೆ ಮೀಸಲಾದ ಅಡಕೆ ತೋಟಗಳಿಂದ ಅಚಾರಿ, ಒಕ್ಕಲಿಗ, ಗಾಣಿಗ ಹಾಗೂ ಬಣಜಿಗರು ತಂದ ೫೦ ಅಡಿ ಎತ್ತರದ ಅಡಕೆ ಮರಗಳನ್ನು

ಕ್ರಮಬದ್ಧವಾಗಿ ನೆಟ್ಟು, ಅಟ್ಟಣಿಗೆ ಕಟ್ಟಿದ್ದ ಮೇಲೆ, ಗಂಗೆ ಮತದವರು ಅದರ ಮೇಲೇರಿ ಹಿಂದು ಮುಂದಾಗಿ ಆಡುವ ಮೂರು ತಾಸಿನ ಶೂಲದ ಹಬ್ಬ ಅಪೂರ್ವವೇ ಸರಿ. ಅಲ್ಲದೆ ಮೊನಚಾದ ತುದಿಯುಳ್ಳ ಸುರ ಹೊನ್ನೆಮರದ ಶಿಶ್ನಾಕಾರದ ಕೊಂತವನ್ನು ಸೊಂಟಕ್ಕೆ ಕಟ್ಟಿಕೊಂಡ ದಿಮ್ಸಾಲೆಯವನ ವಿಡಂಬನಾತ್ಮಕ ಅಶ್ಲೀಲ ಸಂಭಾಷಣೆಗಳಿಂದ ಕೂಡಿದ ಕುಣಿತ ವಿಶಿಷ್ಟವಾಗಿರುತ್ತದೆ. ಇಲ್ಲಿಯ ಕತ್ತಿವರಸೆ, ದೊಣ್ಣೆವರಸೆ, ಬೆಂಕಿಭರಾಟೆಗಳು ವಿಶಿಷ್ಟವಾಗಿದ್ದು, ಅದರಲ್ಲೂ ಮುಂಗಾಲು ಕಟ್ಟಿಕೊಂಡು ಆಡುವ ಬೆಂಕಿ ಭರಾಟೆ ಮೂಡಿಸುವ ಬೆಳಕಿನ ಚಕ್ರ ವಿಸ್ಮಯಕರವಾಗಿದ್ದು, ಆ ಕಲೆ ಇಂದಿಗೂ ಅರಕೆರೆಯಲ್ಲಿ ಜೀವಂತವಾಗಿದೆ.

**ಆತಕೂರು (೧೯೯೯)** : ತಾಲೂಕು ಕೇಂದ್ರ ಮದ್ದೂರಿನಿಂದ ಒಂಬತ್ತು ಕಿ.ಮೀ. ಉತ್ತರಕ್ಕಿರುವ ಹೋಬಳಿ ಕೇಂದ್ರ. ಪ್ರಾಚೀನ ಶಾಸನಗಳಲ್ಲೂ 'ಆತಕೂರು' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಕಳಲೆ ನಾಡಿಗೆ ಸೇರಿದ್ದು, ೧೨ ಹಳ್ಳಿಗಳನ್ನು ಒಳಗೊಂಡ ಆಡಳಿತ ಕೇಂದ್ರವೂ ಆಗಿತ್ತು. ಇಲ್ಲಿಂದ ಈವರೆಗೆ ಐದು ಶಾಸನಗಳು ವರದಿಯಾಗಿವೆ. ಹಿಂದೆ ಚಲ್ಲೇಶ್ವರ ದೇವಾಲಯದ ಮುಂದಿದ್ದು, ಈಗ ಬೆಂಗಳೂರು ವಸ್ತುಪ್ರದರ್ಶನಾಲಯದಲ್ಲಿರುವ, ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ೯೪೯ರ ಶಾಸನ (ಇದು ಎರಡು ಶಾಸನಗಳನ್ನು ಒಳಗೊಂಡಿದೆ) ಅತ್ಯಂತ ಮಹತ್ವದ್ದಾಗಿದ್ದು, ಇಮ್ಮಡಿ ಬೂತುಗನು ಗಂಗವಾಡಿ ೯೬೦೦೦ವನ್ನು ಆಳುತ್ತಿದ್ದಾಗ, ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ಹಾಗೂ ಚೋಳ ರಾಜಾದಿತ್ಯರ ನಡುವೆ ತಕ್ಕೋಲಂನಲ್ಲಿ ನಡೆದ ಕಾಳಗದಲ್ಲಿ, ರಾಷ್ಟ್ರಕೂಟ ಸಾಮಂತ, ಗಂಗರಾಜ ಇಮ್ಮಡಿ ಬೂತುಗನು ತನ್ನ ಮಾವುತ, ಸಗರ ವಂಶದ ಮಣಲಾರನ ಸಹಕಾರದೊಂದಿಗೆ ಚೋಳ ರಾಜಾದಿತ್ಯನನ್ನು ಕೊಂದ ಮಹತ್ವದ ಅಂಶವನ್ನು ದಾಖಲಿಸುತ್ತದೆ. ಮಡಿದ ನೆಚ್ಚಿನ ನಾಯಿ ಕಾಳಿಗಾಗಿ ಮಣಲಾರನು ನಿಲ್ಲಿಸಿದ ಅಪೂರ್ವ ಸ್ಮಾರಕಶಿಲ್ಪ ಇದಾಗಿದ್ದು, ಶಾಸನಕಲ್ಲಿನ ಶಿರೋಭಾಗದಲ್ಲಿರುವ ನಾಯಿ-ಹಂದಿ ಹೋರಾಟ ಕೆತ್ತನೆ ಶಿಲ್ಪವೂ ಅದನ್ನೇ ಧ್ವನಿಸುತ್ತದೆ. ಊರಲ್ಲಿ ನೂರೊಂದು ಗುಡಿ ಹಾಗೂ ಬಾವಿಗಳಿವೆಯೆಂಬ ಜನಪದ ನಂಬಿಕೆ ಇದ್ದು, ಊರಾಚೆ ಒಳಗೆರೆದೊಡ್ಡಿ ರಸ್ತೆಯಲ್ಲಿ ಪೂರ್ವಾಭಿಮುಖವಾಗಿ ಇರುವ ಚಲ್ಲೇಶ್ವರ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಅರ್ಧಮಂಟಪಗಳಿದ್ದು, ಅಳಿದುಳಿದಿರುವ ಗಂಗರ ಕಾಲದ ಕೆಲವೇ ದೇವಾಲಯಗಳಲ್ಲಿ ಇದೂ ಒಂದೆಂಬುದು ಗಮನಾರ್ಹವಾಗಿದ್ದು, ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲ್ಪಡುತ್ತಿದೆ. ಗರ್ಭಗೃಹದಲ್ಲಿ ಪಾಣಿಪೀಠ, ಶಿವಲಿಂಗಗಳಿದ್ದು, ಬಾಗಿಲವಾಡವು ಸರಳವಾಗಿದ್ದು ಶಿಖರ ಜೀರ್ಣೋದ್ಧಾರಗೊಂಡಿದೆ. ನವರಂಗದ ಇಕ್ಕೆಲದಲ್ಲಿ ಎರಡು ದೇವಕೋಷ್ಠಗಳಿದ್ದು, ನಡುವೆ ನಂದಿ ಇದೆ. ಮುಂಭಾಗದಲ್ಲಿ ಕಲ್ಲುಗಾಣ ಹಾಗೂ ಮಂಟಪಗಳಿವೆ. ಊರಲ್ಲಿರುವ ಚನ್ನಕೇಶವ ಗುಡಿಯು ಮೂಲತ: ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ನಂತರದಲ್ಲಿ ಅದಕ್ಕೆ ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಸೇರಿಸಲಾಗಿದ್ದು, ಪೂರ್ಣವಾಗಿ ಜೀರ್ಣೋದ್ಧಾರಗೊಂಡಿದ್ದು, ಒಳಗೆ ಶಿವಲಿಂಗ, ನಾಗಶಿಲ್ಪ ಹಾಗೂ ನಂದಿಗಳಿವೆ. ಊರ ನಡುವೆ ಇರುವ ತಿರುಮಲದೇವರ ಗುಡಿಗೆ ಗರ್ಭಗುಡಿ, ಅಂತರಾಳ ಹಾಗೂ ನವರಂಗಗಳಿದ್ದು, ಒಳಗೆ ಕೇಶವ ಶಿಲ್ಪವಿದೆ. ಉಳಿದಂತೆ ಊರಲ್ಲಿ ಆಂಜನೇಯ, ಮಂಟೇಸ್ವಾಮಿ, ಲಕ್ಷ್ಮಿ, ದೊಡ್ಡಮ್ಮ, ಪಟ್ಟಲದಮ್ಮ, ಆಲಮ್ಮ, ಮುಂತಾದ ಗುಡಿಗಳಿದ್ದು, ಮೂರ್‍ನಾಲ್ಕು ವೃಂದಾವನಗಳೂ ಇವೆ. **ಹೆಮ್ಮನಹಳ್ಳಿ (೨೧೨೪)** : ಇದು ಮದ್ದೂರು-ತುಮಕೂರು ರಸ್ತೆಯಲ್ಲಿದ್ದು, ಅಲ್ಲಿಯ ಅರ್ಕೇಶ್ವರ ಗುಡಿಯು ಮುಮ್ಮಡಿ ಬಲ್ಲಾಳನ ಕಾಲದ ರಚನೆಯೆಂದು ಅಲ್ಲಿರುವ ಕ್ರಿ.ಶ. ೧೩೩೭ರ ಶಾಸನದಿಂದ ಗ್ರಹಿಸಬಹುದಾಗಿದೆ. ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಇದು ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಪ್ರಾಚೀನ ಶಿವಲಿಂಗವಿದ್ದು, ಬಾಗಿಲವಾಡವು ದ್ವಾರಪಾಲಕರನ್ನು ಹೊಂದಿದೆ. ನವರಂಗದ ನಡುವಣ ಕಂಬಗಳು ಆಕರ್ಷಕವಾಗಿದ್ದು, ನಂದಿ ಹಾಗೂ ಸಪ್ತಮಾತೃಕಾ ಶಿಲ್ಪಗಳಿವೆ. ಕೆರೆದಂಡೆಯಲ್ಲಿರುವ ಚೌಡೇಶ್ವರಿ (ಶಾಸನೋಕ್ತ ಅಂಬಾದೇವಿ) ಗುಡಿಯು

ಸುಮಾರು ೧೬-೧೭ನೆಯ ಶತಮಾನದ ರಚನೆಯಾಗಿದ್ದು, ಕಾಮನ (ಹೋಳಿ)ಹುಣ್ಣಿಮೆಯ ನಂತರ ಜಾತ್ರೆಯಾಗುತ್ತದೆ. ಕೆರೆಯ ಬದಿಯಲ್ಲೇ ನಾಲ್ಕಾರು ವೀರಗಲ್ಲು ಹಾಗೂ ಮಾಸ್ತಿಕಲ್ಲುಗಳಿವೆ.

**ಆದಿಚುಂಚನಗಿರಿ** : ತಾಲೂಕು ಕೇಂದ್ರ ನಾಗಮಂಗಲದಿಂದ ೨೦ ಕಿ.ಮೀ. ಉತ್ತರಕ್ಕೆ ಚುಂಚನಹಳ್ಳಿಯಿಂದ ಪೂರ್ವಕ್ಕಾದಂತಿರುವ ಶ್ರೀಕ್ಷೇತ್ರ. ಒಕ್ಕಲಿಗರ ಎರಡು ಗುರುಪೀಠ ಮಠಗಳಲ್ಲಿ ಒಂದಾದ ಇಲ್ಲಿಯ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠವು ಪ್ರಸಿದ್ಧವಾಗಿದೆ. ರಾಮಾಯಣ ಕಾಲದಷ್ಟು ಪ್ರಾಚೀನ ಪೌರಾಣಿಕ ಹಿನ್ನೆಲೆಯನ್ನುಳ್ಳ ಇದು, ಪ್ರಾಚೀನ ಶಾಸನಗಳಲ್ಲಿ ಚುಂಚನಕೋಟೆ (ಕ್ರಿ.ಶ.೧೨೦೫), ಚುಂಚನಹಳ್ಳಿ (ಕ್ರಿ.ಶ.೧೪೪೪), ಆದಿಚುಂಚನಗಿರಿ (ಕ್ರಿ.ಶ.೧೪೮೬) ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಹೊಯ್ಸಳರ ಕಾಲದಿಂದಲೂ ಕಲ್ಕುಣಿ ನಾಡೊಳಗಿತ್ತು. ಈವರೆಗೆ ಒಂಬತ್ತು (ಚುಂಚನಹಳ್ಳಿಯಲ್ಲಿ ನಾಲ್ಕು ಹಾಗೂ ಬೆಟ್ಟದ ಮೇಲೆ ಐದು) ಶಾಸನಗಳು ಇಲ್ಲಿಂದ ವರದಿಯಾಗಿವೆ. ಚುಂಚನೆಂಬುವವನಿಂದ ನಿರ್ಮಿಸಲ್ಪಟ್ಟ, ಇಲ್ಲವೇ 'ಚುಂಚಲಗಿಡ' ಹೇರಳವಾಗಿದ್ದರಿಂದ ಊರಿಗೆ ಚುಂಚನಹಳ್ಳಿ ಎಂದೂ, ಬಳಿಯ ಬೆಟ್ಟಕ್ಕೆ 'ಚುಂಚನಗಿರಿ' ಎಂದೂ ಹೆಸರು ಬಂದಿತೆಂಬ ಅಭಿಪ್ರಾಯ ಇದೆ. ಚುಂಚ-ಕಂಚ ರಾಕ್ಷಸ ಸೋದರರನ್ನು ಶಿವನು ಸಂಹಾರ ಮಾಡಿದ ಸ್ಥಳ ಇದೆಂಬ ಐತಿಹ್ಯವಿದ್ದು, ತ್ರೇತಾಯುಗದಲ್ಲಿ ರಾಮ, ಲಕ್ಷ್ಮಣ, ಸೀತೆಯರು ಇಲ್ಲಿಗೆ ಭೇಟಿ ನೀಡಿದ್ದರೆಂದೂ ಸ್ಥಳ ಪುರಾಣಗಳು ತಿಳಿಸುತ್ತವೆ.

ಚುಂಚನಹಳ್ಳಿಯಿಂದ ಪೂರ್ವಕ್ಕೆ ಚುಂಚನಗಿರಿಯ ಮಾರ್ಗದಲ್ಲಿ ತಾವರೆಗಳಿಂದ ತುಂಬಿರುವ ಚುಂಚನ ಸರೋವರವಿದೆ. ನಾನಾ ಜಾತಿಯ ವೃಕ್ಷಗಳಿಂದ ಕೂಡಿದ ಚುಂಚನಗಿರಿಯಲ್ಲಿ ನವಿಲುಗಳು ಯಥೇಚ್ಛವಾಗಿ ಗೋಚರಿಸುತ್ತವೆ. ಮುಂದೆ ಸಾಗಿದರೆ ಎದುರಾಗುವ ಮಠದ ನೂತನ ಕಟ್ಟಡ ಸಂಕೀರ್ಣದ ಬಳಿಯಲ್ಲೇ ಸುಮಾರು ೩೦ ಕೋಟಿ ರೂ. ಅಂದಾಜು ವೆಚ್ಚದಲ್ಲಿ ದ್ರಾವಿಡ ಶೈಲಿಯಲ್ಲಿ ಕಾಲಭೈರವನ ವಿಶಾಲವಾದ ಆಕರ್ಷಕ ದೇವಾಲಯವು ನಿರ್ಮಾಣಗೊಳ್ಳುತ್ತಿದೆ. ಸಮೀಪದಲ್ಲೇ ತಗ್ಗಲ್ಲಿರುವ ಕಂಬದಮ್ಮ (ಆದಿಶಕ್ತಿ)ನ ಗುಡಿ ಹಾಗೂ ಸುತ್ತ ಇರುವ ಸಮಾಧಿ ಮಂಟಪಗಳು ಉಲ್ಲೇಖಾರ್ಹ. ಮಠದಲ್ಲಿ ಸಿದ್ಧಸಿಂಹಾಸನವಿದೆ. ಅಲ್ಲದೇ ಚಂದ್ರಮೌಳೇಶ್ವರ, ಅನ್ನಪೂರ್ಣೇಶ್ವರಿ ಹಾಗೂ ಭೈರವನ ಹಳೆಯ ಗುಡಿಗಳಿವೆ. ಮಠದ ದಕ್ಷಿಣಕ್ಕೆ ಬಿಂದು ಸರೋವರವಿದೆ. ಜ್ವಾಲಾಪೀಠ (ಉರಿಗದ್ದುಗೆ) ಇರುವ ಶ್ರೀ (ಅನ್ನದಾನಿ) ಮಠ ಇಲ್ಲಿಯ ವಿಶೇಷ ಆಕರ್ಷಣೆಯಾಗಿದೆ. ಮುಂದೆ ಸಾಗಿದರೆ ಮೇದರ ಮಂಟಪ, ಒಕ್ಕಲ್ಲು ಬಸವ, ಗಂಗಾಧರೇಶ್ವರ (ಆರಣಿಯ ಪಾಳೇಗಾರ ಇದನ್ನು ನಿರ್ಮಿಸಿದನೆಂಬ ಹೇಳಿಕೆ ಇದ್ದು ಕಂಬಗಳ ಮೇಲೆ ಪೌರಾಣಿಕ ಶಿಲ್ಪ ಕೆತ್ತನೆಗಳಿವೆ) ಹಾಗೂ ಪಾರ್ವತಿ ಗುಡಿಗಳು ಸಿಗುತ್ತವೆ. ಬಳಿಯಲ್ಲೇ ಇರುವ ಮಲ್ಲೇಶ್ವರನನ್ನು ಸಂದರ್ಶಿಸಿ, ಕಡಿದಾದ ಕಿರುಬಂಡೆಗಳ ನಡುವೆ ಹಾದು ಮೇಲೇರಿದಾಗ ಗವಿ ಸಿದ್ಧೇಶ್ವರ ಎದುರಾಗುತ್ತದೆ. ಮತ್ತೂ ಮೇಲಕ್ಕೆ ಕಡಿದಾದ ಬಂಡೆಗಳನ್ನೇರಿ ಸಾಗಿದರೆ ಚೋಳೂರು ಕಂಬ ಸಿಗುತ್ತದೆ. ಬಳಿಯ ಒದೆಗಲ್ಲು, ಕುದುರೆಕಲ್ಲು, ಅನೇಕಲ್ಲು ಎಂದು ಕರೆಯುವ ದುರ್ಗಮ ಕೋಡುಗಲ್ಲುಗಳನ್ನು ಹತ್ತಿ ಆಕಾಶಭೈರವ(ಗಳಿಗೆಕಲ್ಲು)ನೆಂದು ಕರೆಯಲ್ಪಡುವ ಉನ್ನತ ಶಿಖರವನ್ನು, ೨೦ ಅಡಿ ಉದ್ದದ ಸರಪಣಿಯ ನೆರವಿನೊಂದಿಗೆ ಏರಿದಾಗ, ಒಂದೆಡೆ ಕಾಣುವ ಆಳವಾದ ಪ್ರಪಾತ, ಮತ್ತೊಂದೆಡೆ ಕಾಣ ಸಿಗುವ ವನಸಿರಿ ಏಕಕಾಲದಲ್ಲಿ ಭಯಾಶ್ಚರ್ಯಗಳನ್ನುಂಟು ಮಾಡುತ್ತವೆ. ಗಿರಿಯ ಉತ್ತರಕ್ಕೆ, ಕಣಿವೆ ಹನುಮಂತನಿಂದಾಚೆಗೆ ಬೆಟ್ಟದ ಮಧ್ಯದಲ್ಲಿ ಇರುವ 'ಕೂಗು ಬಂಡೆ' ಬಹಳ ವಿಶಿಷ್ಟವಾಗಿದೆ. ನಿರ್ದಿಷ್ಟ ಜಾಗದಲ್ಲಿ ಹಾಕಿರುವ ಕಲ್ಲುಗುಡ್ಡೆ ಮೇಲೆ ನಿಂತು, ಮೆಲುದನಿಯಲ್ಲಿ ಮಾತನಾಡಿದರೂ ಮಾರ್ದನಿಸುವ ಮೇದರಕಲ್ಲು ಉಲ್ಲೇಖಾರ್ಹವಾಗಿದ್ದು, ಮೇಲುಕೋಟೆಯ ಧನುಷ್ಕೋಟಿಗೆ ಹೋಗುವ ದಾರಿಯಲ್ಲೂ ಇಂತಹ ತಾಣವೊಂದಿದೆ ಎಂದು ತಿಳಿದು ಬರುತ್ತದೆ. ಕೂಗು ಬಂಡೆಯಿಂದಾಚೆಗೆ ಬೇಲದಕೆರೆ ಮಾರ್ಗದಲ್ಲಿ ಸರ್ಪಾಕಾರದ ನಾಗರಕಲ್ಲಿದೆ. ಅನತಿ ದೂರದಲ್ಲಿ ಸಪ್ಪೆಸ್ವಾಮಿ ಗವಿ ಇದೆ. ಚುಂಚನಗಿರಿಯು ಸಿದ್ಧರಿಗೆ ತಪೋಭೂಮಿಯಾಗಿಯೂ

ಭಕ್ತರಿಗೆ ಪುಣ್ಯಕ್ಷೇತ್ರವಾಗಿಯೂ ಪರಿಣಮಿಸಿದೆ. ಈ ಬೆಟ್ಟದಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುವ ನವಿಲುಗಳ ಸಂರಕ್ಷಣೆಗಾಗಿ ೦.೮೮ ಚ.ಕಿ.ಮೀ. ಪ್ರದೇಶವನ್ನು 'ಆದಿಚುಂಚನಗಿರಿ ನವಿಲು ವನ್ಯಧಾಮ' ವೆಂದು ಅರಣ್ಯ ಇಲಾಖೆಯು ಅಕ್ಟೋಬರ್ ೮೧ರಲ್ಲಿ ಘೋಷಿಸಿದ್ದು, ಪ್ರಕೃತಿ ಪ್ರೇಮಿಗಳಿಗೂ ಇದೊಂದು ಪ್ರಮುಖ ಪ್ರವಾಸಿ ಕೇಂದ್ರವಾಗಿದೆ. ಶ್ರೀಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ದಾಸೋಹ ವ್ಯವಸ್ಥೆ ಇದ್ದು, ಉಳಿದುಕೊಳ್ಳಲು ಸುಸಜ್ಜಿತ ವಸತಿ ಸೌಕರ್ಯವಿದೆ. ಶೈವಾಗಮದ ಪ್ರಕಾರ ಶಾಸ್ತ್ರೋಕ್ತವಾಗಿ ನಿತ್ಯೋತ್ಸವ, ತೆಪ್ಪೋತ್ಸವ, ಮಾಸೋತ್ಸವ ಹಾಗೂ ವರ್ಷೋತ್ಸವಗಳು ಇಲ್ಲಿಯ ದೇವಾಲಯಗಳಲ್ಲಿ ಜರುಗುತ್ತವೆ. ಮಹಾನವಮಿ, ಮಹಾಶಿವರಾತ್ರಿ ಹಾಗೂ ರಥೋತ್ಸವಗಳಂದು ಪೀಠಾಧಿಪತಿಗಳು ಸರ್ವಾಭರಣ ಭೂಷಿತರಾಗಿ ಆದಿಪೀಠದ ಮೇಲೆ ಆಸೀನರಾಗಿ ಭಕ್ತಕೋಟಿಗೆ ದರ್ಶನ ನೀಡಿದ ನಂತರ ಸಿದ್ಧ ಸಿಂಹಾಸನಾರೋಹಣ ಮಾಡುತ್ತಾರೆ. ಅಲ್ಲದೆ ಸಂಕ್ರಾಂತಿ, ಕಾರ್ತಿಕ, ಗುರುಪೂರ್ಣಿಮೆಗಳಂದೂ ಇಲ್ಲಿ ವಿಶೇಷ ಉತ್ಸವಗಳು ನಡೆಯುತ್ತವೆ. ಆದರಲ್ಲೂ ಪ್ರತೀ ವರ್ಷ ಫಾಲ್ಗುಣ ಶುದ್ಧ ಸಪ್ತಮಿಯಿಂದ ಫಾಲ್ಗುಣ ಶುದ್ಧ ಪೂರ್ಣಿಮೆಯವರೆಗೆ ಒಂಬತ್ತು ದಿನಗಳ ಕಾಲ ಇಲ್ಲಿ ನಡೆಯುವ ಗಂಗಾಧರೇಶ್ವರ ಹಾಗೂ ಕಾಲಭೈರವೇಶ್ವರರ ವಾರ್ಷಿಕ (ಭೈರವನ ಪರಿಸೆ) ಜಾತ್ರೆ, ಇವುಗಳಿಗೆಲ್ಲಾ ಕಳಶಪ್ರಾಯವಾಗಿ, ಫಾಲ್ಗುಣ ಶುದ್ಧ ಹುಣ್ಣಿಮೆಯಂದು ಬೆಳಗಿನ ಜಾವ ಮೂರು ಗಂಟೆಗೆ ಜರುಗುವ ರಥೋತ್ಸವದಲ್ಲಿ ಪಾಲ್ಗೊಳ್ಳಲು ಅಸಂಖ್ಯಾತ ಭಕ್ತರು ಸೇರುತ್ತಾರೆ. ಆಗ ಕಂಡು ಬರುವ ಕೋಲಾಟ, ತಮ್ಮಟೆಪದ, ಸೋಬಾನಪದ, ನಂದಿಕೋಲು ಕುಣಿತ, ಕೀಲು ಕುದುರೆ ನೃತ್ಯ ಹಾಗೂ ಬಾಣ ಬಿರುಸುಗಳ ನಡುವೆ ಹೂಪಲ್ಲಕ್ಕಿಯಲ್ಲಿ ಕುಳಿತ ಮಠದ ಸ್ವಾಮಿಗಳ ಮುಂದಾಳತ್ವದಲ್ಲಿ ತೇರೆಳೆಯುವ ದೃಶ್ಯ ಭಕ್ತರನ್ನು ಭಾವ ಪರವಶರನ್ನಾಗಿಸುತ್ತದೆ.

**ಕಂಬದಹಳ್ಳಿ (೮೧೭)** : ತಾಲೂಕು ಕೇಂದ್ರ ನಾಗಮಂಗಲದಿಂದ ೧೯ ಕಿ.ಮೀ. ಪಶ್ಚಿಮಕ್ಕೆ ಶ್ರವಣಬೆಳಗೊಳ ರಸ್ತೆಯಲ್ಲಿದ್ದು, ಅತಿಶಯ ದಿಗಂಬರ ಜೈನ ಕ್ಷೇತ್ರವೆಂದೇ ಹೆಸರು ಪಡೆದಿದೆ. ಗಂಗ-ಹೊಯ್ಸಳರ ಆಳ್ವಿಕೆಯಲ್ಲಿ ಪ್ರಧಾನ ಜೈನ ಕೇಂದ್ರವಾಗಿದ್ದು, ಕ್ರಿ.ಶ.೧೧೧೮ರ ಶಾಸನದಲ್ಲಿ ಬಿಂಡಿನವಿಲೆಯ ತೀರ್ಥಬಸದಿ ಎಂದೂ ಕ್ರಿ.ಶ. ೧೧೪೫ರ ಇನ್ನೊಂದು ಶಾಸನದಲ್ಲಿ ಕಂಬದಹಳ್ಳಿ ಎಂದೂ ಉಲ್ಲೇಖಿತಗೊಂಡಿರುವ ಇಲ್ಲಿಂದ ಈವರೆಗೆ ಹದಿಮೂರು ಶಾಸನಗಳು ವರದಿಯಾಗಿವೆ. ಆ ಶಾಸನಗಳಿಂದ ಹಿಂದೆ ಇದು ಬಿಂಡಿಗನವಿಲೆಗೆ ಸೇರಿದ ತೀರ್ಥಕ್ಷೇತ್ರವಾಗಿದ್ದ ಅಂಶ ವೇದ್ಯವಾಗುತ್ತದೆ.

ಗ್ರಾಮದ ಪಶ್ಚಿಮಕ್ಕಾದಂತೆ ಇರುವ ಏಳು ಬಸದಿಗಳ ಸಮುಚ್ಚಯದಲ್ಲಿ ಪ್ರತ್ಯೇಕವಾದ ತ್ರಿಕೂಟ (ಆದಿನಾಥ) ಹಾಗೂ ದ್ವಿಕೂಟಾಚಲಗಳನ್ನೊಳಗೊಂಡ ಪಂಚಕೂಟ ಬಸದಿ ಆವರಣ ಮತ್ತು ಅದರ ಉತ್ತರಕ್ಕೆ ಇನ್ನೊಂದು ದ್ವಿಕೂಟ (ಶಾಂತಿನಾಥ) ಬಸದಿಯೂ ಇದ್ದು, ಅವುಗಳನ್ನು ಕನಿಷ್ಠ ಮೂರು ಕಾಲಘಟ್ಟಗಳಲ್ಲಿ ನಿರ್ಮಿಸಲಾಗಿದೆಯೆಂದು ಭಾವಿಸಲಾಗಿದ್ದು, ಹಲವಾರು ಬಾರಿ ದುರಸ್ತಿಗೊಂಡಿರುವುದೂ ವೇದ್ಯವಾಗುತ್ತದೆ. ಕೇಂದ್ರ ಪುರಾತತ್ವ ಇಲಾಖೆಯಿಂದ ರಾಷ್ಟ್ರೀಯ ಸಂರಕ್ಷಿತ ಸ್ಮಾರಕವೆಂದು ಘೋಷಿಸಲ್ಪಟ್ಟಿರುವ ಇಲ್ಲಿಯ ಪಂಚಕೂಟ ಬಸದಿ ಆವರಣದಲ್ಲಿ ಹಿಂಭಾಗಕ್ಕಾದಂತಿರುವ ತ್ರಿಕೂಟಾಚಲ ಬಸದಿಯನ್ನು ವಾಸ್ತುಶೈಲಿಯ ಆಧಾರದ ಮೇಲೆ ಸುಮಾರು ಕ್ರಿ.ಶ. ೯೦೦ರ ನಿರ್ಮಾಣವೆಂದು ವಿದ್ವಾಂಸರು ತರ್ಕಿಸಿದ್ದಾರೆ. ಉತ್ತರಾಭಿಮುಖವಾಗಿರುವ ಇದರ ಪ್ರಧಾನ ಗರ್ಭಗೃಹ ಹಾಗೂ ತೆರೆದ ಅಂತರಾಳಕ್ಕೆ ಪೂರ್ವ-ಪಶ್ಚಿಮಕ್ಕಾದಂತೆ ಎದುರು-ಬದಿರಾಗಿರುವ ಇನ್ನೆರಡು ಪ್ರತ್ಯೇಕ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಒಗ್ಗೂಡಿಸಿರುವ ನವರಂಗಕ್ಕೆ ಎರಡಂಕಣದ ತೆರೆದ ಮುಖಮಂಟಪವಿದೆ. ಪ್ರಧಾನ ಗರ್ಭಗೃಹದಲ್ಲಿ ಆದಿನಾಥನ ಶಿಲ್ಪವಿದ್ದರೆ, ಪೂರ್ವ-ಪಶ್ಚಿಮದ ಗರ್ಭಗೃಹಗಳಲ್ಲಿ ಕ್ರಮವಾಗಿ ನೇಮಿನಾಥ ಹಾಗೂ ಶಾಂತಿನಾಥ ತೀರ್ಥಂಕರರ ಪದ್ಮಾಸೀನ ಶಿಲ್ಪಗಳಿವೆ. ಪ್ರಧಾನ ಗರ್ಭಗೃಹದಲ್ಲಿರುವ ಆದಿನಾಥ ಶಿಲ್ಪವನ್ನು ಪಾರ್ಶ್ವದೇವನು

ಬಸದಿಯ ಜೀರ್ಣೋದ್ಧಾರ ಸಂದರ್ಭದಲ್ಲಿ (ಕ್ರಿ.ಶ.೧೧೬೮) ಪ್ರತಿಷ್ಠಾಪಿಸಿದ್ದು, ನವರಂಗದ ನೈರುತ್ಯ ಮೂಲೆಯಲ್ಲಿರುವ ಶಿಲ್ಪವೇ ಮೂಲ ಶಿಲ್ಪವಾಗಿದ್ದಂತೆ ತೋರುತ್ತದೆ. ಪ್ರಧಾನ ಗರ್ಭಗೃಹದ ಮುಂದಿನ ಅಂತರಾಳದಲ್ಲಿರುವ ಆರು ಅಡಿ ಎತ್ತರದ ಪಾರ್ಶ್ವನಾಥ ಹಾಗೂ ಯಕ್ಷ-ಯಕ್ಷಿಯರು ಪೂರ್ವದ ಅಂತರಾಳದಲ್ಲಿದ್ದರೆ, ಪಶ್ಚಿಮದ ಅಂತರಾಳದಲ್ಲೂ ಇತರ ಯಕ್ಷ-ಯಕ್ಷಿಯರ ಶಿಲ್ಪಗಳಿದ್ದು, ನವರಂಗದ ನೈರುತ್ಯ ಮೂಲೆಯಲ್ಲಿರುವ ಶಿಲ್ಪಗಳು ಶಾಂತಿನಾಥನ ಯಕ್ಷ-ಯಕ್ಷಿಯರದ್ದಾಗಿರುವಂತೆ ತೋರುತ್ತದೆ. ಅಲ್ಲದೆ ಧರಣೇಂದ್ರ, ಗೋಮುಖ, ಕೂಷ್ಮಾಂಡಿನಿ, ಪದ್ಮಾವತಿ, ಜ್ವಾಲಾಮಾಲಿನಿ, ಮುಂತಾದ ಯಕ್ಷ-ಯಕ್ಷಿಯರ ಶಿಲ್ಪಗಳೂ ಇಲ್ಲಿವೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ನಡುವಣ ಛತ್ತನ್ನು ಅಷ್ಟದಿಕ್ಪಾಲಕರಿಂದ ಆವೃತ್ತವಾದ ಸುಪಾರ್ಶ್ವನಾಥನ ಕೆತ್ತನೆಯಿಂದ ಅಲಂಕರಿಸಲಾಗಿದ್ದು, ಅಲ್ಲೇ ಒಂದೆರಡು ಕ್ಷೇತ್ರಪಾಲ ಶಿಲ್ಪಗಳೂ ಇವೆ.

ನವರಂಗದ ಮುಂದಿರುವ ಮುಖಮಂಟಪವು ನಂತರದ ಸೇರ್ಪಡೆಯಾಗಿದ್ದು, ಮುಂದೆ ಅಷ್ಟದಿಕ್ಪಾಲಕರ ಕೆತ್ತನೆಯುಳ್ಳ ಅಷ್ಟಕೋನಾಕಾರದ ಪೀಠವಿದೆ. ನಾಲ್ಕು ಸ್ತರದ ಅಧಿಷ್ಠಾನದ ಮೇಲೆ, ಅರೆಕಂಬ, ಅಲಂಕಾರ ಬೋದಿಗೆ ಹಾಗೂ ಕಿರು ದೇವಕೋಷ್ಠಗಳಿರುವ ಭಿತ್ತಿಯ ಕೆಲವು ಕೋಷ್ಠಗಳಲ್ಲಿ ತೀರ್ಥಂಕರರ ಉಬ್ಬು ಶಿಲ್ಪಗಳಿದ್ದು, ಕಪೋತವನ್ನು ಹಂಸಾವಳಿಯಿಂದ ಅಲಂಕರಿಸಲಾಗಿದ್ದು ಮೇಲೆ ಮೂರು ಅಂತಸ್ತಿನ ಸುಂದರ ದ್ರಾವಿಡ ಮಾದರಿ ಶಿಖರಗಳಿವೆ. ಈ ಶಿಖರಗಳ ಸ್ತೂಪಿಗಳು ವೈವಿಧ್ಯತೆಯಿಂದ ಕೂಡಿದ್ದು, ಪೂರ್ವ ಶಿಖರದ ಸ್ತೂಪಿ ದುಂಡಗಿದ್ದರೆ, ದಕ್ಷಿಣ ಹಾಗೂ ಪಶ್ಚಿಮದ ಸ್ತೂಪಿಗಳು ಕ್ರಮವಾಗಿ ಚೌಕ ಹಾಗೂ ಅಷ್ಟಕೋನಾಕಾರಗಳಲ್ಲಿದ್ದು, ಇದೊಂದು ಅಪೂರ್ವ ಉದಾಹರಣೆಯಾಗಿದೆ. ಅದರಲ್ಲೂ ಪೂರ್ವದ ಶಿಖರದ ದುಂಡಾಕಾರದ ಸ್ತೂಪಿಯು ವಿಶಿಷ್ಟವಾಗಿದೆ. ಈ ಶಿಖರಗಳು ಶ್ರವಣಬೆಳಗೊಳದ ಚಾವುಂಡರಾಯ ಬಸದಿ, ನಂದಿಯ ಭೋಗನಂದಿ ಹಾಗೂ ನರಸಮಂಗಲದ ರಾಮನಾಥೇಶ್ವರ ದೇವಾಲಯದ ಇಟ್ಟಿಗೆಯ ಶಿಖರಗಳನ್ನು ಹೋಲುತ್ತಿದ್ದು, ಎಲ್ಲೋರಾದ ಕೈಲಾಸ ಹಾಗೂ ಮಹಾಬಲಿಪುರಂನ ಧರ್ಮರಾಯ ರಥದ ಶಿಖರಗಳನ್ನೂ ಅಸ್ಪಷ್ಟವಾಗಿ ನೆನಪಿಸುತ್ತವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ತ್ರಿಕೂಟ ಬಸದಿಯ ಮುಖಮಂಟಪದಿಂದ ಉತ್ತರಕ್ಕೆ ೧೦ ಅಡಿ ಅಂತರದಲ್ಲಿ, ಎದುರುಬದುರಾಗಿ ಪ್ರತ್ಯೇಕ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಪೂರ್ವ-ಪಶ್ಚಿಮವಾಗಿ ಹೊಂದಿರುವ ಎರಡು ಪ್ರತ್ಯೇಕ ದೇವಾಲಯಗಳ ನಡುವೆ ಇದ್ದ ಖಾಲಿ ಸ್ಥಳದಲ್ಲಿ, ತೆರೆದ ಮಂಟಪವನ್ನು ನಂತರದ ಕಾಲದಲ್ಲಿ ನಿರ್ಮಿಸಲಾಗಿದೆ. ಗರ್ಭಗೃಹಗಳಲ್ಲಿ ಪದ್ಮಾಸೀನ ತೀರ್ಥಂಕರರ ಶಿಲ್ಪಗಳಿವೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ಬಾಗಿಲವಾಡಗಳು ನಿರಾಡಂಬರವಾಗಿವೆ. ಈ ಬಸದಿಗಳು ಒಂದು ಮತ್ತೊಂದರ ನಕಲಂತಿದ್ದರೂ ಅವುಗಳ ರಚನೆಗೆ ಸಂಬಂಧಿಸಿದಂತೆ ಶಾಸನಾಧಾರಗಳು ಸದ್ಯಕ್ಕೆ ಲಭ್ಯವಿಲ್ಲ. ಅಲ್ಲೇ ಮುಕ್ಕಾದ ಪಾರ್ಶ್ವನಾಥ ಹಾಗೂ ಆನೆ ಶಿಲ್ಪಗಳಿವೆ. ಈ ಪಂಚಕೂಟ ಬಸದಿಯ ಆವರಣಕ್ಕಿರುವ ಪ್ರವೇಶ ದ್ವಾರವು ಗೋಪುರರಹಿತ ಮಂಟಪವಾಗಿದ್ದು, ಕಿರುಕೋಷ್ಠಗಳಲ್ಲಿ ತೀರ್ಥಂಕರ ಶಿಲ್ಪಗಳಿವೆ. ಬಳಿಯಲ್ಲೇ ನಿಷಿಧಿ ಶಾಸನಕಲ್ಲು ಹಾಗೂ ಯಕ್ಷಿಯ ಮುಕ್ಕಾದ ಶಿಲ್ಪಗಳಿವೆ.

ಈ ದೇವಾಲಯ ಸಂಕೀರ್ಣದಿಂದ ೨೦ ಅಡಿ ಉತ್ತರಕ್ಕೆ ಇರುವ ಶಾಂತಿನಾಥ ಬಸದಿಯು ಸುಮಾರು ೧೨ನೆಯ ಶತಮಾನದಲ್ಲಿ ನಿರ್ಮಿಸಲ್ಪಟ್ಟಿದ್ದು, ಅದೂ ಕೂಡ ದ್ವಿಕೂಟ ಎಂಬ ಅಭಿಪ್ರಾಯವಿದ್ದರೂ ಏಕಕೂಟವೆಂಬ ವಾದವೂ ಇದೆ. ಇದರ ಅಧಿಷ್ಠಾನದ ಒಂದು ಪಟ್ಟಿಕೆಯ ಮೇಲೆ ಆನೆ, ಸಿಂಹ, ಕುದುರೆ, ವ್ಯಾಳಿ, ಗೂಳಿ ಹಾಗೂ ಆನೆ-ಕುದುರೆ, ಆನೆ-ಸಿಂಹಗಳ ನಡುವಣ ಹೋರಾಟವನ್ನು ಆಕರ್ಷಕವಾಗಿ ಕೆತ್ತಲಾಗಿದೆ. ಪೂರ್ವ-ಪಶ್ಚಿಮವಾಗಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ವಿಶಾಲವಾದ ಸಭಾಮಂಟಪವನ್ನು ಹೊಂದಿದ್ದು, ಎದಿರು-ಬದಿರಾಗಿ ನಿಂತಿರುವ ಇದರ ಪಶ್ಚಿಮದ ಗರ್ಭಗೃಹದಲ್ಲಿ ೧೨ ಅಡಿ ಎತ್ತರದ ಶಾಂತಿನಾಥ ತೀರ್ಥಂಕರನ ಸುಂದರ ಶಿಲ್ಪವಿದ್ದರೆ, ಪೂರ್ವದ

ಗರ್ಭಗೃಹ ಭಾಗವನ್ನು ಪ್ರವೇಶ ದ್ವಾರವನ್ನಾಗಿ ಈಗ ಬಳಸಲಾಗುತ್ತಿದೆ. ಈ ಬಸದಿಯ ತೊಲೆಯೊಂದರ ಮೇಲಿರುವ ಶಾಸನದಿಂದ, ಗಂಗರಾಜ ದಂಡನಾಯಕನ ಮಗ ಬೊಪ್ಪನು ಇದನ್ನು ನಿರ್ಮಿಸಿದನೆಂದು ಗೊತ್ತಾಗುತ್ತದೆ. ನವರಂಗದಲ್ಲಿ ನೇಮಿನಾಥ, ಧರಣೇಂದ್ರ, ಗೋಮುಖ ಮತ್ತು ಪದ್ಮಾವತಿ ಯಕ್ಷಿಯರ ಶಿಲ್ಪಗಳಿವೆ. ನವರಂಗದ ಛತ್ತನ್ನು ಅಲಂಕರಿಸಿರುವ, ಅಷ್ಟದಿಕ್ಪಾಲಕರಿಂದ ಆವೃತ್ತವಾದ ಪದ್ಮಾಸೀನ ತೀರ್ಥಂಕರ ಕೆತ್ತನೆಯು ಚಿತ್ತಾಕರ್ಷಕವಾಗಿದ್ದು, ಅರಳಗುಪ್ಪೆಯ ಕಲ್ಲೇಶ್ವರ ಗುಡಿಯ ನವರಂಗದ ಛತ್ತನ್ನು ಹೋಲುತ್ತದೆಂಬ ಅಭಿಪ್ರಾಯವಿದೆ. ಬಳಿಯಲ್ಲೇ ಒಂದು ನಿಶಿಧಿಗೆ ಹಾಗೂ ಶೈವ ಧರ್ಮೀಯರ ಮೂರು ವೀರಗಲ್ಲುಗಳಿವೆ.

ಪಂಚಕೂಟ ಬಸದಿಯ ಉತ್ತರಕ್ಕೆ, ಮುಂಭಾಗದಲ್ಲಿ ಎತ್ತರದ ಜಗಲಿಯ ಮೇಲೆ ಅಷ್ಟದಿಕ್ಪಾಲಕರ ಕೆತ್ತನೆ ಇರುವ ಅಷ್ಟಕೋನಾಕಾರದ ಪೀಠದ ಮೇಲಿರುವ ಸುಮಾರು ೫೦ ಅಡಿ ಎತ್ತರದ ಬ್ರಹ್ಮ ಸ್ತಂಭದ ತುದಿಯಲ್ಲಿ ಚೌಕಾಕಾರದ ಬೋದಿಗೆಯ ಮೇಲೆ ಪೂರ್ವಾಭಿಮುಖವಾಗಿ ಆಸೀನನಾಗಿರುವ ಬ್ರಹ್ಮನನ್ನು ಯಕ್ಷನಂತೆ ಕೆತ್ತಲಾಗಿದ್ದು, ನಾಡಿನ ಕೆಲವೇ ಕಲಾತ್ಮಕ ಬ್ರಹ್ಮಸ್ತಂಭಗಳಲ್ಲಿ ಇದೂ ಒಂದಾಗಿದೆ. ಊರ ಬಳಿ ಇರುವ ಕರಿಕುಂಚಪ್ಪನ ಗುಡ್ಡದ ಮೇಲೆ ಹಿಂದೆ ಇತ್ತೆಂದು ಹೇಳಲಾಗುವ ಚಂದ್ರಪ್ರಭಾ ಬಸದಿಯು ಹಾಳಾಗಿದ್ದು, ಪಂಚಕೂಟ ಬಸದಿ ಆವರಣದಲ್ಲಿರುವ ತೀರ್ಥಂಕರ ಮೂರ್ತಿಯು ಅಲ್ಲಿಂದ ತಂದುದೆಂಬ ಅಭಿಪ್ರಾಯವಿದೆ. ಕಂಬದಹಳ್ಳಿಯ ಕೆರೆಯಲ್ಲಿ ಹಲವಾರು ಜೈನಾವಶೇಷಗಳು ಹುದುಗಿವೆಯೆಂಬ ಅಭಿಪ್ರಾಯವೂ ಇದೆ. ಮೂಲ ಸಂಘ, ದೇಸೀಯಗಣ, ಪುಸ್ತಕಗುಚ್ಛದ ಕೊಂಡಕುಂದಾನ್ವಯ ಸಂಪ್ರದಾಯಕ್ಕೆ ಸೇರಿದ ಈ ಬಸದಿಗಳ ಪೂಜಾ ವಿಧಿಗೆಂದು ಇಲ್ಲಿಯ ದಿಗಂಬರ ಜೈನ ಮಠಕ್ಕೆ ನಿಯೋಜಿಸಲ್ಪಟ್ಟಿರುವ ಭಾನುಕೀರ್ತಿ ಭಟ್ಟಾರಕಸ್ವಾಮಿಗಳು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಉಳಿದಂತೆ ಇಲ್ಲಿ ಆಂಜನೇಯ ಬೆಟ್ಟದ ಆಂಜನೇಯ, ಈಶ್ವರ, ಕೃಷ್ಣ ಹಾಗೂ ಲಕ್ಷ್ಮೀದೇವಿ ಗುಡಿಗಳಿವೆ. **ಬಿಂಡಿಗನವಿಲೆ (೧೮೭೫) :** ಕಂಬದಹಳ್ಳಿಗೆ ಸಮೀಪದಲ್ಲಿರುವ ಇದೊಂದು ಹೋಬಳಿ ಕೇಂದ್ರ. ಸ್ಥಳಪುರಾಣದಲ್ಲಿ 'ಮಯೂರಪುರ' ಎಂದು ಕರೆಯಲ್ಪಟ್ಟಿರುವ ಇಲ್ಲಿ, ಹಿಂದೆ ದಿಂಡಿಗ ಜಾತಿಯ ಮುಳ್ಳು ಹೇರಳವಾಗಿದ್ದು, ನವಿಲುಗಳು ಅಧಿಕ ಸಂಖ್ಯೆಯಲ್ಲಿದ್ದರಿಂದ ದಿಂಡಿಗನವಿಲೆ ಎಂಬ ಹೆಸರು ಬಂದು, ಮುಂದೆ ಅದೇ ಬಿಂಡಿಗನವಿಲೆಯಾಯಿತೆಂಬ ಅಭಿಪ್ರಾಯವಿದೆ. ಹಿಂದೆ ಕಲ್ಕುಣಿ ನಾಡೊಳಗಿದ್ದು, ಇದರ ಅವಿಭಾಜ್ಯ ಅಂಗವಾಗಿದ್ದ ನೆರೆಯ ಕಂಬದಹಳ್ಳಿಯ ಕ್ರಿ.ಶ. ೧೧೧೮ರ ಶಾಸನದಲ್ಲಿ 'ಬಿಂಡಿಗನವಿಲೆ ತೀರ್ಥ' ಎಂದೇ ಇದು ಉಲ್ಲೇಖಿತಗೊಂಡಿದ್ದು, ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಗಂಗರ ಕಾಲಕ್ಕೆ ಸೇರಿದ ಕ್ರಿ.ಶ.೯೭೫ರ ಶಾಸನವು ಅಮೃತಕಂತಿಯ ನಿಷಿಧಿ ಕಲ್ಲಾಗಿದ್ದು, ಇದರಿಂದ ಆ ವೇಳೆಗಾಗಲೇ ಇದು ಪ್ರಮುಖ ಜೈನಕೇಂದ್ರವಾಗಿದ್ದ ಅಂಶ ವೇದ್ಯವಾಗುತ್ತದೆ. ಆದಿ ಚನ್ನಕೇಶವ (ಶಾಸನೋಕ್ತ ಕೇಶವನಾಥ) ದೇವಾಲಯವು ಮೂಲತಃ ಹೊಯ್ಸಳರ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿದ್ದು, ಇಲ್ಲಿಯ ಕೇಶವ ಗುಡಿಗೆ ರಾಮಾನುಜಾಚಾರ್ಯರು ಭೇಟಿ ನೀಡಿ ದರ್ಶನ ಪಡೆದು ವಿಷ್ಣುವರ್ಧನನ ನೆರವಿನಿಂದ ಗುಡಿಯನ್ನು ಅಭಿವೃದ್ಧಿಪಡಿಸಿದರೆಂಬ ಹೇಳಿಕೆಯೂ ಇದೆ. ಇದರ ರಂಗಮಂಟಪವನ್ನು ಕ್ರಿ.ಶ. ೧೫೭೧ರಲ್ಲಿ ಪಂಡರಿದೇವನು ನಿರ್ಮಿಸಿದ ಅಂಶವನ್ನು ಅಲ್ಲೇ ಇರುವ ಶಾಸನ ತಿಳಿಸುತ್ತಿದ್ದು, ಸುಮಾರು ೧೬-೧೭ನೇ ಶತಮಾನದಲ್ಲಿ ಈ ಗುಡಿಯು ಪುನರ್ ಜೀರ್ಣೋದ್ಧಾರದೊಂದಿಗೆ ವಿಸ್ತಾರಗೊಂಡ ಅಂಶವೂ ಅಲ್ಲಿಯ ಇತರ ಶಾಸನಗಳಿಂದ ವೇದ್ಯವಾಗುತ್ತದೆ. ಬೇಲೂರಿನ ಶ್ರೀವೈಷ್ಣವರು ಚನ್ನಕೇಶವನಿಗಾಗಿ ಶಾಸ್ತ್ರಬದ್ಧವಾಗಿ ಮರದಲ್ಲಿ ಮಾಡಿದ ಗರುಡನ ಮೂರ್ತಿಯನ್ನು ಕಂಚಿಯಿಂದ ತರುವಾಗ ಇಲ್ಲೊಂದು ರಾತ್ರಿ ತಂಗಿದ್ದು ಮುಂಜಾನೆ ಹೊರಟಾಗ ಗರುಡಮೂರ್ತಿಯು ತಾನು ಅಲ್ಲೇ ನೆಲೆಸುವುದಾಗಿ ಹೇಳಿದ್ದರಿಂದ, ಅದು ಇಲ್ಲೇ ಉಳಿಯಿತೆಂಬ ಐತಿಹ್ಯವಿದ್ದು, ಚನ್ನಪಟ್ಟಣದ ಪಾಳೇಗಾರ ಜಗದೇವರಾಯನು ಈ ಗುಡಿಯ ಅಭಿವೃದ್ಧಿಯಲ್ಲಿ ಕೈಜೋಡಿಸಿದ್ದನೆಂಬ ಹೇಳಿಕೆಯೂ ಇದೆ.

ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ಪಾತಾಳಾಂಕಣ, ಪ್ರಾಕಾರ ಹಾಗೂ ಮಹಾದ್ವಾರಗಳನ್ನುಳ್ಳ ಇದರ ಗರ್ಭಗೃಹದಲ್ಲಿ ವಿಜಯನಗರ ಕಾಲದ ಚನ್ನಕೇಶವ ಶಿಲ್ಪವಿದ್ದರೂ ಬಾಗಿಲವಾಡವು ಹೊಯ್ಸಳರ ಕಾಲದ್ದಾಗಿದೆ. ಅಂತರಾಳದ ಎಡಬಲದಲ್ಲಿರುವ ಒಂದಂಕಣದ ಗರ್ಭಗೃಹಗಳಲ್ಲಿ ಮರದ ಗರುಡ ಹಾಗೂ ಆಂಜನೇಯ ಶಿಲ್ಪಗಳಿದ್ದರೆ ಇನ್ನೊಂದರಲ್ಲಿ ವಿಜಯನಗರ ಕಾಲದ ಸೌಮ್ಯನಾಯಕಿ ಶಿಲ್ಪವಿದೆ. ಪಾತಾಳಾಂಕಣದಲ್ಲಿರುವ ರಾಮಾನುಜರ ಗುಡಿಯ ಗರ್ಭಗೃಹ ಮತ್ತು ಅಂತರಾಳ ಭಾಗದ ಭಿತ್ತಿಯು ಹೊಯ್ಸಳ ಲಕ್ಷಣದಿಂದ ಕೂಡಿದ್ದು, ನವರಂಗ ಹಾಗೂ ಉಳಿದ ಭಾಗಗಳು ವಿಜಯನಗರ ಕಾಲದ ರಚನೆಯಾಗಿವೆ. ಗರುಡನ ಆರಾಧನೆಯೇ ಪ್ರಧಾನವಾಗಿರುವ ಇಲ್ಲಿಯ ಶ್ರೀಗಂಧ ನಿರ್ಮಿತ ಗರುಡನ ಮೂರ್ತಿಯನ್ನು ಸುಮಾರು ೬೦ ವರ್ಷಗಳ ಹಿಂದೆ ಭಕ್ತರೊಬ್ಬರು ಮಾಡಿಸಿಕೊಟ್ಟಿದ್ದು, ಅದರ ನೇತ್ರ ಚಿತ್ತಾಕರ್ಷಕವಾಗಿದೆ. ಮಾಘ ಶುದ್ಧ ಪಂಚಮಿಯಿಂದ ಮಾಘ ಬಹುಳ ಬಿದಿಗೆಯವರೆಗೆ, ೧೨ ದಿನಗಳ ಕಾಲ ಇಲ್ಲಿ ನಡೆಯುವ ಜಾತ್ರೆಯಲ್ಲಿ ಮಾಘ ಶುದ್ದ ತ್ರಯೋದಶಿಯಂದು ಚನ್ನಕೇಶವನ ಬ್ರಹ್ಮರಥೋತ್ಸವವಿರುತ್ತದೆ. ಅನತಿ ದೂರದಲ್ಲಿ ಇರುವ ಈಶ್ವರ ಗುಡಿಯಲ್ಲಿ ಹೊಯ್ಸಳರ ಕಾಲದ ನಾಲ್ಕು ಕಂಬಗಳಿದ್ದು, ಗರ್ಭಗೃಹದಲ್ಲಿ ಶಿವಲಿಂಗ, ನವರಂಗದಲ್ಲಿ ವೀರಭದ್ರ, ಶ್ರೀನಿವಾಸ, ಮಹಿಷಮರ್ಧಿನಿ ಹಾಗೂ ವಿನಾಯಕ ಶಿಲ್ಪಗಳಿವೆ. ಉಳಿದಂತೆ ಊರಿನಲ್ಲಿ ನಗರೇಶ್ವರ, ಕವತೇಶ್ವರ, ಮಲ್ಲೇಶ್ವರ, ಮುಂತಾದ ಗುಡಿಗಳಿದ್ದು, ಮಸೀದಿಯೂ ಇದೆ. **ಹೊನ್ನಾವರ (೧೬೧೫)** : ಕಂಬದಹಳ್ಳಿಗೆ ಅನತಿ ದೂರದಲ್ಲಿರುವ ಇದು ಹಿಂದೆ ಜೈನಕೇಂದ್ರವಾಗಿದ್ದು, ಇಲ್ಲಿಯ ಲಕ್ಷ್ಮೀಕಾಂತ ಗುಡಿಯ ಬದಿಯಲ್ಲಿ, ಶಾಸನವಿರುವ ಸುಪಾರ್ಶ್ವನಾಥನ ಮುಕ್ಕಾದ ಶಿಲ್ಪವಿದೆ. ಇಲ್ಲಿಯ ಇತರ ಮೂರು ಶಾಸನಗಳು ಲಕ್ಷ್ಮೀಕಾಂತ ಗುಡಿಗೆ ಬಿಟ್ಟ ದತ್ತಿಗಳಾಗಿವೆ.

**ಕರಿಘಟ್ಟ** : ತಾಲೂಕು ಕೇಂದ್ರ ಶ್ರೀರಂಗಪಟ್ಟಣದಿಂದ ಐದು ಕಿ.ಮೀ. ಪೂರ್ವಕ್ಕೆ, ಲೋಕಪಾವನಿಯ ಎಡದಂಡೆ ಮೇಲೆ, ಶ್ರೀರಂಗಪಟ್ಟಣ-ಬನ್ನೂರು ರಸ್ತೆಯಲ್ಲಿರುವ, ೨೮೯೭ ಅಡಿ ಎತ್ತರದ ಬೆಟ್ಟದಿಂದಾಗಿ ಪ್ರಕೃತಿ ಪ್ರಿಯರಿಗೆ, ಅಲ್ಲಿರುವ ವೆಂಕಟರಮಣಸ್ವಾಮಿ (ಶ್ರೀನಿವಾಸ) ಗುಡಿಯಿಂದಾಗಿ ಆಸ್ತಿಕರಿಗೆ ಮಹತ್ವದ ಸ್ಥಳವಾಗಿದ್ದು, ಅನತಿ ದೂರದಲ್ಲೇ ಲೋಕಪಾವನಿಯು ಉತ್ತರ ಕಾವೇರಿಯೊಂದಿಗೆ ಸಂಗಮಿಸುವ ದೃಶ್ಯ ವೀಕ್ಷಣಾರ್ಹವಾಗಿದೆ. ಪ್ರಾಚೀನ ಶಾಸನಗಳಲ್ಲಿ ಕರಿಘಟ್ಟ, ಕರ್‍ರಿಗಟ್ಟ ಎಂದೇ ಉಲ್ಲೇಖಿತಗೊಂಡಿರುವ ಇಲ್ಲಿಂದ ಈವರೆಗೆ ಸುಮಾರು ೧೭-೧೮ನೆಯ ಶತಮಾನದ ಮೂರು ಶಾಸನಗಳು ವರದಿಯಾಗಿವೆ. ಬೆಟ್ಟದ ತುದಿಯನ್ನು ಆರೇಳು ಕಡಿದಾದ ತಿರುವಿನಿಂದ ಕೂಡಿದ ರಸ್ತೆಯ ಮೂಲಕ ವಾಹನದಲ್ಲೂ ಇಲ್ಲವೇ ಮೆಟ್ಟಿಲ ಮೂಲಕ ಕಾಲ್ನಡಿಗೆಯಲ್ಲೂ ತಲುಪಬಹುದಾಗಿದ್ದು, ಮೇಲೆ ಮೈಸೂರು ಅರಸರ (ರಾಜ ಒಡೆಯರ್) ಕಾಲದ, ವಿಶಾಲವಾದ ಪ್ರಾಕಾರವುಳ್ಳ ವೆಂಕಟರಮಣಸ್ವಾಮಿಯ ದೇವಾಲಯವಿದೆ. ಅಲ್ಲಿ ವೆಂಕಟರಮಣ, ಲಕ್ಷ್ಮಿ, ರಾಮ-ಲಕ್ಷ್ಮಣ-ಸೀತೆ ಹಾಗೂ ಹನುಮಂತರಿರುವ ಆಲಯಗಳಿದ್ದು, ಅವುಗಳಲ್ಲಿ ಪೂರ್ವಾಭಿಮುಖವಾಗಿರುವ ವೆಂಕಟರಮಣ ಸ್ವಾಮಿ ಗುಡಿಯೇ ವಿಶಾಲವಾಗಿದ್ದು, ಒಳಗೆ ಪ್ರಧಾನ ಗರ್ಭಗುಡಿಯಲ್ಲಿ ವೆಂಕಟರಮಣನ ಸುಂದರ ಶಿಲ್ಪವಿದ್ದು, ಎಡ-ಬಲದಲ್ಲಿ ಯೋಗ ಹಾಗೂ ಭೋಗ ಶ್ರೀನಿವಾಸ ಶಿಲ್ಪಗಳಿದ್ದು, ಎದುರಿಗೆ ಗರುಡಮಂಟಪದಲ್ಲಿ ಗರುಡ ಶಿಲ್ಪವಿದೆ. ಈ ಗುಡಿಯ ಬಲಕ್ಕೆ ಪದ್ಮಾವತಿ ಹಾಗೂ ಎಡಕ್ಕೆ ಹನುಮಂತನ ಗುಡಿಗಳಿದ್ದು, ಪ್ರಾಕಾರದ ಪ್ರವೇಶದ್ವಾರದ ಬಲಕ್ಕೆ ವಾಹನ ಮಂಟಪವಿದ್ದು, ಹಿಂದಕ್ಕಾದಂತೆ ರಾಮ-ಲಕ್ಷ್ಮಣ-ಸೀತೆ ಹಾಗೂ ಹನುಮನ ಶಿಲ್ಪವಿರುವ ಗುಡಿಯಿದೆ. ದೇವಾಲಯದ ಹೊರಭಾಗದಲ್ಲಿ ಭಕ್ತಾದಿಗಳಿಗಾಗಿ ಕೈಸಾಲೆ ಮಂಟಪವಿದೆ. ಬೆಟ್ಟದ ಬುಡದಲ್ಲೇ ಹರಿದಿರುವ ಚಿಕ್ಕದೇವರಾಜನಾಲೆ ಭಕ್ತರ ಮಜ್ಜನಕ್ಕೆ ನೆರವಾಗಿದ್ದು, ಇಲ್ಲಿ ವರ್ಷಂಪ್ರತೀ ಫಾಲ್ಗುಣ ಹಾಗೂ ಶ್ರಾವಣ ಮಾಸಗಳಲ್ಲಿ ಕ್ರಮವಾಗಿ ರಥೋತ್ಸವ ಹಾಗೂ ದೀಪೋತ್ಸವಗಳು ಜರುಗುತ್ತವೆ.

**ಕಲ್ಕುಣಿ (೭೯೦೦)** : ತಾಲೂಕು ಕೇಂದ್ರ ಮಳವಳ್ಳಿಯಿಂದ ೧೪ ಕಿ.ಮೀ. ಪಶ್ಚಿಮಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ಕಲುಕಣಿ, ಕಲ್ಕುಣಿ, ಹಿರಿಯ ಕಲುಕಣಿ' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಬಡಗರೆ ನಾಡಿನಲ್ಲಿತ್ತು. ಇಲ್ಲಿಂದ ಈವರೆಗೆ ವರದಿಯಾಗಿರುವ ಸುಮಾರು ೧೦-೧೬ನೆಯ ಶತಮಾನಕ್ಕೆ ಸೇರಿದ ಎಂಟು ಶಾಸನಗಳಲ್ಲಿ ಗಂಗರ ಕಾಲದ ಎರಡು ವೀರಗಲ್ಲು ಶಾಸನಗಳಿವೆ. ಅಲ್ಲೇ ಬಿದ್ದಿರುವ ನಾಲ್ಕಾರು ವೀರಗಲ್ಲು, ಮೂರ್ನಾಲ್ಕು ಮಾಸ್ತಿಕಲ್ಲುಗಳಲ್ಲಿ ಹುಲಿ ಬೇಟೆ ವೀರಗಲ್ಲು ಗಮನಾರ್ಹವಾಗಿದೆ. ಇಲ್ಲಿಯ ಬಸವೇಶ್ವರ ಗುಡಿಯ ಪಶ್ಚಿಮಕ್ಕಿರುವ, ಕ್ರಿ.ಶ. ೧೩೧೮ರ ಶಾಸನವು ಮುಮ್ಮಡಿ ಬಲ್ಲಾಳನ ಕಾಲದಲ್ಲಿ, ಹಿರಿಯ ಕಲುಕಣಿಯ ಮಾದಿರಾಜ ಹೆಗಡೆಯು ಬಡಗರೆ ನಾಗೇಶ್ವರ ದೇವಾಲಯವನ್ನು ನಿರ್ಮಿಸಿದ ಸಂದರ್ಭದಲ್ಲಿ, ಮಹಾಪ್ರಧಾನ ಹರಿಹರದೇವ ದಂಡನಾಯಕ ಹಾಗೂ ಬಡಗರೆನಾಡ ಸಮಸ್ತ ಪ್ರಭುಗಳು ವಿವಿಧ ತೆರಿಗೆಗಳನ್ನು ದಾನ ನೀಡಿದ ಅಂಶವನ್ನು ದಾಖಲಿಸುತ್ತದೆ. ಊರ ಪ್ರವೇಶದಲ್ಲಿರುವ ಬಸವೇಶ್ವರ (ಶಾಸನೋಕ್ತ ನಾಗೇಶ್ವರ) ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹದಲ್ಲಿ ಶಿವಲಿಂಗ, ಛತ್ತಲ್ಲಿ ಕಮಲ, ತೆರೆದ ಅಂತರಾಳದಲ್ಲಿ ಷಣ್ಮುಖನ ಕಿರು ಶಿಲ್ಪ ಹಾಗೂ ನವರಂಗದ ದೇವಕೋಷ್ಠಗಳಲ್ಲಿ ಸುಮಾರು ಎರಡು ಅಡಿ ಎತ್ತರದ ಗಣಪ ಹಾಗೂ ಮಹಿಷಮರ್ಧಿನಿ ಶಿಲ್ಪಗಳಿವೆ. ಪಾರ್ಶ್ವದ್ವಾರವನ್ನು ಹೊಂದಿರುವ ನವರಂಗದ ಛತ್ತು ಕಮಲಾಲಂಕೃತವಾಗಿದ್ದು, ಗರ್ಭಗುಡಿಗೆದುರಾಗಿ ನವರಂಗದ ಪೂರ್ವ ಗೋಡೆಗೆ ಜಾಲಂದ್ರವಿದೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು ಅಲಂಕಾರಿಕ ಕಂಬಗಳಿವೆ. ಈ ದೇವಾಲಯದ ಉತ್ತರ ಭಾಗದ ಎರಡು ಕಿರು ಗುಡಿಗಳಲ್ಲಿ, ಒಂದರಲ್ಲಿ ಸೂರ್ಯನ ಮೂರ್ತಿ ಇದ್ದರೆ, ಇನ್ನೊಂದರಲ್ಲಿ ಕೇಶವನ ಶಿಲ್ಪವಿದೆ. ಅವೂ ಕೂಡ ನಾಗೇಶ್ವರ ದೇವಾಲಯದ ಸಮಕಾಲೀನ ಶಿಲ್ಪಗಳಾಗಿವೆ. ರಸ್ತೆ ಬದಿಯಲ್ಲಿರುವ ರಾವಣೇಶ್ವರ ಗುಡಿಯಲ್ಲಿ ರಾವಳೇಶ್ವರ ಮೂರ್ತಿ ಇದೆ. ಚಿಕ್ಕ ಕಲ್ಕುಣಿ (ಮೈಸೂರು ಜಿಲ್ಲೆ) ರಸ್ತೆಯಲ್ಲಿರುವ ಈಶ್ವರ ಗುಡಿಯು ಸುಮಾರು ೧೬ನೆಯ ಶತಮಾನದ ರಚನೆಯಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ಪ್ರಾಕಾರಗಳನ್ನು ಹೊಂದಿದೆ. ಗರ್ಭಗೃಹಕ್ಕೆ ಸುಂದರ ಗಾರೆ ಶಿಖರವಿದ್ದು, ಒಳಗೆ ಸ್ವಯಂಭೂ ಲಿಂಗವಿದೆ. ಪ್ರಾಕಾರದ ಗೋಡೆಯನ್ನು ನಿರ್ಮಿಸಲು ಹಳೆಯ ಗುಡಿಯ ಅವಶೇಷಗಳನ್ನು ಬಳಸಲಾಗಿದ್ದು, ಪ್ರಾಕಾರದ ದ್ವಾರದ ಮೇಲೆ ನಂದಿಯ ಬೃಹತ್ ಗಾರೆ ಶಿಲ್ಪವಿದೆ. ಸಂತೇಮಾಳಕ್ಕೆ ಹೋಗುವ ಹಾದಿಯ ಕೆರೆ (ಶಾಸನೋಕ್ತ ಬಲಸಮುದ್ರ) ಬಯಲಲ್ಲಿ, ಗದ್ದೆಗಳ ನಡುವೆ ಇರುವ ಹಿರೆಮಂಚದ ಕಾಳಮ್ಮನ ಪಾಳು ಗುಡಿಯು ಕಿರುಕಂಬಗಳನ್ನುಳ್ಳ ಗಂಗರ ಕಾಲದ ರಚನೆಯಾಗಿದ್ದು, ಇಟ್ಟಿಗೆಯ ಗೋಡೆಗಳನ್ನು ಹಿಂದೆ ಹೊಂದಿದ್ದಂತೆ ತೋರುತ್ತದೆ. ಬಳಿಯಲ್ಲೇ ಇರುವ ಕಿರು ಗುಡಿಯಲ್ಲಿ ಭೈರವನ ಮೂರು ಶಿಲ್ಪಗಳಿವೆ. ಉಳಿದಂತೆ ಊರಿನಲ್ಲಿ ಆಂಜನೇಯ, ಮೂಕದೇವಮ್ಮ, ಗೌರಮ್ಮ, ಮಾರಮ್ಮ, ವಿಜಯನಗರೇಶ್ವರಿ, ಲಕ್ಷ್ಮೀದೇವಮ್ಮ, ಮಂಚದ ಕಾಳಮ್ಮ, ಹಿರೆಮಂಚದ ಕಾಳಮ್ಮ, ಬೇಲದ ಅರಸಮ್ಮ, ಕನ್ನೆ ಕಡ್ಡಯ್ಯ, ಮೊಕದಯ್ಯ, ಮುಂತಾದ ನವೀನ ಗುಡಿಗಳಿವೆ. ಏಳು ವರ್ಷಕ್ಕೊಮ್ಮೆ ಒಂಬತ್ತು ದೇವರ ಜಾತ್ರೆಯನ್ನು ನವರಾತ್ರಿ ಸಂದರ್ಭದಲ್ಲಿ ಒಂಬತ್ತು ದಿನ ವಿಜೃಂಭಣೆಯಿಂದ ಕಲ್ಕುಣಿ, ದೊಡ್ಡೇಗೌಡನ ಕೊಪ್ಪಲು, ಪುಟ್ಟೇಗೌಡನ ಹುಂಡಿ, ಚಿಕ್ಕಮಾಳಿಗೆ ಕೊಪ್ಪಲು ಹಾಗೂ ಚಿಕ್ಕ ಕಲ್ಕುಣಿಯ ಜನ ಸಂಯುಕ್ತವಾಗಿ ಆಚರಿಸುತ್ತಾರೆ.

**ಕಿಕ್ಕೇರಿ (೨೮೯೭)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೪ ಕಿ.ಮೀ. ವಾಯವ್ಯಕ್ಕಿರುವ ಹೋಬಳಿ ಕೇಂದ್ರ. ಹೊಯ್ಸಳರ ಕಾಲದ ಕಲಾತ್ಮಕ ದೇವಾಲಯಗಳಿಂದಾಗಿ ಪ್ರಸಿದ್ಧವಾಗಿದೆ. ಕ್ರಿ.ಶ.೧೧-೧೩ನೆಯ ಶತಮಾನದ ಶಿಲಾಶಾಸನಗಳಲ್ಲಿ 'ಕಿಕ್ಕೇರಿ, ಕಿಕ್ಕೇರಿಪುರ' ಎಂದೇ ಉಲ್ಲೇಖಿತಗೊಂಡಿದ್ದು, ಹೊಯ್ಸಳರ ಕಾಲದಲ್ಲಿ ಅಗ್ರಹಾರವಾಗಿದ್ದ ಇದಕ್ಕೆ 'ಸರ್ವಜ್ಞಪುರ' ಎಂಬ ಹೆಸರಿತ್ತೆಂದು ಹೇಳಲಾಗುತ್ತಾದರೂ, ಸ್ಥಳೀಯ ಶಾಸನಗಳು ಈ ಬಗ್ಗೆ ಮೌನದಿಂದಿವೆ. ಪ್ರಾಚೀನ ಕಾಲದ ಕೋಟೆಯ ಅವಶೇಷಗಳನ್ನು ಹೊಂದಿರುವ ಇದು, ಹಿಂದೆ ೧೨ ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದನ್ನು

ನೆರೆಯ ಹಿರೀಕಳಲೆಯ ಕ್ರಿ.ಶ.೧೧೧೩ರ ಶಾಸನ ದಾಖಲಿಸಿದೆ. ಇಲ್ಲಿಂದ ಈವರೆಗೆ ೧೬ ಶಾಸನಗಳು ವರದಿಯಾಗಿವೆ. ದೊಡ್ಡಕೆರೆ ಕೆಳಗಿನ ಪಾಳುಮಲ್ಲೇಶ್ವರ ದೇವಾಲಯದಲ್ಲಿರುವ ಕ್ರಿ.ಶ.೧೧೫೫ರ ಶಾಸನವು, ಹೆಗ್ಗಡೆ ಮಲ್ಲಿಯಣ್ಣನು ದೇವಾಲಯವನ್ನು ನಿರ್ಮಿಸಿ, ಬ್ರಹ್ಮೇಶ್ವರ ಎಂದು ಹೆಸರಿಟ್ಟು, ಕನ್ನೆಗೆರೆ (ನೂತನಕೆರೆ)ಯನ್ನು ಕಟ್ಟಿಸಿ, ದೇವರ ಸೇವೆಗೆಂದು ಬ್ರಹ್ಮರಾಶಿ ಪಂಡಿತರಿಗೆ ದಾನ ಬಿಡಿಸಿದ್ದನ್ನು ದಾಖಲಿಸಿವೆ. ಆದರೆ ಈ ದೇವಾಲಯವು ಶಿಥಿಲಾವಸ್ಥೆಯಲ್ಲಿದ್ದು, ಸಂರಕ್ಷಿಸುವ ಅಗತ್ಯವಿದೆ. ನೆರೆಯ ತೆಂಗಿನಘಟ್ಟದ ಕ್ರಿ.ಶ.೧೧೩೩ರ ಶಾಸನದಿಂದ ಅಲ್ಲಿಯ ಹೊಯ್ಸಳೇಶ್ವರ ದೇವಾಲಯವನ್ನು ನಿರ್ಮಿಸಿದ ಶಿಲ್ಪಿಯು ಕಿಕ್ಕೇರಿಯ ಹಾಲೋಜನ ಮಗ ಬಮ್ಮೋಜನೆಂದು ಗೊತ್ತಾಗುತ್ತಿದ್ದು, ಕಿಕ್ಕೇರಿ ಮಲ್ಲೇಶ್ವರ ಗುಡಿಯನ್ನೂ ಇವರಿಬ್ಬರೇ ಜಂಟಿಯಾಗಿ ನಿರ್ಮಿಸಿರುವ ಸಾಧ್ಯತೆಗಳಿವೆ.

ಇಲ್ಲಿಯ ಬ್ರಹ್ಮೇಶ್ವರ ದೇವಾಲಯದ ನಂದಿ ಮಂಟಪದಲ್ಲಿರುವ ಒಂದನೆಯ ನರಸಿಂಹನ ಕಾಲಕ್ಕೆ ಸೇರಿದ ಕ್ರಿ.ಶ.೧೧೭೧ರ ಶಾಸನವು, ಸಾಮಂತ ಬಮ್ಮಯ್ಯನ ಮಡದಿ ಬಮ್ಮವ್ವೆ ನಾಯಕಿಯು, ಕಿಕ್ಕೇರಿಪುರದಲ್ಲಿ ನಿರ್ಮಿಸಿದ ಬ್ರಹ್ಮೇಶ್ವರ ದೇವಾಲಯಕ್ಕೆ ದಾನ ನೀಡಿದ್ದನ್ನು ದಾಖಲಿಸಿದೆ. ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪ ಹಾಗೂ ನಂದಿಮಂಟಪಗಳನ್ನು ಹೊಂದಿರುವ ; ಅಪೂರ್ವ ಶಿಲ್ಪ ಕೆತ್ತನೆಗಳಿಂದ ಕೂಡಿರುವ ಈ ದೇವಾಲಯದ ಗರ್ಭಗೃಹಕ್ಕೆ ದ್ರಾವಿಡ ಶಿಖರವಿದೆ. ಇದರ ಅಧಿಷ್ಠಾನ ಭಾಗವು ಚಿತ್ರಪಟ್ಟಿಕೆಗಳನ್ನು ಒಳಗೊಂಡಿರದೆ, ಭಿತ್ತಿಯನ್ನು ಕಿರು ಪ್ರಮಾಣದ ಬ್ರಹ್ಮ, ಶಿವತಾಂಡವ, ಕಾಳಭೈರವ, ಗೋಪಾಲಕೃಷ್ಣ, ವಾಮನ, ಮತ್ಸ್ಯಯಂತ್ರ ಬೇಧಿಸುತ್ತಿರುವ ಅರ್ಜುನ, ಗೋವರ್ಧನಧಾರಿ ಕೃಷ್ಣ, ನಟರಾಜ, ಹರಿಹರ, ಬ್ರಹ್ಮ-ಸರಸ್ವತಿ, ಲಕ್ಷ್ಮೀನಾರಾಯಣ, ಗಜಚರ್ಮಾಂಬರಧಾರಿ ಶಿವ , ಗಣಪ, ವರಾಹ, ವಿಷ್ಣು, ಸೂರ್ಯ, ಭೈರವ-ಭೈರವಿ ಹಾಗೂ ದರ್ಪಣಾ ಸುಂದರಿಯರೇ ಮುಂತಾದ ಸುಂದರ ಉಬ್ಬು ಶಿಲ್ಪಗಳು ಅಲಂಕರಿಸಿವೆ.

ಗರ್ಭಗೃಹದಲ್ಲಿ ಬ್ರಹ್ಮೇಶ್ವರ ಲಿಂಗವಿದ್ದು, ಅದರ ಪಂಚಶಾಖಾಲಂಕೃತ ಬಾಗಿಲುವಾಡವು ಆಕರ್ಷಕವಾಗಿದ್ದು, ಶೈವದ್ವಾರಪಾಲಕರಿದ್ದಾರೆ. ಪ್ರವೇಶದ್ವಾರದ ಇಕ್ಕೆಲದಲ್ಲಿ ಜಾಲಂದ್ರಗಳಿದ್ದು, ಹೊಯ್ಸಳ ಲಾಂಛನವನ್ನೂ ಬಿಡಿಸಲಾಗಿದೆ. ನವರಂಗದ ಚಿತ್ತಾಕರ್ಷಕ ಕಂಬಗಳ ಬೋದಿಗೆಯಲ್ಲಿ ವಿವಿಧ ಭಂಗಿಯ ಸುಂದರ ಮದನಿಕಾ ಉಬ್ಬು ಶಿಲ್ಪಗಳಿದ್ದು, ಬೇಲೂರಿನ ಮದನಿಕೆಯರನ್ನು ನೆನಪಿಸುತ್ತವೆ. ನವರಂಗದ ದಕ್ಷಿಣ-ಉತ್ತರ ಭಾಗದ ಕಿರುಗರ್ಭಗೃಹಗಳಲ್ಲಿ ಶಿವಲಿಂಗ ಹಾಗೂ ಕೇಶವ ಶಿಲ್ಪಗಳಿದ್ದು, ದೇವಕೋಷ್ಠಗಳಲ್ಲಿ ಕೇಶವ, ಗಣಪತಿ, ಬ್ರಹ್ಮ, ವೀರಭದ್ರ ಹಾಗೂ ಮಹಿಷಮರ್ಧಿನಿ ಶಿಲ್ಪಗಳಿವೆ. ನವರಂಗದ ಮೇಲ್ಭಾಗದ ಭುವನೇಶ್ವರಿಯು, ಕಮಲಾಲಂಕೃತ ಅಷ್ಟದಿಕ್ಪಾಲಕರಿಂದ ಆವೃತ್ತವಾದ ನಟರಾಜನ ಶಿಲ್ಪ ಕೆತ್ತನೆಯುಳ್ಳ ಅಪೂರ್ವ ಕಲಾಕುಸುಮವಾಗಿದೆ. ಪ್ರಧಾನದ್ವಾರಕ್ಕೆ ಮಕರತೋರಣವಿದ್ದು, ಇಕ್ಕೆಲದಲ್ಲಿ ಶೈವದ್ವಾರಪಾಲಕರಿದ್ದಾರೆ. ಮುಂದಿರುವ ಆಕರ್ಷಕ ನಂದಿಮಂಟಪದಲ್ಲಿ ಬೃಹತ್ ಪ್ರಮಾಣದ ನಂದಿ ಇದ್ದು, ಹಿಂಬದಿಯಲ್ಲಿ ಸೂರ್ಯ ಪೀಠವಿದೆ. ಪ್ರಾಂಗಣದಲ್ಲಿ ಪಾರ್ವತಿ-ಗಣಪತಿ ಮಂಟಪಗಳೊಂದಿಗೆ ಕಾಲಭೈರವನ ಗುಡಿಯೂ ಇದ್ದು, ಇಲ್ಲಿಂದ ಊರಾಚೆ ಇರುವ ಮಲ್ಲೇಶ್ವರ ದೇವಾಲಯಕ್ಕೆ ಸುರಂಗಮಾರ್ಗವಿದೆ ಎಂಬ ಹೇಳಿಕೆಯೂ ಇದೆ. ಈ ಗುಡಿಯ ಬಲಮುಂಭಾಗದಲ್ಲಿ ಹೊಯ್ಸಳರ ಕಾಲದ ನಾಲ್ಕಾರು ಸುಂದರ ನಾಗಶಿಲ್ಪಗಳಿದ್ದು, ಪ್ರಾಕಾರದ ದ್ವಾರಮಂಟಪವೂ ಜೀರ್ಣೋದ್ಧಾರಗೊಂಡಿದ್ದು, ಎಡಮೂಲೆಯಲ್ಲಿ, ಪುಷ್ಕರಣಿ ಹಾಗೂ ಚಂಡಿಕೇಶ್ವರ ಗುಡಿಗಳಿವೆ. ಬ್ರಹ್ಮೇಶ್ವರ ದೇವಾಲಯದ ಎಡಭಾಗದಲ್ಲಿರುವ ಪಾರ್ವತಿ ಗುಡಿಯ ತೊಲೆ, ಬಾಗಿಲು, ಕಂಬಗಳನ್ನು ಮಸಣಯ್ಯ, ನಕರಚಾರಿ, ಕೋಟೂರು ಅಳಿಯ ಬಸವಣಪ್ಪ ಮುಂತಾದವರು ದುರಸ್ತಿಗೊಳಿಸಿ, ಜೀರ್ಣೋದ್ಧಾರ ಮಾಡಿದ ಅಂಶವನ್ನು ಅಲ್ಲಿಯ ಸುಮಾರು ೧೬-೧೭ನೆಯ ಶತಮಾನದ ನಾಲ್ಕಾರು ಶಾಸನಗಳು ಖಚಿತಪಡಿಸುತ್ತವೆ.

ಊರ ನಡುವೆ ಇರುವ ಲಕ್ಷ್ಮೀನರಸಿಂಹನ ಗುಡಿಯು ಹೊಯ್ಸಳರ ಕಾಲದ ವಿಶಾಲ ರಚನೆಯಾದರೆ, ಅದೇ ಕಾಲಕ್ಕೆ ಸೇರಿದ ಯೋಗಾನರಸಿಂಹನ ಗುಡಿಯಲ್ಲಿರುವ ಮೂರ್ತಿಯು ಕಾಳಿಂಗನಹಳ್ಳಿಯ ಶಿಲ್ಪವಾಗಿದೆ. ಜನ್ನಂತರಾಯನ ಗುಡಿ ಎಂದೇ ಕರೆಯಲ್ಪಡುವ ಜನಾರ್ದನ ಗುಡಿಯು ಗರ್ಭಗೃಹ, ಅಂತರಾಳ, ನವರಂಗಗಳನ್ನುಳ್ಳ ಹೊಯ್ಸಳ ರಚನೆಯಾಗಿದ್ದು, ಗಾತ್ರದಲ್ಲಿ ಕಿರಿದಾದರೂ ಭಿತ್ತಿಯ ಮೇಲಿನ ಸುಂದರ ಉಬ್ಬುಕೆತ್ತನೆಯಿಂದಾಗಿ ಗಮನಾರ್ಹವಾಗಿದ್ದು, ಸಂರಕ್ಷಣೆಯಾಗಬೇಕಿದೆ. ನ್ಯೂಯಾರ್ಕಿನ ಮೆಟ್ರೋಪಾಲಿಟನ್ ವಸ್ತು ಸಂಗ್ರಹಾಲಯದಲ್ಲಿರುವ ಕೇಶವ ಶಿಲ್ಪದ ಪೀಠ ಶಾಸನದಿಂದ ಅದರ ಶಿಲ್ಪಿ ಬಳ್ಳಿಗಾವೆಯ ದಾಸೋಜನೆಂದು ವೇದ್ಯವಾಗುತ್ತಿದ್ದು, ಆ ಶಿಲ್ಪವು ಕಿಕ್ಕೇರಿಯ ವಿಷ್ಣು ದೇವಾಲಯವೊಂದಕ್ಕೆ ಸೇರಿದ್ದಿರಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೆ, ಉಳಿದವರು ಅದನ್ನು ಬೇಲೂರಿನದ್ದಿರಬೇಕೆಂದು ತರ್ಕಿಸಿದ್ದಾರೆ. ಗ್ರಾಮದೇವತೆ ಕಿಕ್ಕೇರಮ್ಮನ ಗುಡಿಯು ಸಾಸಲು ರಸ್ತೆಯಲ್ಲಿದ್ದು, ವಿಶಾಲವಾದ ಪ್ರಾಕಾರದ ನಡುವೆ ಇರುವ ಈ ದೇವಿಯ ಜಾತ್ರೆಗೆ ದಾನ ಕೊಟ್ಟ ಅಂಶ, ಸುಮಾರು ೧೬ ನೇ ಶತಮಾನದ ಶಾಸನವೊಂದರಲ್ಲಿದೆ. ಇಂದಿಗೂ ಯುಗಾದಿಯಾದ ಏಳು ದಿನಕ್ಕೆ ಜರುಗುವ ಕಿಕ್ಕೇರಮ್ಮನ (ವಸಂತನ ಹಬ್ಬ) ಜಾತ್ರೆ, ದೇವಿಯ ಮೆರವಣಿಗೆ ಹಾಗೂ ದಿಮ್ಸಾಲೆ ಕುಣಿತ ವಿಶಿಷ್ಟ ಜನಪದ ಆಚರಣೆಯಾಗಿವೆ. ಸುಮಾರು ಒಂದೂವರೆ ಅಡಿ ಉದ್ದದ ಮರದ ಕೊಂತವನ್ನು ಸೊಂಟಕ್ಕೆ ಬಿಗಿದುಕೊಂಡು ಕುಣಿಯುತ್ತಾ, ನಡುನಡುವೆ ಕೊಂತವನ್ನು ಶಿಶ್ನದಂತೆ ಅಲ್ಲಾಡಿಸುತ್ತಾ ಅಶ್ಲೀಲವಾಗಿ ಬೈಯುತ್ತಾ ಸಾಗುವ ದಿಮ್ಸಾಲೆಯವನ ಕುಣಿತದ ಹಿಂದಿರುವ ಜನಪದ ಸೊಗಡು, ನಂಬಿಕೆಗಳು ಮರೆಯಾಗುವ ಮೊದಲೇ ದಾಖಲಿಸಬೇಕಾಗಿದೆ. ಸುಮಾರು ಕ್ರಿ.ಶ. ೧೫೫೦ರಲ್ಲಿದ್ದ ವೀರಶೈವ ಕವಿ, ಭೈರವೇಶ್ವರ ಕಾವ್ಯದ ಕರ್ತೃ, ಕಿಕ್ಕೇರಿಯಾರಾಧ್ಯ ನಂಜುಂಡ ಕವಿ ಇಲ್ಲಿಯವನು. (ಸಾಸಲು ನೋಡಿ) ಉಳಿದಂತೆ ಊರಲ್ಲಿಂದು ತಿರುಮಲದೇವರು, ಉಪ್ಪರಿಗೆ ಬಸವಣ್ಣ, ವೀರಭದ್ರ, ಗಣಪತಿ, ಆಂಜನೇಯ, ಕಿಕ್ಕೇರಮ್ಮ ಮತ್ತು ಮಾತಂಗಮ್ಮ ಗುಡಿಗಳಿವೆ. ಅಲ್ಲದೇ ಮಸೀದಿ ಮತ್ತು ದರ್ಗಾಗಳೂ ಇದ್ದು, ಶುಕ್ರವಾರದಂದು ವಾರದ ಸಂತೆಯಾಗುತ್ತದೆ. ಹೊಯ್ಸಳರ ಕಾಲದ ಪಂಚಲಿಂಗೇಶ್ವರ ದೇವಾಲಯವಿರುವ ಗೋವಿಂದನಹಳ್ಳಿಯೂ ಇಲ್ಲಿಗೆ ಅನತಿ ದೂರದಲ್ಲಿದೆ.

**ತೆಂಗಿನಘಟ್ಟ (೮೬೧)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೫ ಕಿ.ಮೀ. ವಾಯುವ್ಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ತೆಂಗಿನ ಕಟ್ಟ' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ೧೨ ಹಳ್ಳಿಗಳನ್ನೊಳಗೊಂಡ ಆಡಳಿತ ಘಟಕವಾಗಿತ್ತು. ಇಲ್ಲಿಂದ ಈವರೆಗೆ ಎರಡು ವೀರಗಲ್ಲು ಶಾಸನ ಹಾಗೂ ಒಂದು ದತ್ತಿ ಶಾಸನ ವರದಿಯಾಗಿವೆ. ಈಶ್ವರ ಗುಡಿ ಮುಂದಿರುವ ಹೊಯ್ಸಳ ಒಂದನೆಯ ನರಸಿಂಹದೇವನ ಕ್ರಿ.ಶ.೧೧೩೭ರ ಶಾಸನವು, ತೆಂಗಿನಕಟ್ಟದ ಕಾವಣ್ಣ, ಕಾಳೆಯನಾಯಕ ಹಾಗೂ ಹೆಗ್ಗಡೆ ಮಂಜಯ್ಯರು ಸಂಯುಕ್ತವಾಗಿ ತೆಂಗಿನಘಟ್ಟದಲ್ಲಿ ಹೊಯ್ಸಳೇಶ್ವರ ದೇವಾಲಯ ಹಾಗೂ ಕೆರೆಯನ್ನು ನಿರ್ಮಿಸಿ, ದೇವರ ಸೇವೆಗೆಂದು ಸಂಕರಾಸಿ ಹಾಗೂ ಪದ್ಮರಾಸಿ ಪಂಡಿತರಿಗೆ ದಾನಬಿಟ್ಟ ಸಂದರ್ಭದಲ್ಲಿ, ಆ ದೇವಾಲಯವನ್ನು ನಿರ್ಮಿಸಿರಬಹುದಾದ ಶಿಲ್ಪಿ, ಕಿಕ್ಕೇರಿಯ ಹಾಲೋಜನ ಮಗ ಬಮ್ಮೋಜನಿಗೆ ಉಂಬಳಿ ನೀಡಿದ ಅಂಶವನ್ನು ದಾಖಲಿಸಿದೆ. ಇಲ್ಲಿಯ ಈಶ್ವರ (ಶಾಸನೋಕ್ತ ಹೊಯ್ಸಳೇಶ್ವರ) ದೇವಾಲಯವು ಗಾತ್ರದಲ್ಲಿ ಕಿರಿದಾದರೂ ಆಕರ್ಷಕವಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲವಾಡವು ಸುಂದರವಾಗಿದೆ. ಆಕರ್ಷಕ ಭತ್ತನ್ನುಳ್ಳ ಅಂತರಾಳದಲ್ಲಿರುವ ಲಲಿತಾಸೀನ ಶಿವನ ಎಡತೊಡೆಯ ಮೇಲೆ ಆಸೀನಳಾಗಿರುವ ಪಾರ್ವತಿಯ ತಲೆಯನ್ನು ಶಿವನು ತನ್ನ ಎಡಗೈಯಲ್ಲಿ ಬಳಸಿ ಹಿಡಿದಿದ್ದು, ಈ ಪಾರ್ವತಿ-ಪರಮೇಶ್ವರ ಶಿಲ್ಪದ ಪೀಠದಲ್ಲಿ ನಂದಿ, ಷಣ್ಮುಖ, ಗಣಪ ಹಾಗೂ ಉಡಗಳನ್ನು ಬಿಡಿಸಲಾಗಿದೆ. ಆದರೆ ಈ ಶಿಲ್ಪದಲ್ಲಿ ಶಿವನ ರುಂಡ ಕಣ್ಮರೆಯಾಗಿದೆ. ನವರಂಗದ ಕುಂಬಾಕಾರದ ಕಂಬಗಳು ನಾಜೂಕಾಗಿದ್ದು, ಅಲ್ಲಿ ಸಪ್ತಮಾತೃಕಾ, ಉಮಾಮಹೇಶ್ವರ ಹಾಗೂ ಭೈರವ ಶಿಲ್ಪಗಳಿದ್ದು, ಭತ್ತಲ್ಲಿ ಸಿಂಹಾವೃತ್ತ ಕಮಲದ ಮೊಗ್ಗಿನಿಂದ ಅಲಂಕೃತವಾದ ಭುವನೇಶ್ವರಿ ಇದೆ.

ಗರ್ಭಗೃಹ ಹಾಗೂ ನವರಂಗದ ಬಾಗಿಲವಾಡಗಳು ಪಂಚಶಾಖಾಲಂಕೃತವಾಗಿದ್ದು, ಪಂಚಶಿಖರಗಳಿಂದ ಅಲಂಕರಿಸಲ್ಪಟ್ಟಿದೆ. ಕದಂಬ ನಾಗರ ಶಿಖರವನ್ನು ಹೊಂದಿರುವ ಈ ಗುಡಿಯ ಭಿತ್ತಿಯಲ್ಲಿ ಅಲಂಕಾರಿಕ ಕಂಬ, ಸ್ತಂಭ ಶಿಖರಗಳಿದ್ದು, ಚಜ್ಜವನ್ನು ಶಿಖರ ಮಾದರಿಯಲ್ಲೇ ಅಲಂಕರಿಸಲಾಗಿದೆ. ದೇವಾಲಯದ ಎಡ ಮುಂಭಾಗದ ಕಿರುಗುಡಿಯಲ್ಲಿ ಕ್ಷೇತ್ರಪಾಲ ಭೈರವನ ಮುಕ್ಕಾದ ಶಿಲ್ಪವಿದೆ. **ಮಂದಗೆರೆ (೧೩೨೭)** : ಮೈಸೂರು – ಅರಸೀಕೆರೆ ರೈಲು ಮಾರ್ಗದಲ್ಲಿ, ಕಿಕ್ಕೇರಿಯಿಂದ ೧೦ ಕಿ.ಮೀ. ದೂರದಲ್ಲಿ ಇಲ್ಲಿಂದ ಈವರೆಗೆ ಯಾವುದೇ ಶಾಸನ ವರದಿಯಾಗಿಲ್ಲ. ಆದರೆ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸೇರಿದ ನೆರೆಯ ಶ್ರವಣನಹಳ್ಳಿಯ ಜೈನಶಾಸನದಲ್ಲಿ ಈ ಊರಿನ ಉಲ್ಲೇಖವಿದೆ. ಊರ ನಡುವೆ ಇರುವ ಚನ್ನಕೇಶವ ದೇವಾಲಯದ ಗರ್ಭಗೃಹ ಹಾಗೂ ಅಂತರಾಳಗಳು ಹೊಯ್ಸಳರ ಕಾಲದ ರಚನೆಯಾಗಿದ್ದು, ಮುಂದಿನ ನವರಂಗ ಹಾಗೂ ಪಡಸಾಲೆಗಳನ್ನು ಜೀರ್ಣೋದ್ಧಾರ ಸಂದರ್ಭದಲ್ಲಿ ಸೇರಿಸಲಾಗಿದೆ. ಗರ್ಭಗೃಹದಲ್ಲಿ ಗರುಡಪೀಠದ ಮೇಲಿರುವ ಹೊಯ್ಸಳರ ಕಾಲದ ಚತುರ್ಭುಜಧಾರಿ ಚನ್ನಕೇಶವನ ಆಳೆತ್ತರದ ಮುದ್ದಾದ ಶಿಲ್ಪದ ಕೈಯಲ್ಲಿ ಶಂಖ, ಚಕ್ರ, ಕಮಲ ಹಾಗೂ ಗದೆಗಳಿದ್ದು, ಇಕ್ಕೆಲಗಳಲ್ಲಿ ಶ್ರೀದೇವಿ, ಭೂದೇವಿಯರಿದ್ದು, ಪ್ರಭಾವಳಿಯಲ್ಲಿ ಲತಾಲಂಕಾರವಿದೆ. ಬಾಗಿಲವಾಡವು ಚತುರ್‌ಶಾಖಾಲಂಕಾರದಿಂದ ಕೂಡಿದ್ದು, ಛತ್ತಲ್ಲಿ ಕಮಲಾಲಂಕಾರವಿದ್ದು, ಗರ್ಭಗೃಹದ ಮೇಲೆ ದ್ರಾವಿಡ ಶಿಖರವಿದೆ. ಅಂತರಾಳದ ದ್ವಾರವು ತ್ರಿಶಾಖಾಲಂಕಾರವನ್ನು ಹೊಂದಿದ್ದು, ಜಾಲಂದ್ರವೂ ಇದೆ. ಬದಿಯಲ್ಲಿಯೇ ಇರುವ ಸೋಮೇಶ್ವರ ದೇವಾಲಯವು ಹೊಯ್ಸಳರ ಕಾಲದ ರಚನೆಯಾಗಿದ್ದು, ಮುಂದೆ ನಂದಿ ಕಂಬವಿದ್ದು, ಸಂರಕ್ಷಣೆ ಆಗಬೇಕಾಗಿದೆ. ಆಂಜನೇಯನ ಗುಡಿ ಮುಂದಿರುವ ಹುಲಿಬೇಟೆ ವೀರಗಲ್ಲು ಬಹಳ ಮುಕ್ಕಾಗಿದೆ. ಉಳಿದಂತೆ ಊರಲ್ಲಿ ಕಟ್ಟೆ ಪರಮೇಶ್ವರಿ, ಮಾರಮ್ಮ ಮುಂತಾದ ಗುಡಿಗಳಿದ್ದು, ಕಟ್ಟೇ ಪರಮೇಶ್ವರಿಯ ಜಾತ್ರೆ ಪ್ರಮುಖವಾಗಿದೆ. ಹೇಮಾವತಿ ನದಿಗೆ ಮಂದಗೆರೆ ಬಳಿ ಅಣೆಕಟ್ಟನ್ನು ೧೮೭೩ರ ವೇಳೆಗೆ ನಿರ್ಮಿಸಲಾಗಿದ್ದು, ಇಲ್ಲಿಯ ಪ್ರಶಾಂತ ವಾತಾವರಣ ಪ್ರವಾಸಿಗರಿಗೆ ಮುದ ನೀಡುತ್ತಿದ್ದು, ಇದನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ ಪಡಿಸುವ ಅಗತ್ಯವಿದೆ.

**ಕುಂದೂರು (೨೮೦೯)** : ತಾಲೂಕು ಕೇಂದ್ರ ಮಳವಳ್ಳಿಯಿಂದ ೧೦ಕಿ.ಮೀ. ದಕ್ಷಿಣಕ್ಕಿದ್ದು, ಬೇಲೂರಿನ (ಮಂಡ್ಯ ತಾ.) ಕ್ರಿ.ಶ.೯೭ರ ಶಾಸನವೂ ಸೇರಿದಂತೆ ಹದಿನೈದನೆಯ ಶತಮಾನದ ಶಾಸನಗಳಲ್ಲಿ ಇದು ಕುಂದೂರು ಎಂದೇ ಉಲ್ಲೇಖಿತಗೊಂಡಿದ್ದು, ಅಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು, ಕುಂದೂರ ಮೂಲಸ್ಥಾನ ದೇವರಿಗೆ ಬೇರೆ ಬೇರೆ ಸಂದರ್ಭಗಳಲ್ಲಿ, ದತ್ತಿಬಿಟ್ಟ ವಿಷಯವನ್ನು ತಿಳಿಸುತ್ತವೆ.

ಊರಿನಿಂದ ಸುಮಾರು ಎರಡು ಕಿ.ಮೀ.ದೂರದಲ್ಲಿರುವ ಎರಡು ಬೆಟ್ಟಗಳನ್ನು ಕುಂದಣ ಪರ್ವತ, ರಸ ಸಿದ್ಧೇಶ್ವರ ಬೆಟ್ಟ, ಸಂಜೀವಿನಿ ಪರ್ವತ ಎಂದೆಲ್ಲ ಕರೆಯುತ್ತಾರೆ. ನೆರೆಯ ದಾಸನದೊಡ್ಡಿಯ ಕ್ರಿ.ಶ. ೧೫೫೮ರ ಶಾಸನದಲ್ಲಿ ಇದನ್ನು ಕುಂದೂರ ಬೆಟ್ಟ ಎಂದೇ ಕರೆಯಲಾಗಿದೆ. ಹಿರಿ ಬೆಟ್ಟದ ಬುಡದಲ್ಲಿ ರುದ್ರಮುನಿಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುವ ವೀರಶೈವ ಹಾಗೂ ಪಂಚಾಚಾರ್ಯ ಮಠಗಳಿವೆ. ಬೆಟ್ಟದ ಮಧ್ಯಭಾಗದಲ್ಲಿರುವ ಅರೆಮಲ್ಲಿಕಾರ್ಜುನ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಸುಮಾರು ೧೫–೧೬ನೆಯ ಶತಮಾನದ ಸರಳ ರಚನೆಯಾಗಿದ್ದು, ನಿರಾಡಂಬರವಾಗಿದೆ. ಗಾರೆಯ ಶಿಖರವನ್ನು ಹೊಂದಿರುವ ಗರ್ಭಗೃಹದಲ್ಲಿ ಬಲಹರಿ ಶಿವಲಿಂಗ, ಅಂತರಾಳದಲ್ಲಿ ನಂದಿ ಹಾಗೂ ನವರಂಗದಲ್ಲಿ ಗಣಪತಿಯೊಂದಿಗೆ ನಾಗಶಿಲ್ಪಗಳಿದ್ದು, ಗುಡಿಯ ಎಡಭಾಗದಲ್ಲಿ ನಂದಿ ಕಂಬವಿದೆ. ಬಳಿಯಲ್ಲೇ ಹದ್ದಿನಗರಿಕಲ್ಲು, ಜಾರುಗಲ್ಲು, ಸುಂಕದಕಲ್ಲು ಎಂದು ಕರೆಯಲಾಗುವ ದೈತ್ಯಾಕಾರದ ಬಂಡೆಗಳ ಸಮೂಹವಿದ್ದು, ಮೇಲೆ ನಾಲ್ಕಾರು ಗವಿಗಳೂ ಇವೆ. 'ಧರೆಗೆ ದೊಡ್ಡವರು' ಎಂಬ ಹೆಗ್ಗಳಿಕೆಗೆ ಪಾತ್ರರಾದ ಮಂಟೇಸ್ವಾಮಿ ಹಾಗೂ ಅವರ ಶಿಷ್ಯ ಸಿದ್ಧಪ್ಪಾಜಿಯ ತಪೋಲೀಲಾಭೂಮಿ ಇದಾಗಿದ್ದು, ಇಲ್ಲಿ ಅವರ ಹೆಸರಿನ ಗವಿಗಳಿದ್ದು, ಒಳಗೆ ಕಿರುಗದ್ದುಗೆಗಳಿವೆಯಾದರೂ ಮಂಟೇಸ್ವಾಮಿಯ ಸಮಾಧಿಯು

ಬೊಪ್ಪಗೌಡನಪುರದಲ್ಲೂ ಸಿದ್ಧಪ್ಪಾಜಿಯ ಸಮಾಧಿಯು ಚಿಕ್ಕಾಲೂರಿನಲ್ಲೂ (ಕೊಳ್ಳೇಗಾಲ ತಾ.) ಇವೆ. ಬೆಟ್ಟದ ಬುಡದ ಗವಿಯೊಂದರ ಬಳಿ ಸುಮಾರು ೧೮ ನೆಯ ಶತಮಾನದ ಎರಡು ವೀರಗಲ್ಲುಗಳಿವೆ. ಬದಿಯ ಕಿರುಬೆಟ್ಟದ ಬುಡದಲ್ಲಿರುವ ಮೈಸೂರು ಅರಸರ ಕಾಲದ ಬೆಟ್ಟದರಸಮ್ಮನ ಗುಡಿ ಜೀರ್ಣೋದ್ಧಾರಗೊಂಡಿದೆ.

ಊರ ಹಾದಿಯಲ್ಲಿರುವ ಸುಮಾರು ೧೫ನೆಯ ಶತಮಾನದ ದೇಶೇಶ್ವರ (ಶಾಸನೋಕ್ತ ಮೂಲಸ್ಥಾನ) ದೇವಾಲಯಕ್ಕೆ ಪ್ರಧಾನ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳಿದ್ದು, ನವರಂಗಕ್ಕೆ ಸೇರಿದಂತೆ ಉತ್ತರ ಭಾಗದಲ್ಲಿರುವ ಗರ್ಭಗೃಹವನ್ನು ಸರ್ಪದ ಕೊಠಡಿ ಎಂದು ಕರೆಯಲಾಗುತ್ತದೆ. ಸ್ವಲ್ಪ ತಗ್ಗಿನಲ್ಲಿರುವ ಈ ಗುಡಿಗೆ ನಂತರದಲ್ಲಿ ಕಾಡುಕಲ್ಲಿಂದ ಕಟ್ಟಿರುವ ಪ್ರಾಕಾರವಿದ್ದು, ಹೊರಭಾಗದಲ್ಲಿ ಎತ್ತರದ ಕಟ್ಟೆಯ ಮೇಲಿದ್ದ ಸುಮಾರು ೩೦ ಅಡಿ ಎತ್ತರದ ನಂದಿ ಕಂಬವಿಂದು ಮೂರು ತುಂಡಾಗಿ ಅಡ್ಡ ಬಿದ್ದಿದೆ. ಗಾರೆ ಶಿಖರವುಳ್ಳ ಇದರ ಗರ್ಭಗೃಹದಲ್ಲಿ ಸ್ವಯಂಭೂ ಲಿಂಗವಿದ್ದು, ಬಾಗಿಲವಾಡವು ಅಲ್ಪ ಅಲಂಕಾರದಿಂದ ಕೂಡಿದ್ದು, ನವರಂಗದಲ್ಲಿ ಗಣಪ, ಭೈರವ, ಸೂರ್ಯ, ವಿಷ್ಣು, ನಂದಿ ಮುಂತಾದ ಕಿರುಶಿಲ್ಪಗಳಿವೆ. ಇದರ ಪ್ರಧಾನ ದ್ವಾರಕ್ಕೆ ಆಕರ್ಷಕ ಬಾಗಿಲವಾಡವಿದ್ದು, ನಾಲ್ಕಾರು ಶಾಸನಗಳಿದ್ದರೂ ಈವರೆಗೆ ಮೂರಷ್ಟೇ ವರದಿಯಾಗಿದ್ದು, ಉಳಿದವು ಅಧ್ಯಯನಕ್ಕೊಳಪಡಬೇಕಿದೆ. ಈ ದೇವಾಲಯವು ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ, ಮೂಲರೂಪವನ್ನು ಉಳಿಸಿಕೊಳ್ಳಲಾಗಿದೆ. ಊರ ಪ್ರವೇಶದಲ್ಲೇ ಇರುವ ವೀರಭದ್ರನ ಗುಡಿಗೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಪ್ರಾಕಾರಗಳಿವೆ. ಇಲ್ಲೂ ಒಂದು ಶಾಸನ ಕಲ್ಲಿದ್ದು, ಒಳಗೆ ಆರು ಅಡಿ ಎತ್ತರದ ವೀರಭದ್ರನ ಸುಂದರ ಮೂರ್ತಿ ಇದೆ. ಉಳಿದಂತೆ ಗೊಗ್ಗಪ್ಪ ಶರಣ, ರಾಮಮಂದಿರ, ಮಾರಮ್ಮ, ಮುಂತಾದ ಗುಡಿಗಳಿದ್ದು, ಎರಡು ವೀರಶೈವ ಮಠಗಳೂ ಇವೆ.

**ಕೃಷ್ಣರಾಜಪೇಟೆ (೧೭,೯೬೬)** : ಬಹು ಹಿಂದಿನಿಂದಲೂ ತಾಲೂಕು ಕೇಂದ್ರವಾಗಿರುವ ಇದು, ಜಿಲ್ಲಾ ಕೇಂದ್ರ ಮಂಡ್ಯದಿಂದ ೬೦ ಕಿ.ಮೀ. ವಾಯವ್ಯಕ್ಕಿದೆ. ಹೊಸಹೊಳಲಿನ ಸುಮಾರು ೧೫-೧೬ನೇ ಶತಮಾನದ ಶಿಲಾಶಾಸನ ಹಾಗೂ ಮೈಸೂರಿನ ೧೮೨೧ ಹಾಗೂ ೧೮೪೩ರ ತಾಮ್ರ ಶಾಸನಗಳಲ್ಲಿ ಇದು 'ಅತ್ತಿಕುಪ್ಪೆ' ಎಂದೇ ಕರೆಯಲ್ಪಟ್ಟಿದೆ. ಮುಂದೆ ೧೯೪೧ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವರ್ಧಂತಿಯ ನೆನಪಾಗಿ ತಾಲೂಕು ಕೇಂದ್ರ ಅತ್ತಿಕುಪ್ಪೆಗೆ ಕೃಷ್ಣರಾಜಪೇಟೆ ಎಂದು ನಾಮಕರಣ ಮಾಡಲಾಯಿತು. ಇಲ್ಲಿಯ ಕೈಲಾಸೇಶ್ವರ ಗುಡಿ ಬಳಿಯಿರುವ ಸುಮಾರು ೧೨ನೆಯ ಶತಮಾನದ ವೀರಗಲ್ಲ ಶಾಸನವು, ಕಾದಾಡುತ್ತ ಮಡಿದ ಕಾಮೆಯಣ್ಣನಿಗಾಗಿ ಬೈರಿತಮ್ಮನು ವೀರಗಲ್ಲನ್ನು ನಿಲ್ಲಿಸಿದ ಅಂಶವನ್ನು ದಾಖಲಿಸಿದೆ.

ಊರಲ್ಲಿಂದು ಮಲ್ಲೇಶ್ವರ, ಚನ್ನಬಸವೇಶ್ವರ, ಲಕ್ಷ್ಮೀನಾರಾಯಣ, ಆಂಜನೇಯ, ಮುತ್ತುರಾಯ, ಬಸವರಾಜಗುರು ಗದ್ದುಗೆ, ದೇವೀರಮ್ಮ ಮುಂತಾದ ದೇವಾಲಯಗಳಿದ್ದು, ಮಸೀದಿ, ದರ್ಗಾ ಕೂಡ ಇವೆ. ಇವುಗಳಲ್ಲಿ ಕೈಲಾಸೇಶ್ವರವು ಪ್ರಾಚೀನ ದೇವಾಲಯವಾದರೂ ಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಸುಸ್ಥಿತಿಯಲ್ಲಿದೆ. ಅನತಿ ದೂರದಲ್ಲಿರುವ ಹೇಮಗಿರಿ ಪಕ್ಷಿಧಾಮ; ಹೊಸಹೊಳಲು, ಕಿಕ್ಕೇರಿ ಹಾಗೂ ಗೋವಿಂದನಹಳ್ಳಿಗಳು ಹೊಯ್ಸಳರ ಕಾಲದ ಸುಂದರ ದೇವಾಲಯಗಳಿಂದಾಗಿ ಪ್ರಸಿದ್ಧವಾಗಿವೆ.

**ಕೃಷ್ಣರಾಜಸಾಗರ (೧೩೦೧) :** ಕಾವೇರಿ ನದಿಗೆ ಕನ್ನಂಬಾಡಿ ಬಳಿ ನಿರ್ಮಿಸಿರುವ ಅಣೆಕಟ್ಟೆಗೆ ಆಳರಸ ನಾಲ್ವಡಿ ಕೃಷ್ಣರಾಜ ಒಡೆಯರ ಹೆಸರನ್ನು ೧೯೧೭ರಲ್ಲಿ ಇಡುವುದಕ್ಕೆ ಮೊದಲು, ಕನ್ನಂಬಾಡಿ ಕಟ್ಟೆ ಎಂದೇ ಕರೆಯಲ್ಪಡುತ್ತಿದ್ದ ಇದು ವಿಶ್ವವಿಖ್ಯಾತ ಬೃಂದಾವನದಿಂದಾಗಿ ಪ್ರಸಿದ್ಧವಾಗಿದೆ. ಪಾಂಡವಪುರದಿಂದ ೧೮ ಕಿ.ಮೀ.

ನೈಋುತ್ಯಕ್ಕೂ ಶ್ರೀರಂಗಪಟ್ಟಣದಿಂದ ೧೪ ಕಿ.ಮೀ. ಪಶ್ಚಿಮಕ್ಕೂ ಹಾಗೂ ಮೈಸೂರಿನಿಂದ ೧೯ ಕಿ.ಮೀ. ವಾಯವ್ಯಕ್ಕೂ ಇರುವ ಇದು 'ಪ್ರವಾಸಿಗರ ಸ್ವರ್ಗ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಶಿವಸಮುದ್ರದ ಜಲವಿದ್ಯುದಾಗಾರಕ್ಕೆ ಮತ್ತು ಮೈಸೂರು ನಗರಕ್ಕೆ ಕುಡಿಯುವ ನೀರು ಪೂರೈಕೆಗಾಗಿ ಹಾಗೂ ನೀರಾವರಿಗೆ ನಿರಂತರವಾಗಿ ಕಾವೇರಿ ನೀರನ್ನು ಒದಗಿಸುವ ಉದ್ದೇಶದಿಂದ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯ, ಟಿ.ಆನಂದರಾವ್, ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರಂತಹ ದಿವಾನರೂ ಕರ್ಪೂರ ಶ್ರೀನಿವಾಸರಾವ್, ಬಿ.ಸುಬ್ಬಾರಾವ್, ಕೆ.ಕೃಷ್ಣಾಯ್ಯಂಗಾರ್, ಕೆ.ಆರ್.ಶೇಷಾಚಾರ್, ಎಚ್.ಪಿ.ಗಿಬ್ಸ್, ಮುಂತಾದ ಇಂಜಿನಿಯರರು ಹಾಗೂ ಅಸಂಖ್ಯಾತ ಕಾರ್ಮಿಕರ ನಿರಂತರ ಪರಿಶ್ರಮದಿಂದಾಗಿ ೧೯೧೧-೩೨ರ ಅವಧಿಯಲ್ಲಿ ಸುಮಾರು ಎರಡೂವರೆ ಕೋಟಿ ವೆಚ್ಚದಲ್ಲಿ ಪೂರ್ಣಗೊಂಡ, ೧೩೦ ಅಡಿ ಎತ್ತರದ ಈ ಅಣೆಕಟ್ಟೆಯು ಸುಮಾರು ೮೬೦೦ ಅಡಿ ಉದ್ದವಿದೆ. ಕಟ್ಟೆಯುದ್ದಕ್ಕೂ ವಿವಿಧ ಮಟ್ಟದಲ್ಲಿ ಕಮಾನಿನಾಕಾರದ ೧೭೧ ಕಬ್ಬಿಣದ ತೂಬುಗಳನ್ನು ಅಳವಡಿಸಲಾಗಿದ್ದು, ಅವುಗಳಲ್ಲಿ ಕೆಲವು ಸ್ವಯಂಚಾಲಿತ ಬಾಗಿಲನ್ನೂ ಹೊಂದಿವೆ. ಕಾವೇರಿ, ಹೇಮಾವತಿ ಹಾಗೂ ಲಕ್ಷ್ಮಣತೀರ್ಥ ನದಿಗಳ ಸಂಗಮ ಸ್ಥಳದಿಂದ ಕೆಳಕ್ಕಿರುವ ಈ ಕಟ್ಟೆಯ ಹಿನ್ನೀರು ಸರೋವರೋಪಾದಿಯಲ್ಲಿ ವ್ಯಾಪಿಸಿದ್ದು, ತ್ರಿವೇಣಿ ಸಂಗಮಬಿಂದು ಜಲಾಶಯದಲ್ಲಿ ಐಕ್ಯವಾಗಿದೆ. ಆದರೆ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಕನ್ನಂಬಾಡಿಯ ಗೋಪಾಲಕೃಷ್ಣ ಗುಡಿಯನ್ನು ಬೇಸಿಗೆಯಲ್ಲಿ ನೋಡಬಹುದಾಗಿದೆ. ಕೃಷ್ಣರಾಜಸಾಗರ ಅಣೆಕಟ್ಟೆಯ ದಕ್ಷಿಣ-ಉತ್ತರ ತುದಿಗಳಲ್ಲಿ ದ್ವಾರಗಳಿವೆಯಾದರೂ ಪ್ರವಾಸಿಗಳಿಗೆ ದಕ್ಷಿಣ ದ್ವಾರವೇ ಹೆಚ್ಚು ಬಳಕೆಯಲ್ಲಿದ್ದು, (ಟಿಪ್ಪುವಿನ ಪರ್ಷಿಯನ್ ಶಾಸನ (೧೭೮೯)ವಿರುವುದು ಅಲ್ಲೇ). ಕಟ್ಟೆಯ ಮೇಲೆ ಸಾಗುವಾಗ ಎಡಕ್ಕೆ ಕಾಣುವ ಅನಂತ ಜಲರಾಶಿ, ಅದನ್ನು ನಿಯಂತ್ರಿಸುವ ತೂಬು, ಕ್ರೇನುಗಳನ್ನು ದಾಟಿ ಸ್ವಲ್ಪ ಮುಂದೆ ಸಾಗಿ ಬಲಕ್ಕಿಳಿದರೆ, ಬೃಂದಾನವನ್ನು ತಲುಪುತ್ತೇವೆ. ಇಲ್ಲವೇ ಕಟ್ಟೆಯ ಮೇಲೆ ಉತ್ತರ ದ್ವಾರದವರೆಗೂ ಸಾಗಿದರೆ, ಎಡಕ್ಕಿರುವ ಜಲಾಶಯದ ಮೇಲಿಂದ ತೇಲಿ ಬರುವ ತಂಗಾಳಿ ಮುದ ನೀಡುತ್ತಿದ್ದು, ಬಲಕ್ಕೆ ಕಟ್ಟೆಯ ಕೆಳಗೆ ಹರಡಿಕೊಂಡಿರುವ ಬೃಂದಾವನವು ಮಿರ್ಜಾ ಇಸ್ಮಾಯಿಲ್ಲರ ಕೊಡುಗೆಯಾಗಿದ್ದು, ಮೊಘಲ್ ಶೈಲಿಯಲ್ಲಿರುವ ಇದು ಕಾಶ್ಮೀರದ ಷಾಲಿಮಾರ್ ತೋಟವನ್ನು ನೆನಪಿಸುತ್ತದೆ. ಪ್ರವಾಸಿಗರ ಸ್ವರ್ಗವೆಂದೇ ಪ್ರಸಿದ್ಧವಾಗಿರುವ ಬೃಂದಾವನ ತೋಟವು ದೇವಲೋಕದ ನಂದನವನದಂತಿದ್ದು, ಒಳಸಾಗುತ್ತಿದ್ದಂತೆ ಎದುರಾಗುವ ವಿವಿಧ ವಿನ್ಯಾಸದ ಕಾರಂಜಿಗಳ ಸಾಲು ಚಿಮ್ಮಿಸುವ ಜಲಧಾರೆ, ಸಿಂಪಡಿಸುವ ತುಂತುರು ಮೂಡಿಸುವ ಚಿತ್ತಾರ, ಸುತ್ತ ಸಸ್ಯಸಂಪದಗಳ ಅಲಂಕಾರ, ವಿದ್ಯುತ್ ಬೆಳಕಿನ ಶೃಂಗಾರದ ರಸದೌತಣವನ್ನು ಸವಿಯುತ್ತ ಮುನ್ನಡೆದು ನಡುವಿರುವ ವಿಶಾಲ ಸರೋವರವನ್ನು ಬೇಕೆನಿಸಿದರೆ ದೋಣಿವಿಹಾರದೊಂದಿಗೆ ದಾಟಬಹುದು ಇಲ್ಲವೇ, ಕಟ್ಟೆಯಂಚಲ್ಲಿ ಕಾಲ್ನಡಿಗೆಯಲ್ಲೇ ಸಾಗಿ ಸರೋವರದ ಆಚೆ ದಡದ ಮೂಲೆಯೊಂದರಲ್ಲಿರುವ ವಿಶಿಷ್ಟ ವಿನ್ಯಾಸದ, ಒಂದು ಕಾಲದಲ್ಲಿ ದಕ್ಷಿಣ ಭಾರತಕ್ಕೇ ಪ್ರಥಮವೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಸಂಗೀತಕಾರಂಜಿ (೧೯೮೫)ಯು, ಹೊರಹೊಮ್ಮುವ ಸಂಗೀತಕ್ಕೆ ತಕ್ಕಂತೆ ಜಿಗಿದು ನಲಿಯುವ ವರ್ಣರಂಜಿತ ವಿದ್ಯುತ್ ನೃತ್ಯ ಕಾರಂಜಿ ನೋಡುಗರಲ್ಲಿ ಉಲ್ಲಾಸವನ್ನುಂಟು ಮಾಡುತ್ತದೆ. ಅನತಿ ದೂರದಲ್ಲಿ ಕಾಣುವ ಎಡದಂಡೆ ನಾಲೆಯೇ ವಿಶ್ವೇಶ್ವರಯ್ಯ ನಾಲೆಯಾಗಿದ್ದು, ಮಂಡ್ಯ ಜಿಲ್ಲೆಯನ್ನು ಹಸಿರಾಗಿಸುವಲ್ಲಿ ಯಶಸ್ವಿಯಾಗಿದೆ. ಅಲ್ಲದೇ ಬಾಲೋದ್ಯಾನ, ಮತ್ಸ್ಯೋದ್ಯಾನ, ತೋಟಗಾರಿಕೆ ಇಲಾಖೆಯ ಸಸ್ಯ ಸುಶ್ರೂಷಾ ಕೇಂದ್ರ ಹಾಗೂ ಜಲಭಾರ ಶಾಸ್ತ್ರಾಧ್ಯಯನ ಪ್ರಯೋಗಾಲಯಗಳೂ ಇಲ್ಲಿವೆ. ಪ್ರವಾಸಿಗರಿಗೆಂದು ಕೃಷ್ಣರಾಜಸಾಗರ ಹೊಟೇಲ್, ಪ್ರವಾಸಿಮಂದಿರ, ಹಾಗೂ ನಿರೀಕ್ಷಣಾ ಮಂದಿರಗಳಿವೆ. ಲೇಸರ್ ಪಾರ್ಕ್, ವಾಟರ್ ಥೀಮ್ ಪಾರ್ಕ್ ಗಳಂತಹ ನೂತನ ತಾಂತ್ರಿಕ ಉದ್ಯಾನಗಳು ತಲೆ ಎತ್ತುತ್ತಿರುವ ಹಿನ್ನೆಲೆಯಲ್ಲಿ ಕೃಷ್ಣರಾಜಸಾಗರ ಬೃಂದಾವನದ ಸರ್ವಾಂಗೀಣ ಅಭಿವೃದ್ಧಿಗಾಗಿ ಕೃಷ್ಣರಾಜಸಾಗರ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಿರುವ ಸರ್ಕಾರವು ಪ್ರವೇಶ ಶುಲ್ಕದಿಂದ ಬರುವ ಆದಾಯವನ್ನು ಕ್ಷೇತ್ರದ ಅಭಿವೃದ್ಧಿ

ಕಾರ್ಯಗಳಿಗಾಗಿ ಪ್ರಾಧಿಕಾರಕ್ಕೆ ನೀಡುವುದಾಗಿ ತಿಳಿಸಿದ್ದು, ಕೆ.ಆರ್.ಎಸ್.ನ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. **ಕನ್ನಂಬಾಡಿ (ಬೇಚಿರಾಕ್)** : ತಾಲೂಕು ಕೇಂದ್ರ ಪಾಂಡವಪುರದಿಂದ ೧೮ ಕಿ.ಮೀ.ಹಾಗೂ ಪಾಂಡವಪುರ ರೈಲು ನಿಲ್ದಾಣದಿಂದ ೧೫ ಕಿ.ಮೀ. ನೈಋತ್ಯಕ್ಕೆ ಕನ್ನಂಬಾಡಿ (ಕೃಷ್ಣರಾಜಸಾಗರ)ಯ ಹಿನ್ನೀರಿನಲ್ಲಿ ಪ್ರಸ್ತುತ ಮುಳುಗಡೆಯಾಗಿರುವ ನಿರ್ವಸತಿ ಗ್ರಾಮವಾದರೂ ಮುಳುಗಡೆಯಾಗಿರುವ ಗೋಪಾಲಕೃಷ್ಣ ದೇವಾಲಯದಿಂದಾಗಿ ಮಹತ್ವ ಪಡೆದಿದೆ. ಪ್ರಾಚೀನ ಶಾಸನಗಳಲ್ಲಿ 'ಕನಂಬಾಡಿ', 'ಕನ್ನಂಬಾಡಿ' ಎಂದೇ ಉಲ್ಲೇಖಿತಗೊಂಡಿದ್ದು,' ಮಹಾಅಗ್ರಹಾರ' ಎಂಬ ವಿಶೇಷಣವನ್ನೂ ಹೊಂದಿದ್ದ ಇದು ಹಿಂದೆ ಕಣ್ವ ಋಷಿಗಳ ಆಶ್ರಮ ಪ್ರದೇಶವಾಗಿದ್ದು, ಅವರೇ ಪ್ರತಿಷ್ಠಾಪಿಸಿರುವ ಕಣ್ವೇಶ್ವರ ಲಿಂಗವಿಲ್ಲಿತ್ತೆಂಬ ಐತಿಹ್ಯವಿದೆ. ಪೌರಾಣಿಕವಾಗಿ ಕನ್ನಂಬಾಡಿಯನ್ನು ಕಾಶಿಗೂ, ಕಾವೇರಿಯನ್ನು ಗಂಗೆಗೂ, ಕಣ್ವೇಶ್ವರ-ಗೋಪಾಲಕೃಷ್ಣರನ್ನು ಕ್ರಮವಾಗಿ ಕಾಶಿವಿಶ್ವನಾಥ-ಬಿಂದುಮಾಧವರಿಗೂ ಹೋಲಿಸಲಾಗುತ್ತಿದ್ದು, ಕನ್ನಂಬಾಡಿಯ ೧೮೧೮ ಹಾಗೂ ೧೮೫೯ರ ಶಾಸನಗಳು ಇದನ್ನು 'ಕಣ್ವಪುರಿಕ್ಷೇತ್ರ' ಎಂದೇ ಕರೆದಿವೆ. ಕನ್ನಂಬಾಡಿ ಮುಳುಗಡೆ ಗ್ರಾಮದಿಂದ ಈಗಾಗಲೇ ವರದಿಯಾಗಿರುವ ೨೪ ಶಾಸನಗಳಲ್ಲಿ, ಎಂಟು ಗೋಪಾಲಕೃಷ್ಣನಿಗೂ ಎಂಟು ಕಣ್ಣೇಶ್ವರನಿಗೂ ಹಾಗೂ ಉಳಿದೆಂಟು ಮಹಾಲಕ್ಷ್ಮೀಗೂ ಸಂಬಂಧಿಸಿದ್ದು, ಅವುಗಳಲ್ಲೊಂದು ತಾಮ್ರಶಾಸನವಾಗಿದೆ. ಅಲ್ಲದೇ ಕನ್ನಂಬಾಡಿ ಮುಳುಗಡೆ ಪ್ರದೇಶದಲ್ಲಿ ಹತ್ತಾರು ವೀರಗಲ್ಲುಗಳೂ ಅನಾಥವಾಗಿ ಬಿದ್ದಿವೆ.

ಕನ್ನಂಬಾಡಿ ಜಲಾಶಯದಲ್ಲಿ ಮುಳುಗಡೆಯಾಗಿದ್ದರೂ, ೧೯೫೧, ೧೯೫೭, ೧೯೮೭, ೨೦೦೦, ೨೦೦೧, ೨೦೦೨ ಹಾಗೂ ೨೦೦೩ರಲ್ಲಿ ಪೂರ್ಣ ಗೋಚರಿಸಿದ್ದು, ಅಸಂಖ್ಯಾತ ಭಕ್ತರನ್ನೂ ಪ್ರವಾಸಿಗರನ್ನೂ ಆಕರ್ಷಿಸಿದ್ದ ಗೋಪಾಲಕೃಷ್ಣ ದೇವಾಲಯವನ್ನು ಕೃಷ್ಣರಾಜ ಜಲಾಶಯದ ನೀರಿನಮಟ್ಟ ೬೨ ಅಡಿಗಳಿಗಿಳಿದಾಗ ಸಮೀಪ ಹೋಗಿ ನೋಡಬಹುದಾಗಿದೆ. ಈ ಗುಡಿಯಲ್ಲಿರುವ ಸುಮಾರು ೧೩-೧೪ನೆಯ ಶತಮಾನದ ಶಾಸನಗಳಿಂದ ಸುಮಾರು ಕ್ರಿ.ಶ. ೧೩೦೦ರ ವೇಳೆಗಾಗಲೇ ಇಲ್ಲಿ ಗೋಪಾಲಕೃಷ್ಣ ದೇವಾಲಯವಿದ್ದ ಅಂಶ ವೇದ್ಯವಾಗುತ್ತದೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿರುವ ವಿಶಾಲವಾದ ಈ ಸಂಕೀರ್ಣವು ಗರ್ಭಗೃಹ, ಅಂತರಾಳ, ನವರಂಗ, ತೆರೆದ ರಂಗಮಂಟಪ, ಗರುಡಗಂಬ, ಸುತ್ತಾಲಯ, ಕೈಸಾಲೆಮಂಟಪ ಹಾಗೂ ಮಹಾದ್ವಾರಮಂಟಪಗಳನ್ನು ಒಳಗೊಂಡ ಒಳಪ್ರಾಕಾರ, ಯಾಗಶಾಲೆ, ಪಾಕಶಾಲೆ ಹಾಗೂ ವಿಶಾಲವಾದ ದ್ವಾರಮಂಟಪಗಳನ್ನೊಳಗೊಂಡ ಹೊರಪ್ರಾಕಾರಕ್ಕೆ ಎದುರಾಗಿ ಎತ್ತರದ ಕಿರುಮಂಟಪವನ್ನೂ ಹೊಂದಿದ್ದು, ಸುಮಾರು ಎರಡು ಎಕರೆ ಪ್ರದೇಶದಲ್ಲಿ ಪೂರ್ವಾಭಿಮುಖವಾಗಿ ವ್ಯಾಪಿಸಿದೆ. ದ್ರಾವಿಡ ಶೈಲಿಯಲ್ಲಿರುವ ಇದರ ಮೂಲ ಗರ್ಭಗೃಹದಲ್ಲಿ ಮುಳುಗಡೆ ಸಂದರ್ಭದಲ್ಲಿ ಕೇಶವ ಶಿಲ್ಪವಿದ್ದು, ನವರಂಗದ ದಕ್ಷಿಣ ಭಾಗದ ಗರ್ಭಗೃಹ (ನಂತರದ ಮಾರ್ಪಾಡು)ದಲ್ಲಿದ್ದ ಗೋಪಾಲಕೃಷ್ಣನ ಆಳೆತ್ತರದ ಮೂರ್ತಿಯನ್ನು ನರಸರಾಜ ಒಡೆಯರು ಈ ಗುಡಿಯ ಜೀರ್ಣೋದ್ಧಾರ ಸಂದರ್ಭದಲ್ಲಿ, ಹೊಸಹೊಳಲಿನ ಲಕ್ಷ್ಮೀನಾರಾಯಣ ದೇವಾಲಯದಿಂದ ತಂದು ಪ್ರತಿಷ್ಠಾಪಿಸಿರಬೇಕೆಂದು ಹಯವದನರಾಯರು ಮೈಸೂರು ಗ್ಯಾಸೆಟಿಯರಿನಲ್ಲಿ ದಾಖಲಿಸಿದ್ದಾರೆ. ಆದರೆ, ಅಲ್ಲೇ ಇರುವ ೧೪ನೆಯ ಶತಮಾನದ ಶಾಸನವೊಂದರಲ್ಲಿ ಗೋಪಾಲದೇವರ ಉಲ್ಲೇಖ ಬರುವುದರಿಂದ ಇಲ್ಲಿದ್ದ ಗೋಪಾಲಕೃಷ್ಣನ ಮೂಲಮೂರ್ತಿ ಏನಾಯಿತೆಂಬ ಪ್ರಶ್ನೆ ಕಾಡುತ್ತದೆ. ಈ ಎರಡು ಅಪೂರ್ವ ಹೊಯ್ಸಳ ಶಿಲ್ಪಗಳೂ ಸೇರಿದಂತೆ (ಅಂದರೆ ಕೇಶವ ಮತ್ತು ಗೋಪಾಲಕೃಷ್ಣ) ಇಲ್ಲಿದ್ದ ಎಲ್ಲಾ ಮೂರ್ತಿ-ಶಿಲ್ಪಗಳನ್ನು ಕನ್ನಂಬಾಡಿ ಅಣೆಯ ಉತ್ತರ ತುದಿಯಲ್ಲಿರುವ 'ನಾರ್ಥ್‌ಬ್ಯಾಂಕ್'ನಲ್ಲಿ ಇಂದು ಸಂರಕ್ಷಿಸಿಡಲಾಗಿದೆ. ತತ್ಪರಿಣಾಮವಾಗಿ, ಮುಳುಗಡೆಯಾಗಿರುವ ಗೋಪಾಲಕೃಷ್ಣನ ಗುಡಿಯ ಗರ್ಭಗೃಹದಲ್ಲಿ ಇಂದು ಏನೂ ಇರದೇ ಶಿಖರದ ಮುಕ್ಕಾದ ಕಳಶದ ಕಲ್ಲನ್ನಿಟ್ಟು ಕಣ್ವೇಶ್ವರವೆಂದು ಹೇಳಲಾಗುತ್ತಿದೆ. ಈ ಗುಡಿಯ ಗರ್ಭಗೃಹದ ಬಾಗಿಲವಾಡವು ಪಂಚಶಾಖಾಲಂಕೃತವಾಗಿದೆ. ಅಂತರಾಳದ ಬಾಗಿಲವಾಡದ ಮಕರತೋರಣಗಳು ಹಾಳಾಗಿದ್ದು, ಕಮಲಮಯವಾಗಿರುವ ನವರಂಗದ ಛತ್ತು

ವೈವಿಧ್ಯಮಯವಾಗಿದ್ದು, ನಡುವಣ ಭುವನೇಶ್ವರಿ ಆಕರ್ಷಕವಾಗಿದೆ. ಪ್ರಧಾನ ದ್ವಾರವು ಮೇಲೆ ಪಂಚಶಿಖರ ಮಾದರಿಯನ್ನು ಹೊಂದಿದ್ದು, ಪಂಚಶಾಖಾಲಂಕೃತವಾಗಿದೆ. ನವರಂಗದ ಮುಂದಿರುವ ೧೩ ಅಂಕಣದ ತೆರೆದ ರಂಗಮಂಟಪವು ದ್ವಾದಶಕೋನದ ಇಳಿಜಾರಾದ ಛಾವಣಿಯನ್ನು ಹೊಂದಿದ್ದು, ಅಂಚಲ್ಲಿ ಸುಖಾಸನ (ಕಕ್ಷಾಸನ)ವಿದೆ. ಮೂರು ದಿಕ್ಕುಗಳಿಂದಲೂ ಪ್ರವೇಶಿಸಲು ಇದ್ದ ಒಂದೊಂದಂಕಣದ ತೆರೆದ ಅರ್ಧಮಂಟಪಗಳಲ್ಲಿ, ಉತ್ತರ–ದಕ್ಷಿಣದವುಗಳನ್ನು ನಂತರದಲ್ಲಿ ಇಟ್ಟಿಗೆಯಿಂದ ಮುಚ್ಚಿ ಆಕರ್ಷಕ ಕಲ್ಲಾಗಿಲನ್ನು ನಿಲ್ಲಿಸಿ, ಗರ್ಭಗೃಹಗಳನ್ನಾಗಿ ಪರಿವರ್ತಿಸಿ, ಒಂದರಲ್ಲಿ ಗೋಪಾಲಕೃಷ್ಣನನ್ನು ಪ್ರತಿಷ್ಠಾಪಿಸಿದ್ದಂತೆ ತೋರುತ್ತದೆ. ರಂಗಮಂಟಪದ ಕಂಬ, ತೊಲೆ ಹಾಗೂ ಛತ್ತುಗಳನ್ನು ಕಮಲಾಲಂಕಾರದಿಂದ ಸುಂದರಗೊಳಿಸಿದ್ದು, ಪ್ರಧಾನ ಛತ್ತು ಚಿತ್ತಾಕರ್ಷಕವಾಗಿದೆ. ಇವುಗಳ ನಿರ್ಮಾಣದಲ್ಲಿ ಬಳಸಿರುವ ಕಂಬಗಳೂ ವೈವಿಧ್ಯಮಯವಾಗಿವೆ. ಈ ದೇವಾಲಯದ ಭಿತ್ತಿಯನ್ನು ಅಲಂಕಾರಿಕ ಅರೆಗಂಬ ಹಾಗೂ ವೈವಿಧ್ಯಮಯ ಕಿರುಶಿಖರ ಮಾದರಿಗಳಿಂದ ಚಿತ್ತಾಕರ್ಷಕವಾಗಿ ಅಲಂಕರಿಸಲಾಗಿದ್ದು, ಗರ್ಭಗುಡಿಯ ಮೇಲಿರುವ ದ್ರಾವಿಡ ಶಿಖರ, (ಕಳಶ ಬಿದ್ದು ಹೋಗಿದೆ) ಅಂತರಾಳದ ಮೇಲಿರುವ ಸುಖನಾಸಿಗಳೂ ಉತ್ಕೃಷ್ಟವಾಗಿವೆ. ಈ ದೇವಾಲಯವನ್ನು ಬಳಸಿರುವ ವಿಶಾಲವಾದ ದ್ವಾರಮಂಟಪವನ್ನುಳ್ಳ ಒಳಪ್ರಾಕಾರದಲ್ಲಿ ಕೈಸಾಲೆ ಮಂಟಪದುದ್ದಕ್ಕೂ ಇರುವ ಶಾಸನಯುಕ್ತ ಕಿರುಗುಡಿಗಳಲ್ಲಿ ಹೆಚ್ಚಿನವಕ್ಕೆ ಗರ್ಭಗೃಹವಷ್ಟೇ ಇದ್ದರೆ, ಕೆಲವಕ್ಕೆ ಅಂತರಾಳವೂ ಇದ್ದು, ಅವುಗಳಲ್ಲಿ ಹಿಂದೆ ಇದ್ದ ದಶಾವತಾರ, ಕೃಷ್ಣಾವತಾರ, ಚತುರ್ವಿಂಶತಿ ವಿಷ್ಣು ಹಾಗೂ ಆಳ್ವಾರ್ ಪ್ರತಿಮೆಗಳನ್ನು ಇಂದು 'ನಾರ್ಥ್‌ಬ್ಯಾಂಕ್'ನಲ್ಲಿ ಸಂರಕ್ಷಿಸಿಡಲಾಗಿದೆ. ಅವುಗಳಲ್ಲಿ ಮತ್ಸ್ಯ, ಕೂರ್ಮ, ಶೇಷಶಯನ (ಅನಂತಪದ್ಮನಾಭ) ಮುಂತಾದ ಶಿಲ್ಪಗಳು ಆಕರ್ಷಕವಾಗಿವೆ. ರಂಗಮಂಟಪದಿಂದ ಎಡ ಮುಂಭಾಗಕ್ಕೆ ಇದ್ದ ಸುಮಾರು ೫೦ ಅಡಿ ಎತ್ತರದ ಗರುಡಗಂಬವಿಂದು ಮೂರು ತುಂಡಾಗಿ ಅಡ್ಡ ಬಿದ್ದಿದೆ. ಒಳಪ್ರಾಕಾರವನ್ನೊಳಗೊಂಡಂತೆ ಹೊರಪ್ರಾಕಾರವನ್ನೂ ನಿರ್ಮಿಸಲಾಗಿದ್ದು, ಅದರ ವಿಶಾಲ ದ್ವಾರಮಂಟಪವೂ ಸೇರಿದಂತೆ ಪ್ರಾಕಾರದ ಗೋಡೆಯು ನೀರಿನ ಹೊಡೆತದಿಂದಾಗಿ ಶಿಥಿಲಗೊಂಡಿವೆ. ಸದಾ ಜಲರಾಶಿಯಲ್ಲಿ ಕಣ್ಮರೆಯಾಗುವ ಈ ಕಲಾಕುಸುಮದ ಸಂರಕ್ಷಣೆಗೆ ಮಾರ್ಗೋಪಾಯ ಕಂಡುಕೊಳ್ಳಬೇಕಾಗಿದೆ. ಇಲ್ಲಿಯ ಮೂರ್ತಿ ಶಿಲ್ಪಗಳಿಗೆಂದೇ ನಾರ್ಥ್‌ಬ್ಯಾಂಕ್‌ನಲ್ಲಿ ೧೯೨೫ರಲ್ಲಿ ನಿರ್ಮಿಸಲ್ಪಟ್ಟ ಗೋಪಾಲಕೃಷ್ಣನ ಗುಡಿಯು ತ್ರಿಕೂಟವಾಗಿದ್ದು, ಅಂತರಾಳವನ್ನುಳ್ಳ ಪ್ರಧಾನ ಗರ್ಭಗೃಹದಲ್ಲಿ ಕೇಶವ, ನವರಂಗದ ದಕ್ಷಿಣ ಹಾಗೂ ಉತ್ತರದ ಒಂದಂಕಣದ ಗರ್ಭಗೃಹಗಳಲ್ಲಿ ಕ್ರಮವಾಗಿ ವೇಣುಗೋಪಾಲ ಹಾಗೂ ಅನಂತ ಪದ್ಮನಾಭನ ಸುಂದರ ಶಿಲ್ಪಗಳಿದ್ದು, ಆವರಣದಲ್ಲಿರುವ ಕೊಠಡಿಗಳಲ್ಲಿ ಉಳಿದ ಮೂರ್ತಿಗಳನ್ನು ಸಂರಕ್ಷಿಸಿಡಲಾಗಿದೆ.

ಕನ್ನೇಶ್ವರ ಗುಡಿಗೆ ಸಂಬಂಧಿಸಿದ ಶಾಸನಗಳಿಂದ ಹಿಂದೆ ಇಲ್ಲಿದ್ದ ಕಣ್ವೇಶ್ವರ ದೇವಾಲಯಕ್ಕೆ ಕನ್ನಗೊಂಡೇಶ್ವರ, ಮಹಾದೇವ, ಕನ್ನಿಕೇಶ್ವರ ಎಂಬ ಹೆಸರುಗಳಿದ್ದ ಅಂಶ ಗೊತ್ತಾಗುತ್ತವೆ. ಈ ಗುಡಿಯು ರಾಷ್ಟ್ರಕೂಟ ಕನ್ನರನಿಂದ ನಿರ್ಮಿಸಲ್ಪಟ್ಟು ದತ್ತಿ ಪಡೆದಿದ್ದ ಸುಳಿವು ಒಂದನೆಯ ಕೃಷ್ಣನ (ಕ್ರಿ.ಶ.೭೫೭–೭೭೩) ಕಡಬ ತಾಮ್ರ ಶಾಸನದಲ್ಲಿ ಲಭಿಸುತ್ತದೆಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. ಆದರೆ ಈ ಅಭಿಪ್ರಾಯವನ್ನು ಪರಿಶೀಲಿಸುವ ಅಗತ್ಯವಿದೆ. ಅಲ್ಲದೇ ಇಲ್ಲಿ ಸಾವಿಯಬ್ಬೇಶ್ವರ (೧೧ನೇ ಶತಮಾನ)ವೆಂಬ ಇನ್ನೊಂದು ದೇಗುಲವಿದ್ದ ಅಂಶ, ಮಿಗಿಲಾಗಿ ಚೋಳ ಕುಲೋತ್ತುಂಗನ ಕಾಲದಲ್ಲಿ (ಕ್ರಿಶ.೧೧೧೪) ಎರಡು ದೇವಾಲಯಗಳು ನಿರ್ಮಾಣಗೊಂಡ ಅಂಶವೂ ವೇದ್ಯವಾಗುತ್ತದೆ. ಆದರೆ ಆ ದೇವಾಲಯಗಳನ್ನು ಕನ್ನಂಬಾಡಿ ಮುಳುಗಡೆ ನಂತರ ನೋಡಿದವರು ವಿರಳವಾಗಿದ್ದು, ಜಲಾಶಯದ ನೀರಿನ ಮಟ್ಟ ೭೦ ಅಡಿಗಳಿಗಿಳಿದಾಗ, ಗೋಪಾಲಕೃಷ್ಣನ ಗುಡಿಯಿಂದ ಬಲಭಾಗಕ್ಕೆ ಸುಮಾರು ೨೦೦ ಮೀಟರ್ ಅಂತರದಲ್ಲಿದ್ದ ಪುರಾತನವಾದ ಸಾವಿಯಬ್ಬೇಶ್ವರ ಗುಡಿ, ಮಾದಿಯಣ್ಣ, ಲಕ್ಕಣ್ಣರು ಕಟ್ಟಿಸಿದ ಜೋಡಿ ಗುಡಿ ಹಾಗೂ ಕಣ್ವೇಶ್ವರ ಗುಡಿ ಸಂಕೀರ್ಣದ ಅವಶೇಷಗಳನ್ನು ನೋಡಬಹುದೆಂದು ತೋರುತ್ತದೆ. ಹಿಂದೆ ಇಲ್ಲಿದ್ದ ಕಣ್ವೇಶ್ವರ ಗುಡಿಯ ಗರ್ಭಗೃಹದಲ್ಲಿ ಕಣ್ವೇಶ್ವರ ಲಿಂಗ, ಅಂತರಾಳದಲ್ಲಿ ನಂದಿ, ನವರಂಗದ ದೇವಕೋಷ್ಠಗಳಲ್ಲಿ ವಿನಾಯಕ,

ಮಹಿಷಮರ್ಧಿನಿ ಹಾಗೂ ಉಮಾಮಹೇಶ್ವರ ಶಿಲ್ಪಗಳಿದ್ದವೆಂದು ತಿಳಿದುಬರುತ್ತದೆ. ಈ ದೇವಾಲಯ ಗಳಲ್ಲಿದ್ದ ಶಿಲ್ಪಗಳಲ್ಲಿ ಕಣ್ವೇಶ್ವರ ಲಿಂಗವೊಂದನ್ನುಳಿದು ಉಳಿದವನ್ನು ನಾರ್ಥ್‌ಬ್ಯಾಂಕ್‌ಗೆ ಸಾಗಿಸಿ, ಗುಡಿ ನಿರ್ಮಿಸಿ ಪ್ರತಿಷ್ಠಾಪಿಸಲಾಗಿದೆ. ನಾರ್ಥ್‌ಬ್ಯಾಂಕ್‌ನ ಈಶ್ವರ ಗುಡಿ ಆವರಣದಲ್ಲಿರುವ ಪ್ರಧಾನಗುಡಿಯು ಕಣ್ವೇಶ್ವರ ದೇವರಿಗಾಗಿ ನಿರ್ಮಿಸಲ್ಪಟ್ಟಿದ್ದು, ಒಳಗೆ ಶಿವಲಿಂಗವಿದ್ದು ಮೇಲೆ ಗಾರೆ ಶಿಖರವಿದೆ. ಪ್ರಾಕಾರದ ಹಿಂಭಾಗದ ಬಲಮೂಲೆಯಲ್ಲಿ ಐದು ಶಿವಲಿಂಗ-ನಂದಿಗಳಿದ್ದು, ಎಡಮೂಲೆಯಲ್ಲಿರುವ ಮನೋನ್ಮಣಿ ಗುಡಿಯಲ್ಲಿ ಚಾಮುಂಡಿ, ಗಣಪ ಹಾಗೂ ಸಪ್ತಮಾತೃಕಾ ಶಿಲ್ಪಗಳಿವೆ.

ಅಂದಿನ ಕನ್ನಂಬಾಡಿಯ ಇನ್ನೊಂದು ಪ್ರಮುಖ ಗುಡಿಯಾದ ಮಹಾಲಕ್ಷ್ಮೀ ಗುಡಿಯಲ್ಲಿದ್ದ ಕ್ರಿ.ಶ.೧೮೧೮ರ ಶಾಸನ, ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಮಹೇಶ್ವರಿ ಉಪದ್ರವದಿಂದಾಗಿ, ಜನ ಪಾಂತಿ-ಬ್ರಾಂತಿಗೆ ತುತ್ತಾದಾಗ, ಕಣ್ವಪುರ (ಕನ್ನಂಬಾಡಿ) ದ ಗಂಗಡಿಕಾರ ಕುಲದ ಬೋರೇಗೌಡ-ತಿಮ್ಮಮ್ಮ ದಂಪತಿಯ ಮಗಳಾದ ಕನ್ಯೆ ನಂಜಮ್ಮನ ಮೇಲೆ ಕೊಲ್ಲಾಪುರದ ಮಹಾಲಕ್ಷ್ಮೀ ಹಾಗೂ ಉಜ್ಜಯನಿಯ ಮಹಾಕಾಳಿಯರು ಕಾಣಿಸಿಕೊಂಡು, ಅದನ್ನು ಪರಿಹರಿಸಿದ್ದರಿಂದ, ಆ ಸಮಯದಲ್ಲಿ ಸೀಮೆಗಳಿಂದ ಬಂದ ಕಾಣಿಕೆಯಿಂದ ಊರ ನಡುವೆ ದೇವಸ್ಥಾನ ನಿರ್ಮಿಸಿ, ಮಹಾಕಾಳಿ, ಮಹಾಲಕ್ಷ್ಮೀ ಹಾಗೂ ಸರಸ್ವತಿ ಅಮ್ಮನವರನ್ನು ಪರಿವಾರ ದೇವತೆಗಳ ಸಮೇತ ನಂಜಯ್ಯನು ಪ್ರತಿಷ್ಠಾಪಿಸಿದ ಅಂಶವನ್ನು ತಿಳಿಸುತ್ತದೆ. ಅಮ್ಮನವರ ಗುಡಿಗೆ ರಂಗಮಂಟಪ, ಮುಖಮಂಟಪಗಳನ್ನು ನಂಜಮ್ಮನ ಕುಲದವರು ಕಟ್ಟಿಸಿದ್ದನ್ನು ಕ್ರಿ.ಶ.೧೮೩೫ರ ಇನ್ನೊಂದು ಶಾಸನ ದಾಖಲಿಸಿದೆ. ಉಳಿದ ಶಾಸನಗಳು ಅದೇ ದೇವರಿಗೆ ನೀಡಿದ ದಾನಗಳಾಗಿವೆ. ಕನ್ನಂಬಾಡಿ ಹಿನ್ನೀರಿನಲ್ಲಿ ಮುಳುಗಿರುವ ಗೋಪಾಲಕೃಷ್ಣನ ಗುಡಿಯ ಎಡಮುಂಭಾಗದಲ್ಲಿ ೫೦ ಅಡಿ ಅಂತರದಲ್ಲಿ ಪಾಳು ಬಿದ್ದಿರುವ ಗುಡಿಯೇ ಶಾಸನೋಕ್ತ ಅಮ್ಮನವರ ಗುಡಿಯಾಗಿದ್ದು, ಮುಳುಗಡೆ ನಂತರ ನಾರ್ಥ್‌ಬ್ಯಾಂಕ್‌ನಲ್ಲಿ ಮಹಾಲಕ್ಷ್ಮಿ, ಕಾಳಮ್ಮ ಹಾಗೂ ಸರಸ್ವತಿಯರ ಮೂರ್ತಿಗಳಿಗಾಗಿ ಗುಡಿಯನ್ನು ಕಟ್ಟಲಾಗಿದ್ದು, ಅಲ್ಲೇ 'ಆವೇಶದ ಅಮ್ಮ' ಎಂದೇ ಪ್ರಸಿದ್ಧಳಾಗಿದ್ದ ನಂಜಮ್ಮನ ಶಿಲ್ಪ ಹಾಗೂ ದೇವಿಯರ ಉತ್ಸವ ಮೂರ್ತಿಗಳಿವೆ. ಗರ್ಭಗೃಹಕ್ಕೆ ಶಿಖರವಿದ್ದು, ದೇವಾಲಯುದ ಪ್ರಾಕಾರಕ್ಕೆ ಕೈಸಾಲೆ ಮಂಟಪವಿದೆ. ಹಿಂದೆ ನಂಜಮ್ಮ ಧರ್ಮಲಿಂಗಾಚಾರಿಯಿಂದ ಮಾಡಿಸಿದ್ದ ಮರದ ಬೊಂಬೆಯ ರಥವಿಂದು ಗೆದ್ದಲಿಡಿದು ಗುಡಿ ಮುಂದೆ ನಿಂತಿದೆ. ಆವೇಶದಮ್ಮನ ವಂಶಸ್ಥರ ಮೇಲ್ವಿಚಾರಿಕೆಯಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟಿರುವ ರಥದಲ್ಲಿ ಈ ದೇವಿಯ ರಥೋತ್ಸವವು ರಾಮನವಮಿಯ ಮಾರನೆಯ ದಿನ ಬಹು ವಿಜೃಂಭಣೆಯಿಂದ ಈಗಲೂ ಜರುಗುತ್ತದೆ. ಕನ್ನಂಬಾಡಿಯಲ್ಲಿ ಹಿಂದಿದ್ದ ಹಿರಿದೇವಮ್ಮನ ಗುಡಿಯ ಮೂರ್ತಿಯು ಇಂದು ಹೊಸಕನ್ನಂಬಾಡಿಯಲ್ಲಿದೆ. ಕೃಷ್ಣರಾಜಸಾಗರಕ್ಕೆ ಭೇಟಿ ನೀಡುವವರು ಪಾಳು ಕನ್ನಂಬಾಡಿಯ ಪುರಾತನ ಗುಡಿಗಳಲ್ಲಿದ್ದ ಮೂರ್ತಿಗಳನ್ನು ನಾರ್ಥ್‌ಬ್ಯಾಂಕ್‌ನಲ್ಲಿ ಈಗಲೂ ನೋಡಬಹುದಾಗಿದೆ.

**ಕೆರೆತೊಣ್ಣೂರು (೧೪೭೭)** : ತಾಲೂಕು ಕೇಂದ್ರ ಪಾಂಡವಪುರದಿಂದ ೧೦ ಕಿ.ಮೀ. ವಾಯವ್ಯಕ್ಕೂ ಹಾಗೂ ಮೇಲುಕೋಟೆಯಿಂದ ೧೫ ಕಿ.ಮೀ. ದಕ್ಷಿಣಕ್ಕೂ ಇದ್ದು, ರೂಢಿಯಲ್ಲಿ ಕೆರೆತೊಣ್ಣೂರು ಎಂದೂ ಕರೆಯಲ್ಪಟ್ಟಿದೆ. ಪ್ರಾಚೀನ ಶಾಸನಗಳಲ್ಲಿ ತೊಣ್ಣನೂರು, ತೊಂಡನೂರು, ತೊಂಣೂರು, ಯಾದವಪುರ, ಪದ್ಮಗಿರಿ, ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಅನಾದಿ ಹಿರಿಯ ಅಗ್ರಹಾರ, 'ಯಾದವನಾರಾಯಣ ಚತುರ್ವೇದಿಮಂಗಲ' ಎಂಬ ಅಭಿದಾನವನ್ನೂ ಹೊಂದಿದ್ದ ವಿದ್ಯಾಕೇಂದ್ರವಾಗಿತ್ತು. ತಮಿಳುನಾಡಿನಿಂದ ರಾಮನಾಥಪುರ, ಮಿರ್ಲೆ, ಸಾಲಿಗ್ರಾಮ ಮಾರ್ಗವಾಗಿ ಬಂದು, ನಾಲ್ಕಾರು ವರ್ಷ ಇಲ್ಲಿ ತಂಗಿದ್ದು, ಮುಂದೆ ಮೇಲುಕೋಟೆಯತ್ತ ಆಕರ್ಷಿಸಲ್ಪಟ್ಟ ಶ್ರೀ ವೈಷ್ಣವ ಯತಿ, ರಾಮಾನುಜಾಚಾರ್ಯರಿಂದಾಗಿ ಇದೊಂದು ಪುಣ್ಯಕ್ಷೇತ್ರವಾಗಿದೆ. ತೊಂಡ ಎಂದರೆ ಭಕ್ತ ಎಂದಾಗುತ್ತಿದ್ದು, ಭಕ್ತರಿದ್ದ ಊರು ಇಲ್ಲವೇ ಭಕ್ತನಿಂದ ಕಟ್ಟಲ್ಪಟ್ಟ ಊರು ಎಂಬರ್ಥದಲ್ಲಿ 'ತೊಂಡನೂರು' ಎಂಬ ಹೆಸರು ಊರಿಗೆ

ಬಂದಿರುವಂತೆ ತೋರುತ್ತದೆ. ಇಲ್ಲಿಂದ ಈವರೆಗೆ ಒಂದು (ಸಂಸ್ಕೃತ-ಕನ್ನಡ), ೪೩ (ತಮಿಳು), ಹಾಗೂ ೨೪ (ಕನ್ನಡ) ಹೀಗೆ ಒಟ್ಟು ೬೮ ಶಾಸನಗಳು ವರದಿಯಾಗಿವೆ.

ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಇದು ಉಪರಾಜಧಾನಿಯಾಗಿದ್ದ ಅಂಶ ಚಿಕ್ಕಮಗಳೂರು ತಾಲೂಕಿನ ಕ್ರಿ.ಶ.೧೧೨೫ ಹಾಗೂ ಚಾಮುಂಡಿಬೆಟ್ಟದ ಕ್ರಿ.ಶ.೧೧೨೮ರ ಶಾಸನಗಳಿಂದ ವೇದ್ಯವಾಗುತ್ತಿದ್ದು, ಈ ಊರಿಗೆ ಹಿಂದೆ ಕೋಟೆ-ಕೊತ್ತಲಗಳಿದ್ದುದ್ದಕ್ಕೆ ಶಾಸನಾಧಾರಗಳಿವೆಯಾದರೂ ಅವಶೇಷಗಳಿಂದು ಉಳಿದಿಲ್ಲ. ರಾಮಾನುಜರ ಪ್ರಭಾವಕ್ಕೊಳಗಾದ ವಿಷ್ಣುವರ್ಧನನು ಶ್ರೀವೈಷ್ಣವ ಧರ್ಮಾವಲಂಬಿಯಾದುದು ಇಲ್ಲೇ ಎಂಬ ಅಭಿಪ್ರಾಯವಿದೆಯಾದರೂ, ವಿಷ್ಣುವರ್ಧನನ ಮತಾಂತರ ಘಟನೆ ಅನುಮಾನಾಸ್ಪದವೆಂಬ ಅಭಿಪ್ರಾಯವೂ ಇದೆ. ರಾಮಾನುಜರು ಸ್ವಲ್ಪ ಕಾಲ ಇಲ್ಲಿದ್ದರೆಂದು ಕ್ರಿ.ಶ.೧೭೨೨ರ ಮೈಸೂರು ತಾಮ್ರಶಾಸನ ಸ್ಪಷ್ಟವಾಗಿ ಉಲ್ಲೇಖಿಸಿದ್ದು, ಅವರು ಜೈನರನ್ನು ವಾದದಲ್ಲಿ ಸೋಲಿಸಿದ್ದು ಇಲ್ಲೇ ಎಂದೂ ಹೇಳಲಾಗುತ್ತದೆ. ಅಲ್ಲೇ ಹರಿಯುತ್ತಿದ್ದ ಯಾದವ ನದಿಗೆ ಒಡ್ಡು ಹಾಕಿ ರಾಮಾನುಜರೇ ಕಟ್ಟಿಸಿದರೆಂದು ಹೇಳಲಾಗುವ ಯಾದವಸಮುದ್ರ ಕೆರೆಗೆ ತಿರುಮಲಸಾಗರ ಎಂಬ ಹೆಸರೂ ಇದೆ. ಮುಂದೆ ಅದರ ಪಾಚಿರಹಿತ ಶುಭ್ರ ಜಲಸಂಗ್ರಹವನ್ನು ಕಂಡು ಉಲ್ಲಾಸಿತಗೊಂಡ ದಖನ್ ಸುಬೇದಾರನ ಕುಮಾರ ಹೈದರಾಬಾದಿನ ನಾಸಿರ್‌ಜಂಗ್‌ನು ಕ್ರಿ.ಶ.೧೭೬೬ರಲ್ಲಿ ಅದಕ್ಕೆ ಮೋತಿ ತಲಾಬ್ ಎಂದು ನಾಮಕರಣ ಮಾಡಿದ್ದು, ಅದೇ ಈಗಲೂ ರೂಢಿಯಲ್ಲಿದೆ. ಸುಮಾರು ೨೧೦೦ ಎಕರೆ ಪ್ರದೇಶಕ್ಕೆ ನೀರುಣಿಸುವ ಈ ಕೆರೆಯ ಕಟ್ಟೆ ೩೯೦ ಅಡಿ ಉದ್ದ ೮೦ ಅಡಿ ಎತ್ತರ ಹಾಗೂ ಐದು ಅಡಿ ಅಗಲವಿದ್ದು, ೦.೪೬೨ ಟಿ.ಎಂ.ಸಿ.ಯಷ್ಟು ಜಲಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ. ಪ್ರವಾಸಿಗರ ಸಲುವಾಗಿ ದೋಣಿ ವಿಹಾರ (ಬೋಟಿಂಗ್) ವ್ಯವಸ್ಥೆಯೂ ಇತ್ತೀಚೆಗೆ ಇಲ್ಲಿ ಲಭ್ಯವಿದ್ದು, ವ್ಯವಸ್ಥಿತ ಸ್ನಾನಘಟ್ಟವೂ ಇದೆ.

ಇಲ್ಲಿಯ ದೇವಾಲಯಗಳಲ್ಲಿ ಹೊಯ್ಸಳ ವಿಷ್ಣುವರ್ಧನನ ಕಾಲದ ಲಕ್ಷ್ಮೀನಾರಾಯಣ ಗುಡಿಯೇ ಅತ್ಯಂತ ಪ್ರಾಚೀನದ್ದಾಗಿದೆ. ಭಕ್ತ ನಂಬಿಗೆ ವರ ಕರುಣಿಸಿದ್ದರಿಂದ ನಂಬಿ-ನಾರಾಯಣ ಎಂಬ ಹೆಸರೂ ಇವನಿಗಿದೆ. ವಿಷ್ಣುವರ್ಧನನು ಕ್ರಿ.ಶ.೧೧೧೪ರಲ್ಲಿ ಚೋಳರ ಮೇಲೆ ಪಡೆದ ಐತಿಹಾಸಿಕ ವಿಜಯದ ನೆನಪಾಗಿ, ತನ್ನ ಸಾಮ್ರಾಜ್ಯದಲ್ಲಿ ನಿರ್ಮಿಸಿದ ಪಂಚನಾರಾಯಣ ಗುಡಿಗಳಲ್ಲಿ ಇದೂ ಒಂದೆಂಬ ಅಭಿಪ್ರಾಯವಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಇರುವ ೨೦ ದತ್ತಿ ಶಾಸನಗಳಲ್ಲಿ ಹತ್ತು ಕನ್ನಡದಲ್ಲಿದ್ದರೆ, ಉಳಿದವು ತಮಿಳಿನಲ್ಲಿವೆ. ಈ ಗುಡಿಯ ಶಾಸನಗಳಿಂದ ಲಕ್ಷ್ಮೀನಾರಾಯಣ ದೇವಾಲಯವು ಹೊಯ್ಸಳ ವಿಷ್ಣುವರ್ಧನ, ಇಮ್ಮಡಿ ಬಲ್ಲಾಳ ಹಾಗೂ ಮುಮ್ಮಡಿ ನರಸಿಂಹನ ಕಾಲದಲ್ಲಿ ಹಂತಹಂತವಾಗಿ ಅಭಿವೃದ್ಧಿ ಹೊಂದಿದ ಅಂಶ ವೇದ್ಯವಾಗುತ್ತದೆ. ಈ ದೇವಾಲಯವು ಮೂರು ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡಿದ್ದು, ಮೂಲ ಗರ್ಭಗೃಹ, ಅಂತರಾಳ, ನವರಂಗ ಭಾಗವು ವಿಷ್ಣುವರ್ಧನನ ಕಾಲದ ಬೆಣಚುಕಲ್ಲಿನ ರಚನೆಯಾಗಿದ್ದು, ಚೋಳ ಪ್ರಭಾವದೊಂದಿಗೆ ದ್ರಾವಿಡ ಶೈಲಿಯಲ್ಲಿದೆ. ಗರ್ಭಗೃಹದಲ್ಲಿ ಆರಡಿ ಎತ್ತರದ ನಾರಾಯಣ ಶಿಲ್ಪವಿದ್ದರೆ, ಅಂತರಾಳದ ಬಾಗಿಲವಾಡದ ಲಲಾಟವು ಗಜಲಕ್ಷ್ಮಿ ಕೆತ್ತನೆಯನ್ನು ಹೊಂದಿದ್ದು, ಆಕರ್ಷಕವಾಗಿದೆ. ನವರಂಗದ ನಡುವಣ ಚರಕಿ ಕಂಬಗಳು ಬಳಪದ ಕಲ್ಲಿನಲ್ಲಿ ಮೂಡಿದ ಕಲಾಕೃತಿಗಳಾಗಿದ್ದು, ಚಿತ್ತಾಕರ್ಷಕವಾಗಿದ್ದು, ಬೇಲೂರಿನ ನವರಂಗದ ಕಂಬಗಳನ್ನು ಹೋಲುತ್ತಿದ್ದು, ಛತ್ತನ್ನು ಇಳಿಬಿದ್ದ ಕಮಲಮೊಗ್ಗು ಹಾಗೂ ಅಷ್ಟದಿಕ್ಪಾಲಕರಿಂದ ಅಲಂಕರಿಸಲಾಗಿದೆ. ದೇವಾಲಯದ ಭಿತ್ತಿಯು ಕಿರುದೇವಕೋಷ್ಠ, ಅರೆಗಂಬ ಹಾಗೂ ಕಿರುಶಿಖರಗಳಿಂದ ಕೂಡಿದ್ದು, ನಿರಾಡಂಬರವಾಗಿದ್ದು, ಹೊರಪ್ರಾಕಾರದ ದಕ್ಷಿಣಗೋಡೆ ಬಳಿ ಇರುವ ಲಕ್ಷ್ಮಿಗುಡಿಯೂ ಇದೇ ಕಾಲದ ರಚನೆಯಾಗಿದ್ದು, ಅದನ್ನು ಅಲ್ಲಿರುವ ಸುಮಾರು ಕ್ರಿ.ಶ.೧೧೨೦ರ ಶಾಸನವು ದೃಢಪಡಿಸುತ್ತದೆ. ಈ ದೇವಾಲಯದಲ್ಲಿರುವ ಮುಖಮಂಟಪ, ಸುತ್ತಲಿನ ಒಳಪ್ರಾಕಾರದ ಉತ್ತರ-ದಕ್ಷಿಣಗಳಲ್ಲಿರುವ ಸುತ್ತಾಲಯದ ಕಿರುಗುಡಿಗಳಲ್ಲಿ ವಿವಿಧ ಆಳ್ವಾರರ ಮೂರ್ತಿಗಳಿದ್ದು, ಹೊರಪ್ರಾಕಾರ ಹಾಗೂ ಮಹಾದ್ವಾರಗಳು

ಎರಡನೆಯ ಹಂತದ (ಇಮ್ಮಡಿ ಬಲ್ಲಾಳ) ರಚನೆಯಾಗಿದ್ದು, ಶಾಸನಗಳಲ್ಲಿ, ಈ ಮಂಟಪವನ್ನು 'ಓಲಗ ಸಾಲೆ ಎಂದು ಕರೆಯಲಾಗಿದೆ. ಗುಡಿಯ ಮೇಲಿನ ಇಟ್ಟಿಗೆ ಶಿಖರ ಬೃಹತ್ ಕಂಬಗಳನ್ನುಳ್ಳ ಪಾತಾಳಾಂಕಣವು ಮೂರನೆಯ ಹಂತದಾಗಿದ್ದು, (ವಿಜಯನಗರ) ಮಹಾದ್ವಾರದ ಮುಂದೆ, ಸುಮಾರು ೪೦ ಅಡಿ ಎತ್ತರದ ಗರುಡಗಂಬವಿದೆ. ಪ್ರತೀವರ್ಷ ಈ ದೇವರ ಜಾತ್ರೆಯನ್ನು ನೆರೆಯ ಲಕ್ಷ್ಮೀಸಾಗರದವರು ನಡೆಸುತ್ತಾರೆ. ಇಲ್ಲಿಯ (ಅಂಬೆಗಾಲು) ಕೃಷ್ಣನ ಗುಡಿಯೇ, ಶಾಸನೋಕ್ತ ವಿಟ್ಟಿರುಂಡ/ವೀರುಂದ/ವಿತ್ತಿರುಂದ /ವಿಣ್ಣಾಗಾರ್, ಪೆರುಮಾಳೆ (ಬಾಲಕೃಷ್ಣ) ಗುಡಿಯಾಗಿದ್ದು, ಇಮ್ಮಡಿ ಬಲ್ಲಾಳನ ಒಂದೆರಡು ಶಾಸನಗಳಲ್ಲಿ ಇದು ಗೋಪಿನಾಥನೆಂದೂ ಉಲ್ಲೇಖಿತಗೊಂಡಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಈವರೆಗೆ ಕ್ರಿ.ಶ.೧೧೫೮–೧೭೨೨ರ ಕಾಲಾವಧಿಗೆ ಸೇರಿದ ಒಂದು ಸಂಸ್ಕೃತ–ಕನ್ನಡ, ೧೩ ತಮಿಳು ಹಾಗೂ ೧೧ ಕನ್ನಡ ಹೀಗೆ ಒಟ್ಟು ೨೫ ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಕೃಷ್ಣಗುಡಿಯ ತಳಪಾದಿ ಕಲ್ಲಿನ ಮೇಲಿರುವ ಕ್ರಿ.ಶ.೧೧೫೮ರ ನಾಲ್ಕು (ಮೂರು ತಮಿಳು, ಒಂದು ಕನ್ನಡ)ಶಾಸನಗಳು ಕಾರಿಕುಡಿಯ ತಿಲ್ಲೈಕೂತ್ತಾಂಡಿ ದಂಡನಾಯಕನು ಯಾದವನಾರಾಯಣ ಚತುರ್ವೇದಿ ಮಂಗಲದ ಮಧ್ಯದಲ್ಲಿ ವಿಣ್ಣಾಗಾರವನ್ನು ನಿರ್ಮಿಸಿ, ವಿತ್ತೀರುಂದ ಪೆರುಮಾಳೆ ದೇವರನ್ನು ಪ್ರತಿಷ್ಠಾಪಿಸಿದ ಅಂಶವನ್ನು ತಿಳಿಸುತ್ತದೆ. ಊರ ನಡುವೆ ಇರುವ ಈ ವಿಶಾಲ ದೇವಾಲಯವು, ಮೂರು ಕಾಲಘಟ್ಟಗಳಿಗೆ ಸೇರಿದ್ದು, ಗರ್ಭಗೃಹ, ಅಂತರಾಳ, ನವರಂಗ ಭಾಗವು ಕ್ರಿ.ಶ. ೧೧೫೮ರ ರಚನೆಯಾಗಿದ್ದು, ದ್ರಾವಿಡ ಶೈಲಿಯಲ್ಲಿರುವ ಚೋಳ ಮಾದರಿಯ ನಿರ್ಮಾಣವಾಗಿದೆ. ಈ ದೇವಾಲಯದ ಭಿತ್ತಿಯು ಅಲಂಕಾರಿಕ ಅರೆಗಂಬ, ದೇವಕೋಷ್ಠಗಳನ್ನು ಹೊಂದಿದ್ದು, ಮೇಲಿರುವ ಇಟ್ಟಿಗೆಯ ಶಿಖರವು ತಂಜಾವೂರು ಮಾದರಿಯನ್ನು ನೆನಪಿಸುತ್ತದೆಂಬ ಅಭಿಪ್ರಾಯವಿದೆ. ಗರ್ಭಗೃಹದಲ್ಲಿರುವ ಮೂರು ಬೃಹತ್ ಶಿಲಾಮೂರ್ತಿಗಳಲ್ಲಿ ನಡುವಿನದು ಬಾಲಕೃಷ್ಣನದಾದರೆ, ಇಕ್ಕೆಲಗಳಲ್ಲಿರುವ ಮೂರ್ತಿಗಳು ರುಕ್ಮಿಣಿ–ಸತ್ಯಭಾಮೆಯರದಾಗಿವೆ. ಅಲ್ಲಿರುವ ಕೃಷ್ಣ, ರುಕ್ಮಿಣಿ, ಸತ್ಯಭಾಮಾ ಉತ್ಸವ ಮೂರ್ತಿಗಳೂ ವಿಜಯನಗರ ಕಾಲದ್ದಾಗಿದ್ದು, ಆಕರ್ಷಕವಾಗಿವೆ. ಅದರಲ್ಲೂ ಬಾಲಕೃಷ್ಣನ ಮೂರ್ತಿಯು ಚಿತ್ತಾಕರ್ಷಕವಾಗಿದೆ. ಮುಂದಿರುವ ರಂಗಮಂಟಪ, ಅರ್ಧಮಂಟಪಗಳು ಕ್ರಿ.ಶ.೧೧೭೫ರಲ್ಲಿ ನಿರ್ಮಾಣಗೊಂಡ ಎರಡನೆಯ ಹಂತದ ರಚನೆಯಾಗಿದ್ದು, ಹೊರಗಿರುವ ವಸಂತಮಂಟಪ, ಮಾಸ್ತಿಕಲ್ಲು ಹಾಗೂ ೧೮ ಅಡಿ ಎತ್ತರದ ಶಿಲಾಚೌಕಟ್ಟು ಆಕರ್ಷಕವಾಗಿವೆ. ಈ ದೇವಸ್ಥಾನದ ಸುತ್ತಲಿನ ಗುಡಿಗಳಲ್ಲಿ ನಮ್ಮಾಳ್ವಾರ್, ತಿರುಮಂಗೈ ಆಳ್ವಾರ್, ನಂಬಿ, ವಿಶ್ವಕಸೇನ, ವೇದಾಂತದೇಶಿಕ, ಮುಂತಾದ ಶ್ರೀವೈಷ್ಣವ ಭಕ್ತರ ಶಿಲ್ಪಗಳಿವೆ. ಇಲ್ಲಿಯ ಪಾಕಶಾಲೆಯಲ್ಲಿರುವ ಪುಳಿಯೋಗರೆ ಕಲ್ಲು ಬೃಹತ್ ಪ್ರಮಾಣದ್ದಾಗಿದೆ. ಮೇಲುಕೋಟೆಯ ವೈರಮುಡಿ ಉತ್ಸವವಾದ ತಿಂಗಳೊಪ್ಪೊತ್ತಿಗೆ ನಡೆಯುವ ಈ ದೇವರ ರಥೋತ್ಸವವನ್ನು ತೊಣ್ಣೂರಿನ ಗ್ರಾಮಸ್ಥರೇ ನೆರವೇರಿಸುತ್ತಾರೆ. ಈ ಗುಡಿಯ ಬಳಿಯಿರುವ ನೇಗಿಲ (?) ಕೆತ್ತನೆ ಫಲಕವು ಉಲ್ಲೇಖಾರ್ಹವಾಗಿದೆ.

ಊರಾಚೆ ಗದ್ದೆಯ ನಡುವಿರುವ ಕೈಲಾಸೇಶ್ವರ ಗುಡಿಯೇ ಶಾಸನೋಕ್ತ ಕೈಲಾಸ ಉಡೆಯವರ್ ದೇಗುಲವಾಗಿದ್ದು, ಅದಕ್ಕೆ ಸಂಬಂಧಿಸಿದಂತೆ, ಈವರೆಗೆ ತಮಿಳು (೧೬) ಹಾಗೂ ಕನ್ನಡ ಶಾಸನ (೨)ಗಳು ವರದಿಯಾಗಿವೆ. ಅವುಗಳಲ್ಲಿ ಗುಡಿಯ ತಳಪಾದಿ ಕಲ್ಲಿನ ಮೇಲಿರುವ ಸುಮಾರು ೧೨ನೆಯ ಶತಮಾನಕ್ಕೆ ಸೇರಿದ ಏಳು ಶಾಸನಗಳ ಆಧಾರದ ಮೇಲೆ ಇದು ಒಂದನೆಯ ನರಸಿಂಹನ ಕಾಲದ (ಸುಮಾರು ಕ್ರಿ.ಶ.೧೧೫೮) ರಚನೆಯೆಂಬ ಅಭಿಪ್ರಾಯವಿದೆ. ಅವುಗಳಲ್ಲೊಂದು ದೇವರ ಪ್ರತಿಷ್ಠಾಪನೆಯನ್ನು ತಿಳಿಸಿದರೆ, ಉಳಿದವು ದೇವರ ನಿತ್ಯನೈವೇದ್ಯ, ನಂದಾದೀಪ ಮುಂತಾದ ಕೈಂಕರ್ಯಗಳಿಗೆಂದು ವಿವಿಧ ಸಂದರ್ಭಗಳಲ್ಲಿ ಬೇರೆ ಬೇರೆ ವ್ಯಕ್ತಿಗಳು ನೀಡಿದ ಭೂದಾನ, ಸುಂಕದಾನ ಹಾಗೂ ನಗದು ದಾನಗಳನ್ನು ದಾಖಲಿಸಿವೆ. ಇಂದು ಪೂರ್ಣ ಶಿಥಿಲಾವಸ್ಥೆಯಲ್ಲಿರುವ ಈ ಗುಡಿಯು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿರುವ ಸರಳ ರಚನೆಯಾಗಿದೆ. ಈ ದೇವಾಲಯವನ್ನು ಸಂರಕ್ಷಿಸುವ ಅಗತ್ಯವಿದೆ. ಬಳಿಯಲ್ಲೇ ಕಳ್ಳರ ಗುಡಿ ಎಂದು ಕರೆಯಲ್ಪಡುವ ಪಾಳುಗುಡಿಯೊಂದಿದೆ.

ಲಕ್ಷ್ಮೀನಾರಾಯಣ ಗುಡಿಯ ಉತ್ತರಕ್ಕೆ ಸಣ್ಣ ಗುಡ್ಡದ ಮೇಲಿರುವ ಯೋಗಾನರಸಿಂಹ ದೇವಾಲಯವೇ ಶಾಸನೋಕ್ತ ಸಿಂಗಪೆರುಮಾಳ್ ಗುಡಿಯಾಗಿದ್ದು, ಆ ದೇವಾಲಯಕ್ಕೆ ಸಂಬಂಧಿಸಿದಂತೆ ಈವರೆಗೆ ಮೂರು ತಮಿಳು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಕ್ರಿ.ಶ.೧೧೫೨ರ ಎರಡು ಶಾಸನಗಳು, ಚೊಕ್ಕಾಂಡಿ ಪಿಳ್ಳೆಯು ಮಲೆಯ ಮೇಲೆ ನಿರ್ಮಿಸಿದ ಸಿಂಗಪೆರುಮಾಳೆ ಗುಡಿಯಲ್ಲಿ, ಬೀರಭಟ್ಟ-ಆಂಡಾಳ್ ದಂಪತಿಗಳು ಪ್ರತಿಷ್ಠಾಪಿಸಿದ ವೆಣ್ಣೈಕುಟ್ಟಪಿಳ್ಳೆಯ (ಕೃಷ್ಣ) ಶ್ರೀ ಜಯಂತಿಗೆಂದು ದಾನ ನೀಡಿದ ಅಂಶವನ್ನು ದಾಖಲಿಸುತ್ತದೆ. ಚೋಳ ಶೈಲಿಯಲ್ಲಿರುವ ಈ ಹೊಯ್ಸಳ ದೇವಾಲಯವು ಗರ್ಭಗೃಹ, ಎರಡಂಕಣದ ಅಂತರಾಳ, ಪ್ರದಕ್ಷಿಣ ಪಥ, ವಿಶಾಲ ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದ್ದು, ತೆರಕಣಾಂಬಿಯ ಗೋಪಾಲಕೃಷ್ಣ ಹಾಗೂ ರಾಘವಪುರದ ಲಕ್ಷ್ಮೀನಾರಾಯಣ ಗುಡಿಗಳನ್ನು ಹೋಲುತ್ತದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಗರ್ಭಗೃಹದಲ್ಲಿ ಮಂಡಿಯ ಮೇಲೆ ಮುಂಗೈಗಳನ್ನಿಟ್ಟುಕೊಂಡು ಪದ್ಮಪೀಠದ ಮೇಲೆ ಕುಳಿತಿರುವ ಕೀರೀಟಧಾರಿ ನರಸಿಂಹನ ಹಿಂಗೈಗಳಲ್ಲಿ ಚಕ್ರ ಶಂಖಗಳಿದ್ದು, ಸರ್ವಾಭರಣ ಭೂಷಿತನಾಗಿದ್ದು, ಶಿಲ್ಪವು ಆಕರ್ಷಕವಾಗಿದೆ. ನವರಂಗದ ವಾಯವ್ಯ ಮೂಲೆಯನ್ನು ಗರ್ಭಗೃಹವನ್ನಾಗಿಸಿ, ರಾಮಾನುಜಾಚಾರ್ಯರ ಗಾರೆ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಪದ್ಮಾಸೀನರಾಗಿರುವ ಆಚಾರ್ಯರ ತಲೆಯ ಮೇಲೆ ಏಳು ಹೆಡೆಯ ಆದಿಶೇಷನು ಛತ್ರಿಯಂತೆ ಶೋಭಿಸುತ್ತಿದ್ದು, ಶಿಲ್ಪವು ಜೀವಂತಿಕೆಯಿಂದ ಕೂಡಿದೆ. ಆಚಾರ್ಯ ರಾಮಾನುಜರು ವಾದದಲ್ಲಿ, ಆದಿಶೇಷನ ನೆರವಿನೊಂದಿಗೆ ಸಾವಿರ ಜೈನರಿಗೆ ಏಕಕಾಲದಲ್ಲಿ ಉತ್ತರಿಸುವ ಮೂಲಕ ಪವಾಡ ಮೆರೆದದ್ದು ಇಲ್ಲೇ ಎಂಬ ಐತಿಹ್ಯವಿದ್ದು, ಆಚಾರ್ಯರ ಸಮಕಾಲೀನ ಗಾರೆಶಿಲ್ಪ ಇದೆಂಬ ಅಭಿಪ್ರಾಯವಿದೆಯಾದರೂ ಅದು ನಂತರದ ಕಾಲದ್ದಾಗಿದೆ. ಈ ಗುಡಿಯ ಭಿತ್ತಿಯೂ ನಿರಾಡಂಬರವಾಗಿದ್ದು, ಅಲಂಕಾರಿಕ ಅರೆಗಂಬ, ಕಿರು ದೇವಕೋಷ್ಠಗಳಷ್ಟೇ ಇವೆ. ಬಳಿಯಲ್ಲೇ ಶ್ರೀಪಾದತೀರ್ಥ ಹಾಗೂ ರಾಮಾನುಜ ಮಂಟಪಗಳಿವೆ. ನೆರೆಯ ಕಾಚೇನಹಳ್ಳಿಯ ಸುಮಾರು ೧೩ನೆಯ ಶತಮಾನದ ಶಾಸನದಿಂದ ಈ ಗುಡಿ ಇರುವ ಭಾಗಕ್ಕೆ ಹಿಂದೆ ನರಸಿಂಹ ಪಟ್ಟಣ ಎಂಬ ಹೆಸರಿದ್ದ ಅಂಶ ಗೊತ್ತಾಗುತ್ತದೆ. ಈ ಗುಡಿಯ ಬದಿಯ ಕಿರು (ಪದ್ಮಗಿರಿ) ಬೆಟ್ಟದ ಮೇಲೆ ಇರುವ ವೆಂಕಟರಮಣನ (ಉತ್ತಿತಿಮ್ಮಪ್ಪ) ಗುಡಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಒಳಗೆ ನಾರಾಯಣನ ಶಿಲ್ಪವಿದ್ದು, ಹೊರಗೆ ವೃಂದಾವನವೂ ಇದೆ.

ಊರಾಚೆ ಚಿನಕುರಳಿ ರಸ್ತೆಯಲ್ಲಿ ಸಣ್ಣ ದಿಬ್ಬದ ಮೇಲಿರುವ ಸಯ್ಯದ್ ಸಾಲಾರ್ ಮಸೂದ್ ಸಾಬ್ ದರ್ಗಾವು ದೆಹಲಿಯ ಮುಸ್ಲಿಂ ದಂಡನಾಯಕ ಸಾಲಾರ್ ಮಸೂದನ ಗೋರಿಯಾಗಿದ್ದು, ಕ್ರಿ.ಶ.೧೩೫೮ರಲ್ಲಿ ಅವನು ಇಲ್ಲಿ ಮಡಿದನೆಂದು ತಿಳಿದುಬರುತ್ತದೆ. ಈ ದರ್ಗಾಕ್ಕೆ ಸಂಬಂಧಿಸಿದ ಚಟ್ಟಂಗೆರೆಯ (ಕೃಷ್ಣರಾಜಪೇಟೆ ತಾ.) ಕ್ರಿ.ಶ.೧೭೪೯ರ ಮೂರು ಶಾಸನಗಳು ಆ ಗ್ರಾಮವನ್ನು ತೊಂಣ್ಣೂರಿನ ನಿಲಾಮಸೂದ ಖಾದ್ರಿ ದರ್ಗಾದಲ್ಲಿ ನಡೆಯುವ ಧರ್ಮಕ್ಕೆಂದು ದಾನ ಬಿಟ್ಟ ಅಂಶವನ್ನು ದಾಖಲಿಸಿವೆ. ಎತ್ತರದ ಸ್ಥಳದಲ್ಲಿ ಸುತ್ತ ತೆರೆದ ಮಂಟಪವನ್ನು ಹೊಂದಿರುವ ಈ ದರ್ಗಾದೊಳಗೆ ಹಜರತ್ ಸೈಯದ್ ಮಸೂದ್ ಘಾಜಿ ಹಾಗೂ ಅವನ ಮಡದಿ ಹಜರತ್ ಬೀಬಿ ಫಾತಿಮಾ ಜಹರಾಬೀಯ ಗೋರಿಗಳಿದ್ದು, ರಜಬ್ ತಿಂಗಳ ೧೫-೧೬ರಂದು ಇಲ್ಲಿ ಉರುಸಾಗುತ್ತದೆ. ದರ್ಗಾದ ಬಲಮುಂಭಾಗದಲ್ಲಿರುವ ಎರಡು ಗೋರಿಗಳು ಟಿಪ್ಪುವಿನ ಬಂಧುಗಳಾದ ಕರೀಮ್ ಹಾಗೂ ರಹೀಮ್ ವಾಲಿ ಶಹಾರದ್ದಾಗಿದ್ದು, ದರ್ಗಾದ ಹಿಂಭಾಗದಲ್ಲಿ ಕೆರೆ ಇದೆ.

ತೊಣ್ಣೂರು ಕೆರೆಯ ಹಿಂಬದಿಯಲ್ಲಿರುವ ಸಣಬ ಗ್ರಾಮದಿಂದ ವರದಿಯಾಗಿರುವ ತೇದಿರಹಿತ ಶಾಸನ, ಹೊಯ್ಸಳ ಮುಮ್ಮಡಿ ನರಸಿಂಹನು ಯಾದವನಾರಾಯಣ ಚತುರ್ವೇದಿ ಮಂಗಲದ (ತೊಣ್ಣೂರು) ಯಾದವ ಸಮುದ್ರದ ಏರಿಯ ಮೇಲಿನ ಹೊಯ್ಸಳೇಶ್ವರ ದೇವರ ಸ್ನಾನ, ನೈವೇದ್ಯಗಳಿಗೆಂದು ಸಣಬ ಗ್ರಾಮವನ್ನು ಮಲ್ಲಜೀಯನಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ. ಆದರೆ ಇಂದು ಸಣಬ ಗ್ರಾಮದ ಅವಿಭಾಜ್ಯ ಅಂಗವಾಗಿರುವ ಈ ಗುಡಿಯು ಪೂರ್ಣ

ಜೀರ್ಣೋದ್ಧಾರಗೊಂಡಿದ್ದು, ಕಿರು ಪ್ರಮಾಣದ ಶಿವಲಿಂಗ, ನಂದಿ ಹಾಗೂ ಪರಿವಾರ ದೇವತಾ ಮೂರ್ತಿಗಳೊಂದಿಗೆ ನಾಲ್ಕಾರು ವೀರಗಲ್ಲುಗಳಷ್ಟೇ ಉಳಿದಿವೆ.

ಸುಂಕಾತೊಣ್ಣೂರಿನಲ್ಲಿ ನೆಲೆಸಿರುವ ರಾಕ್ಷಸಮ್ಮ/ರಕ್ಕಸಮ್ಮ ಮೂಲತ: ಇಲ್ಲಿಯವಳಾಗಿದ್ದು, ತೊಣ್ಣೂರು ನೀಲಿ ಎಂದೇ ಹೆಸರು ಪಡೆದಿದ್ದ ಅವಳು ತನ್ನ ಮಗಳನ್ನು ಪ್ರೀತಿಸಿದ್ದ ರಾಜಕುಮಾರನನ್ನು ಸುಂಕಾತೊಣ್ಣೂರಿಗೆ ಅಟ್ಟಿಸಿಕೊಂಡು ಹೋಗಿ ಅಲ್ಲಿಯ ಪಂಚರನ್ನು ವಂಚಿಸಿ, ಅವನನ್ನು ಕೊಂದಳೆಂದು, ಈ ಭಾಗದಲ್ಲಿ ಚಾಲ್ತಿಯಲ್ಲಿರುವ ಕರಿಭಂಟನ ಕಾಳಗ, ಜನಪದ ಕಾವ್ಯವು ತಿಳಿಸುತ್ತಿದ್ದು, ಅಲ್ಲಿ ನೆಲೆಸಿರುವ ರಾಕ್ಷಸಮ್ಮನ ಬೆನ್ನಿಗೆ ಈಗಲೂ ಪೂಜೆ ಸಲ್ಲುತ್ತದೆ. (ವಿವರಗಳಿಗೆ ಸುಂಕಾತೊಣ್ಣೂರು ನೋಡಿ) ಉಳಿದಂತೆ ಊರಿನಲ್ಲಿ ಗ್ರಾಮದೇವತೆ ಕುಮ್ಮುಂದೇವಿ, ಲಕ್ಷ್ಮೀಸಾಗರ ರಸ್ತೆಯ ತೋಪಿನಲ್ಲಿರುವ ಆದಿಶಕ್ತಿ ನಿಕುಂಬಿಣಿ ದೇವಿ (ರಾವಣನ ಕುಲದೇವತೆ) ಮುಂತಾದ ಗುಡಿಗಳಿದ್ದು, ವಾರಾಂತ್ಯದ ಪ್ರವಾಸಕ್ಕೆ ಪ್ರಶಸ್ತವಾಗಿರುವ ಇದನ್ನು ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿ ಪಡಿಸಲು ಸಾಕಷ್ಟು ಅವಕಾಶಗಳಿವೆ.

**ಕೆಲಗೆರೆ (೮೩೮)** : ತಾಲೂಕು ಕೇಂದ್ರ ನಾಗಮಂಗಲದಿಂದ ೧೨ ಕಿ.ಮೀ. ಉತ್ತರಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ಕೆಲ್ಲಂಗೆರೆ' ಎಂದೇ ಉಲ್ಲೇಖಿತಗೊಂಡಿದ್ದು, ಈವರೆಗೆ ವರದಿಯಾಗಿರುವ ಮೂರು ಶಾಸನಗಳಲ್ಲಿ ಮುಮ್ಮಡಿ ನರಸಿಂಹನ ಕಾಲದ ಜೈನ ಶಾಸನವು, ದೋರಸಮುದ್ರದ ತ್ರಿಕೂಟ ರತ್ನತ್ರಯ ಶಾಂತಿನಾಥದೇವರಿಗೆ ಚಿಕ್ಕಕನ್ನೆಯನಹಳ್ಳಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಮಲ್ಲಿಕಾರ್ಜುನ ಗುಡಿಯಲ್ಲಿರುವ, ವಿಜಯನಗರದ ಅರಸ ದೇವರಾಯನ ಕಾಲದ ತೇದಿರಹಿತ ಶಾಸನ, ಕೆಲ್ಲಂಗೆರೆಯು ಹಿಂದೆ ಭಟ್ಟಾರಕದೇವ (ತೀರ್ಥಂಕರ)ನಿಂದಾಗಿ ಪ್ರಸಿದ್ಧವಾಗಿದ್ದ ಅಂಶವನ್ನು ಅರಹುತ್ತ, ಊರ ಮೂಡಣ ದಿಕ್ಕಲ್ಲಿ ಗರ್ಭಗೃಹ, ಸುಖನಾಸಿ, ರಂಗಮಂಟಪಗಳನ್ನೊಳಗೊಂಡ ಮಲ್ಲಿಕಾರ್ಜುನ ದೇವಾಲಯವನ್ನು ಕೆಲ್ಲಂಗೆರೆಯ ವರದಯ್ಯನಾಯಕನು ನಿರ್ಮಿಸಿ, ಶೂದ್ರವಾಡವಾಗಿದ್ದ ಆ ಗ್ರಾಮವನ್ನು ಅಗ್ರಹಾರವನ್ನಾಗಿಸಿ, 'ವರದರಾಜಪುರ' ಎಂಬ ಅಭಿದಾನವನ್ನು ಅದಕ್ಕೆ ನೀಡಿ, ಅಲ್ಲಿಯ ಕೆರೆಯನ್ನು ಜೀರ್ಣೋದ್ಧಾರ ಮಾಡಿಸಿ, ವರದರಾಜ ಸಮುದ್ರವೆಂದು ಅದಕ್ಕೆ ಹೆಸರಿಟ್ಟು, ದೇವರ ಸೇವೆಗೆಂದು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ.

ಊರ ಪ್ರವೇಶದಲ್ಲಿ ಕೆರೆಯ ಏರಿಯಂಚಲ್ಲಿರುವ ದೇವಾಲಯವೇ ಶಾಸನೋಕ್ತ ಮಲ್ಲಿಕಾರ್ಜುನವಾಗಿದ್ದು, ಅದರ ಪ್ರಧಾನ ದ್ವಾರದ ಲಲಾಟದಲ್ಲಿ ನಡುವೆ ಶಿವಲಿಂಗವಿದ್ದು, ಇಕ್ಕೆಲಗಳಲ್ಲಿ ನಂದಿಕೆತ್ತನೆಗಳಿದ್ದು, ಗರ್ಭಗೃಹವು ಬರಿದಾಗಿದೆ. ನವರಂಗದ ಕಂಬಗಳು ರೇಖಾ ಚಿತ್ರಗಳಿಂದ ಅಲಂಕೃತವಾಗಿದ್ದು, ನಡುವಣ ಛತ್ತಲ್ಲಿ ಕಮಲವಿದೆ. ದೇವಾಲಯದ ಭಿತ್ತಿಯ ಹೊರಮೈ ಹಾಳಾಗಿದ್ದು, ಒಳಮೈಯಷ್ಟೇ ಉಳಿದಿದ್ದು, ಮುಂದೆ ೨೦ ಅಡಿ ಎತ್ತರದ ಸ್ತಂಭವಿದೆ. ಅಗಸಿ ಬಳಿ ಇರುವ ಜೈನ ಸ್ತಂಭದ ತುದಿಯಲ್ಲಿ ಹಿಂದೆ ಆನೆಯ ಶಿಲ್ಪವಿದ್ದಿತ್ತೆಂದು ಊಹಿಸಲು ಅಲ್ಲೇ ಬಿದ್ದಿರುವ ಆನೆ ಶಿಲ್ಪ ಪ್ರೇರೇಪಿಸುವುದರ ಜೊತೆಗೆ ಅಗ್ರಹಾರ ಬಾಚಹಳ್ಳಿ ಹಾಗೂ ಬಸರಾಳಿನ ಗರುಡಗಂಬಗಳನ್ನು ನೆನಪಿಸುತ್ತದೆ. ಹಿಂದೆ ಊರಿಗೆ ಕೋಟೆ ಇತ್ತೆಂಬ ಅಭಿಪ್ರಾಯವಿದೆಯಾದರೂ ಇಂದು ಅಗಸಿ ಬಾಗಿಲಷ್ಟೇ ಉಳಿದಿದ್ದು, ಬಳಿಯಿರುವ ರಂಗಕುಣಿತದ ರಂಗಮಂಟಪವನ್ನು ಶ್ರೀರಂಗಪಟ್ಟಣ ತಾಲೂಕಿನ ಬೆಟ್ಟದ್ಯಾಮಗೌಡನಕೊಪ್ಪಲಿನ ಹೊಟ್ಟೆ ತಿಮ್ಮೇಗೌಡನ ಹೆಂಡತಿ ಅಕ್ಕಮ್ಮ ಕ್ರಿ.ಶ.೧೯೨೮ರಲ್ಲಿ ಮಾಡಿಸಿದಳೆಂದು ಅಲ್ಲೇ ಇರುವ ಕಲ್ಬರಹ ತಿಳಿಸುತ್ತಿದ್ದು, ಮಂಟಪಕ್ಕೆ ಆಕರ್ಷಕ ಗಾರೆ ಗೋಪುರವಿದೆ. ಬಸವೇಶ್ವರ ಗುಡಿಯ ಬಳಿ ತೀರ್ಥಂಕರ, ಆನೆ ಹಾಗೂ ವಾಮನ ಮುದ್ರೆ ಕಲ್ಲುಗಳಿವೆ. ಹೆಬ್ಬಾಗಿಲ ಹನುಮಂತನ ಗುಡಿ ಬಳಿ ಒಂದು ಹಾಗೂ ಗುಮ್ಮಟರಾಯನ ಗುಡಿ ಹಿಂಭಾಗದಲ್ಲಿ ಬೇರೆ ಬೇರೆ ಕಾಲದ ೧೦ ವೀರಗಲ್ಲುಗಳಿವೆ. ವರದರಾಜಸ್ವಾಮಿ ಗುಡಿಯ ಗರ್ಭಗೃಹದಲ್ಲಿ ತೀರ್ಥಂಕರ ಪೀಠವಿದ್ದು, ಅಂತರಾಳ, ನವರಂಗಗಳು ಖಾಲಿ ಇವೆ. ಉಳಿದಂತೆ ಊರಲ್ಲಿ ಆದಿಶಕ್ತಿ, ಸೀತಮ್ಮ, ಮುಂತಾದ ನವೀನ ಗುಡಿಗಳಿದ್ದು, ಊರಾಚೆ ಗುಡ್ಡದ ಮೇಲಿರುವ ವೀರಭದ್ರನ ಗುಡಿಯಲ್ಲಿ ವೀರಭದ್ರನ ಕಿರು ಮೂರ್ತಿ ಇದೆ. ಊರಿಗೆ ನಾಲ್ಕು

ಕಿ.ಮೀ. ಅಂತರದಲ್ಲಿರುವ ಹುಲಿಗೆರೆಯಮ್ಮನ ಗುಡಿಯ ಬಳಿ ಏಪ್ರಿಲ್ ತಿಂಗಳಲ್ಲಿ ಜರುಗುವ ಜಾತ್ರೆಯ ಅಂಗವಾಗಿ ನಡೆಯುವ ಸಿಡಿಸೇವೆಯನ್ನು ಕೆಲ್ಲಂಗೆರೆಯಿಂದ ಮೆರವಣಿಗೆಯಲ್ಲಿ ಕರೆದೊಯ್ದು, ಸಿಡಿಯಾಟವಾಡುವುದು ಉಲ್ಲೇಖಾರ್ಹವಾಗಿದೆ.

**ಗೆಂಡೆಹೊಸಹಳ್ಳಿ (೧೬೩೪)** : ತಾಲೂಕು ಕೇಂದ್ರ ಶ್ರೀರಂಗಪಟ್ಟಣದಿಂದ ೧೯ ಕಿ.ಮೀ.ಆಗ್ನೇಯಕ್ಕೆ ಶ್ರೀರಂಗಪಟ್ಟಣ – ಬನ್ನೂರು ರಸ್ತೆಯಲ್ಲಿ ಕಾವೇರಿ ಎಡದಂಡೆಯಿಂದ ಎರಡು ಕಿ.ಮೀ. ಉತ್ತರಕ್ಕಿದ್ದು, ಈ ಹಳ್ಳಿಯ ಬಳಿ ಕಾವೇರಿಗೆ ಕಟ್ಟಿರುವ ಲಾಳಾಕಾರದ ರಾಮಸ್ವಾಮಿ ಆಣೆಯಿಂದಾಗಿ ಸೃಷ್ಟಿಯಾಗಿರುವ ದ್ವೀಪಗಳು ಬೊಂಬು-ಬಿದಿರು ಮೇಳೆಗಳಿಂದ ಕೂಡಿದ್ದು, ವಿವಿಧ ಪಕ್ಷಿಗಳ ತಂಗುದಾಣವಾಗಿ ರಂಗನತಿಟ್ಟಿನಂತೆ ಮತ್ತೊಂದು ಪ್ರಮುಖ ಪಕ್ಷಿಧಾಮವಾಗುವ ಎಲ್ಲಾ ಲಕ್ಷಣಗಳನ್ನು ಹೊಂದಿದೆ. ಸದ್ಯ ರಂಗನತಿಟ್ಟು ಪಕ್ಷಿಧಾಮದ ಅಧೀನದಲ್ಲಿ ಇದರ ಅಭಿವೃದ್ಧಿ ಕಾರ್ಯ ನಡೆದಿದೆ.

**ಗೋವಿಂದನಹಳ್ಳಿ ( ೧೭೮೧) :** ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೨೦ ಕಿ.ಮೀ. ವಾಯವ್ಯಕ್ಕಿರುವ ಇದು ಹಿಂದೆ ಕಬ್ಬಾಹು ನಾಡಿನಲ್ಲಿದ್ದು, ಅಲ್ಲಿಂದ ಈವರೆಗೆ ವರದಿಯಾಗಿರುವ ಮೂರು ಶಾಸನಗಳು ಪಂಚಲಿಂಗೇಶ್ವರ ದೇವಾಲಯದಲ್ಲಿದ್ದು, ಅವುಗಳಲ್ಲಿ ಕ್ರಿ.ಶ.೧೨೩೬ರ ಶಾಸನ ಹೊಯ್ಸಳ ವೀರಸೋಮೇಶ್ವರನ ಕಾಲದಲ್ಲಿ ಮುರಾರಿ ಮಲ್ಲಯ್ಯದಂಡನಾಯ್ಕನು ತೆಂಗಿನಕಟ್ಟವನ್ನು ಅಗ್ರಹಾರವನ್ನಾಗಿಸಿ,ಸೇತುವಿನ ಶ್ರೀ ರಾಮನಾಥ ದೇವರ ಸನ್ನಿಧಿಯಲ್ಲಿ ವಿವಿಧ ಬ್ರಾಹ್ಮಣರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ.

ದ್ರಾವಿಡ ಶೈಲಿಯಲ್ಲಿರುವ ಇಲ್ಲಿಯ ಪಂಚಲಿಂಗೇಶ್ವರ ದೇವಾಲಯವು ಮೂಲತ: ಚತುಷ್ಕೂಟವಾಗಿದ್ದು, ಒಂದರ ಪಕ್ಕದಲ್ಲೊಂದರಂತೆ ಒಂದೇ ಸಾಲಲ್ಲಿರುವ ಐದು ಗರ್ಭಗೃಹಗಳಲ್ಲಿ ತೀರಾ ಪೂರ್ವಕ್ಕಿರುವ ಗರ್ಭಗೃಹ ಭಾಗವು ಸ್ವಲ್ಪ ನಂತರದ ಸೇರ್ಪಡೆಯಾಗಿದ್ದು, ಪ್ರತಿಯೊಂದಕ್ಕೂ ಪ್ರತ್ಯೇಕ ಅಂತರಾಳವಿದ್ದು, ಎಲ್ಲಕ್ಕೂ ಸೇರಿದಂತೆ ವಿಶಾಲವಾದ ಒಂದೇ ನವರಂಗವಿದೆ. ಉತ್ತರಾಭಿಮುಖವಾಗಿರುವ ಇದರ ಪ್ರಧಾನ ದ್ವಾರಗಳೆರಡಕ್ಕೂ ಮುಖಮಂಟಪಗಳಿದ್ದು, ಎದುರಲ್ಲಿ ನಂದಿಮಂಟಪಗಳಿವೆ. ಜಗಲಿರಹಿತವಾಗಿದ್ದರೂ ಪ್ರಮಾಣಬದ್ಧವಾದ ದ್ರಾವಿಡ ಶಿಖರಗಳಿಂದ ಅಲಂಕೃತವಾಗಿರುವ ಈ ದೇವಾಲಯದ ಐದು ಗರ್ಭಗೃಹಗಳಲ್ಲೂ ಶಿವಲಿಂಗಗಳಿದ್ದು, ದ್ವಾರಬಂಧಗಳು ಆಕರ್ಷಕವಾಗಿದ್ದು, ಜಾಲಂದ್ರಗಳಿವೆ. ನವರಂಗದ ಭುವನೇಶ್ವರಿ ಹಾಗೂ ತಿರುಗಣಿ ಕಂಬಗಳು ಚಿತ್ತಾಕರ್ಷಕವಾಗಿದ್ದು, ದೇವಕೋಷ್ಠಗಳಲ್ಲಿ ಗಣಪ, ಷಣ್ಮುಖ, ಸಪ್ತಮಾತೃಕಾ, ಮಹಿಷಮರ್ಧಿನಿ, ಸರಸ್ವತಿ, ವೀರಭದ್ರ ಹಾಗೂ ಉಮಾಮಹೇಶ್ವರರ ಸುಂದರ ಶಿಲ್ಪಗಳಿವೆ. ದೇವಾಲಯದ ದ್ವಾರಪಾಲಕ ಪೀಠಗಳ ಮೇಲಿರುವ ಶಿಲ್ಪಿ ಮಲಿತಮ್ಮನ ನಾಮಾಂಕಿತ ಶಾಸನಗಳು ಅಮೃತಾಪುರ (ಕ್ರಿ.ಶ.೧೧೯೬), ಹಾರ್ನಹಳ್ಳಿ (ಕ್ರಿ.ಶ.೧೨೩೪), ನುಗ್ಗೆಹಳ್ಳಿ (ಕ್ರಿ.ಶ.೧೨೪೯), ಜಾವಗಲ್ (ಕ್ರಿ.ಶ.೧೨೫೦), ಸಾಲಿಗಾವೆ (ಕ್ರಿ.ಶ.೧೨೫೮) ಹಾಗೂ ಸೋಮನಾಥಪುರ (ಕ್ರಿ.ಶ.೧೨೬೯)ದ ಪ್ರಸಿದ್ಧ ಹೊಯ್ಸಳ ದೇವಾಲಯಗಳಲ್ಲಿಯ ಶಾಸನಗಳಲ್ಲಿ ಉಕ್ತವಾಗಿರುವ ಮಲ್ಲಿತಮ್ಮನದಾಗಿದ್ದು, ಗೋವಿಂದನಹಳ್ಳಿಯ ದೇವಾಲಯದ (ಕ್ರಿ.ಶ.೧೨೩೬) ನಿರ್ಮಾಣದಲ್ಲೂ ಇವನು ಮಹತ್ವದ ಪಾತ್ರವಹಿಸಿರುವ ಸಾಧ್ಯತೆಗಳಿವೆ. ದೇವಾಲಯದ ಭಿತ್ತಿಯ ಕಿರು ದೇವಕೋಷ್ಠಗಳಲ್ಲಿ ವಿವಿಧ ದೇವತಾ ಮೂರ್ತಿಗಳಿದ್ದು, ಕೇಶವ, ನಾರಾಯಣ, ಮಾಧವ, ಗೋವಿಂದ, ಶ್ರೀವಿಷ್ಣು, ಶ್ರೀಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ, ಪದ್ಮನಾಭ, ದಾಮೋದರ, ಪರವಾಸುದೇವ, ಸರಸ್ವತಿ, ಇಂದ್ರ-ಸಚೀದೇವಿ, ಗರುಡಾರೂಢ ಲಕ್ಷ್ಮೀನಾರಾಯಣ, ನರಸಿಂಹ, ಲಕ್ಷ್ಮೀನರಸಿಂಹ, ಯೋಗಾನರಸಿಂಹ, ವರಾಹ, ನಂಬಿ-ನಾರಾಯಣ, ಹರಿಹರ, ಕಾಳಿಂಗಮರ್ಧನ, ಗೋವರ್ಧನಧಾರಿ ಗೋಪಾಲಕೃಷ್ಣ, ವೇಣುಗೋಪಾಲ, ತಾಂಡವೇಶ್ವರ, ದಕ್ಷಿಣಾಮೂರ್ತಿ, ಉಮಾಮಹೇಶ್ವರ, ಗಜಾಸುರಮರ್ಧನ, ಭೈರವ, ಗಣಪ, ಸರಸ್ವತಿ, ದುರ್ಗಾ,

ರಾವಣ, ಮುಂತಾದ ಪೌರಾಣಿಕ ಹಾಗೂ ಧಾರ್ಮಿಕ ಉಬ್ಬು ಶಿಲ್ಪಗಳಿಂದ ಭಿತ್ತಿಯ ಮೇಲೆ ದೇವಲೋಕವನ್ನೇ ಸೃಷ್ಟಿಸಲಾಗಿದೆ. ಅದೇ ದೇವಾಲಯದ ಭಿತ್ತಿಶಿಲ್ಪಗಳ ಕೆಳಗಿರುವ ಏಕಪದ ಬರಹಗಳು, ವಿಷ್ಣುವಿನ ೨೪ ರೂಪಗಳಲ್ಲಿ. ೧೨ ರೂಪಗಳನ್ನು ಹೆಸರಿಸುವ ನಾಮಾಂಕಿತಗಳಾಗಿದ್ದು, ಆಯಾ ಉಬ್ಬುಶಿಲ್ಪಗಳನ್ನು ಗುರುತಿಸಲು ನೆರವಾಗುತ್ತವೆ. ಸೂಕ್ಷ್ಮ ಕೆತ್ತನೆಗಳಿಂದಾಗಿ ಇದು ಆಕರ್ಷಕವಾಗಿದ್ದು, ನೆರೆಯ ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯದ ಭಿತ್ತಿಯ ಅಲಂಕಾರವನ್ನು ನೆನಪಿಸುತ್ತದೆ. ಇಲ್ಲಿರುವ ಗೋವಿಂದನ ಸುಂದರ ಶಿಲ್ಪದಿಂದಾಗಿ ಊರಿಗೆ ಗೋವಿಂದನಹಳ್ಳಿ ಎಂಬ ಹೆಸರು ಬಂದಿದೆಯೆಂದು ಹೇಳಲಾಗುತ್ತದೆ. ಹೊಯ್ಸಳರ ಕಾಲದ ಸೋಮನಾಥಪುರದ ಪಂಚಕೂಟ ದೇಗುಲ ಹಾಗೂ ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಾಲಯಗಳ ಸಾಲಿಗೆ ಸೇರುವ ಈ ಅಪೂರ್ವ ದೇವಾಲಯವು ಜಿಲ್ಲೆಗೇ ತಿಲಕಪ್ರಾಯವಾಗಿದೆ. ಇಲ್ಲಿಯ ಕೋಟೆ ಗೋಪಾಲಕೃಷ್ಣ, ಗಾಣದ ದೇವರು ಹಾಗೂ ವೀರಭದ್ರನ ಗುಡಿಗಳು ಹೊಯ್ಸಳರ ಕಾಲದ್ದಾಗಿದ್ದು, ಶಿಥಿಲಾವಸ್ಥೆಯಲ್ಲಿವೆ. **ಮಾಗೋನಹಳ್ಳಿ (೩೯೭)** : ಗೋವಿಂದನಹಳ್ಳಿಯ ನೆರೆಯ ಗ್ರಾಮವಾಗಿದ್ದು, ಒಂದನೆಯ ಬಲ್ಲಾಳನ (ಕ್ರಿ.ಶ.೧೧೦೩) ವೀರಗಲ್ಲು ಶಾಸನವಿಲ್ಲಿದೆ. ಕೆರೆಯ ಹಿಂಭಾಗದಲ್ಲಿರುವ ಸುಮಾರು ೧೨–೧೩ನೆಯ ಶತಮಾನದ ಈಶ್ವರ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ನಂದಿಮಂಟಪಗಳಿದ್ದು, ಕಟ್ಟಡದ ಒಳರಚನೆ ಕಲ್ಲಿನದಾಗಿದ್ದು, ಹೊರಮೈಗೆ ಇಟ್ಟಿಗೆಯನ್ನು ಬಳಸಲಾಗಿದೆ. ಗಾರೆ ಶಿಖರವನ್ನು ಹೊಂದಿರುವ ಗರ್ಭಗೃಹದಲ್ಲಿ ಶಿವಲಿಂಗ, ಅಂತರಾಳದಲ್ಲಿ ಗಣಪತಿ, ನವರಂಗದಲ್ಲಿ ಸೂರ್ಯ, ಷಣ್ಮುಖ, ಸಪ್ತಮಾತೃಕಾ ಹಾಗೂ ನಾಗಶಿಲ್ಪಗಳಿದ್ದು, ಎದುರಿಗೆ ನಂದಿಯೊಂದಿಗೆ ನಂದಿಕಂಬವೂ ಇದೆ. ಊರ ಮುಂದಿನ ಕಲ್ಲೇಶ್ವರ ಗುಡಿ ಬಳಿಯಿರುವ ಎರಡು ಹೊಯ್ಸಳ ವೀರಗಲ್ಲುಗಳಲ್ಲಿ ಒಂದು ಹುಲಿಬೇಟೆ ವೀರಗಲ್ಲಾಗಿದೆ. ಅಲ್ಲದೆ ಸುಮಾರು ೧೮ನೆಯ ಶತಮಾನಕ್ಕೆ ಸೇರಿದ ಹತ್ತಾರು ವೀರಗಲ್ಲುಗಳಿವೆ. ಉಳಿದಂತೆ ಇಲ್ಲಿ ಇತ್ತೀಚಿನದಾದ ಚನ್ನರಾಯಸ್ವಾಮಿ, ವೀರಭದ್ರ, ಹುಚ್ಚಮ್ಮ ಹಾಗೂ ಮಾರಮ್ಮನ ಗುಡಿಗಳಿವೆ. **ಮಾದಾಪುರ (೧೬೫೭) :** ಗೋವಿಂದನಹಳ್ಳಿಗೆ ಸಮೀಪದ ಈ ಊರಿನಲ್ಲಿರುವ ಸುಮಾರು ೧೪ನೆಯ ಶತಮಾನದ ಮಹಾಲಿಂಗೇಶ್ವರ ದೇವಾಲಯಕ್ಕೆ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿದ್ದು, ಅದರ ಪಾರ್ಶ್ವದ್ವಾರಕ್ಕೆ ಮುಖಮಂಟಪವಿದೆ. ಇತ್ತೀಚೆಗೆ ಧರ್ಮಸ್ಥಳದ ಮಂಜುನಾಥ ಧರ್ಮೋತ್ಥಾನ ಟ್ರಸ್ಟ್, ಅದರ ಸಂರಕ್ಷಣಾ ಕಾರ್ಯವನ್ನು ಸ್ಥಳೀಕರು ಹಾಗೂ ಸರ್ಕಾರದ ಸಹಕಾರದೊಂದಿಗೆ ಯಶಸ್ವಿಯಾಗಿ ಮುಗಿಸಿದ್ದು, ದೇವಸ್ಥಾನವು ಸುಸ್ಥಿತಿಯಲ್ಲಿದೆ. ಗರ್ಭಗೃಹದಲ್ಲಿ ಮಹಾಲಿಂಗೇಶ್ವರ ಲಿಂಗ, ನವರಂಗದ ದೇವಕೋಷ್ಠಗಳಲ್ಲಿ ಗಣಪತಿ ಮತ್ತು ಭೈರವರ ಶಿಲ್ಪಗಳಿದ್ದು, ನಡುವಣ ಛತ್ತಲ್ಲಿ ತ್ರಿದಳ ಕಮಲವಿದೆ. ಗರ್ಭಗೃಹಕ್ಕೆ ಶಿಖರವಿದ್ದು, ಭಿತ್ತಿಯ ಹೊರಮೈಯನ್ನು ಅಲಂಕಾರಿಕ ಸ್ತಂಭಗಳು ಅಪ್ಪಿ ನಿಂತಿವೆ. ಗುಡಿಯ ಆವರಣದಲ್ಲಿ ವೀರಗಲ್ಲು ಹಾಗೂ ಸಪ್ತಮಾತೃಕಾ ಶಿಲ್ಪಗಳಿದ್ದು, ವೀರಗಲ್ಲಿನ ಮೇಲಿದ್ದ ಶಾಸನ ಪೂರ್ಣ ಹಾಳಾಗಿದೆ. ಇಲ್ಲಿಯ ಚಲುವನಾರಾಯಣ ಗುಡಿಯೂ ಗರ್ಭಗೃಹವನ್ನಷ್ಟೇ ಹೊಂದಿದ್ದು, ಒಳಗೆ ವಿಜಯನಗರ ಕಾಲದ ಚಲುವನಾರಾಯಣ ಶಿಲ್ಪವಿದೆ. ವೀರಭದ್ರ ದೇವಾಲಯವು ಮೈಸೂರು ಅರಸರ ಕಾಲದ್ದಾಗಿದ್ದು, ಗರ್ಭಗೃಹ, ಸಭಾಮಂಟಪಗಳನ್ನಷ್ಟೇ ಹೊಂದಿದ್ದು, ಗರ್ಭಗೃಹದಲ್ಲಿ ವೀರಭದ್ರನ ಸುಂದರ ಶಿಲ್ಪವಿದೆ. ಈ ದೇವಾಲಯದ ಗಾರೆಶಿಲ್ಪಾಲಂಕೃತ ಶಿಖರ ಹಾಗೂ ದೇವಕೋಷ್ಠಗಳು ಆಕರ್ಷಕವಾಗಿವೆ. ನವರಂಗದಲ್ಲಿ ಭದ್ರಕಾಳಿ, ಭೈರವ, ಭೃಂಗಿ, ಸೂರ್ಯ, ಗಣಪತಿ ಹಾಗೂ ದ್ವಾರಪಾಲಕರ ಶಿಲ್ಪಗಳಿವೆ. ಇದನ್ನು ಜೀರ್ಣೋದ್ಧಾರ ಮಾಡುವಲ್ಲಿ ಮಂಜುನಾಥ ಟ್ರಸ್ಟ್ ಸ್ಥಳೀಕರೊಂದಿಗೆ ಕೈಜೋಡಿಸಿದೆ. ಇಲ್ಲಿಯ ಬಾವಿಯೊಂದರ ಮೇಲಿರುವ ಶಾಸನದಿಂದ ಮುಮ್ಮಡಿ ಕೃಷ್ಣರಾಜ ಒಡೆಯರ ಪತ್ನಿ ಮುದ್ದುಕೃಷ್ಣಮ್ಮ ಇಲ್ಲಿಯವರಾಗಿದ್ದು, ಈ ಬಾವಿಯನ್ನು ಅವರೇ ನಿರ್ಮಿಸಿದರೆಂದು ಗೊತ್ತಾದರೆ, ಜನಪದ ಕಥೆಯೊಂದು ಆಕೆಯ ಹೆಸರು ದೇವೀರಮ್ಮನೆಂದೂ ಆಕೆಯ ಸಮಾಧಿ ಇಲ್ಲಿದೆ ಎಂದೂ ಹೇಳುತ್ತದೆ. **ಹಳೇಮಾದಾಪುರ (೩೩೩)** : ಇದು ಮಾದಾಪುರದಿಂದ ಸುಮಾರು ಮೂರು ಕಿ.ಮೀ. ಅಂತರದಲ್ಲಿದ್ದು, ಊರಾಚೆ ಹೇಮಾವತಿಯ ಎಡದಂಡೆಯ ಮೇಲೆ ಪೂರ್ವಾಭಿಮುಖವಾಗಿರುವ

ಹೊಯ್ಸಳ ಕಾಲದ ತ್ರಿಯಂಬಕೇಶ್ವರ ದೇವಾಲಯಕ್ಕೆ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳಿವೆ. ಕಿರಿದಾದ ಕಂಬಗಳ ಮೇಲೆ ನಿಂತಿರುವ ಈ ಪಾಳು ಗುಡಿಯಲ್ಲಿ ಶಿವಲಿಂಗ, ನಂದಿ ಹಾಗೂ ಗಣಪತಿ ಶಿಲ್ಪಗಳಿದ್ದು, ನವರಂಗದ ಛತ್ತಲ್ಲಿ ಕಮಲವಿದೆ. **ಕಡೆಹೆಮ್ಮಿಗೆ (೮೩೯):** ಮಾದಾಪುರದ ಸಮೀಪದ ಈ ಗ್ರಾಮದಲ್ಲಿರುವ ಏಕೈಕ ಶಾಸನದಿಂದ ಹೆಮ್ಮಾಗೆಯ ಚಿಕ್ಕಗೌಡನು ಅಂಕಕಾರದೇವರಿಗೆ ದಾನಬಿಟ್ಟ ಅಂಶ ಗೊತ್ತಾಗುತ್ತದೆ. ಇಲ್ಲಿಯ ಈಶ್ವರ ಗುಡಿಯು ಹೊಯ್ಸಳರ ಕಾಲದ ಸರಳ ರಚನೆಯಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ಈ ದೇವಾಲಯದ ಬಳಿಯಿರುವ ವಿಭೂತಿ ಕುಪ್ಪೆಯು ಬೃಹತ್ ಶಿಲಾಯುಗ ಮಾನವರ ಕಾಲದ ಬೂದಿದಿಬ್ಬವೋ ಇಲ್ಲವೇ ವಿಭೂತಿ ತಯಾರಿಕಾ ಕೇಂದ್ರವಾಗಿತ್ತೋ ಎಂದು ಪರಿಶೀಲಿಸುವ ಅಗತ್ಯವಿದೆ.

**ಚಿಕ್ಕಬಾಗಿಲು (೧೨೨೬) :** ತಾಲೂಕು ಕೇಂದ್ರ ಮಳವಳ್ಳಿಯಿಂದ ೧೮ ಕಿ.ಮೀ. ನೈಋುತ್ಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲೂ 'ಚಿಕ್ಕಬಾಗಿಲು' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಬಡಗರೆ ನಾಡಿಗೆ ಸೇರಿತ್ತು. ಅಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಇಲ್ಲಿಯ ನಾರಾಯಣಸ್ವಾಮಿ ಗುಡಿಯು ಚೋಳ ಶೈಲಿಯಲ್ಲಿರುವ ಹೊಯ್ಸಳ ದೇವಾಲಯವಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಮುಮ್ಮಡಿ ನರಸಿಂಹನ ಕಾಲದ ಕ್ರಿ.ಶ.೧೨೮೯ರ ಶಾಸನವು ಚಿಕ್ಕಬಾಗಿಲು ಗ್ರಾಮದ ಸಮಸ್ತ ಪ್ರಭು-ಗೌಡರು ನಾರಾಯಣದೇವರಿಗೆ ದಾನ ಬಿಟ್ಟಿದ್ದನ್ನು ತಿಳಿಸಿದರೆ, ಸುಮಾರು ೧೭ನೆಯ ಶತಮಾನದ ಇನ್ನೊಂದು ಶಾಸನವು ದೇವಾಲಯದ ಶಿಥಿಲಗೊಂಡಿದ್ದ ಮಾಳಿಗೆಯನ್ನು ಅದೇ ಊರ ಮಾದಪ್ಪಗೌಡ ಹಾಗೂ ನೆರೆಯ ಮಾಲಂಗಿಯ ಚನ್ನಯ್ಯರು ಜಂಟಿಯಾಗಿ ದುರಸ್ತಿಗೊಳಿಸಿದ ಅಂಶವನ್ನು ದಾಖಲಿಸುತ್ತದೆ. ಸರಳ ಬಾಗಿಲವಾಡವನ್ನು ಹೊಂದಿರುವ ಚೌಕಾಕಾರದ ಗರ್ಭಗೃಹದಲ್ಲಿರುವ, ಶಂಖ, ಚಕ್ರ, ಅಭಯ, ಗದಾಧಾರಿ ನಾರಾಯಣನ ಆಳೆತ್ತರದ ಶಿಲ್ಪವು ಸುಂದರವಾಗಿದ್ದು, ನವರಂಗದ ಕಂಬಗಳು ಸರಳವಾಗಿದ್ದು, ನಡುವಣ ಛತ್ತಲ್ಲಿ ಕಮಲವಿದ್ದು, ಇಳಿಜಾರಾದ ಛಾವಣಿಯಿದೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದರೂ ಗರ್ಭಗೃಹದ ಮೂರು ಪಾರ್ಶ್ವ ಹಾಗೂ ನವರಂಗದ ಎರಡು ಪಾರ್ಶ್ವಗಳಲ್ಲಿ ಕಿರು ದೇವಕೋಷ್ಠಗಳಿದ್ದು, ಅಲಂಕಾರಿಕ ಕಂಬಗಳಿವೆ. ಗುಡಿಯ ಪ್ರಧಾನ ದ್ವಾರ ಕುಸಿದಿದ್ದು, ಬಳಿಯಲ್ಲೇ ವೃಂದಾವನ ಹಾಗೂ ಗಾಣದ ಕಲ್ಲುಗಳೂ ಇವೆ. ಕೆರೆ ಬಳಿ ಇದ್ದ ಪ್ರಾಚೀನ ದೇಶೇಶ್ವರ ಗುಡಿಯು ಜೀರ್ಣೋದ್ಧಾರಗೊಂಡಿದ್ದು, ಒಳಗೆ ಶಿವಲಿಂಗವಿದೆ. ಎದುರಲ್ಲೇ ನಂದಿ ಮಂಟಪವಿದೆ. ಉಳಿದಂತೆ ಊರಲ್ಲಿ ರಾವಣೆ(ಳೆ)ೀಶ್ವರ, ಮರಡೇಶ್ವರ, ಮಾರಮ್ಮ, ಮನೆಯಮ್ಮ, ಮುಂತಾದ ನವೀನ ಗುಡಿಗಳಿವೆ.

**ಜೀಗುಂಡಿಪಟ್ಟಣ (೧೧೫೭) :** ತಾಲೂಕು ಕೇಂದ್ರ ಮಂಡ್ಯದಿಂದ ಆರು ಕಿ.ಮೀ. ಉತ್ತರಕ್ಕಿದ್ದು, ಇಲ್ಲಿಂದ ವರದಿಯಾಗಿರುವ ಏಕೈಕ ಶಾಸನದಲ್ಲಿ ಉಕ್ತವಾಗಿರುವ ಕಳಿಯೂರೇ ಜೀಗುಂಡಿಪಟ್ಟಣದ ಪ್ರಾಚೀನ ಹೆಸರಿರಬೇಕೆಂಬ ಅನುಮಾನ ಮೂಡುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಚಂದ್ರಮೌಳೇಶ್ವರ ಗುಡಿಯ ಎಡಭಾಗದಲ್ಲಿ ಹಾಗೂ ಬಳಿಯ ಕಲ್ಲುಗಾಣದ ಮೇಲೆ ಹೊಯ್ಸಳರ ಶಾಸನಗಳಿರುವುದು ಪತ್ತೆಯಾಗಿದೆ. ಗುಡಿ ಬಳಿ ಇರುವ ಶಾಸನ ಶೈವದತ್ತಿ ದಾಖಲೆಯಾಗಿದೆ. ಇಲ್ಲಿರುವ ಚಂದ್ರಮೌಳೇಶ್ವರ ಗುಡಿ ದ್ವಿಕೂಟವಾಗಿದ್ದು, ಪೂರ್ವ-ಪಶ್ಚಿಮಕ್ಕಾದಂತೆ ಎದುರು ಬದುರಾಗಿ ಒಂದೊಂದು ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು, ನಡುವೆ ಇರುವ ಒಂದೇ ನವರಂಗ ಅವೆರಡನ್ನೂ ಒಗ್ಗೂಡಿಸಿದ್ದು, ದಕ್ಷಿಣಕ್ಕಿರುವ ಪ್ರವೇಶದ್ವಾರಕ್ಕೆ ತೆರೆದ ಮುಖಮಂಟಪವಿದೆ. ಪೂರ್ವಾಭಿಮುಖವಾಗಿರುವ ಪ್ರಧಾನ ಗರ್ಭಗೃಹಕ್ಕೆ ಸಪ್ತಶಾಖಾಲಂಕೃತ ಬಾಗಿಲುವಾಡವಿದ್ದು, ಒಳಗೆ ಶಿವಲಿಂಗವಿದ್ದರೆ ಇದಕ್ಕೆ ಎದುರಾಗಿ ಪಶ್ಚಿಮಾಭಿಮುಖವಾಗಿರುವ ಗರ್ಭಗೃಹದಲ್ಲಿ ನಂದಿ ಇದ್ದು, ಪೂರ್ವದ ಗೋಡೆಗೆ ಜಾಲಂದ್ರವಿದೆ. ನವರಂಗದ ನಡುವಣ ಛತ್ತು ಕಮಲಾಲಂಕೃತವಾಗಿದ್ದು, ದೇವಕೋಷ್ಠದಲ್ಲಿ ಗಣಪತಿಯ ಶಿಲ್ಪವಿದೆ.

ಉಳಿದಂತೆ ಊರಿನಲ್ಲಿ ಚೌಡೇಶ್ವರಿ, ಮಾರಮ್ಮ, ಮುಂತಾದ ಗುಡಿಗಳಿದ್ದು, ಹುಲಿವಾನ ರಸ್ತೆಯಲ್ಲಿ ಹಲವಾರು ವೀರಗಲ್ಲುಗಳಿವೆ.

**ಡಿಂಕಾ (೧೬೪೩)** : ತಾಲೂಕು ಕೇಂದ್ರ ಪಾಂಡವಪುರದಿಂದ ೨೦ ಕಿ.ಮೀ. ಪಶ್ಚಿಮಕ್ಕಿದ್ದು, ದೇವಿಯು ಡಿಂಕಾಸುರನನ್ನು ಕೊಂದ ಕಾರಣ ಅವಳಿಗೆ ಡಿಂಕಾದಮ್ಮ ಎಂಬ ಹೆಸರು ಬಂತೆಂಬ ಸ್ಥಳೀಯ ಐತಿಹ್ಯವಿದೆ. ಇಲ್ಲಿಯ ಡಿಂಕಾದಮ್ಮನ ಗುಡಿಯಲ್ಲಿರುವ ಲಲಿತಾಸೀನ ಮಹಿಷಮರ್ಧಿನಿಯ ಕೆಂಪು ವರ್ಣದ ಉಗ್ರ ಶಿಲ್ಪವು ಕಟ್ಟಿಗೆಯದಾಗಿದ್ದು, ಯುಗಾದಿಯ ನಂತರ ಈ ದೇವಿಯ ಜಾತ್ರೆಯಾಗುತ್ತದೆ. ಊರ ಉತ್ತರಕ್ಕೆ ಹೊಲವೊಂದರಲ್ಲಿರುವ ಮಲ್ಲೇಶ್ವರ ಹಾಗೂ ವೀರಭದ್ರನ ಗುಡಿಗಳು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಪ್ರತ್ಯೇಕ ಗುಡಿಗಳಾಗಿದ್ದು, ಒಂದರಲ್ಲಿ ಶಿವಲಿಂಗವಿದ್ದರೆ, ಇನ್ನೊಂದರಲ್ಲಿ ವೀರಭದ್ರನ ಮೂರ್ತಿ ಇದೆ. ಈ ಗುಡಿಗಳ ಭಿತ್ತಿಯು ಅಲಂಕಾರಿಕ ಅರೆಗಂಬಗಳನ್ನು ಹೊಂದಿದ್ದು, ನಿರಾಡಂಬರವಾಗಿವೆ. ಇವು ಸುಮಾರು ೧೪ನೆಯ ಶತಮಾನದ ರಚನೆಯಾಗಿದ್ದು, ವೀರಭದ್ರನ ಗುಡಿಯ ಮೂರು ಮೂಲೆಗಳಲ್ಲಿರುವ ಏಕಂಕಣದ ಗರ್ಭಗೃಹಗಳು ಖಾಲಿ ಇವೆ. ಊರ ಅಗಸೆಯ ಬಳಿಯ ಹನುಮಂತನ ಗುಡಿಯಲ್ಲಿರುವ ಹನುಮ ಶಿಲ್ಪವು ವ್ಯಾಸರಾಜ ಪ್ರತಿಷ್ಠಿತವೆಂಬ ಅಭಿಪ್ರಾಯವಿದ್ದು, ಬಳಿಯಲ್ಲೇ ತುಳಸಿಕಟ್ಟೆ ಇದೆ. ಉಳಿದಂತೆ ಊರಲ್ಲಿ ಸುಂಕದ ಮಾರಮ್ಮ ಮುಂತಾದ ನವೀನ ಗುಡಿಗಳಿದ್ದು, ಹೆಬ್ಬಾಗಿಲು ಹಾಗೂ ತಿಪ್ಪೆಗುಂಡಿಯ ಬಳಿ ಸುಮಾರು ೧೬ನೇ ಶತಮಾನಕ್ಕೆ ಸೇರಿದ ಎಂಟು ವೀರಗಲ್ಲುಗಳಿವೆ.

**ತಿಪ್ಪೂರು :** 'ಅರೆ ತಿಪ್ಪೂರು, ಬಸ್ತಿ ತಿಪ್ಪೂರು' ಎಂದೇ ಪರಿಚಿತವಿರುವ ಇದು ಕೂಳಗೆರೆ ಕಂದಾಯ ಗ್ರಾಮಕ್ಕೇ ಸೇರಿದ ಉಪಗ್ರಾಮವಾಗಿದ್ದು, ಕೂಳಗೆರೆಯಿಂದ ಮೂರು ಕಿ.ಮೀ. ಉತ್ತರಕ್ಕೆ ಹಾಗೂ ತಾಲೂಕು ಕೇಂದ್ರ ಮದ್ದೂರಿನಿಂದ ೧೫ ಕಿ.ಮೀ. ಆಗ್ನೇಯಕ್ಕಿದೆ. ಗಂಗ-ಹೊಯ್ಸಳ ಶಾಸನಗಳಲ್ಲಿ ತಿಪ್ಪೂರು, ತಿಪ್ಪೆಯೂರು, ಎಂದೆಲ್ಲಾ ಉಲ್ಲೇಖಗೊಂಡಿರುವ ತಿಪ್ಪೂರು ಗ್ರಾಮನಾಮದ ಮೂಲ ತಿರುಪೆರೂರು ಆಗಿದ್ದು, ಇಲ್ಲಿ ತಿರು (ಶ್ರೀ) ಗೌರವ ಸೂಚಕವಾಗಿದ್ದು, ಪಿರಿಯಊರು, ಪೆರೂರು ಆಗಿದೆ. ಇಲ್ಲಿಗೆ ಮೂರ್‍ನಾಲ್ಕು ಕಿ.ಮೀ. ಅಂತರದಲ್ಲಿರುವ ಕೂಳಗೆರೆಯ ಕ್ರಿ.ಶ. ೯೧೭ರ ಶಾಸನದಲ್ಲಿ, ಸಗರ ಕುಲದ ಮಣಲಾರನು ಕನಕಗಿರಿ ತೀರ್ಥದ ಮೇಲೆ ಬಸದಿಯನ್ನು ನಿರ್ಮಿಸಿ, ಕನಕಸೇನ ಭಟಾರರಿಗೆ ತಿಪ್ಪೂರ ವಿವಿಧ ತೆರಿಗೆಗಳನ್ನು ದತ್ತಿ ಬಿಟ್ಟ ವಿವರವಿದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ಐದು ಶಾಸನಗಳಲ್ಲಿ ಜಿನಗುಡ್ಡದ ಮೇಲಿರುವ ಹೊಯ್ಸಳ ವಿಷ್ಣುವರ್ಧನನ ಕ್ರಿ.ಶ.೧೧೧೭ರ ಶಾಸನದಿಂದ, ದಂಡನಾಯಕ ಗಂಗರಾಜನು ತಾನು ವಿಷ್ಣುವರ್ಧನನಿಂದ ಉಂಬಳಿಯಾಗಿ ಪಡೆದಿದ್ದ ತಿಪ್ಪೂರನ್ನು ಧರ್ಮಗುರುಗಳಾದ ತಿಂತ್ರಿಣಿಗಚ್ಛದ ಮೇಘಚಂದ್ರ ಸಿದ್ಧಾಂತ ದೇವರಿಗೆ ದತ್ತಿ ಬಿಟ್ಟ ವಿಷಯ ಗೊತ್ತಾಗುತ್ತದೆ. ಅಲ್ಲೇ ಇರುವ ಜಿನಪೀಠದ ಶಾಸನವು, ಉಭಯ ಭಾಷಾ ಕವಿಚಕ್ರವರ್ತಿ ಕಂದರ್ಪದೇವ-ಸೊನ್ನಾದೇವಿಯರ ಮಗನಾದ ಬಾಳಚಂದ್ರದೇವನು, ತನ್ನ ಗುರುಗಳಿಗೆ ಪರೋಕ್ಷ ವಿನಯವಾಗಿ ತೀರ್ಥಂಕರ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಅಂಶ ಗೊತ್ತಾಗುವುದರ ಜೊತೆಗೆ ಬಾಳಚಂದ್ರದೇವ ಕವಿಯು ತಿಪ್ಪೂರಿನವನೆಂಬ ಮಹತ್ವದ ಅಂಶವೂ ವೇದ್ಯವಾಗುತ್ತದೆ.

ನಾಡಿನ ಪ್ರಸಿದ್ಧ ಜೈನ ಕೇಂದ್ರವಾದ ಶ್ರವಣಬೆಳಗೊಳದಷ್ಟೇ (ಹಾಸನ ಜಿಲ್ಲೆ) ಮಹತ್ವವನ್ನು ಪಡೆದಿದ್ದ ಈ ಊರು ಶ್ರವಣಬೆಳಗೊಳದಂತೆಯೇ ಎರಡು ಬೆಟ್ಟಗಳನ್ನು (ಕನಕಗಿರಿ (ಜಿನಗುಡ್ಡ) ಹಾಗೂ ಸವಣಪ್ಪನ ಗುಡ್ಡ) ಒಂದು ಕಿ.ಮೀ. ಅಂತರದಲ್ಲಿ ಹೊಂದಿದೆ. ಊರ ಸಮೀಪದ ಚಿಕ್ಕಬೆಟ್ಟವನ್ನು ನೆರೆಯ ಕೂಳಗೆರೆ ಶಾಸನ (ಕ್ರಿ.ಶ.೯೧೭) ಕನಕಗಿರಿ ತೀರ್ಥ ಎಂದೇ ಕರೆದಿದ್ದು, ಆ ತೀರ್ಥವಿರುವ ಪರಿಸರದಲ್ಲಿ ಗಂಗರ ಕಾಲದ ನಾಲ್ಕು ಬಸದಿಗಳಿದ್ದಿರಬಹುದೆಂಬ ವಿದ್ವಾಂಸರ ಅಭಿಪ್ರಾಯಕ್ಕೆ ಅಲ್ಲಿರುವ ಇಟ್ಟಿಗೆಯ ರಾಶಿ ಸಾಕ್ಷಿಯಾಗಿದ್ದು, ಹಳೆಯ ಬಸದಿಗಳ ತಳಪಾಯವನ್ನು ಗಮನಿಸಬಹುದಾಗಿದೆ. ತೀರ್ಥದಂಚಲ್ಲಿರುವ ಪಾರ್ಶ್ವನಾಥನ ಎರಡು, ಸುಪಾರ್ಶ್ವನಾಥ ಹಾಗೂ ರುಂಡರಹಿತ

ಮಹಾವೀರರ ಒಂದೊಂದು ಶಿಲ್ಪಗಳು, ಹಿಂದೆ ಅಲ್ಲಿ ಪಾರ್ಶ್ವನಾಥನ ಎರಡು, ಸುಪಾರ್ಶ್ವನಾಥ ಹಾಗೂ ಪಾರ್ಶ್ವನಾಥನ ಒಂದೊಂದು ಬಸದಿಗಳಿದ್ದುದಕ್ಕೆ ಕುರುಹಾಗಿವೆ. ಬೆಟ್ಟದ ಮೇಲೆ ಚಾಮರಧಾರಿ ದ್ವಾರಪಾಲಕರ ನಾಲ್ಕು ಹಾಗೂ ತೀರ್ಥಂಕರರ ಎರಡು ಶಿಲ್ಪಗಳಿದ್ದು, ತೀರ್ಥ (ದೋಣಿ)ದ ಒಂದು ಭಾಗದ ಬಂಡೆಯ ಮೇಲೆ ಚೌವ್ವೀಸ್ (೨೪) ತೀರ್ಥಂಕರರನ್ನು ಕೆತ್ತುವ ಯತ್ನವೇಕೋ ಅಪೂರ್ಣವಾಗಿದೆ. ಬಯಲು ಸಂಗ್ರಹಾಲಯವೆಂದೂ ಕರೆಯಬಹುದಾದ ಇದರ ಉತ್ತರಕ್ಕೆ ಒಂದು ಕಿ.ಮೀ. ಅಂತರದಲ್ಲಿರುವ ಸವಣಪ್ಪನ (ದೊಡ್ಡ) ಬೆಟ್ಟದ ಮೇಲೆ ನಿಂತಿರುವ ಸುಮಾರು ೧೨ ಅಡಿಯ ಬಾಹುಬಲಿ ಮೂರ್ತಿ (ಕ್ರಿ.ಶ.೯೧೮) ಬಹುದೂರದಿಂದಲೇ ಗೋಚರಿಸುತ್ತಿದ್ದು, ಶ್ರವಣಬೆಳಗೊಳದ ಗೊಮ್ಮಟಮೂರ್ತಿ (ಕ್ರಿ.ಶ. ೯೮೪) ಗಿಂತಲೂ ಹಳೆಯದಾಗಿದ್ದು, ಗಂಗರ ಕಾಲದ ಶಿಲ್ಪಗಳಿಗೆ ಉತ್ತಮ ಉದಾಹರಣೆಯಾಗಿದೆ. ಊರಲ್ಲಿರುವ ಜೈನೇಶ್ವರಿ ದೇವಾಲಯವು ಹಳೆ ಬಸದಿಯ ಅಧಿಷ್ಠಾನದ ಮೇಲೆ ನಿರ್ಮಿಸಿರುವ ನೂತನ ಕಟ್ಟಡವಾಗಿದ್ದು, ಒಳಗಿಂದು ಹೊನ್ನೆಮರದ ಲಿಂಗಾಕೃತಿಯನ್ನು ಆರಾಧಿಸಲಾಗುತ್ತದೆ. ಆದರೆ ಸ್ಥಳೀಯರು ನೀಡುವ ಶಿಲ್ಪ ವಿವರವನ್ನು ಗಮನಿಸಿದಾಗ ೨೩ನೆಯ ತೀರ್ಥಂಕರ ನೇಮಿನಾಥನ ಯಕ್ಷಿ ಅಂಬಿಕಾಳನ್ನು ಹಿಂದೆ ಇಲ್ಲಿ ಆರಾಧಿಸುತ್ತಿದ್ದರೆಂಬುದು ಗೊತ್ತಾಗುತ್ತಿದ್ದು, ಆ ಶಿಲ್ಪವನ್ನು ಮಂಡ್ಯಕ್ಕೆ ತೆಗೆದುಕೊಂಡು ಹೋದರೆಂದೂ ತಿಳಿದುಬರುತ್ತದೆ. ಜೈನೇಶ್ವರಿ ಗುಡಿಯಿರುವ ಸ್ಥಳವು ಹಿಂದೆ ನೇಮಿನಾಥ ಹಾಗೂ ಅಂಬಿಕಾ ಯಕ್ಷಿಯರ ಬಸದಿಯಾಗಿತ್ತೆಂದು ಊಹಿಸಬಹುದಾಗಿದ್ದು, ಅಲ್ಲಿರುವ ಗಂಗರ ಕಾಲದ ಸ್ತಂಭಗಳು ಜೈನ ಬಸದಿಯ ಪ್ರಾಚೀನತೆಯನ್ನು ಬಿಂಬಿಸುತ್ತವೆ. ಉಳಿದಂತೆ ಮಾರಮ್ಮನ ಗುಡಿ ಬಳಿ ಗಂಗರ ಕಾಲದ ಕಂಬಗಳಿದ್ದು ಅಲ್ಲಿರುವ ವಾಮನ ಮುದ್ರೆಕಲ್ಲು, ಶ್ರೀ ವೈಷ್ಣವ ಪ್ರಭಾವವನ್ನು ಸೂಚಿಸುತ್ತಿದ್ದು, ಊರ ಪ್ರವೇಶ ಭಾಗದಲ್ಲೇ ವಿಜಯನಗರ ಕಾಲದ ವೀರಗಲ್ಲುಗಳಿವೆ. **ಕೂಳಗೆರೆ (೨೮೬೬)** : ತಾಲೂಕು ಕೇಂದ್ರ ಮದ್ದೂರಿನಿಂದ ೧೬ ಕಿ.ಮೀ. ವಾಯವ್ಯಕ್ಕಿದ್ದು, ಕೆರೆ ಏರಿಯಲ್ಲಿರುವ ಕ್ರಿ.ಶ.೯೧೮ರ ಶಾಸನವು, ಗಂಗರಾಜ ನೀತಿಮಾರ್ಗ ಎರೆಯಂಗನ ಕಾಲಕ್ಕೆ ಸೇರಿದ್ದು, ಮಣಲಾರನು ಕನಕಗಿರಿ ತೀರ್ಥದ ಮೇಲೆ ಬಸದಿಯನ್ನು ನಿರ್ಮಿಸಿ, ಕನಕಸೇನ ಭಟಾರರಿಗೆ ತಿಪ್ಪೆಯೂರಿನ ವಿವಿಧ ತೆರಿಗೆಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಇದರಿಂದ ಕೂಳಗೆರೆ ಗ್ರಾಮವು ಹಿಂದೆ ತಿಪ್ಪೂರಿಗೆ ಸೇರಿದ್ದ ಅಂಶ ಗೊತ್ತಾಗುತ್ತದೆ. ಆದರೆ ಇಂದು ತಿಪ್ಪೂರು/ಅರೆ ತಿಪ್ಪೂರು, ಕೂಳಗೆರೆಗೆ ಸೇರಿದ ಉಪಗ್ರಾಮವಾಗಿದೆ. ಆ ಗ್ರಾಮದ ಮೊದಲ ಉಲ್ಲೇಖ ನೆರೆಯ ಹಾಗಲಹಳ್ಳಿಯ ಕ್ರಿ.ಶ.೧೩೬೨ರ ಶಾಸನದಲ್ಲಿ 'ಕೂಳಗೆರೆ' ಎಂದೇ ದಾಖಲಾಗಿದೆ. ಕೆರೆ ಬಳಿಯ ಈಶ್ವರ ಗುಡಿಯು ಜೀರ್ಣೋದ್ಧಾರಗೊಂಡಿದ್ದು, ಗಂಗರ ಕಾಲದ ವಿಶಿಷ್ಟ ಕಂಬಗಳು ಗುಡಿಯ ಮುಂಭಾಗದಲ್ಲಿವೆ. ಉಳಿದಂತೆ ಊರಲ್ಲಿ ಮಾರಮ್ಮ, ಪಟಲದಮ್ಮ, ಹೊಂಬಾಳಮ್ಮನ ಗುಡಿಗಳಿದ್ದು, ಕೆರೆಯ ಹೂಳನ್ನು ತೆಗೆಯುವ ಸಂದರ್ಭದಲ್ಲಿ ಅಲ್ಲಿದ್ದ ವೀರಗಲ್ಲುಗಳು ಕೆರೆ ಏರಿಯಲ್ಲಿ ಮುಚ್ಚಿಹೋಗಿವೆ. ಊರಾಚೆ ಹೊಳೆದಂಡೆಯಲ್ಲಿರುವ ಪ್ರಾಚೀನ ಈಶ್ವರ ಗುಡಿಯೂ ಶಿಥಿಲಗೊಂಡಿದೆ. **ಅರುವನಹಳ್ಳಿ (೧೮೫೩)** : ತಾಲೂಕು ಕೇಂದ್ರ ಮದ್ದೂರಿನಿಂದ ೧೪ ಕಿ.ಮೀ. ಆಗ್ನೇಯಕ್ಕೆ ಇಗ್ಗಲೂರು ಮಾರ್ಗದಲ್ಲಿದ್ದು, ಪ್ರಾಚೀನ ಶಾಸನಗಳಲ್ಲೂ 'ಅರುಹನಹಳ್ಳಿ' ಎಂದೇ ಉಲ್ಲೇಖಿತಗೊಂಡಿದ್ದು, ಈವರೆಗೆ ಕ್ರಿ.ಶ.೧೩೧೬–೧೫೪೯ ಕಾಲಾವಧಿಯ ೧೩ ಶಾಸನಗಳು ವರದಿಯಾಗಿವೆ. ಕೈವಾರದ ಸಂಗ್ರಾಮದಲ್ಲಿ ಸೇಉಣರ ವಿರುದ್ಧ ಹೋರಾಡಿ,ಆನೆಗಳನ್ನು ಸೆರೆಹಿಡಿದು ಮಹತ್ವದ ಪಾತ್ರ ವಹಿಸಿ ಹಲವಾರು ಬಿರುದುಗಳಿಗೆ ಪಾತ್ರನಾಗಿ, ತನ್ನ ಶೌರ್ಯದಿಂದ ಮುಮ್ಮಡಿ ಬಲ್ಲಾಳನನ್ನು ಮೆಚ್ಚಿಸಿ, ಅರುಹನಹಳ್ಳಿ ಗ್ರಾಮವನ್ನು ಉಂಬಳಿಯಾಗಿ ಪಡೆದ ಕೀರ್ತಿರಾಯನ ವಂಶಸ್ಥರ ಆಗುಹೋಗುಗಳನ್ನು ಈ ಶಾಸನಗಳು ದಾಖಲಿಸುತ್ತವೆ. ಬಹಳ ವಿಶಿಷ್ಟವಾದ ಇಲ್ಲಿಯ ಶಾಸನ ಹಾಗೂ ಶಾಸನ ಶಿಲ್ಪಗಳ ಸ್ವತಂತ್ರ ಅಧ್ಯಯನ ಆಗಬೇಕಿದೆ. ವಿವಿಧ ಸಂದರ್ಭಗಳಲ್ಲಿ ನಾನಾ ಕಾರಣಗಳಿಗಾಗಿ ನಿಲ್ಲಿಸಲ್ಪಟ್ಟ ಬೃಹತ್ ಗಾತ್ರದ ನಾಲ್ಕಾರು ಹಾಗೂ ಸಾಮಾನ್ಯ ಗಾತ್ರದ ಹತ್ತಾರು ವೀರಗಲ್ಲುಗಳೇ ಇಲ್ಲಿಯ ಆಕರ್ಷಣೆಯಾಗಿದ್ದು, ಇಲ್ಲಿರುವ ವೀರರ ಎರಡು ಗುಡಿಗಳು ವೀರಗಲ್ಲುಗಳಿಗೆ ಚಪ್ಪಡಿ ಒದಗಿಸಿ ಮಾಡಿರುವ ಕಲ್ಲುಗುಡಿಗಳಾಗಿವೆ.

ಅವುಗಳಲ್ಲೊಂದು ಕೀರ್ತಿರಾಯನ ಮಗ ಬಾಚಪ್ಪನದ್ದಾದರೆ ಇನ್ನೊಂದು ಕಂಪಣವೊಡೆಯನದಾಗಿದೆ. ಕಾಳಮ್ಮನ ಗುಡಿ ಬಳಿಯ ವೀರಗಲ್ಲಿನಲ್ಲಿರುವ ಆನೆಯ ಶಿಲ್ಪಕ್ಕೂ ಕ್ರಿ.ಶ.೧೩೧೬ರ ಶಾಸನದಲ್ಲಿ ಬರುವ ಕೀರ್ತಿರಾಯನು ಸೇಉಣರ ಆನೆಗಳನ್ನು ಬಂಧಿಸಿದ ಘಟನೆಗೂ ಏನಾದರೂ ಸಂಬಂಧವಿದೆಯೋ ಹೇಗೆಂದು ಪರಿಶೀಲಿಸಬೇಕಿದೆ. ಆಂಜನೇಯ ಗುಡಿಯ ಆವರಣದಲ್ಲಿ ಪತ್ತು, ವಿವಿಧ ಹಿತ್ತಿಲುಗಳಲ್ಲಿ ನಾಲ್ಕಾರು ವೀರಗಲ್ಲು–ಮಾಸ್ತಿಕಲ್ಲುಗಳಿದ್ದು, ಅವುಗಳಲ್ಲೊಂದು ಹುಲಿಬೇಟೆ ವೀರಗಲ್ಲಾಗಿದೆ. ಉಳಿದಂತೆ ಊರಲ್ಲಿ ಮಾರಮ್ಮ, ಆಂಜನೇಯ, ಕಾಳಮ್ಮನ ಗುಡಿಗಳಿದ್ದು, ಆಂಜನೇಯ ಗುಡಿ ಆವರಣದಲ್ಲಿ ಕ್ರಿ.ಶ.೧೫೬೯ರಲ್ಲಿ ನಿರ್ಮಾಣಗೊಂಡಿರುವ ತುಳಸಿಕಟ್ಟೆ (ವೃಂದಾವನ)ಯೂ ಇದೆ.

**ದಡಗ (೮೫೦)** : ತಾಲೂಕು ಕೇಂದ್ರ ನಾಗಮಂಗಲದಿಂದ ೧೨ ಕಿ.ಮೀ. ವಾಯವ್ಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ ದಡಿಗನಕೆರೆ (ಕ್ರಿ.ಶ.೧೨೮೫), ದಿಂಡಿಗನಕೆರೆ (ಕ್ರಿ.ಶ. ಅಳೀಸಂದ್ರ ೧೧೧೪), ದಡಿಗವಾಡಿ, ದಡಿಗ ಎಂದೆಲ್ಲಾ ಉಲ್ಲೇಖಿತ ಗೊಂಡಿದೆ. ಗಂಗ ಅರಸ ದಡಿಗನಿಂದ ಈ ಊರು ಸ್ಥಾಪಿಸಲ್ಪಟ್ಟಿದ್ದರಿಂದ ದಡಗ ಎಂಬ ಹೆಸರು ಇದಕ್ಕೆ ಬಂದಿರುವಂತೆ ತೋರುತ್ತದೆ. ಹಿಂದೆ ಕಲ್ಕುಣಿ ನಾಡೊಳಗಿದ್ದು, ಚೋಳರ ತಮಿಳು ಶಾಸನಗಳಲ್ಲಿ ಬರುವ ದಡಿಗಪಾಡಿ ಆಡಳಿತ ವಿಭಾಗ ಇದೇ ಆಗಿರುವಂತೆ ತೋರುತ್ತದೆ. ಮಿಗಿಲಾಗಿ ಇದು ಅನಾದಿ ಅಗ್ರಹಾರವೂ ಆಗಿದ್ದ ಅಂಶ ಬೆಳ್ಳೂರು (ಕ್ರಿ.ಶ.೧೨೭೯) ಹಾಗೂ ದಡಗ (ಕ್ರಿ.ಶ.೧೨೮೫, ಕ್ರಿ.ಶ.೧೪೦೦)ದ ಶಾಸನಗಳಿಂದ ಗೊತ್ತಾಗುತ್ತದೆ. ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಹೊಯ್ಸಳ ವಿಷ್ಣುವರ್ಧನನ ಕಾಲದ ತೇದಿರಹಿತ ಶಾಸನ, ಮರಿಯಾನೆ–ಭರತಮಯ್ಯ ದಂಡನಾಯಕ ಸೋದರರು ಮತ್ತವರ ಮಡದಿಯರಾದ ಜಕ್ಕಲೆ–ಹರಿಯಬ್ಬೆಯರು ಸಂಯುಕ್ತವಾಗಿ ದೇಶೀಯ ಗಣದ ನಾಲ್ಕು ಹಾಗೂ ಕಾಣೂರು ಗಣದ ಒಂದು ಬಸದಿಗಳನ್ನೊಳಗೊಂಡ ಪಂಚ ಬಸದಿಯ ಬಾಹುಬಲಿಕೂಟವನ್ನು ಜವಳಿಗೆಯ ಮುನಿಭದ್ರ ಸಿದ್ಧಾಂತ ದೇವರ ಶಿಷ್ಯರಾದ ಮೇಘಚಂದ್ರ ಸಿದ್ಧಾಂತ ದೇವರಿಗೆ ಅರ್ಪಿಸಿ, ದತ್ತಿ ಬಿಟ್ಟಿದ್ದನ್ನು ದಾಖಲಿಸುತ್ತದೆ. ಆದರೆ ಇಲ್ಲಿಯ ಶಾಂತಿನಾಥ ಬಸದಿಯು ಕೇವಲ ಗರ್ಭಗೃಹ ಮತ್ತು ವಿಶಾಲವಾದ ನವರಂಗವನ್ನು ಹೊಂದಿದ್ದು, ಪೂರ್ಣ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಲ್ಲಿ ಶಾಂತಿನಾಥನ ಬಿಂಬವೂ ಸೇರಿದಂತೆ ವಿವಿಧ ತೀರ್ಥಂಕರರ ಕಿರುಶಿಲ್ಪಗಳೊಡನೆ ಕಂಚಿನ ಶಿಲ್ಪವೂ ಇದೆ. ಚೆನ್ನಿಗರಾಯ ಗುಡಿಯ ತೊಲೆಯಲ್ಲಿರುವ ಕ್ರಿ.ಶ.೧೨೮೫ರ ತ್ರುಟಿತ ಶಾಸನವು ಅನಾದಿ ಅಗ್ರಹಾರ ದಡಿಗನಕೆರೆಯ ಚನ್ನಕೇಶವ ದೇವರಿಗೆ ದಾನ ಬಿಟ್ಟು, ಐದು ಹಣ ವೆಚ್ಚದಲ್ಲಿ ಗುಡಿಗೆ ವಿಮಾನ (ಶಿಖರ) ನಿರ್ಮಿಸಿದ್ದನ್ನು ತಿಳಿಸಿದರೆ, ಅಲ್ಲೇ ಇರುವ ಸುಮಾರು ೧೪ನೆಯ ಶತಮಾನದ ಇನ್ನೊಂದು ಶಾಸನ, ಸುತ್ತಾಲಯದ ಕಲ್ಲು ಕೆಲಸಕ್ಕೆಂದು ಪತ್ತಂಗಿ ವೀರಪಿಳ್ಳನ ಹೆಂಡತಿಯು ನೀಡಿದ ದಾನವನ್ನು ದಾಖಲಿಸಿದೆ. ಇದೇ ಕಾಲದ ಇನ್ನೊಂದು ಶಾಸನ ಲಕ್ಷ್ಮೀದೇವಿಯ ಪ್ರತಿಷ್ಠಾಪನೆಯನ್ನೂ ದಾಖಲಿಸಿದೆ. ಊರ ನಡುವೆ ಇರುವ ಚಲುವನಾರಾಯಣ ಗುಡಿಗೆ ಗರ್ಭಗೃಹ, ಅಂತರಾಳ ಹಾಗೂ ೨೪ ಕಂಬಗಳ ವಿಶಾಲವಾದ ನವರಂಗವಿದ್ದು, ಮುಂದೆ ಕೈಸಾಲೆ ಮಂಟಪವಿದೆ. ಅಂತರಾಳದಲ್ಲಿ ರಾಮಾನುಜ ಶಿಲ್ಪವಿದ್ದು, ತೋರಣದಲ್ಲಿ ಕಿರುಶಿಲ್ಪಗಳಿವೆ. ಊರಾಚೆ ಕೆರೆದಂಡೆ ಬಳಿಯ ಮಂಟಪದಲ್ಲಿರುವ ಕೇಶವನ ಆಳೆತ್ತರದ ಸುಂದರ ಶಿಲ್ಪವು ಮೂಲತ: ಈ ಗುಡಿಗೆ ಸಂಬಂಧಿಸಿದ್ದು, ಸಂರಕ್ಷಣೆ ಆಗಬೇಕಾಗಿದೆ. ಕ್ರಿ.ಶ.೧೫೫೧೪ರ ಶಾಸನವು ಹಲಗೆಕಾರನಾಥ (ಇಂದಿನ ವೀರಭದ್ರ)ನಿಗೆ ಪೆರುಮಾಳಹಳ್ಳಿಯಲ್ಲಿ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಜೀರ್ಣೋದ್ಧಾರಗೊಂಡಿರುವ ಈ ಗುಡಿಯಲ್ಲಿ ವೀರಭದ್ರನ ಶಿಲ್ಪವಿದೆ.

ಒಂದನೆಯ ರಾಜೇಂದ್ರ ಚೋಳನ ಕಾಲಕ್ಕೆ ಸೇರಿದ ಯೋಗಾನರಸಿಂಹನ ಗುಡಿಯು ಸುಮಾರು ೧೦೨೦ರಲ್ಲಿ ನಿರ್ಮಾಣಗೊಂಡಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಒಳಗೆ ನರಸಿಂಹನ ಯೋಗಮುದ್ರಾ ಶಿಲ್ಪವಿದೆ. ಅನತಿ ದೂರದಲ್ಲಿರುವ ಸುಮಾರು ೧೨ನೆಯ ಶತಮಾನಕ್ಕೆ ಸೇರಿದ ಸೋಮೇಶ್ವರ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗ ಹಾಗೂ ನಂದಿಗಳಿದ್ದು, ನವರಂಗವು ಸಂಪೂರ್ಣ ಹಾಳಾಗಿದೆ. ಉಳಿದಂತೆ ಊರಿನಲ್ಲಿ ಆಂಜನೇಯ,ಮಾರಮ್ಮ, ಮಾಸ್ತ್ಯಮ್ಮ, ಕೊಲ್ಲಾಪುರದಮ್ಮ ಮುಂತಾದ ಗುಡಿಗಳಿವೆ.

**ದುದ್ದ (೧೭೭೯)** : ತಾಲೂಕು ಕೇಂದ್ರ ಮಂಡ್ಯದಿಂದ ೧೫ ಕಿ.ಮೀ.ವಾಯವ್ಯಕ್ಕೆ ಮೇಲುಕೋಟೆ ರಸ್ತೆಯಲ್ಲಿರುವ ಹೋಬಳಿ ಕೇಂದ್ರ. ಅಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇಲ್ಲಿಯ ಲಕ್ಷ್ಮೀನರಸಿಂಹನ ಗುಡಿಗೆ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿದ್ದು, ಇತ್ತೀಚೆಗೆ ಪೌಳಿ ಗೋಡೆಯನ್ನೂ ನಿರ್ಮಿಸಲಾಗಿದೆ. ನಡುಕೇರಿ ನರಸಿಂಹ ಎಂದೇ ಕರೆಯಲ್ಪಡುವ ಇದು ಹೊಯ್ಸಳರ ಕಾಲದ ರಚನೆಯಾಗಿದ್ದು, ಗರ್ಭಗೃಹದಲ್ಲಿ ಲಲಿತಾಸೀನ ಚತುರ್ಭುಜಧಾರಿ ನರಸಿಂಹನ ಎಡತೊಡೆಯ ಮೇಲೆ ಲಕ್ಷ್ಮಿಯು ಅಸೀನಳಾಗಿದ್ದು, ರಾಮಾನುಜರ ಶಿಲ್ಪವಿರುವ ಅಂತರಾಳದ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು, ನವರಂಗದಲ್ಲಿ ಗರುಡ ವಾಹನವಿದೆ. ಈ ದೇವರ ಕಲ್ಯಾಣೋತ್ಸವವೂ ವರ್ಷಂಪ್ರತೀ ಜೂನ್ ತಿಂಗಳಲ್ಲಿ ಜರುಗುತ್ತದೆ. ಊರಾಚೆ ಬೆಟ್ಟಳ್ಳಿ ರಸ್ತೆಯಲ್ಲಿ, ಕೆರೆ ದಂಡೆಯಲ್ಲಿರುವ ಹೊಯ್ಸಳರ ಕಾಲದ ಸೋಮೇಶ್ವರ ಗುಡಿಯು ಪಾಳು ಬಿದ್ದಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿರುವ ಇದರ ಛತ್ತುಗಳು ಕಮಲಾಲಂಕೃತವಾಗಿದ್ದು, ಬಾಗಿಲವಾಡಗಳು ಪಂಚಶಾಖಾಲಂಕೃತವಾಗಿದ್ದು, ಗರ್ಭಗೃಹದಲ್ಲಿ ಶಿವಲಿಂಗ ಹಾಗೂ ನಂದಿಗಳಿವೆ. ದೇವಾಲಯದ ಭಿತ್ತಿಯಲ್ಲಿ ದೇವಕೋಷ್ಠ ಹಾಗೂ ಕಿರುಶಿಖರಗಳಿದ್ದು, ಪೂರ್ಣ ಹಾಳಾಗಿದೆ. ಗುಡಿಗೆ ಅನತಿ ದೂರದಲ್ಲಿ ಪಾಳು ಮಂಟಪವಿದೆ. ಅಲ್ಲೇ ಇರುವ ಗಣಪತಿ ಗುಡಿಯಲ್ಲಿ ಹೊಯ್ಸಳರ ಕಾಲದ ಗಣಪತಿ ಹಾಗೂ ಸಪ್ತಮಾತೃಕಾ ಪಟ್ಟಿಕೆಗಳಿವೆ. ಕೆರೆಯ ಬಳಿ ಸ್ಥಳವೊಂದನ್ನು ತೋರಿಸಿ ಹಿಂದೆ ದುದ್ದ ಹಾಗೂ ಬಸರಾಳಿನ ಪಾಳೇಗಾರರ ನಡುವೆ ನಡೆದ ಶೀತಲಯುದ್ಧ, ಬಸರಾಳಿನ ಪಾಳೇಗಾರನನ್ನು ಕರೆಸಿ, ಬಂಧಿಸಿ, ಶಿರಚ್ಛೇಧನ ಮಾಡಿ, ಅವನ ರಾಣಿಯನ್ನು ವಂಚಿಸಿ ಪಡೆಯಲು ದುದ್ದದ ಪಾಳೇಗಾರ ಮಾಡಿದ ವಿಫಲ ಯತ್ನ, ಕಡೆಗೆ ದುದ್ದದ ಹೆಬ್ಬಾಗಿಲ ಬಳಿ ಶಪಿಸಿ ಆತ್ಮಾಹುತಿ ಮಾಡಿಕೊಂಡ ಬಸರಾಳಿನ ಪಾಳೇಗಾರ್ತಿ ಹಾಗೂ ಕರುಗಲ್ಲಿಗಾಗಿ ದುದ್ದ-ಬಸರಾಳು ಪಾಳೇಪಟ್ಟುಗಳು ಹಾಳಾದುದರ ಬಗ್ಗೆ ಹೇಳುವ ಜನಪದ ಕಥೆಗಳು ಗಮನಾರ್ಹವಾಗಿದ್ದು, ಅವುಗಳ ಐತಿಹಾಸಿಕತೆಯನ್ನು ಖಚಿತ ಪಡಿಸಿಕೊಳ್ಳಬೇಕಾಗಿದೆ.

ಊರಾಚೆ ಇರುವ ಹೊಯ್ಸಳರ ಕಾಲದ ಚೌಡೇಶ್ವರಿ ಗುಡಿಯ ಗರ್ಭಗೃಹವಷ್ಟೇ ಉಳಿದಿದ್ದು, ಒಳಗೆ ನಾಲ್ಕು ಅಡಿ ಎತ್ತರದ ಅಸೀನ ದುರ್ಗಿಯ ಶಿಲ್ಪವಿದೆ. ಹಿಂದೆ ಇದು ೨೪ ಹಳ್ಳಿಗಳ ಮೇಲೆ ಹಿಡಿತ ಹೊಂದಿದ್ದ ಕಟ್ಟೆಮನೆಯಾಗಿತ್ತು. ಇಲ್ಲಿಯ ವೆಂಕಟನರಸಯ್ಯ ಶೆಟ್ಟರ ಮನೆಯಲ್ಲಿರುವ ೨೪ ಅಂಗುಲ ಉದ್ದದ ದೇಶಿಕರ ಕಂಚಿನ ಸೌಟು (ಛಲವಾದಿಗಳ ಗಂಟೆ ಬಟ್ಟಲು) ಕಲಾತ್ಮಕವಾಗಿದೆ. ಹಿಂದೆ ಈ ಸೌಟಿಗೂ ಕಟ್ಟೆಮನೆಯ ಎಲ್ಲಾ ೨೪ ಹಳ್ಳಿಗಳಿಗೂ ಸಂಬಂಧವಿದ್ದು, ಹಬ್ಬ-ಹರಿದಿನ, ಮದುವೆ, ಮುಂಜಿ, ಜಾತ್ರೆ, ಉತ್ಸವ ಸಂದರ್ಭಗಳಲ್ಲಿ ಮೂರು ಪಾವು ಹಿಡಿಯುವ ಈ ಸೌಟಿನಿಂದ ಪಡಿ ಸಂಗ್ರಹಿಸಲಾಗುತ್ತಿತ್ತು. ಅದರ ಬಾಯನ್ನು ಎರಡೂ ಕಡೆಯಿಂದಲೂ ಸುಂದರವಾದ ಹಂಸಗಳು ಹಿಡಿದಂತಿದ್ದು, ಕಲಾತ್ಮಕ ಸೌಟಿನ ಹಿಡಿ ಹಾಗೂ ಬಾಯಿಗಳ ನಡುವೆ, ನಾಗರಹೆಡೆಯನ್ನು ಧರಿಸಿರುವ ಸೋಮೇಶ್ವರ ಲಿಂಗ-ನಂದಿಗಳಿವೆ. ಬದಿಯಲ್ಲೇ ಕುದುರೆ (ರಾಜತ್ವ), ತಕ್ಕಡಿ (ವರ್ತಕ), ನೇಗಿಲು (ಒಕ್ಕಲಿಗ), ಜನಿವಾರ (ಬ್ರಾಹ್ಮಣ), ಅಡಿಗಲ್ಲು (ಆಚಾರಿ), ಪೀಠ (ಕಟ್ಟೆಮನೆ), ಕತ್ತರಿ (ಕುರುಬ), ಬಲೆ (ಬೆಸ್ತ), ಅಡಿಗಲ್ಲು (ಕಮ್ಮಾರ), ಚಕ್ರ (ಕುಂಬಾರ), ಉಪ್ಪಾರ, ಬಡಗಿ, ದರ್ಜಿ ಮೋಚಿ, ಹಜಾಮ, ಮಡಿವಾಳ ಮತ್ತು ಹೊಲೆಯ (ನಗಾರಿ) ಹೀಗೆ ಗ್ರಾಮಗಳಲ್ಲಿ ಹಿಂದೆ ವಾಸಿಸುತ್ತಿದ್ದ, ೧೮ ಜಾತಿಯವರ ವೃತ್ತಿ ಚಿಹ್ನೆಗಳನ್ನು ಸಾಂಕೇತಿಕವಾಗಿ ಎರಕ ಹೊಯ್ಯಲಾಗಿದೆ. ಸೌಟಿನ ಹಿಡಿಯ ಆಯಕಟ್ಟಿನಲ್ಲಿರುವ ಪೊಳ್ಳೆಯಲ್ಲಿ ದೀಪ ಬೆಳಗಿಸಬಹುದಾಗಿದ್ದು, ಸಣ್ಣ ಸರಪಳಿಯಿಂದ ಇಳಿಬಿಟ್ಟ ಕಿರು ಗಂಟೆಯೂ ಇದೆ. ಜನಪದ ಸಂಪ್ರದಾಯವನ್ನು ಬಿಂಬಿಸುವ, ವಸ್ತು ಸಂಗ್ರಹಾಲಯದಲ್ಲಿರಬೇಕಾದ ಇದೊಂದು ಅಪೂರ್ವ ಜನಪದ ವಸ್ತುವಾಗಿದೆ. ಹಿಂದೆ ಇಲ್ಲಿ ಕೋಟೆ ಇದ್ದಿತ್ತಾದರೂ ಇಂದು ಏನೇನೂ ಉಳಿದಿಲ್ಲ. ಉಳಿದಂತೆ ಊರಲ್ಲಿ ರಾಮ, ವೀರಭದ್ರ, ಆಂಜನೇಯ, ಲಕ್ಷ್ಮೀದೇವಿ, ಮಾರಮ್ಮ, ಹೊಂಬಾಳಮ್ಮ, ಪಟಲದಮ್ಮ ಮುಂತಾದ ಗುಡಿಗಳಿವೆ.

**ದೇವರಹಳ್ಳಿ (೧೫೨)** : ತಾಲೂಕು ಕೇಂದ್ರ ನಾಗಮಂಗಲದಿಂದ ೧೮ ಕಿ.ಮೀ. ಈಶಾನ್ಯಕ್ಕಿದ್ದು, ಈವರೆಗೆ ಒಂಬತ್ತು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಗ್ರಾಮಸ್ಥರೊಬ್ಬರಲ್ಲಿದ್ದ ಕ್ರಿ.ಶ.೭೭೬ರ ತಾಮ್ರ ಶಾಸನವು ಗಂಗ ಅರಸ ಶ್ರೀಪುರುಷನ ಆಳ್ವಿಕೆಯಲ್ಲಿ ಬಾಣ ವಂಶದ ಪೃಥ್ವಿ ನಿರ್ಗುಂದರಾಜನ ಮಡದಿ, ಸಗರ ಕುಲದ ಕುಂದಚ್ಚಿಯು, ಶ್ರೀಪುರದಲ್ಲಿ ಲೋಕತಿಲಕ ಬಸದಿಯನ್ನು ನಿರ್ಮಿಸಿ, ಅದರ ಪೂಜಾವಿಧಿಗೆಂದು ಪೊನ್ನಳ್ಳಿ ಗ್ರಾಮವನ್ನು ದತ್ತಿ ಬಿಡಿಸಿದ ಅಂಶವನ್ನು ದಾಖಲಿಸಿದ್ದು, ಮಹಿಳೆಯೋರ್ವಳು ಬಸದಿ ನಿರ್ಮಿಸಿದ ಮೊದಲ ಉಲ್ಲೇಖ ಇದಾಗಿದೆ. ಆದರೆ ಈ ಶಾಸನಕ್ಕೂ ದೇವರಹಳ್ಳಿಗೂ ಏನೇನೂ ಸಂಬಂಧವಿಲ್ಲ. ಇಲ್ಲಿಯ ಶಾಸನಗಳಿಂದ ತಿರುಮಲದೇವರ (ತಾಪಸಿರಾಯ) ಗುಡಿ ಇರುವ ದೇವರಹಳ್ಳಿಯು ಹಿಂದೆ ದೇವಲಾಪುರ ಸ್ಥಳಕ್ಕೆ ಸೇರಿದ ಮಲನಾಯಕನಹಳ್ಳಿಯ ಒಂದು ಭಾಗವಾಗಿದ್ದ ಅಂಶ ವ್ಯಕ್ತವಾಗುತ್ತಿದ್ದು, ೧೯ನೆಯ ಶತಮಾನದಿಂದೀಚೆಗೆ ದೇವರಹಳ್ಳಿಯ ಸ್ವತಂತ್ರ ಉಲ್ಲೇಖ ಕಾಣಿಸಿಕೊಳ್ಳುತ್ತದೆ.

ಊರ ಅಗಸಿ ಬಳಿ ಇರುವ ತಪಸಿರಾಯನ (ಶಾಸನೋಕ್ತ ತಿರುಮಲದೇವರ) ಗುಡಿಯು ಸುಮಾರು ೧೫ ನೆಯ ಶತಮಾನದ್ದಾಗಿದ್ದು, ಇದನ್ನು ನೆರೆಯ ಮುತ್ಸಂದ್ರ (ಕ್ರಿ.ಶ. ೧೪೪೪) ಹಾಗೂ ಮಾದಿಹಳ್ಳಿ (ಕ್ರಿ.ಶ. ೧೪೫೭)ಯ ಶಾಸನಗಳು ಖಚಿತಪಡಿಸುತ್ತವೆ. ದ್ರಾವಿಡ ಶಿಖರವಿರುವ ಪ್ರಧಾನ ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ಸ್ಥಾನಕ ಭಂಗಿಯ ಶ್ರೀನಿವಾಸನ ಆಳೆತ್ತರದ ಸುಂದರ ಶಿಲ್ಪವಿದ್ದು, ಎಡಭಾಗದಲ್ಲಿರುವ ಅಮ್ಮ (ಲಕ್ಷ್ಮಿ)ನವರ ಗುಡಿಯನ್ನು ವಿರೂಪಣ್ಣ ನಾಯಕನು ನಿರ್ಮಿಸಿ ದತ್ತಿ ಬಿಟ್ಟಿದ್ದನ್ನು ಕ್ರಿ.ಶ.೧೫೨೯ರ ಶಾಸನ ದಾಖಲಿಸಿದೆ. ಅಂತರಾಳದಲ್ಲಿ ಎದುರುಬದುರಾಗಿರುವ ಗರ್ಭಗೃಹಗಳಲ್ಲಿ ರಾಮಾನುಜ ಹಾಗೂ ಇತರ ಆಳ್ವಾರರ ಶಿಲ್ಪಗಳಿವೆ. ಅಲ್ಲೇ ಇರುವ ಶ್ರೀದೇವಿ–ಭೂದೇವಿಯರೊಡಗೂಡಿದ ವಿಷ್ಣುವಿನ ಪಂಚಲೋಹದ ಉತ್ಸವಮೂರ್ತಿಯೂ ಆಕರ್ಷಕವಾಗಿದೆ. ನವರಂಗದ ಛತ್ತನ್ನು ಕಮಲದಿಂದ ಅಲಂಕರಿಸಲಾಗಿದ್ದು, ಮುಂದೆ ಮುಖಮಂಟಪ ಹಾಗೂ ಪಾತಾಳಾಂಕಣಗಳಿವೆ. ಗುಡಿಯನ್ನು ಬಳಸಿ ಎರಡು ಸುತ್ತಿನ ಪ್ರಾಕಾರವಿದ್ದು, ಮುಂದೆ ವಿಶಾಲವಾದ ತೆರೆದ ಕೈಸಾಲೆ ಮಂಟಪವಿದೆ. ಸುಮಾರು ೧೬ನೆಯ ಶತಮಾನಕ್ಕೆ ಸೇರಿದೊಂದು ಶಾಸನ, ೧೯೬೩ ಹೊನ್ನಿನ ವೆಚ್ಚದಲ್ಲಿ ಲಕ್ಕಪ್ಪನಾಯಕನು ಇಲ್ಲಿ ಎರಡಂಕಣಗಳನ್ನು ನಿರ್ಮಿಸಿದ್ದನ್ನು ದಾಖಲಿಸಿದೆ. ಈ ಗುಡಿಯ ನಿರ್ಮಾಣದಲ್ಲಿ ಎತ್ತರದ ಕಂಬಗಳನ್ನು ಬಳಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಸುಮಾರು ೨೦ ಅಡಿ ಎತ್ತರದ ಗರುಡ ಸ್ತಂಭವಿದೆ. ಈ ದೇವರ ಜಾತ್ರೆಯು ಸಂಕ್ರಾಂತಿಯಲ್ಲಿ ಜರುಗುತ್ತದೆ. ಉಳಿದಂತೆ ಊರಲ್ಲಿ ಆಂಜನೇಯ, ಬಾಣಮ್ಮ ಮುಂತಾದ ನವೀನ ಗುಡಿಗಳಿವೆ.

**ದೇವಲಾಪುರ (೨೦೬೪)** : ತಾಲೂಕು ಕೇಂದ್ರ ನಾಗಮಂಗಲದಿಂದ ೧೪ ಕಿ.ಮೀ. ಪೂರ್ವಕ್ಕಿರುವ ಹೋಬಳಿ ಕೇಂದ್ರ. ಪ್ರಾಚೀನ ಶಾಸನಗಳಲ್ಲಿ 'ದೇವಲಾಪುರ' ಎಂದೇ ಉಲ್ಲೇಖಿತಗೊಂಡಿದ್ದು, ನೆರೆಯ ಮುತ್ಸಂದ್ರ (ನಿರ್ವಸತಿ) ಗ್ರಾಮದ ಕ್ರಿ.ಶ.೧೪೪೪ರ ಶಾಸನದಲ್ಲಿ ಇದರ ಮೊದಲ ಉಲ್ಲೇಖ ಕಂಡುಬರುತ್ತಿದ್ದು, ಈವರೆಗೆ ಆರು ಶಾಸನಗಳು ಇಲ್ಲಿಂದ ವರದಿಯಾಗಿವೆ. ಇಲ್ಲಿಯ ಲಕ್ಷ್ಮೀನಾರಾಯಣನ ಗುಡಿಯ ಮಹಾದ್ವಾರದ ಎಡಗೋಡೆಯ ಮೇಲಿರುವ ಕ್ರಿ.ಶ. ೧೪೭೨ರ ಶಾಸನ, ಚಿಕ್ಕ ಅಲ್ಲಪ್ಪನಾಯಕನು ಗೋಪಿನಾಥದೇವರಿಗೆ, ಲಕ್ಷ್ಮೀಕಾಂತ ದೇವರ ಸನ್ನಿಧಿಯಲ್ಲಿ ಧಾರೆಯನ್ನೆರೆದು ದಾನಕೊಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ಕ್ರಿ.ಶ. ೧೪೬೩ ಹಾಗೂ ಕ್ರಿ.ಶ. ೧೪೮೩ರ ಇನ್ನೆರಡು ಶಾಸನಗಳು ಲಕ್ಷ್ಮೀಕಾಂತ ದೇವರ ವಸ್ತ್ರಾಲಂಕಾರಕ್ಕೆಂದು ಮಗ್ಗದೆರೆಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿವೆ. ದೇವರಹಳ್ಳಿ ರಸ್ತೆಯಲ್ಲಿರುವ ಪಟ್ಟಲದಮ್ಮನ ಗುಡಿಯು ಪ್ರಸಿದ್ಧವಾಗಿದ್ದು, ಊರ ನಡುವೆ ಬ್ರಾಹ್ಮಣರ ಬೀದಿಯಲ್ಲಿರುವ ಲಕ್ಷ್ಮೀನಾರಾಯಣ (ಶಾಸನೋಕ್ತ ಲಕ್ಷ್ಮೀಕಾಂತ) ಗುಡಿಯು ವಿಶಾಲವಾದ ಪ್ರಾಕಾರದೊಳಗೆ ಪೂರ್ವಾಭಿಮುಖವಾಗಿ ನಿಂತಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಮೂಲ ಗುಡಿಯು

ಹೊಯ್ಸಳರ ಆಳ್ವಿಕೆಯ ಅಂತ್ಯಭಾಗದ ರಚನೆಯಾಗಿದ್ದು, ಒಳಗೆ ಆಳೆತ್ತರದ ಲಕ್ಷ್ಮೀನಾರಾಯಣನ ಶಿಲ್ಪವಿದೆ. ನವರಂಗದ ನಡುವಣ ಛತ್ತಲ್ಲಿ ಕಮಲವಿದ್ದು, ಈ ದೇವಾಲಯದ ಪ್ರಾಕಾರ, ಮಹಾದ್ವಾರ ಹಾಗೂ ದೀಪಸ್ತಂಭಗಳನ್ನು ಚಿಕ್ಕ ಅಲ್ಲಪ್ಪನಾಯಕನು ಕ್ರಿ.ಶ.೧೪೭೨ರಲ್ಲಿ ನಿರ್ಮಿಸಿದನೆಂದು ಅಲ್ಲೇ ಇರುವ ಶಾಸನವೊಂದು ತಿಳಿಸುತ್ತದೆ. ದೇವಾಲಯದ ಭಿತ್ತಿಯ ಕಿರುಕೋಷ್ಠ ಹಾಗೂ ಅರೆಕಂಬಗಳು ನಿರಾಡಂಬರವಾಗಿದ್ದು, ಗರ್ಭಗೃಹಕ್ಕೆ ಸುಮಾರು ೧೭ನೆಯ ಶತಮಾನದ ಇಟ್ಟಿಗೆಯ ಶಿಖರವಿದ್ದು, ಗುಡಿಯ ಮುಂದೆ ಎತ್ತರದ ದೀಪಸ್ತಂಭವಿದೆ. ಇದರ ಎಡಭಾಗದಲ್ಲಿರುವ ಕಿರುಗುಡಿಯಲ್ಲಿ ಲಕ್ಷ್ಮಿ, ರಾಮಾನುಜ ಹಾಗೂ ಭಾಷ್ಯಾಕಾರರ ಶಿಲ್ಪಗಳಿದ್ದು, ಈ ಗುಡಿಗೂ ಇಟ್ಟಿಗೆಯ ಶಿಖರವಿದೆ. ಊರ ಪ್ರವೇಶದಲ್ಲೇ ಕಮಾನಿನಿಂದ ಕೂಡಿದ ಮಹಾದ್ವಾರವನ್ನು ನೂತನವಾಗಿ ನಿರ್ಮಿಸಲಾಗಿದೆ. ಸಂಪೂರ್ಣ ಆಧುನೀಕರಣಗೊಂಡಿರುವ ಪಟ್ಟಲದಮ್ಮನ ಗುಡಿಯಲ್ಲಿರುವ ಪಟ್ಟಲದಮ್ಮನ ಮೂರ್ತಿಯೂ ಉಲ್ಲೇಖಾರ್ಹವಾಗಿದ್ದು, ಯುಗಾದಿಯಾದ ಹದಿನೈದು ದಿನಕ್ಕೆ ಈ ದೇವಿಯ ಜಾತ್ರೆಯಾಗುತ್ತದೆ. ಊರಾಚೆ ವಿಶಾಲವಾದ ಕೆರೆಯ ಉತ್ತರ ಗುಡ್ಡದ ಮೇಲಿರುವ ಕೋಡಿ ತಿಮ್ಮಪ್ಪನ ಗುಡಿಯು ಶಿಥಿಲಾವಸ್ಥೆಯಲ್ಲಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆದ ಮುಖಮಂಟಪಗಳನ್ನು ಹೊಂದಿರುವ ಸುಮಾರು ೧೬ನೆಯ ಶತಮಾನದ ನಿರ್ಮಾಣವಾಗಿದೆ. ಗರ್ಭಗೃಹದಲ್ಲಿ ಶ್ರೀನಿವಾಸನ ಇತ್ತೀಚಿನ ಶಿಲ್ಪವಿದ್ದು, ಮೇಲೆ ಇಟ್ಟಿಗೆಯ ಶಿಖರವಿದೆ. ಸುಮಾರು ಕ್ರಿ.ಶ.೧೮೪೧ರಲ್ಲಿ ಜೀವಿಸಿದ್ದ ವೀರಶೈವ ಕವಿ ನಂಜುಂಡನು ಇಲ್ಲಿಯವನಾಗಿದ್ದು, ಹಲವು ಕೃತಿಗಳನ್ನೂ ರಚಿಸಿದ್ದಾನೆ. **ಕಸಲಗೆರೆ (೪೫೫) :** ದೇವಲಾಪುರದ ಸಮೀಪದ ಗ್ರಾಮವಾದ ಇಲ್ಲಿಂದ ಈವರೆಗೆ ವರದಿಯಾಗಿರುವ ಐದು ಶಾಸನಗಳಲ್ಲಿ ಊರಾಚೆ ಪಾಳು ಕಲ್ಲೇಶ್ವರ ಗುಡಿ ಬಳಿಯಿರುವ ಕ್ರಿ.ಶ.೧೧೪೨ರ ಶಾಸನವು ಭಾನುಕೀರ್ತಿ ಸಿದ್ಧಾಂತ ದೇವರ ಶಿಷ್ಯ ಸಾವಂತ ಸೋಮೆಯನಾಯಕನು ಹೆಬ್ಬಿದಿರವಾಡಿಯಲ್ಲಿ ಉತ್ತುಂಗ ಚೈತ್ಯಾಲಯವನ್ನು ನಿರ್ಮಿಸಿ, ಪಾರ್ಶ್ವದೇವರನ್ನು ಪ್ರತಿಷ್ಠಾಪಿಸಿ, ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಇಮ್ಮಡಿ ಬಲ್ಲಾಳನ ಕ್ರಿ.ಶ.೧೧೯೦ರ ಇನ್ನೊಂದು ಶಾಸನವು ಹೆಬ್ಬಿದಿರವಾಡಿಯ ಕಲಿದೇವರ ನಿತ್ಯಸೇವೆಗೆಂದು ದಾನ ಬಿಟ್ಟಿದ್ದನ್ನು ದಾಖಲಿಸಿದೆ. ಅದೇ ಕಲ್ಲಿನ ಎಡಭಾಗದಲ್ಲಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ, ಇಲ್ಲಿಯ ಬಸದಿಯನ್ನು 'ಕಲ್ಕುಣಿ ನಾಡ ಎಕ್ಕೋಟಿ ಜಿನಾಲಯ' ವೆಂದು ಕರೆದು, ರೂವಾರಿ ಮಾಚೋಜನನ್ನು ಕಲ್ಕುಣಿ ನಾಡ ಆಚಾರ್ಯ, ಕಲಿಯುಗ ವಿಶ್ವಕರ್ಮನೆಂದೂ ಹೊಗಳಿದೆ. ಇಲ್ಲಿಯ ಶಾಸನಗಳಿಂದ ಕಸಲಗೆರೆಯ ಪ್ರಾಚೀನ ಹೆಸರು ಹೆಬ್ಬಿದಿರವಾಡಿ ಎಂದು ಗೊತ್ತಾಗುತ್ತದೆ. ಇಂದಿಲ್ಲಿ ಕಲ್ಲೇಶ್ವರ ಗುಡಿಯಷ್ಟೇ ಶಿಥಿಲವಸ್ಥೆಯಲ್ಲಿ ಉಳಿದಿದ್ದು, ಜೈನ ಬಸದಿ ನಾಶವಾಗಿದೆ. ಊರಾಚೆ ಇರುವ ಕಲ್ಲೇಶ್ವರ (ಶಾಸಸೋಕ್ತ ಕಲಿದೇವರ) ಗುಡಿಯು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಸರಳ ರಚನೆಯಾಗಿದ್ದು, ಜೀರ್ಣಾವಸ್ಥೆಯಲ್ಲಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮೇಲಿನ ಛತ್ತಲ್ಲಿ ಕಮಲಾಲಂಕಾರವಿದ್ದು, ಬಾಗಿಲವಾಡವು ನಿರಾಡಂಬರವಾಗಿದೆ. ನವರಂಗದ ಛತ್ತು ಶಿಥಿಲಗೊಂಡಿದ್ದು, ಮೂಲೆಯಲ್ಲಿ ಜೈನಶಾಸನ ಹಾಗೂ ಸೂರ್ಯ ಶಿಲ್ಪಗಳಿವೆ. ಈ ದೇವಾಲಯದ ಭಿತ್ತಿಯ ಹೊರಮೈ, ಬಾಗಿಲವಾಡ ಮುಂತಾದವು ಸಂಪೂರ್ಣ ಕಣ್ಮರೆಯಾಗಿದ್ದು, ಒಳಗಿರುವ ಕ್ರಿ.ಶ.೧೧೪೨ರ ಜೈನ ಶಾಸನ ಸೂಚಿಸುವ ಪಾರ್ಶ್ವನಾಥನಿದ್ದ ಉತ್ತುಂಗ ಚೈತ್ಯಾಲಯ ಇದೇ ಆಗಿದ್ದು, ನಂತರದಲ್ಲಿ ಆಗಿರಬಹುದಾದ ಧಾರ್ಮಿಕ ವಿವಾದದ ಸಂಘರ್ಷದ ಪರಿಣಾಮವಾಗಿ ಎಕ್ಕೋಟಿ ಜಿನಾಲಯವೆಂದು ಕರೆಯಲ್ಪಟ್ಟು ಮುಂದೆ ಕ್ರಿ.ಶ.೧೧೯೦ರಲ್ಲಿ ಕಲಿದೇವರ ಗುಡಿಯಾಗಿರುವ ಸಾಧ್ಯತೆಯನ್ನು ಪರಿಶೀಲಿಸಬೇಕಾಗಿದೆ. ಅಲ್ಲಿರುವ ಎರಡು ವೀರಗಲ್ಲುಗಳಲ್ಲಿ ಒಂದು ಮಾರದೇವ ಮತ್ತವನ ಮಡದಿ ಮಹಾದೇವಿಯರದ್ದಾಗಿದೆ. ಮೂರು ಹಂತದ ಈ ವೀರಗಲ್ಲಿನ ಕೆಳಪಟ್ಟಿಕೆಯಲ್ಲಿ ಚೌರಿಧಾರಿ ಸೇವಕರ ನಡುವೆ ನಿಂತಿರುವ ದಂಪತಿಗಳೇ ಅವರಾಗಿದ್ದು, ಅವರನ್ನು ಮುಂದಿರುವ ಬರಿದಾದ ವೇದಿಕೆಯತ್ತ ಮೆರವಣಿಗೆಯಲ್ಲಿ ಕರೆದೊಯ್ಯುತ್ತಿದ್ದು, ಬಳಿಯಲ್ಲೇ ಖಡ್ಗ ಹಿಡಿದು ನಿಂತಿರುವ ಯೋಧನನ್ನು ಕೆತ್ತಲಾಗಿದ್ದು, ವೇದಿಕೆಯ ಮೇಲ್ತುದಿಯಲ್ಲಿ ಮುಕ್ಕೊಡೆ ಇದ್ದು, ಬಹುಶಃ ಇದು ಆತ್ಮಾಹುತಿಯನ್ನು ಸೂಚಿಸುವಂತಿದೆ. ಈ ಗುಡಿಯ ಬಲಭಾಗದ

ವೀರರಗುಡಿಯಲ್ಲಿರುವ ಇನ್ನೊಂದು ವೀರಗಲ್ಲು ಶಿಲ್ಪ ಗುಜ್ಜನಾಯಕನ ವೀರಮರಣವನ್ನು ಪ್ರತಿನಿಧಿಸುತ್ತದೆ. ಉಳಿದಂತೆ ಊರಲ್ಲಿ ಮುದ್ದಲಿಂಗೇಶ್ವರ, ಬೋರೇದೇವರು, ವಿಷ್ಣು, ಲಕ್ಷ್ಮೀದೇವಿ, ಮಾರಮ್ಮ ಮುಂತಾದ ನವೀನ ಗುಡಿಗಳಿವೆ.

**ದೊಡ್ಡ ಅರಸಿನಕೆರೆ (೮೭೫೫)** : ತಾಲೂಕು ಕೇಂದ್ರ ಮದ್ದೂರಿನಿಂದ ೧೨ ಕಿ.ಮೀ. ನೈಋತ್ಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ಪಿರಿಯರಸನಕೆರೆ' ಎಂದೇ ಉಲ್ಲೇಖಿತಗೊಂಡಿದ್ದು, ಅನಾದಿ ಅಗ್ರಹಾರ ಮುಮ್ಮಡಿ ಚೋಳ ಚತುರ್ವೇದಿ ಮಂಗಲ ಎಂಬ ಅಭಿದಾನವನ್ನೂ ಹೊಂದಿದ್ದ ಅಂಶ ಕ್ರಮವಾಗಿ ಹೊಸಬೂದನೂರು (ಕ್ರಿ.ಶ.೧೨೭೬) ಹಾಗೂ ದೊಡ್ಡರಸಿನಕೆರೆಯ (ಕ್ರಿ.ಶ.೧೩೪೨, ಕ್ರಿ.ಶ.೧೪೩೭) ಶಾಸನಗಳಿಂದ ವೇದ್ಯವಾಗುತ್ತದೆ. ಅಗ್ರಹಾರವಾಗಿ, ವಿದ್ಯಾಕೇಂದ್ರವಾಗಿ, ಆಡಳಿತ ಕೇಂದ್ರವಾಗಿ ಮೆರೆದಿರುವ ಇದು ಹಿಂದೆ ವಡಗೆರೆ ನಾಡಿಗೆ ಸೇರಿದ್ದು, ಇಲ್ಲಿಂದ ಈವರೆಗೆ ಸುಮಾರು ೧೧ನೇ ಶತಮಾನದ ಐದು, ೧೨-೧೩ನೆಯ ಶತಮಾನದ ನಾಲ್ಕು, ೧೪ ಮತ್ತು ೧೫ನೆಯ ಶತಮಾನದ ಒಂದೊಂದು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ಆರು ತಮಿಳು ಭಾಷೆಯಲ್ಲಿದ್ದರೆ, ಉಳಿದವು ಕನ್ನಡದಲ್ಲಿವೆ.

ಊರಲ್ಲಿರುವ ಅದಿಮಾಧವ (ಶಾಸನೋಕ್ತ ಮಾಧವಪೆರುಮಾಳ್) ದೇವಾಲಯವು ಮುಮ್ಮಡಿ ರಾಜೇಂದ್ರ ಚೋಳನ ಕಾಲದ್ದಾಗಿದ್ದು, ಇದನ್ನು ಆ ಗುಡಿಯ ಭಿತ್ತಿಯ ಮೇಲಿರುವ ಶಾಸನವೂ ಸೇರಿದಂತೆ ಐದು ಶಾಸನಗಳು ತಿಳಿಸುತ್ತವೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ವಿಶಾಲವಾದ ಸಭಾಮಂಟಪಗಳನ್ನು ಹೊಂದಿರುವ ಈ ಚೋಳ ದೇವಾಲಯವು ವಿನಾಶದ ಅಂಚಿನಲ್ಲಿದ್ದು, ಸಂರಕ್ಷಣೆಯಾಗಬೇಕಾಗಿದೆ. ಬರಿದಾದ ಗರ್ಭಗೃಹ, ಹಾಗೂ ರುಂಡರಹಿತ ದ್ವಾರಪಾಲಕ ಶಿಲ್ಪವಿರುವ ಅಂತರಾಳಗಳ ದ್ವಾರಬಂಧವು ಸರಳವಾಗಿದ್ದು, ನವರಂಗದ ದ್ವಾರ ಕಿರಿದಾಗಿದ್ದು, ಕಮಲಾಲಂಕೃತ ಛತ್ತನ್ನು ದುಂಡು ಕಂಬಗಳು ಹೊತ್ತು ನಿಂತಿವೆ. ಮುಂದಿನ ಸಭಾಮಂಟಪ ನಂತರದ ಸೇರ್ಪಡೆಯಾಗಿದ್ದು, ಅಲ್ಲಿಂದು ಸಿಡಿಕಂಬವಿದೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು, ಒಂದೆರಡು ಬರಿದಾದ ದೇವಕೋಷ್ಠಗಳಿವೆ. ಈ ದೇವಾಲಯಕ್ಕೆ ಹೊಯ್ಸಳ-ವಿಜಯನಗರದ ಅರಸರು ದತ್ತಿ ಬಿಟ್ಟ ಅಂಶ ಅಲ್ಲಿಯ ಏಳೆಂಟು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ಊರ ಆಂಜನೇಯ ಗುಡಿಯ ಆವರಣದಲ್ಲಿ ಹನುಮಂತ, ಈಶ್ವರ, ರಾಮಮಂದಿರ, ಶನಿಮಹಾತ್ಮ, ಕಾಳಮ್ಮ, ಪಿರಿಯಮ್ಮ, ಮಹಾದೇಶ್ವರ, ಮುಂತಾದ ನವೀನ ಗುಡಿಗಳಿದ್ದು, ತಮಿಳು ಶಾಸನವಿರುವ ಕಲ್ಲುಗಳನ್ನು ಅಲ್ಲೇ ಇಡಲಾಗಿದೆ. ಅಲ್ಲದೆ ಏಳೂರಮ್ಮ, ಮಾರಮ್ಮ, ಕ್ಯಾತಮ್ಮ, ಲಕ್ಷ್ಮಮ್ಮ, ಚಿಕ್ಕಮ್ಮ, ಮಂಚಮ್ಮ, ಗುಡಿಸಲಮ್ಮ, ಚನ್ನಿಗರಾಯ,ಮುಂತಾದ ಗುಡಿಗಳೂ ಇದ್ದು, ಏಳೂರಮ್ಮನ ಜಾತ್ರೆಯು ಫೆಬ್ರವರಿ ತಿಂಗಳಲ್ಲಿ ಜರುಗುತ್ತದೆ. ಅಗಸಿ ಬಳಿ ವಾಮನಮುದ್ರೆ ಕಲ್ಲೂ ಇದೆ. **ಚಿಕ್ಕಅರಸಿನಕೆರೆ (೪೩೦೧)** : ದೊಡ್ಡಅರಸಿನಕೆರೆಯ ಸಮೀಪದ ಗ್ರಾಮವಾದ ಇದೊಂದು ಹೋಬಳಿ ಕೇಂದ್ರ. ಪ್ರಾಚೀನ ಶಾಸನಗಳಲ್ಲಿ 'ಚಿಕ್ಕರಸಿನಕೆರೆ', ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಬಡಗರೆ ನಾಡಿಗೆ ಸೇರಿದ್ದು, ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ನೆರೆಯ ಕ್ಯಾತಗಟ್ಟದ ಹರಿಹರೇಶ್ವರ ಗುಡಿ ಮುಂದಿರುವ ಕ್ರಿ.ಶ.೧೩೨೨ರ ಶಾಸನದಿಂದ ಇದಕ್ಕೆ 'ಶ್ರೀವೊಪ್ಪಣ ಅದಿಯ ಅಗ್ರಹಾರ', 'ಚಿಕ್ಕ ಅರ್ಸಿನಕೆರೆ' ಎಂಬ ಹೆಸರೂ ಇದ್ದು, ಹಿಂದೆ ಇದೊಂದು ವಿದ್ಯಾಕೇಂದ್ರವೂ ಆಗಿದ್ದ ಅಂಶ ವೇದ್ಯವಾಗುತ್ತದೆ. ಊರಾಚೆ ಕ್ಯಾತಗಟ್ಟ ರಸ್ತೆಯ ಬದಿಯಲ್ಲಿ ಪೂರ್ವಾಭಿಮುಖವಾಗಿರುವ ಸುಮಾರು ೧೪ನೆಯ ಶತಮಾನದ ಈಶ್ವರ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಅಂತರಾಳದ ಬಾಗಿಲಿಗೆ ನಾಲ್ಕೂವರೆ ಅಡಿಯ ದ್ವಾರಪಾಲಕರಿದ್ದಾರೆ. ನವರಂಗದಲ್ಲಿ ಮೂರು ಅಡಿಯ ಗಣಪ, ವಿಷ್ಣು, ಸರಸ್ವತಿ, ಹಾಗೂ ನಾಗಶಿಲ್ಪಗಳಿದ್ದು, ಗುಡಿಯು ಶಿಥಿಲಾವಸ್ಥೆಯಲ್ಲಿದ್ದು, ಜೀರ್ಣೋದ್ಧಾರವಾಗಬೇಕಾಗಿದೆ. ಅನತಿ ದೂರದಲ್ಲೇ ಹಳೆಯ ಇಗರ್ಜಿ ಇದ್ದ ನಿವೇಶನಕ್ಕೆ 'ರೆವರೆಂಡ್ ರಾಜೇಂದ್ರ

ಸ್ವಾಮಿ ಪುಣ್ಯಕ್ಷೇತ್ರ', 'ಸರ್ವೇಶ್ವರ ಗುಡಿ', 'ಕೊಂಗರ ಮಠ' ಎಂಬ ಹೆಸರುಗಳಿದ್ದು, ಶಿಲುಬೆ ಚಿಹ್ನೆ ಇರುವ ಫಲಕದ ಮೇಲೆ ಅಪ್ರಕಟಿತ-ತಮಿಳು ಶಾಸನವಿದೆ. ಇಲ್ಲಿ ಪ್ರತೀ ವರ್ಷ ಮೇ ಒಂದರಂದು ಜಾತ್ರೆಯಾಗುತ್ತದೆ. ತೊರೆಯ ಎಡದಂಡೆಯ ಮೇಲೆ ವಿಶಾಲವಾದ ಪ್ರಾಕಾರದ ನಡುವೆ ಇರುವ ಕಾಳಭೈರವೇಶ್ವರ ಗುಡಿಯು ಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಪ್ರಾಂಗಣದಲ್ಲಿ ಭೈರವ, ಸೂರ್ಯ ಮತ್ತು ಗಣಪತಿಯ ಪ್ರಾಚೀನ ಶಿಲ್ಪಗಳಿವೆ. ಈ ದೇವರ ಜಾತ್ರೆಯು ಯುಗಾದಿಯಾದ ಎರಡನೇ ಭಾನುವಾರದಂದು ಜರುಗುತ್ತದೆ. ಉಳಿದಂತೆ ಊರಲ್ಲಿ ಈಶ್ವರ, ಲಕ್ಷ್ಮೀದೇವಮ್ಮ, ಆಂಜನೇಯ, ಎಲ್ಲಮ್ಮ, ಮುಂತಾದ ಗುಡಿಗಳಿವೆ.

**ದೊಡ್ಡಗಾಡಿಗನಹಳ್ಳಿ (೧೩೨೯)**: ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೪ ಕಿ.ಮೀ. ಆಗ್ನೇಯಕ್ಕಿದ್ದು, ಅಲ್ಲಿರುವ ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನ ಹಾಗೂ ಜೋಡಿಲಿಂಗನ ಗುಡಿಗಳಿಂದಾಗಿ ಮಹತ್ವ ಪಡೆದಿದೆ. ದೇವಾಲಯದ ಮುಂದಿರುವ ಶಾಸನವು ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯನ್ನು ಉಲ್ಲೇಖಿಸುತ್ತಾ, ವ್ಯಾಪಾರಿಯೊಬ್ಬನನ್ನು ಹೆಸರಿಸುತ್ತಾದರೂ, ಶಾಸನಕಲ್ಲು ಹೂತಿರುವುದರಿಂದ ಹೆಚ್ಚಿನ ವಿವರ ಲಭಿಸುವುದಿಲ್ಲ. ಆದರೂ ಇಲ್ಲಿಯ ಈಶ್ವರ ದೇವಾಲಯವನ್ನು ನಿರ್ಮಿಸಿ, ದಾನ ಬಿಟ್ಟ ದತ್ತಿ ಶಾಸನ ಅದೆಂದು ಊಹಿಸಬಹುದಾಗಿದೆ. ಊರಾಚೆ ಹೊಲದಲ್ಲಿ ಪೂರ್ವಾಭಿಮುಖವಾಗಿರುವ ಈ ಜೋಡಿ ದೇವಾಲಯವು ಎರಡು ಪ್ರತ್ಯೇಕ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಅಕ್ಕಪಕ್ಕದಲ್ಲಿದ್ದರೂ, ಹೊಯ್ಸಳ ವಿಷ್ಣುವರ್ಧನನ ಕಾಲದ ರಚನೆಯಾದ ಎಡಭಾಗದ ದೇವಾಲಯವು ಅಚ್ಚುಕಟ್ಟಾಗಿದ್ದು, ನವರಂಗದ ಛತ್ತು ಆಕರ್ಷಕವಾಗಿದ್ದರೆ,ಬಲಭಾಗದ ದೇವಾಲಯವನ್ನು ನಂತರದ ಸೇರ್ಪಡೆ ಎಂದು ಊಹಿಸಲು ಸಾಕಷ್ಟು ಕುರುಹುಗಳಿವೆ. ಮೂಲಗುಡಿಯ ನವರಂಗದಲ್ಲಿ ನಾಲ್ಕು ಸಪ್ತಮಾತೃಕಾ ಶಿಲ್ಪ, ಎರಡು ಸೂರ್ಯ ಶಿಲ್ಪಗಳೊಂದಿಗೆ ನಂದಿಯೂ ಇದೆ. ನವರಂಗದ ತ್ರಿಶಾಖಾಲಂಕೃತ ಪ್ರಧಾನದ್ವಾರದ ಲಲಾಟದಲ್ಲಿ ಗಜಲಕ್ಷ್ಮಿ ಇದ್ದು, ಮೇಲೆ ಪಂಚಶಿಖರಾಲಂಕಾರವಿದೆ. ದೇವಾಲಯದ ಎಡಭಾಗದ ಕಿರುಗುಡಿಯಲ್ಲಿ ಕ್ಷೇತ್ರಪಾಲ ಭೈರವನ ಶಿಲ್ಪವಿದ್ದು, ಹಿಂಬದಿಯಲ್ಲಿ ಕಲ್ಗಾಣವಿದೆ. ಊರ ಒಳಗಿರುವ ಬಸವೇಶ್ವರ ಗುಡಿಯಲ್ಲಿ ನಂದಿ ಕಂಬವು ಆರಾಧಿಸಲ್ಪಡುತ್ತಿದ್ದು, ಗುಡಿಯು ಜೀರ್ಣೋದ್ಧಾರಗೊಂಡಿದೆ. ಅದರ ಬಳಿಯಲ್ಲಿ ವಿವಿಧ ಪ್ರಮಾಣದ ಸುಮಾರು ೩೦ ಹಾಗೂ ಹರಿಜನರ ಓಣಿಯಲ್ಲಿ ನಾಲ್ಕಾರು ವೀರಗಲ್ಲುಗಳಿವೆ.

**ಧನಗೂರು (೪೦೭೬)** : ತಾಲೂಕು ಕೇಂದ್ರ ಮಳವಳ್ಳಿಯಿಂದ ೧೭ ಕಿ.ಮೀ. ಪೂರ್ವಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ಧ(ದ)ನಗೂರು, ಧನ್ನೂರು' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಬಡಗರೆ ನಾಡಿನಲ್ಲಿತ್ತು. ಅಲ್ಲಿಂದ ಈವರೆಗೆ ಒಂದು ತಮಿಳು ಹಾಗೂ ಎರಡು ಕನ್ನಡ (ಗಂಗ ಮತ್ತು ಹೊಯ್ಸಳ) ಶಾಸನಗಳು ವರದಿಯಾಗಿವೆ. ಊರಾಚೆ ಗೌರೀಶ್ವರ ದೇವಾಲಯದಲ್ಲಿರುವ ಸುಮಾರು ೧೧ನೆಯ ಶತಮಾನದ ತಮಿಳು ಶಾಸನ, ಅಯ್ಯಾವೊಳೆ – ೫೦೦ ವರ್ತಕ ಶ್ರೇಣಿಯನ್ನು ಹೊಗಳುತ್ತಾ, ಧನಗೂರಿನಲ್ಲಿ ಅವರು ಮಹಾದೇವರ ಪ್ರಧಾನ ಆಲಯವನ್ನು ನಿರ್ಮಿಸಿ, ದೇವರಿಗೆ ವೀರಚೋಳ ಕವರೈಈಶ್ವರ ಉಡೈಯಾರ್ ಎಂದು ಹೆಸರಿಟ್ಟು, ಭೈರವನ ಸಲುವಾಗಿ ಮಂಟಪ ಕಟ್ಟಿಸಿ,ದಾನ ಬಿಟ್ಟಿದ್ದನ್ನು ತಿಳಿಸುತ್ತದೆ. ಶಾಸನೋಕ್ತ ಕವರೈ ಈಶ್ವರ ಗುಡಿಯೇ ಶಾಸನವಿರುವ ಗೌರೇಶ್ವರ (ಗವರೇಶ್ವರ) ವಾಗಿದ್ದು, ಗವರೆ (ವ್ಯಾಪಾರಿ)ಗಳು ನಿರ್ಮಿಸಿದ್ದಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ದಕ್ಷಿಣ ಪಾರ್ಶ್ವದ್ವಾರವಿರುವ ನವರಂಗ ಹಾಗೂ ಮುಖಮಂಟಪಗಳಿವೆ. ಮಿಗಿಲಾಗಿ ಗುಡಿಯ ಎಡಭಾಗದಲ್ಲಿ ಶಾಸನೋಕ್ತ ಕಾಳಭೈರವನಿರುವ ಮಂಟಪವೂ ಇದೆ. ಗರ್ಭಗೃಹದಲ್ಲಿ ಶಿವಲಿಂಗ, ಛತ್ತಲ್ಲಿ ತ್ರಿದಳ ಕಮಲಗಳಿದ್ದು, ಪಂಚಶಾಖಾಲಂಕೃತ ಬಾಗಿಲವಾಡಕ್ಕೆ ಪೂರ್ಣಕುಂಭಗಳಿವೆ. ಅಂತರಾಳದ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ನವರಂಗದಲ್ಲಿ ನಂದಿ, ಗಣಪ ಹಾಗೂ ಸಪ್ತಮಾತೃಕಾ ಶಿಲ್ಪಗಳಿದ್ದು,ನಡುವಣ ಛತ್ತು ಚಪ್ಪಟೆಯಾಗಿದ್ದು,

ಕಮಲಾಲಂಕಾರವಿದೆ. ಅದರ ಪಾರ್ಶ್ವದ್ವಾರಕ್ಕಿರುವ ಮುಖಮಂಟಪದ ಕಂಬಗಳ ಮೇಲೆ ಬೇಡರಕಣ್ಣಪ್ಪ, ಕಾಳಿಂಗಮರ್ಧನ, ವೀಣಾಧಾರಿ ನಟರಾಜ,ಕಾಮಧೇನು, ಭಕ್ತ ಮುಂತಾದ ಉಬ್ಬು ಶಿಲ್ಪ ಕೆತ್ತನೆಗಳಿವೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು, ಅಲಂಕಾರಿಕ ಕಂಬಗಳಿವೆ.

ಬಾಳೇಹೊನ್ನೂರು ರಂಭಾಪುರಿ ಪೀಠಕ್ಕೆ ಸೇರಿದ ಇಲ್ಲಿಯ ವೀರಸಿಂಹಾಸನ ಸಂಸ್ಥಾನ ಮಠದ ಗುರು ಪರಂಪರೆಯಲ್ಲಿ ಐದನೆಯವರಾದ ಷಡಕ್ಷರದೇವರು ಸುಮಾರು ಕ್ರಿ.ಶ.೧೬೫೪-೧೭೦೦ ಸಂಸ್ಕೃತ-ಕನ್ನಡ (ಉಭಯ ಕವಿತಾ) ವಿಶಾರದರಾಗಿದ್ದು, ಮುಮ್ಮಡಿ ಷಡಕ್ಷರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳೆಂದೇ ಪ್ರಸಿದ್ಧರಾಗಿದ್ದಾರೆ. ಕವಿಕರ್ಣರಸಾಯನ (ಸಂಸ್ಕೃತ), ರಾಜಶೇಖರ ವಿಲಾಸ, ಶಬರ ಶಂಕರ ವಿಲಾಸ ಹಾಗೂ ಬಸವರಾಜ ವಿಜಯ (ಚಂಪೂ) ಕೃತಿಗಳೂ ಸೇರಿದಂತೆ ಸುಮಾರು ೧ಲಕ್ಷ್ಕೂ ಹೆಚ್ಚು ಕೃತಿಗಳನ್ನು ಇವರು ನೆರೆಯ ಹಲಸಳ್ಳಿ ಗವಿಮಠದಲ್ಲಿ ಕುಳಿತು ರಚಿಸಿದರೆಂಬ ಪ್ರತೀತಿ ಇದೆ. ಚಿಕ್ಕದೇವರಾಜೊಡೆಯರ ತಾಯಿಯಾದ ಕಳಲೆ ಅರಸು ವಂಶದ ಅಮೃತಾಂಬೆಯ ಕುಲಗುರುಗಳಾಗಿದ್ದ ಇವರು ಕನ್ನಡ ಚಂಪೂ ಮಾರ್ಗದ ಕೊನೆಯ ಕವಿಗಳಾಗಿದ್ದು, ಅವರ ಗದ್ದುಗೆ ಎಳಂದೂರಿನಲ್ಲಿದೆ. ಈ ಮಠದ ಗುರುಪರಂಪರೆಗೆ ಸೇರಿದ ಈವರೆಗಿನ ೧೫ ಶಿವಾಚಾರ್ಯರಲ್ಲಿ ಆದ್ಯ ಗುರು ಉದ್ದಾನ ಶಿವಯೋಗಿಗಳ ಗದ್ದುಗೆಯೂ ಸೇರಿದಂತೆ ೧೧ ಶಿವಾಚಾರ್ಯರ ಗದ್ದುಗೆಗಳು ಇಲ್ಲಿವೆ. ಉದ್ದಾನ ಶಿವಯೋಗಿಗಳ ಗದ್ದುಗೆ ಮುಂದಿರುವ ಪುಟ್ಟ ಗವಿಯಲ್ಲಿ ಸಿಕ್ಕಿದ ಪುರಾತನ ವಸ್ತುಗಳನ್ನು ಅಲ್ಲೇ ಸಂರಕ್ಷಿಸಲಾಗಿದೆ. ಮಠದ ಬಲಕ್ಕಾದಂತೆ ಪಾಳು ಬಿದ್ದಿರುವ ಕಲ್ಲು ಕಟ್ಟಡವೇ ಪ್ರಾಚೀನ ಮಠದ ಅವಶೇಷವಾಗಿದ್ದು, ಅದರ ಜೀರ್ಣೋದ್ಧಾರ ಆಗಬೇಕಿದೆ. ಉಪ್ಪರಿಗೆ ಬಸಪ್ಪ ವೀರಭದ್ರ, ಗಣೇಶ, ಆಂಜನೇಯ, ಹುಚ್ಚಮ್ಮ ಮುಂತಾದ ಗುಡಿಗಳೊಂದಿಗೆ, ಇತ್ತೀಚೆಗೆ ಪುನರ್ ನಿರ್ಮಿಸಿರುವ ಆಕರ್ಷಕ ಮಸೀದಿ ಮತ್ತು ದರ್ಗಾಗಳೂ ಇವೆ.

**ನಾಗಮಂಗಲ (೧೬,೦೫೦)** : ತಾಲೂಕು ಕೇಂದ್ರವಾದ ಇದು ಜಿಲ್ಲಾ ಕೇಂದ್ರ ಮಂಡ್ಯದಿಂದ ೩೦ಕಿ.ಮೀ. ವಾಯವ್ಯಕ್ಕೆ ಹಾಗೂ ರಾಜಧಾನಿ ಬೆಂಗಳೂರಿನಿಂದ ೮೦ ಕಿ.ಮೀ. ಪಶ್ಚಿಮಕ್ಕಿದೆ. ಪ್ರಾಚೀನ ಶಾಸನಗಳಲ್ಲೂ 'ನಾಗಮಂಗಲ' (ನಾಗವಂಗಲ ಕ್ರಿ.ಶ.೧೧೩೪), (ಕಸಲಗೆರೆ ಕ್ರಿ.ಶ.೧೧೪೨) ಎಂದೇ ಉಲ್ಲೇಖಿತಗೊಂಡಿದ್ದು, ಅನಾದಿ ಅಗ್ರಹಾರ ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರ (ನಾಗಮಂಗಲ ಕ್ರಿ.ಶ.೧೧೭೩ ಹಾಗೂ ಕ್ರಿ.ಶ.೧೫೧೧) ಎಂಬ ಅಭಿದಾನವನ್ನೂ ಹೊಂದಿದ್ದ ಇದಕ್ಕೆ ಫಣಿಪುರ, ಮಣಿಪುರ,ನಾಗಪುರ,ನಾಗಮಂಡಲ ಎಂಬ ಹೆಸರುಗಳೂ ಇದ್ದು, ಬಭ್ರುವಾಹನನ ಮಣಿಪುರ ಇದೆಂಬ ಐತಿಹ್ಯವೂ ಇದೆ. ಹಿಂದೆ ಕಲ್ಕಣಿ ನಾಡೊಳಗಿದ್ದ ಈ ಊರಿನಿಂದ ಈವರೆಗೆ ಕ್ರಿ.ಶ.೧೧೩೪-೧೮೪೫ರ ಕಾಲಾವಧಿಯ ಹದಿಮೂರು ಶಾಸನಗಳು ವರದಿಯಾಗಿವೆ.

ಐತಿಹಾಸಿಕ ಮಹತ್ವದ ಈ ಪಟ್ಟಣಕ್ಕೆ, ಹಿಂದೆ ಎರಡು ಸುತ್ತಿನ ಕೋಟೆ ಹಾಗೂ ಅರಮನೆ ಇದ್ದುದ್ದಕ್ಕೆ ಕುರುಹುಗಳಿದ್ದು, ಒಳಸುತ್ತಿನ ಕೋಟೆಯನ್ನು ಲೋಹಿತ ಕುಲದ ಜೈಮಿದಂಡನಾಯಕನು ಕ್ರಿ.ಶ. ೧೨೭೦ರಲ್ಲಿ ನಿರ್ಮಿಸಿದ್ದು, ಅದೇ ಮನೆತನದ ತಿಮ್ಮಣ್ಣ ದಂಡನಾಯಕನಿಗೆ 'ಯಾದವಗಿರಿ ಜೀರ್ಣೋದ್ಧಾರಕ' ಎಂಬ ಬಿರುದಿದ್ದ ಅಂಶವು ಮೇಲುಕೋಟೆಯ ಕ್ರಿ.ಶ.೧೪೫೮ರ ಶಾಸನದಿಂದ ಗೊತ್ತಾಗುತ್ತದೆ. ಹೊರಸುತ್ತನ್ನು ಚನ್ನಪಟ್ಟಣದ ಪಾಳೇಗಾರ ಜಗದೇವರಾಯನು ನಿರ್ಮಿಸಿದನೆಂಬ ಪ್ರತೀತಿ ಇದ್ದು, ಕೋಟೆಯ ಅವಶೇಷಗಳು ಅಲ್ಲಲ್ಲಿ ಈಗಲೂ ಉಳಿದಿವೆ. ಊರಿನ ನಾಲ್ಕು ದಿಕ್ಕಲ್ಲೂ ಕ್ರಮವಾಗಿ ಹಿರಿಕೆರೆ, ಸೂಳೆಕೆರೆ, ಸಿಂಗೇಅರಸೀಕೆರೆ ಹಾಗೂ ಅಮ್ಮನಕೆರೆಗಳಿವೆ. ಹಿಂದೆ ಸೌಮ್ಯಕೇಶವ ಹಾಗೂ ಯೋಗಾನರಸಿಂಹ ದೇವಾಲಯಗಳ ನಡುವೆ ಉತ್ತರಾಭಿಮುಖವಾಗಿ ಚನ್ನಪಟ್ಟಣದ ಪಾಳೇಗಾರ ಜಗದೇವರಾಯನ ಅರಮನೆ ಕಟ್ಟಡವಿತ್ತೆಂದೂ ತಿಳಿದು ಬರುತ್ತದೆ.

ಇಲ್ಲಿಯ ಭುವನೇಶ್ವರ ದೇವಾಲಯವು ಅತ್ಯಂತ ಪ್ರಾಚೀನದ್ದಾಗಿದ್ದು, ಪ್ರಾಕಾರದಲ್ಲಿರುವ ಕ್ರಿ.ಶ.೧೧೩೪ರ ಶಾಸನವು ಹೊಯ್ಸಳ ವಿಷ್ಣುವರ್ಧನನ ಪಟ್ಟದರಸಿ ಬಮ್ಮಲಾದೇವಿಯು, ಶಂಕರನಾರಾಯಣ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ, ದೇವರ ಪೂಜಾವಿಧಿಗೆಂದು ಸೂರ್ಯಾಭರಣ ಪಂಡಿತರಿಗೆ ದಾನ ಬಿಟ್ಟ ಅಂಶವನ್ನೂ ತಿಳಿಸುತ್ತದೆ. ಬಳಪದ ಕಲ್ಲಿನಿಂದ ನಿರ್ಮಿಸಲ್ಪಟ್ಟಿರುವ ಈ ಗುಡಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಸಾಕಷ್ಟು ಜೀರ್ಣೋದ್ಧಾರಗೊಂಡಿದೆ. ಇದರ ಅಧಿಷ್ಠಾನದ ಎರಡು ಪಟ್ಟಿಕೆಗಳು ಗೋಚರಿಸುತ್ತಿದ್ದು, ಭಿತ್ತಿಯು ಅರೆಕಂಬಗಳನ್ನು ಹೊಂದಿದ್ದು, ಗರ್ಭಗೃಹಕ್ಕಿದ್ದ ಕದಂಬನಾಗರ ಶಿಖರ ಹಾಳಾಗಿದೆ. ನವರಂಗದ ದಕ್ಷಿಣದ್ವಾರವು ಬಳಪದ ಕಲ್ಲಿನದ್ದಾದರೆ, ಪೂರ್ವದ ಬಾಗಿಲು ನಂತರದ ಸೇರ್ಪಡೆಯಾಗಿದ್ದು, ನವರಂಗಕ್ಕೆ ಮೂಲತ: ಒಂದೇ ದ್ವಾರವಿದ್ದ ಅಂಶ ಇದರಿಂದ ವ್ಯಕ್ತವಾಗುತ್ತದೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ನಡುವಣ ಛತ್ತಲ್ಲಿ ಕಮಲಾಲಂಕಾರವಿದೆ. ಇಲ್ಲಿ ನಾರಾಯಣ, ಸೂರ್ಯ, ಸರಸ್ವತಿ, ಅರ್ಧನಾರೀಶ್ವರ, ಗಣೇಶ, ಷಣ್ಮುಖ,ಮಹಿಷಮರ್ಧಿನಿ, ನಂದಿ ಹಾಗೂ ಚಂಡಿಕೇಶ್ವರರ ಒಂದೊಂದು ಹಾಗೂ ದುರ್ಗಿಯ ಎರಡು ಶಿಲ್ಪಗಳಿವೆ. ಗರ್ಭಗುಡಿಯಲ್ಲಿ ಶಿವಲಿಂಗವಿದ್ದು,ಸದಾಶಿವ, ಪಾರ್ವತಿ ಹಾಗೂ ಗಣೇಶರನ್ನೊಳಗೊಂಡ ಪಂಚಲೋಹದ ಉತ್ಸವಮೂರ್ತಿಗಳಿವೆ. ನವರಂಗದ ಉತ್ತರಕ್ಕಿರುವ ಗರ್ಭಗೃಹವು ನಂತರದ ಸೇರ್ಪಡೆಯಾಗಿದ್ದು, ಅಲ್ಲಿ ಸುಮಾರು ೧೯ನೆಯ ಶತಮಾನದ ಸರಸ್ವತಿ ಶಿಲ್ಪವಿದ್ದು, ಮೇಲೆ ಇಟ್ಟಿಗೆ ಶಿಖರವಿದೆ. ದೇವಾಲಯದ ಪೂರ್ವಕ್ಕೆ ೧೮ ಅಡಿ ಎತ್ತರದ ದೀಪಮಾಲೆ ಕಂಬವಿದೆ.

ಇಲ್ಲಿಯ ಸೌಮ್ಯಕೇಶವ (ಶಾಸನೋಕ್ತ ಚನ್ನಕೇಶವ) ಗುಡಿಯ ಗರ್ಭಗೃಹದ ಗೋಡೆಯ ಮೇಲಿರುವ, ಇಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ಕ್ರಿ.ಶ. ೧೧೭೧ರ ಶಾಸನವು, ನಾಗಮಂಗಲದ ಚೆನ್ನಕೇಶವ ದೇವರಿಗೆ ಹಲತಿ (ಹಾಲ್ತಿ) ಗ್ರಾಮದಲ್ಲಿ ಭೂದಾನ ನೀಡಿದ ಅಂಶವನ್ನು ದಾಖಲಿಸಿದೆ. ಅಲ್ಲದೇ ಸಾಂದರ್ಭಿಕವಾಗಿ ಮಹಾದೇವರ ಗುಡಿಯ ಜೊತೆಗೆ ಜನಪದ ದೇವತೆಗಳಾದ ಸುಸಗಲ ಗುಡಿ, ಗುಂಡಗಲ್ಲ ಗುಡಿ ಹಾಗೂ ಗೊರವರ ಗುಡಿಗಳನ್ನೂ ಹೆಸರಿಸುತ್ತದೆ. ಹೊಯ್ಸಳರ ಕಾಲದ ಈ ಗುಡಿಯು ಮೂಲತ: ಪ್ರಧಾನ ಗರ್ಭಗೃಹ, ಅಂತರಾಳ ಮತ್ತು ನವರಂಗದ ಉತ್ತರ ದಕ್ಷಿಣಗಳಲ್ಲಿ ಒಂದೊಂದಂಕಣದ ಗರ್ಭಗೃಹ ಹಾಗೂ ನವರಂಗದ ಮುಂಭಾಗದಲ್ಲಿ ಅರ್ಧಮಂಟಪವನ್ನು ಹೊಂದಿದ್ದು, ನಂತರದಲ್ಲಿ ನವರಂಗಕ್ಕೆ ಮೂರು ಅಂಕಣದ ಮುಖಮಂಟಪವನ್ನೂ ಸೇರಿಸಲಾಗಿದ್ದು, ಇವಿಷ್ಟಕ್ಕೂ ಜಗತಿ ಇದೆ. ವಿಜಯನಗರ ಕಾಲದಲ್ಲಿ ಪಾತಾಳಾಂಕಣ, ಪ್ರಾಕಾರಕ್ಕೆ ಹೊಂದಿಕೊಂಡಂತಿರುವ ಸುತ್ತಾಲಯ ಮಂಟಪ, ಮಹಾದ್ವಾರಗೋಪುರ, ಬಲಕ್ಕಿರುವ ಎರಡಂಕಣದ ಕೈಸಾಲೆ ಮಂಟಪ ಮತ್ತು ಎದುರಿಗಿರುವ ೫೫ ಅಡಿ ಎತ್ತರದ ಗರುಡ ಗಂಬಗಳನ್ನು ಸೇರಿಸುವ ಮೂಲಕ ದೇವಾಲಯವನ್ನು ಗಣನೀಯ ಪ್ರಮಾಣದಲ್ಲಿ ವಿಸ್ತರಿಸಲಾಗಿದೆ.

ಸುಮಾರು ನಾಲ್ಕು ಅಡಿ ಎತ್ತರದ, ಜಗತಿಯ ಮೇಲೆ ಬಹುಕೋನಾಕಾರದ ತಳವಿನ್ಯಾಸವನ್ನು ಹೊಂದಿರುವ, ಈ ಗುಡಿಯ ಭಿತ್ತಿಯಲ್ಲಿ ಅಲಂಕಾರಿಕ ಕಂಬಗಳಿವೆ. ಪ್ರಧಾನ ಗರ್ಭಗೃಹದ ದಕ್ಷಿಣ ಭಿತ್ತಿಯ ದೇವಕೋಷ್ಠದಲ್ಲಿ ಉಗ್ರನರಸಿಂಹನ ಶಿಲ್ಪವಿದ್ದು, ಮೇಲೆ ವಿಜಯನಗರ ಕಾಲದ ಇಟ್ಟಿಗೆ-ಗಾರೆ ಶಿಖರವಿದೆ. ಪ್ರಧಾನ ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ಆರಡಿ ಎತ್ತರದ ಕೇಶವನ ಸುಂದರ ಶಿಲ್ಪವಿದೆ. ಈ ಸರ್ವಾಭರಣಾಲಂಕೃತ ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ-ಭೂದೇವಿಯರಿದ್ದು, ಸರ್ಪತೋರಣಯುಕ್ತ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳಿವೆ. ಶಿಲ್ಪದ ಮುಖದಲ್ಲಿಯ ಶಾಂತಿ, ಮಂದಹಾಸಗಳಿಂದಾಗಿ ಅದನ್ನು ಸೌಮ್ಯಕೇಶವನೆಂದೂ ಕರೆಯುತ್ತಾರೆ. ಗರ್ಭಗೃಹ ಮತ್ತು ಸುಖನಾಸಿಯ ಬಾಗಿಲುವಾಡಗಳಿಗೆ ದ್ವಾರಪಾಲಕರಿದ್ದು, ನವರಂಗದ ದಕ್ಷಿಣ ಹಾಗೂ ಉತ್ತರ ಗರ್ಭಗೃಹಗಳಲ್ಲಿರುವ ಆಳೆತ್ತರದ ವೇಣುಗೋಪಾಲ ಹಾಗೂ ಲಕ್ಷ್ಮೀನರಸಿಂಹನ ಸುಂದರ ಶಿಲ್ಪಗಳು ವಿಜಯನಗರ ಕಾಲದ ಲಕ್ಷಣವನ್ನು ಹೊಂದಿದ್ದು, ಬಾಗಿಲಲ್ಲಿ ದ್ವಾರಪಾಲಕರಿದ್ದಾರೆ. ಹನ್ನೆರಡು ಅಂಕಣಗಳನ್ನುಳ್ಳ ವಿಶಾಲ ನವರಂಗದ

ಬಾಗಿಲಲ್ಲಿ ದ್ವಾರಪಾಲಕರು, ಲಲಾಟದಲ್ಲಿ ಗಜಲಕ್ಷ್ಮಿ, ಒಳಗೆ ಆದಿಶೇಷ ಹಾಗೂ ವಿಶ್ವಕಸೇನರ ಶಿಲ್ಪಗಳಿವೆ. ನವರಂಗಕ್ಕೆ ಬಹುಕೋನಾಕಾರದ ವೈವಿಧ್ಯಮಯ ಕಂಬಗಳಿದ್ದು, ಛತ್ತುಗಳು ಅಲಂಕೃತ ಕಮಲ, ನಕ್ಷತ್ರಗಳಿಂದಾಗಿ ಆಕರ್ಷಕವಾಗಿದ್ದು, ಪ್ರಧಾನ ಛತ್ತು ಅಷ್ಟದಿಕ್ಪಾಲಕರಿಂದ ಆವೃತ್ತವಾದ ಕಮಲ ಅಲಂಕಾರವನ್ನು ಹೊಂದಿದೆ. ನವರಂಗದ ಮುಂದಿನ ಅರ್ಧ ಮಂಟಪವು ವಿಜಯನಗರ ಕಾಲದ್ದಾಗಿದ್ದು, ವಿಶಾಲವೂ, ಎತ್ತರವೂ ಆದ ಮುಖಮಂಟಪವಿದೆ. ಪ್ರಾಕಾರದ ಗೋಡೆಯು ಸರಳವಾಗಿದ್ದು, ನೈಋತ್ಯಕ್ಕೆ ಮಡಪಲ್ಲಿನಾಚಾರ್, ವೈಕುಂಠನಾರಾಯಣ, ಸುದರ್ಶನಾಳ್ವಾರ್, ಹನುಮಂತ, ವಾಯವ್ಯಕ್ಕೆ ಸೌಮ್ಯನಾಯಕಿ (ಪಾಳೇಗಾರರ ಕಾಲದ ರಚನೆ); ಈಶಾನ್ಯಕ್ಕೆ ರಾಮಾನುಜ (ಕೆಲವು ವರ್ಣಚಿತ್ರಗಳಿವೆ). ಪಿಳ್ಳೈಲೋಕಾಚಾರ್ಯರ ಗುಡಿ, ಯಾಗಶಾಲೆ ಹಾಗೂ ಮನವಾಳ ಮಹಾಮುನಿಯ ಗುಡಿಗಳಿವೆ. ಪ್ರಾಕಾರದ ಮಹಾದ್ವಾರವು ವಿಜಯನಗರ ಕಾಲದ್ದಾಗಿದ್ದು, ದ್ರಾವಿಡ ಶೈಲಿಯ ಆರು ಅಂತಸ್ತಿನ ಆಕರ್ಷಕ ಗೋಪುರವನ್ನು ಹೊಂದಿದೆ. ಗುಡಿಯ ಎಡಭಾಗದಲ್ಲಿರುವ ವಿಶಾಲವಾದ ಸಭಾಮಂಟಪವು ಹಿಂದೆ ಮಹಾಜನರ ಸಭಾಸ್ಥಾನವಾಗಿದ್ದಂತೆ ತೋರುತ್ತದೆ. ಹಿಂದಿನಿಂದಲೂ ನಾಗಮಂಗಲ ಪಂಚಲೋಹದ ಕಲಾಕುಸುರಿ ಕೆಲಸಕ್ಕೆ ಹೆಸರಾಗಿದ್ದು, ದೇವಾಲಯದಲ್ಲಿರುವ ವಿವಿಧ ಉತ್ಸವ ಮೂರ್ತಿಗಳಲ್ಲಿ ಕೆಲವಾದರೂ ಸ್ಥಳೀಯ ಶಿಲ್ಪಿಗಳದ್ದಾಗಿರಬೇಕು.

ಈ ದೇವಾಲಯದ ಪಶ್ಚಿಮಕ್ಕೆ ೧೦೦ ಗಜ ಅಂತರದಲ್ಲಿರುವ ಯೋಗಾನರಸಿಂಹನ ದೇವಾಲಯವು ಇಲ್ಲಿಯ ಇನ್ನೊಂದು ಪ್ರಾಚೀನ ದೇವಾಲಯವಾಗಿದ್ದು, ನೆರೆಯ ಮೊದಲಹಳ್ಳಿಯ ನರಸಿಂಹನಾಯಕ ಮತ್ತು ತಿಮ್ಮಣ್ಣನಾಯಕರು, ಇದನ್ನು ನಿರ್ಮಿಸಿದರೆಂಬ ಅಭಿಪ್ರಾಯವಿದೆ. ಆದರೆ ಇದು ಸುಮಾರು ೧೩ನೆಯ ಶತಮಾನದ ಮಧ್ಯಭಾಗದ ರಚನೆಯಾಗಿದ್ದು, ಗರ್ಭಗೃಹ, ಪ್ರದಕ್ಷಿಣಾಪಥ, ಅಂತರಾಳ, ನವರಂಗ, ಮುಖಮಂಟಪ, ಪಾತಾಳಾಂಕಣ, ಒಳ ಕೈಸಾಲೆಮಂಟಪವಿರುವ ಪ್ರಾಕಾರ ಹಾಗೂ ಮಹಾದ್ವಾರಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಯೋಗಾನರಸಿಂಹ, ನವರಂಗದಲ್ಲಿ ಆದಿಶೇಷ ಮತ್ತು ವಿಶ್ವಕಸೇನ ಶಿಲ್ಪಗಳಿವೆ. ಆದಿಶೇಷ ಶಿಲ್ಪದ ಬಳಿಯಿರುವ ಪೊಟರೆಯ ಅನಂತತೀರ್ಥ ನಾಗರಾಜನ ವಾಸಸ್ಥಾನವಾಗಿದ್ದು, ಹಿಂದೆ ಅಲ್ಲಿದ್ದ ಹಂಗರ ಮರದ ೪೦ ಅಡಿ ಉದ್ದದ ಕಾಂಡವಿಂದು ಪ್ರಾಕಾರದಲ್ಲಿದ್ದು, ನರಸಿಂಹನ ಪ್ರಾಚೀನ ಶಿಲ್ಪವಿದ್ದ ಸ್ಥಳ ಇದೆಂಬ ಅಭಿಪ್ರಾಯವಿದೆ.

ದ್ರಾವಿಡ ಶೈಲಿಯ ವೀರಭದ್ರನ ಗುಡಿಯು ವಿಜಯನಗರ ಕಾಲದ್ದಾಗಿದ್ದು, ಈ ದೇವಾಲಯಕ್ಕೆ ಗುಮ್ಮಳಾಪುರದ ಹೊನ್ನಿಸೆಟ್ಟಿಯು ಗಂಧಗೋಡಿ ಮಂಟಪವನ್ನು ನಿರ್ಮಿಸಿದ ಅಂಶವನ್ನು ಅಲ್ಲಿಯ ಕ್ರಿ.ಶ.೧೫೧೧ರ ಶಾಸನವೊಂದು ದಾಖಲಿಸಿದರೆ, ಉಯ್ಯಾಲೆ ಮಂಟಪದ ನಿರ್ಮಾಣವನ್ನು ಕ್ರಿ.ಶ.೧೫೨೦ರ ಇನ್ನೊಂದು ಶಾಸನ ತಿಳಿಸುತ್ತದೆ. ಕ್ರಿ.ಶ.೧೫೪೯ರ ಮತ್ತೊಂದು ಶಾಸನ ಮಹಾಜನರು ಈ ದೇವರಿಗೆ ನೀಡಿದ ಸುಂಕ ಮಾನ್ಯವನ್ನು ದಾಖಲಿಸಿದೆ. ವಿಶಾಲವಾದ ಪ್ರಾಕಾರದಲ್ಲಿರುವ ಈ ಗುಡಿಯ ಗರ್ಭಗೃಹದಲ್ಲಿ ವೀರಭದ್ರನ ಕಿರುಮೂರ್ತಿ ಮತ್ತು ದಕ್ಷಿಣಾಮೂರ್ತಿಯ ಲೋಹದ ಶಿಲ್ಪಗಳಿವೆ. ಎಡಭಾಗದ ಪ್ರತ್ಯೇಕ ಗರ್ಭಗೃಹದಲ್ಲಿ ಭದ್ರಕಾಳಿಯ ಶಿಲ್ಪವಿದೆ. ಕಳೆದ ಶತಮಾನದ ಆರಂಭದಲ್ಲಿ ಜೀರ್ಣೋದ್ಧಾರಗೊಂಡಿರುವ ಶ್ರೀರಾಮಮಂದಿರದಲ್ಲಿ ರಾಮ, ಲಕ್ಷ್ಮಣ, ಸೀತೆಯರ ಸುಂದರ ಶಿಲ್ಪಗಳಿವೆ.

ಗ್ರಾಮದೇವತೆ ಬಡಗೋಡಮ್ಮನ ಗುಡಿಯು ಹಿರಿಕೆರೆಯ ಉತ್ತರ ಕೋಡಿಯ ಬಳಿಯಿದ್ದು, ಅದರಿಂದಾಗಿ ಆ ಹೆಸರು ಬಂದಿದೆ. ಈ ದೇವಿಯ ಉತ್ಸವ ಮೂರ್ತಿಯು ಅರಸಮ್ಮನ ಗುಡಿಯಲ್ಲಿದ್ದು, ಅಲ್ಲೇ ಇರುವ ಸುಮಾರು ೧೬ನೆಯ ಶತಮಾನದ ಶಾಸನವು, ಅಂಕುಶರಾಯನು ವೀರಾಂಬುದಿಯೂರಾದ ನಾಗಮಂಗಲದಲ್ಲಿ ಸಿಂಗಾರಿಕೆರೆಯನ್ನು ನಿರ್ಮಿಸಿದ್ದನ್ನು ದಾಖಲಿಸುತ್ತದೆ. ಪಟ್ಟಣದ ಒಳಕೋಟೆಯ ದಿಡ್ಡಿಬಾಗಿಲ ಬಳಿಯಿರುವ, ಅಕ್ಕಸಾಲಿಗರಿಂದ ಆರಾಧಿಸಲ್ಪಡುವ ಕಾಳಮ್ಮ-ಕಮ್ಮಟೇಶ್ವರ ಗುಡಿಯು ದ್ರಾವಿಡ ಶೈಲಿಯಲ್ಲಿದ್ದು, ಬೃಹತ್ ಗೋಪುರವನ್ನು ಹೊಂದಿದೆ. ಪಾತಾಳಾಂಕಣದ ಬಳಿ ಗಣಪತಿ ಹಾಗೂ ಭೈರವನ ಶಿಲ್ಪಗಳಿವೆ. ಅಲ್ಲದೆ ನಟರಾಜ, ಸೂರ್ಯನಾರಾಯಣ, ವಿನಾಯಕ

ಮುಂತಾದ ಪಂಚಲೋಹದ ಹತ್ತಾರು ವಿಗ್ರಹಗಳಿವೆ. ದುಡ್ಡದ 'ದೇಶಿಸ್' ಸೌಟಿನಂತೆ (ಛಲವಾದಿ ಗಂಟೆ ಬಟ್ಟಲು) ನಾಗಮಂಗಲದ ಛಲವಾದಿಗಳ ಬಳಿ ಇರುವ ಈ ಸೌಟಿನ ಮೇಲೂ ಸರ್ವಜನಾಂಗದ ಚಿಹ್ನೆಗಳಿದ್ದು, ಅದನ್ನು ಉಪಯೋಗಿಸಿ ಧಾನ್ಯದ ರಾಶಿಯಿಂದ ಪಡಿ ತೆಗೆಯುವ ಹಕ್ಕು (ಛಲವಾದಿ ಸಂಪ್ರದಾಯ) ಹಿಂದೆ ಇತ್ತೆಂದು ತಿಳಿದು ಬರುತ್ತದೆ.

ಊರಾಚೆ ಕೃಷ್ಣಯ್ಯಂಗಾರರ ಜಮೀನಿನಲ್ಲಿ ಸುಮಾರು ೬೦ ಅಡಿ ವ್ಯಾಸ, ಮೂರ್‍ನಾಲ್ಕಡಿ ಆಳದ ಚಕ್ರಕೊಳದ ನಡುವಿರುವ ಕಲ್ಲಿನ ಮಂಟಪ ಆಕರ್ಷಕವಾಗಿದ್ದು, ಇದನ್ನು ಚನ್ನಪಟ್ಟಣದ ಪಾಳೇಗಾರನಾದ ಜಗದೇವರಾಯನ ಸೋದರ ಅಂಕುಶರಾಯನು ಜಲಕ್ರೀಡೆಗಾಗಿ ಕಟ್ಟಿಸಿದ್ದು, ಅವನ ಪ್ರೇಯಸಿಯಾದ ತರಂಗಿಣಿಯನ್ನು ಜಲಕ್ರೀಡೆ ಸಮಯದಲ್ಲಿ ಇಲ್ಲಿ ಕೊಲ್ಲಲಾಯಿತೆಂಬ ಸ್ಥಳೀಯ ಅಭಿಪ್ರಾಯವಿದೆ. ಅಂಕುಶರಾಯನು ಕಟ್ಟಿಸಿದ ಸೂಳೆಕೆರೆ, ಸೂಳೆಮಂಟಪ ಮತ್ತು ಕೆರೆಗೆ ಹಾರವಾದ ಅವನ ಸೂಳೆಯ ತ್ಯಾಗ ಜನಪದ ಕಥೆಯಾಗಿದೆ. ಉಳಿದಂತೆ ಊರಲ್ಲಿ ನಗರೇಶ್ವರ, ಕನ್ನಿಕಾ ಪರಮೇಶ್ವರಿ, ಆಂಜನೇಯ ಮುಂತಾದ ನವೀನ ಗುಡಿಗಳಿದ್ದು,ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಆ(ಹಾ)ಲತಿಗಿರಿ (೪೪೨)** : ತಾಲೂಕು ಕೇಂದ್ರ ನಾಗಮಂಗಲದಿಂದ ಒಂಬತ್ತು ಕಿ.ಮೀ. ಈಶಾನ್ಯಕ್ಕೆ ಆಲತಿ ಗ್ರಾಮದಿಂದ ಅರ್ಧ ಕಿ.ಮೀ. ದೂರದಲ್ಲಿರುವ ಪೌರಾಣಿಕ ಮಹತ್ವದ ಪುಣ್ಯಕ್ಷೇತ್ರ. ನೆರೆಯ ನಾಗಮಂಗಲದ ಕ್ರಿ.ಶ.೧೧೬೩ರ ಶಾಸನದಲ್ಲಿ 'ಹಲತ್ತಿ' ಎಂದೂ ದೊಡ್ಡ ಜಟಕಾದ ಕ್ರಿ.ಶ. ೧೫೧೨ರ ಶಾಸನದಲ್ಲಿ 'ಅಲೆತಿಗ್ರಾಮ' ಎಂದೂ ಉಲ್ಲೇಖಿತಗೊಂಡಿರುವ ಇದು ಗ್ರಾಮಸ್ಥರ ಬಾಯಲ್ಲಿ 'ಹಾಲ್ತಿ' ಎಂದೂ ಬಳಿಯ ಬೆಟ್ಟಕ್ಕೆ ಹಾಲ್ತಿಗಿರಿ ಎಂದೂ ಚಲಾವಣೆಯಲ್ಲಿದೆ. ದಕ್ಷಿಣೋತ್ತರವಾಗಿ ನಾಗಮಂಗಲ-ತುಮಕೂರು ರಸ್ತೆಯಲ್ಲಿ ಪೂರ್ವಕ್ಕೆ ಹಬ್ಬಿರುವ ಈ ಗಿರಿಶ್ರೇಣಿಯ ಉನ್ನತ ಶಿಖರದ ಮೇಲಿರುವ ಮಲ್ಲೇಶ್ವರ ಗುಹಾದೇವಾಲಯವನ್ನು ತಲುಪಲು ಪೂರ್ವ-ಪಶ್ಚಿಮ ದಿಕ್ಕುಗಳಿಂದ ಮೆಟ್ಟಿಲುಗಳಿವೆ. ಇಲ್ಲಿಂದ ಈವರೆಗೆ ವರದಿಯಾಗಿರುವ ಎರಡೂ ಶಾಸನಗಳು ಬೆಟ್ಟದ ಮಲ್ಲೇಶ್ವರ ಗುಡಿಯಲ್ಲಿವೆ. ಅವುಗಳಲ್ಲಿ ಕ್ರಿ.ಶ. ೧೬೦೫ರ ಶಾಸನವು ಸಿಂಗಳಿದೇವ ಒಡೆಯರಿಗೆ, ಶಿಷ್ಯೆ ಚಿಕ್ಕಿಯ ಮಗನಾದ ಮುದ್ದಣನು ದೇವರಕಟ್ಟೆಗೆ ಮಣ್ಣಿನ ಒಡ್ಡನ್ನು ಹಾಕಿಸಲೆಂದು ೧೪ ಗುಳಿಗೆ ಹೊನ್ನನ್ನು ದಾನ ಬಿಡುವುದರ ಜೊತೆಗೆ, ದೇವರ ನಂದಾದೀಪಕ್ಕೆಂದು ನೀಡಿದ ಗುಳಿಗೆ ಹೊನ್ನೊಂದಕ್ಕೆ ಬರುವ ಮೂರು ಹಣ ಬಡ್ಡಿಯನ್ನು ಬಳಸಿಕೊಳ್ಳುವಂತೆ ಸೂಚಿಸುತ್ತಿದ್ದು, ಇಲ್ಲಿ ಕಂಡು ಬರುವ 'ಗುಳಿಗೆ ಹೊನ್ನು' ಎಂಬ ನಾಣ್ಯದ ಉಲ್ಲೇಖ ವಿಶಿಷ್ಟವಾಗಿದೆ. ಅದೇ ಕಾಲಕ್ಕೆ ಸೇರಿದ ಇಲ್ಲಿಯ ಇನ್ನೊಂದು ಶಾಸನವು ಮಲ್ಲಯ್ಯನು ಮಹಾದ್ವಾರಕ್ಕೆ ಕದವನ್ನು ಮಾಡಿಸಿಕೊಟ್ಟನೆಂದು ದಾಖಲಿಸಿದೆ. ಬೆಟ್ಟದ ಮೇಲಿರುವ ಮಲ್ಲೇಶ್ವರ ಲಿಂಗವು ವಿಶಾಲವಾದ ಗವಿಯಲ್ಲಿದ್ದು, ತಾಯಿ ರೇಣುಕೆಯನ್ನು ಕೊಂದ ಪರಶುರಾಮನು, ಪಾಪ ಪರಿಹಾರಾರ್ಥವಾಗಿ ಮಲ್ಲೇಶ್ವರನ ದರ್ಶನಕ್ಕೆಂದು ಇಲ್ಲಿಗೆ ಬಂದು ಬಂಡೆಯನ್ನು ಕೊಡಲಿಯಿಂದ ಕಡಿದು ದಾರಿ ಮಾಡಿಕೊಂಡು ಹೋಗಿ ಪೂಜಿಸಿ, ಎತ್ತರದ ಬಂಡೆಯ ಮೇಲೆ ಕುಳಿತು ಉಣ್ಣಲೆಂದು ಬುತ್ತಿ ಬಿಚ್ಚಿದಾಗ ಅದು ಹಾಲಾಗಿ ಹರಿದುದರಿಂದ 'ಹಾಲ್ತಿ' ಎಂಬ ಹೆಸರು ಬಂತೆಂಬ ಐತಿಹ್ಯವಿದೆ. ಆರಂಭದಲ್ಲಿ ವಿಶಾಲವಾಗಿರುವ ಗವಿ, ಒಳಹೋಗುತ್ತಾ ಕಿರಿದಾಗಿ, ಜಲವಿರುವೆಡೆ ಅಂಬೆಗಾಲಿಟ್ಟು, ಮುನ್ನಡೆದರೆ ಮಲ್ಲೇಶ್ವರನ ದರ್ಶನವಾಗುತ್ತದೆ. ಬಹಳ ವಿಶಿಷ್ಟವಾದ ಈ ಗುಹಾಲಯ, ನಿಸರ್ಗದ ಚೋದ್ಯಗಳಲ್ಲೊಂದಾಗಿದ್ದು, ಬೆಟ್ಟದ ಬುಡದಲ್ಲಿ ಇರುವ 'ಸ್ವರ್ಗಾಶ್ರಮ'ವು ಮಧ್ಯಪ್ರದೇಶದ ಚಿತ್ರಕೂಟದ ಪೀಲೀಕೋಠಿ ಪೀಠಾಧ್ಯಕ್ಷ ಅಖಂಡಾನಂದಜಿ ಮಹಾರಾಜರ ಹೆಸರಲ್ಲಿ ಸ್ಥಾಪಿಸಲ್ಪಟ್ಟಿದೆ.

**ಪಾಲಗ್ರಹಾರ (೮೨೫)** : ತಾಲೂಕು ಕೇಂದ್ರ ನಾಗಮಂಗಲದಿಂದ ನಾಲ್ಕು ಕಿ.ಮೀ. ಈಶಾನ್ಯಕ್ಕೆ ವಿಶಾಲವಾದ ಪಾಲಕೆರೆಯಾಚೆ ಇರುವ ಇದು ಹಿಂದೊಂದು ಅಗ್ರಹಾರವಾಗಿದ್ದು, ಎರಡು ಕಿ.ಮೀ. ಅಂತರದಲ್ಲಿರುವ ಕೋಟೆಬೆಟ್ಟವು ಹಾಗೂ ನರಸಿಂಹನ ಬೆಟ್ಟಗಳಿಂದಾಗಿ ಮಹತ್ವ ಪಡೆದಿದೆ. ಕೋಟೆಬೆಟ್ಟ ಚಿಕ್ಕದಾದರೂ ಮೇಲೆ ವಿಶಾಲವಾದ ಕೋಟೆರಾಯ ಅಥವಾ ವೆಂಕಟರಮಣನ (ಶ್ರೀನಿವಾಸನ) ಗುಡಿಯಿದೆ. ಕೋಟೆರಾಯನನ್ನು ಪ್ರತಿಷ್ಠಾಪಿಸಿದ

ಪರಶುರಾಮನು, ಪೊಟರೆ ಮೂಲಕ ಅಲತಿಗಿರಿಗೆ ಹೋಗಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದನೆಂಬ ಐತಿಹ್ಯವಿದೆ. ಆದರೆ ಇದನ್ನು ಮಂತ್ರಿ ತಿರುಮಲಾರ್ಯರ ಸೋದರ ಸಿಂಗಾರಾರ್ಯರು ನಿರ್ಮಿಸಿದರೆಂಬ ಪ್ರತೀತಿ ಇದೆ. ಅಲ್ಲೇ ಹನುಮಂತ, ಈಶ್ವರ, ನಾಚ್ಯಾರಮ್ಮ (ವೃಂದಾವನ) ಹಾಗೂ ಸತ್ಯನಾರಾಯಣ ಗುಡಿಗಳಿದ್ದು, ಫೆಬ್ರವರಿ ತಿಂಗಳಲ್ಲಿ ಜರುಗುವ ವೆಂಕಟರಮಣನ ಜಾತ್ರೆಯ ಸಂದರ್ಭದಲ್ಲಿ ದನಗಳ ಜಾತ್ರೆಯೂ ನಡೆಯುತ್ತದೆ. ಅನತಿ ದೂರದಲ್ಲಿರುವ ನರಸಿಂಹನ ಬೆಟ್ಟವು ದೊಡ್ಡದಾದರೂ ಅಲ್ಲಿರುವ ಕಂಬದಪ್ಪನ ಗುಡಿ ಚಿಕ್ಕದಾಗಿದ್ದು, ಒಳಗೆ ಮೂರು ಅಡಿ ಎತ್ತರದ ಚೌಕಾಕಾರದ ಕಂಬದ ಮೇಲೆ ಶಂಖ, ಚಕ್ರ, ತ್ರಿಶೂಲ ಹಾಗೂ ಬಿಲ್ಲಿನ ಕೆತ್ತನೆಗಳಿದ್ದು, ಅದನ್ನು ಕಂಬದ ನರಸಿಂಹನೆಂದೂ ಕರೆಯುತ್ತಾರೆ.

**ಮೈಲಾರಪಟ್ಟಣ (೯೫೭)** : ನಾಗಮಂಗಲದಿಂದ ಎಂಟು ಕಿ.ಮೀ. ಈಶಾನ್ಯಕ್ಕಿದ್ದು, ಮೈಲಾರನ ಗುಡಿಯಿಂದಾಗಿ ಪ್ರಸಿದ್ಧವಾಗಿದೆ. ಪೂರ್ವಾಭಿಮುಖನಾಗಿರುವ ಇದರ ಗರ್ಭಗೃಹದಲ್ಲಿರುವ ಸುಮಾರು ನಾಲ್ಕೂವರೆ ಅಡಿ ಎತ್ತರದ ಅಸೀನ ಮೈಲಾರನ ಗಾರೆ ಶಿಲ್ಪವು ಬಹಳ ಉಗ್ರವಾಗಿದ್ದು, ತ್ರಿಶೂಲ–ಡಮರುಗಳನ್ನು ಧರಿಸಿದ್ದರೆ, ಬಾಗಿಲ ಉಭಯ ಪಾರ್ಶ್ವದಲ್ಲಿರುವ ದ್ವಾರಪಾಲಕ ಶಿಲ್ಪಗಳಿಗೆ ಕೋರೆಹಲ್ಲುಗಳಿವೆ. ಈ ದೇವರ ಜಾತ್ರೆಯು ಫಾಲ್ಗುಣ ಶುದ್ಧ ದ್ವಿತೀಯದಿಂದ ದ್ವಾದಶಿಯವರೆಗೆ ಜರುಗುತ್ತಿದ್ದು, ಫಾಲ್ಗುಣ ಶುದ್ಧ ದಶಮಿಯಂದು ನಡೆಯುವ ರಥೋತ್ಸವ ಸಂದರ್ಭದಲ್ಲಿ ಸರಪಳಿ ಪವಾಡವಿರುತ್ತದೆ. ಅನತಿ ದೂರದಲ್ಲಿರುವ ಆಂಜನೇಯ ಹಾಗೂ ರಾಮಮಂದಿರಗಳು ಸುಂದರವಾಗಿದ್ದು, ೧೯೪೦ರಲ್ಲಿ ನಿರ್ಮಾಣಗೊಂಡಿವೆ. ಊರಿಗೆ ಎರಡು ಕಿ.ಮೀ. ಅಂತರದಲ್ಲಿರುವ ಕೋಡಿ ಮಲ್ಲೇಶ್ವರ ಹಾಗೂ ಉಜ್ಜನಿ ಮಲ್ಲೇಶ್ವರ ಬೆಟ್ಟಗಳ ಮೇಲೂ ಪ್ರಾಚೀನ ಈಶ್ವರ ಗುಡಿಗಳಿವೆ.

**ನಾಗರಘಟ್ಟ** (೬೧೦) : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೨೫ ಕಿ.ಮೀ.ಉತ್ತರಕ್ಕಿದ್ದು, ಇಲ್ಲಿಯ ಮಲ್ಲೇಶ್ವರ ಗುಡಿಯ ಮುಂದಿರುವ ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನವು ದಂಡನಾಯಕ ಕೇರಳನಾಯಕನು, ನಾಗರಘಟ್ಟದ ಮಹಾದೇವ ದೇವರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಊರ ಕೆರೆ ಕೆಳಗೆ ಇರುವ ಮಲ್ಲೇಶ್ವರ (ಶಾಸನೋಕ್ತ ಮಹಾದೇವ) ದೇವಾಲಯಕ್ಕೆ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿದ್ದು, ಸಂರಕ್ಷಣೆಯಾಗಬೇಕಿದೆ.

**ಪಾಂಡವಪುರ (೨೨೪೭೩)** : ಜಿಲ್ಲಾ ಕೇಂದ್ರ ಮಂಡ್ಯದಿಂದ ೨೮ ಕಿ.ಮೀ.ಪಶ್ಚಿಮಕ್ಕೂ, ಪಾಂಡವಪುರ ರೈಲು ನಿಲ್ದಾಣದಿಂದ ಐದು ಕಿ.ಮೀ. ಉತ್ತರಕ್ಕೂ ಇರುವ ಹೋಬಳಿ, ತಾಲೂಕು ಹಾಗೂ ಉಪವಿಭಾಗೀಯ ಕೇಂದ್ರ. 'ಹಿರೋಡೆ' , ಕುರುಬರ ದೇವರಾದ 'ಹಿರೆಒಡೆಯ' ದ ಸವಕಲು ರೂಪವಾಗಿದ್ದು, ಕುಂತಿಬೆಟ್ಟದ ಮೇಲಿರುವ ಪಾಳು ಶಿವಾಲಯ, ಹಿರೋಡೆಯಪ್ಪನ ಗುಡಿಯಾಗಿದ್ದು, ಅದರಿಂದಾಗಿ ಊರಿಗೂ 'ಹಿರೋಡೆ' ಎಂದೇ ಹೆಸರು ಬಂದಿರುವಂತೆ ತೋರುತ್ತದೆ. ಹೈದರ್–ಟಿಪ್ಪು ಕಾಲದಲ್ಲಿ ಫ್ರೆಂಚ್ ತುಕಡಿಯ ತಂಗುದಾಣವಿದ್ದಾಗಿದ್ದು, ಅದರಿಂದಾಗಿ ಇದಕ್ಕೆ 'ಫ್ರೆಂಚ್‌ರಾಕ್ಸ್' ಎಂಬ ಹೆಸರೂ ಬಂತು. ಆನಂತರ ಇದಕ್ಕೆ ಪಾಂಡವಪುರ ಎಂದು ನಾಮಕರಣ ಮಾಡಲು, ವನವಾಸದಲ್ಲಿದ್ದ ಪಾಂಡವರು, ಅರಗಿನ ಮನೆಯಿಂದ ತಪ್ಪಿಸಿಕೊಂಡು ಬಂದು ಇಲ್ಲಿಯ ಕುಂತಿಬೆಟ್ಟದಲ್ಲಿ ತಂಗಿದ್ದರೆಂಬ ಪೌರಾಣಿಕ ಐತಿಹ್ಯವೇ ಕಾರಣವಾಗಿದೆ. ಮಿಗಿಲಾಗಿ ಕುಂತಿಬೆಟ್ಟದಲ್ಲಿ ಬಹು ಹಿಂದೆಯೇ ರಾಬರ್ಟ್ ಬ್ರೂಸ್‌ಫೂಟ್ ಪತ್ತೆಹಚ್ಚಿ ವರದಿ ಮಾಡಿರುವ ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಶಿಲಾಯುಧ, ಮಡಿಕೆಚೂರು ಮುಂತಾದ ಪ್ರಾಚ್ಯ ವಸ್ತುಗಳನ್ನು ಮದ್ರಾಸ್ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದ್ದು, ಅವುಗಳಿಂದ ಇದು ನೂತನ ಶಿಲಾಯುಗ ಸಂಸ್ಕೃತಿಯ ಮಾನವನ ನೆಲೆಯಾಗಿದ್ದ ಅಂಶ ವ್ಯಕ್ತವಾಗುತ್ತದೆ. ಪಾಂಡವಪುರಕ್ಕೆ ಕಣ್ಣಳತೆ ದೂರದಲ್ಲಿರುವ ಕುಂತಿಬೆಟ್ಟದ ಪಾದದಲ್ಲಿ ಶಂಕರಾನಂದ ಭಾರತಿ ವಿದ್ಯಾಪೀಠದ ಶಾಲೆ, ವಸತಿಗೃಹ, ಕಲ್ಯಾಣಮಂಟಪ; ದಕ್ಷಿಣಾಮೂರ್ತಿ ಹಾಗೂ ಮಲ್ಲಿಕಾರ್ಜುನ ದೇವಾಲಯಗಳಿವೆ. ಗೀತಾಮಂದಿರದ ಎದುರು ನಂದಿ ಹಾಗೂ ಗಣಪತಿಯ ಉಬ್ಬು ಕೆತ್ತನೆಗಳಿವೆ. ಇಲ್ಲಿಂದ ಮೇಲಕ್ಕೇರಲು ಮೆಟ್ಟಿಲುಗಳಿದ್ದು, ಕುಂತಿಬೆಟ್ಟವು ಒಂದೇ ಕಡೆ ಕೇಂದ್ರೀಕೃತವಾಗಿರದೆ, ನಾಲ್ಕಾರು ಮೈಲಿ ವ್ಯಾಪಿಸಿದ್ದು, ಅಲ್ಲಲ್ಲಿ ಶಿಖರಗಳನ್ನೂ ನಿರ್ಮಿಸಿದೆ. ಒಂದು ಶಿಖರಕ್ಕೆ ಕುಂತಿಬೆಟ್ಟ, ಇನ್ನೊಂದಕ್ಕೆ ಭೀಮನಬೆಟ್ಟ

(ಒನಕೆ ಬೆಟ್ಟ) ಎಂದೂ ಮತ್ತೊಂದಕ್ಕೆ ಬಕಾಸುರನ ಬೆಟ್ಟವೆಂದೂ ಸ್ಥಳೀಯವಾಗಿ ಕರೆಯಲಾಗುತ್ತಿದ್ದು, ಕುಂತಿ, ಭೀಮ, ಬಕಾಸುರರಿಗೆ ಸಂಬಂಧಿಸಿದ ಐತಿಹ್ಯಗಳೊಂದಿಗೆ ಆ ಬೆಟ್ಟಗಳು ತಳಕು ಹಾಕಿಕೊಂಡಿದ್ದು, ಹಿರೋಡೆ, ಹಾರೋಹಳ್ಳಿ, ಚಿಕ್ಕಾಡೆ ಗ್ರಾಮಗಳನ್ನು ಈ ಸಂಬಂಧ ಹೆಸರಿಸಲಾಗುತ್ತದೆ. ಕುಂತಿಬೆಟ್ಟದ ಮೇಲೆ ಶಿವಾಲಯ, ತಿಳಿಜಲದಿಂದ ಕೂಡಿದ ಕುಂತಿಕೊಳ, ಭೀಮನಬಂಡಿ, ಭೀಮನ ಒಳಲೆ, ಭೀಮನ ಪಾದ, ಮುಂತಾದವುಗಳಿವೆ. ಶಂಕರಾನಂದ ಸ್ವಾಮಿಗಳ ತಪೋವನ ಬೆಟ್ಟದ ಬದಿಯಲ್ಲಿದೆ. ಕುಂತಿಬೆಟ್ಟದಲ್ಲಿ ಸುಮಾರು ೫೦–೬೦ ಅಡಿಯ ನಿಸರ್ಗ ನಿರ್ಮಿತ ಜಾರುಬಂಡೆ, ಹಾವಿನಹೆಡೆ, ರಾಕ್ಷಸನ ಬಾಯಂತೆ ತೋರುವ ಬಂಡೆ, ಮುಂತಾದ ಕಲ್ಪನೆಗಳನ್ನೂ ಗರಿಗೆದರಿಸುವ ನೂರಾರು ಬಂಡೆಗಳಿವೆ.

ಕ್ರಿ.ಶ. ೧೮೯೯ರಿಂದ ೧೮೮೧ರವರೆಗೆ ಇದು ಬ್ರಿಟೀಷರ ಮದ್ರಾಸ್ ರೆಜಿಮೆಂಟಿನ ದಂಡು ಪ್ರದೇಶವಾಗಿದ್ದು, ಕ್ರಿ.ಶ. ೧೮೪೯–೧೮೬೬ರ ಅವಧಿಯಲ್ಲಿ ಮಡಿದ ಸೈನಿಕರ ಶಾಸನಯುಕ್ತ ಒಂಬತ್ತು ಸಮಾಧಿಗಳು ಇಲ್ಲಿವೆ. ಅಲ್ಲದೆ ಹಾರೋಹಳ್ಳಿಯ ಬಳಿಯ ರುದ್ರಭೂಮಿಯಲ್ಲಿ ೧೮೩೨–೧೮೭೭ರ ಅವಧಿಯಲ್ಲಿ ತೀರಿಹೋದ ಆಂಗ್ಲ ಸೇನಾ ಕುಟುಂಬದವರ ಕೆಲವು ಕಲಾತ್ಮಕ ಗೋರಿಗಳಿವೆ. ಬಳಿಯಲ್ಲೇ ಗಂಜಿಮನೆ ಎಂದು ಕರೆಯುವ ಬ್ರಿಟಿಷ್ ಕಾಲದ ಪಾಳು ಕಟ್ಟಡವಿದೆ. ಪಾಂಡವಪುರ ಪಟ್ಟಣದಲ್ಲಿರುವ ಬ್ರಿಟಿಷ್ ಕಾಲದ 'ಚರ್ಚ್ ಆಫ್ ದಿ ಅಸಮ್‌ಷನ್' ಅನ್ನು ವಸ್ತುಸಂಗ್ರಹಾಲವನ್ನಾಗಿಸಿದ್ದು, ಅಲ್ಲಿ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಗಡಿಯಾರ, ಬೈಬಲ್ ಪ್ರತಿ, ಕುರ್ಚಿ, ಮರದ ವಿಗ್ರಹ ಹಾಗೂ ನೂರಾರು ವರ್ಣಚಿತ್ರಗಳಿವೆ. ಹಳೇ ಇಗರ್ಜಿಯ ಬಳಿ ಹೊಸ ಚರ್ಚನ್ನು ಇತ್ತೀಚೆಗೆ ನಿರ್ಮಿಸಲಾಗಿದೆ.

**ಗುಮ್ಮನಹಳ್ಳಿ** (೫೨೩೭) : ತಾಲೂಕು ಕೇಂದ್ರ ಪಾಂಡವಪುರದಿಂದ ೧೪ ಕಿ.ಮೀ. ವಾಯವ್ಯಕ್ಕಿದ್ದು, ಕ್ಷೇತ್ರಕಾರ್ಯ ಸಂದರ್ಭದಲ್ಲಿ ಚೋಳರ ಗುಡಿ ಬಳಿ ವೀರಗಲ್ಲು ಶಾಸನ ಪತ್ತೆಯಾಗಿದೆ. ಇಲ್ಲಿಯ ಚೋಳರ ಗುಡಿಯು ಸುಮಾರು ೧೩ನೆಯ ಶತಮಾನದ ರಚನೆಯಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ಪೂರ್ವಾಭಿಮುಖವಾಗಿರುವ ಇದು ಮೂಲತ: ಏಕಕೂಟವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ನಂದಿಮಂಟಪಗಳನ್ನು ಹೊಂದಿದ್ದು, ನಂತರದಲ್ಲಿ ನವರಂಗ ಹಾಗೂ ನಂದಿಮಂಟಪಗಳ ನಡುವಣ ಸ್ಥಳವನ್ನು ಬಳಸಿಕೊಂಡು ದಕ್ಷಿಣಾಭಿಮುಖವಾಗಿ ಇನ್ನೊಂದು ಗರ್ಭಗೃಹವನ್ನು ನಿರ್ಮಿಸಿ, ಸುಮಾರು ನಾಲ್ಕೂವರೆ ಅಡಿ ಎತ್ತರದ ಕೇಶವವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಗಣಪತಿ, ಭೈರವ, ಕೇಶವ, ಮಹಿಷಮರ್ಧಿನಿಯ ಶಿಲ್ಪಗಳೊಂದಿಗೆ ಸೂರ್ಯನ ಎರಡು ಶಿಲ್ಪಗಳೂ ಇವೆ. ತುರ್ತು ಸಂರಕ್ಷಣೆಯ ಅಗತ್ಯವಿರುವ ಇದರ ಬಳಿ ನಾಲ್ಕಾರು ವೀರಗಲ್ಲುಗಳಿದ್ದು, ಅವುಗಳಲ್ಲೊಂದು ಹೊಯ್ಸಳರ ಕಾಲದ್ದಾಗಿದೆ. ಇಲ್ಲಿಯ ಆಂಜನೇಯನ ಗುಡಿಯು ಮೈಸೂರು ಅರಸರ ಕಾಲದ ರಚನೆಯಾಗಿದ್ದು, ಎದುರಿಗೆ ಎತ್ತರದ ಗರುಡಗಂಬವಿದೆ. ಉಳಿದಂತೆ ಊರಲ್ಲಿ ದೇವಿರಮ್ಮ, ಅಜ್ಜಮ್ಮ, ವೀರಭದ್ರ ಹಾಗೂ ಭೈರವನ ನವೀನ ದೇವಾಲಯಗಳಿವೆ.

**ಬಸರಾಳು** (೩೩೪೬) : ತಾಲೂಕು ಕೇಂದ್ರ ಮಂಡ್ಯದಿಂದ ೨೪ ಕಿ.ಮೀ. ಉತ್ತರಕ್ಕಿರುವ ಹೋಬಳಿ ಕೇಂದ್ರ. ಪ್ರಾಚೀನ ಶಾಸನಗಳಲ್ಲಿ 'ಬಸುರುವಾಳು' ಎಂದೇ ಉಲ್ಲೇಖಿತಗೊಂಡಿದ್ದು, ಈವರೆಗೆ ವರದಿಯಾಗಿರುವ ಬೇರೆ ಬೇರೆ ಕಾಲದ ನಾಲ್ಕು ಶಾಸನಗಳನ್ನು ಮಲ್ಲೇಶ್ವರ ಗುಡಿ ಬಾಗಿಲ ಬಳಿ ಇರುವ ಒಂದೇ ಕಲ್ಲಿನ ಮೇಲೆ ಕೆತ್ತಲಾಗಿದೆ. ಹೊಯ್ಸಳ ಇಮ್ಮಡಿ ನರಸಿಂಹನ ಕ್ರಿ.ಶ.೧೨೩೪ರ ಶಾಸನವು ಹರಿಹರ ದಂಡನಾಯಕನು ತನ್ನ ಹುಟ್ಟೂರಾದ ಬಸರಾಳಿನಲ್ಲಿ ಮೇರು ಪರ್ವತಕ್ಕೆ ಸಮನಾದ ಮಲ್ಲಿಕಾರ್ಜುನ ಆಲಯವನ್ನು ತಂದೆ ಮಲ್ಲೆಯನಾಯಕನ ಹೆಸರಲ್ಲೂ, ಕೆರೆಯನ್ನು ತಾಯಿ ಗುಜ್ಜವ್ವೆಯ ಹೆಸರಲ್ಲೂ ನಿರ್ಮಿಸಿ, ದೇವರ ಸೇವೆಗೆಂದು ಬಿಟ್ಟ ದತ್ತಿ ಶಾಸನವಾಗಿದೆ. ಹೊಯ್ಸಳ ಸೋಮೇಶ್ವರನ ಕ್ರಿ.ಶ.೧೨೩೭ರ ಶಾಸನವು ಅದೇ ದೇವರಿಗೆ ಹರಿಹರ ದಂಡನಾಯಕನು ಬಸುರಿಹಾಳಿಗೆ ಸೇರಿದ ಬೇಬಿ ಹಾಗೂ ತರಣಿ (ಇಂದಿನ ತರಣಗೆರೆ) ಗ್ರಾಮಗಳ ಸಿದ್ಧಾಯ (ರಾಜ್ಯಾದಾಯ)ವನ್ನು ದತ್ತಿ ಬಿಟ್ಟದ್ದನ್ನು ದಾಖಲಿಸಿದೆ. ಶಾಸನದ ಕೊನೆಯಲ್ಲಿ ಚಿದಾನಂದ ಕವಿಯು ಈ ಶಾಸನವನ್ನು ರಚಿಸಿದನೆಂದು ಹೇಳಲಾಗಿದ್ದು, ಸೂಕ್ತಿ ಸುಧಾರ್ಣವ ಗ್ರಂಥವನ್ನು

ರಚಿಸಿದ ಚಿದಾನಂದ ಮಲ್ಲಿಕಾರ್ಜುನನೇ ಇವನಾಗಿದ್ದು, ವ್ಯಾಕರಣ ಗ್ರಂಥವಾದ ಶಬ್ಧಮಣಿದರ್ಪಣ ಬರೆದ ಕೇಶಿರಾಜನ ತಂದೆಯೇ ಇವನೆಂಬ ಅಭಿಪ್ರಾಯವಿದೆ. ಅದೇ ಕಲ್ಲಿನ ಮೇಲಿರುವ ಕ್ರಿ.ಶ.೧೨೯೭ ಹಾಗೂ ಕ್ರಿ.ಶ. ೧೫೦೭ರ ಶಾಸನಗಳೂ ಇದೇ ದೇವರಿಗೆ ದಾನ ಬಿಟ್ಟಿದ್ದನ್ನು ದಾಖಲಿಸಿವೆ.

ನಾಗಮಂಗಲ ರಸ್ತೆಯಲ್ಲಿ ಊರ ಅಂಚಿಗಾದಂತೆ ಇರುವ ಗುಜ್ಜವ್ವೆ ಕೆರೆಯ ಬದಿಯಲ್ಲಿ ಪೂರ್ವಾಭಿಮುಖವಾಗಿರುವ ಮಲ್ಲಿಕಾರ್ಜುನ ದೇವಾಲಯವು ಗಾತ್ರದಲ್ಲಿ ಕಿರಿದಾದರೂ ಶಿಲ್ಪಕಲಾ ದೃಷ್ಟಿಯಿಂದ ಹೊಯ್ಸಳ ದೇವಾಲಯಗಳ ಸಾಲಿನಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದು, ಹಾಸನ ತಾಲೂಕಿನ ಕೋರವಂಗಲದ ಬೂಚೇಶ್ವರ ದೇವಾಲಯವನ್ನು ನೆನಪಿಸುವ ತ್ರಿಕೂಟವಾಗಿದೆ. ಬಹುಕೋನಾಕಾರದ ತಳವಿನ್ಯಾಸವನ್ನು ಹೊಂದಿರುವ ಈ ಗುಡಿಯು ಮೂರು ಅಡಿ ಎತ್ತರದ ಜಗತಿಯ ಮೇಲೆ ನಿರ್ಮಿಸಲ್ಪಟ್ಟಿದ್ದು, ಪ್ರಧಾನ ಗರ್ಭಗೃಹಕ್ಕೆ ಅಂತರಾಳವಿದ್ದು, ನವರಂಗದ ಇಕ್ಕೆಲಗಳಲ್ಲಿ ಎದುರುಬದಿರಾಗಿ ಒಂದೊಂದು ಅಂಕಣದ ಪ್ರತ್ಯೇಕ ಗರ್ಭಗೃಹಗಳಿವೆ. ನವರಂಗದ ಪೂರ್ವಕ್ಕೆ ನಾಲ್ಕು ಅಂಕಣ ಉದ್ದದ ಜಾಲಂಧ್ರ ಭಿತ್ತಿಯುಳ್ಳ ಆಯತಾಕಾರದ ಮುಖಮಂಟಪವಿದ್ದು, ದೇವಾಲಯವನ್ನು ಮಂಟಪದ ಉತ್ತರ-ದಕ್ಷಿಣ ಭಾಗಗಳಲ್ಲಿರುವ ದ್ವಾರಗಳ ಮೂಲಕ ಪ್ರವೇಶಿಸುವಾಗ ಇಕ್ಕೆಲಗಳಲ್ಲಿ ಜಗತಿಯಂಚಲ್ಲಿರುವ ಶಿಖರವುಳ್ಳ ಕಿರುಗುಡಿ ಮತ್ತು ಸುಂದರವಾದ ಆನೆ ಕೈಪಿಡಿಗಳು ಗಮನ ಸೆಳೆಯುತ್ತವೆ.

ಸುಂದರ ದ್ರಾವಿಡ ಶಿಖರವನ್ನು ಹೊಂದಿರುವ ಇದರ ಪ್ರಧಾನ ಗರ್ಭಗೃಹದಲ್ಲಿ ಬಲಹರಿ ಶಿವಲಿಂಗ, ಛತ್ತಲ್ಲಿ ಸುಂದರ ಕಮಲಗಳಿದ್ದು, ಅದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು, ಬರಿದಾದ ಲಲಾಟದ ಮೇಲೆ ತ್ರಿಶಿಖರ ಹಾಗೂ ಸಿಂಹಗಳಿದ್ದು, ಇಕ್ಕೆಲಗಳಲ್ಲಿ ಶೈವದ್ವಾರಪಾಲಕರಿದ್ದಾರೆ. ಅಂತರಾಳದ ಬಾಗಿಲವಾಡವು ಪಂಚಶಿಖರಾಲಂಕಾರ, ಜಾಲಂದ್ರ, ಹಾಗೂ ಶೈವದ್ವಾರಪಾಲಕರನ್ನು ಹೊಂದಿದ್ದು, ಆಕರ್ಷಕವಾಗಿದೆ. ನವರಂಗದ ನಡುವಣ ಚರಕಿ ಯಂತ್ರ ನಿರ್ಮಿತ ನಾಲ್ಕೂ ಕಂಬಗಳಿಗೆ ಕಮಲ ಬೋದಿಗೆ ಇದ್ದು, ನಡುವಣ ಛತ್ತಿನ ಭುವನೇಶ್ವರಿ ಅಲಂಕಾರ ಇಂದು ಕಣ್ಮರೆಯಾಗಿದೆ. ಉಳಿದ ಅಂಕಣಗಳ ಛತ್ತು ಹಾಗೂ ತೊಲೆಗಳು ಆಕರ್ಷಕ ಕಮಲಗಳಿಂದ ಅಲಂಕೃತಗೊಂಡಿದ್ದು ನಯನ ಮನೋಹರವಾಗಿವೆ. ನವರಂಗದ ಉತ್ತರ-ದಕ್ಷಿಣದಲ್ಲಿ ಎದುರು ಬದುರಾಗಿರುವ ಒಂದೊಂದು ಅಂಕಣದ ಗರ್ಭಗೃಹಗಳಲ್ಲಿ ಕ್ರಮವಾಗಿ ನಾಲ್ಕೂವರೆ ಅಡಿಯ ನಾಗ-ನಾಗಿಣಿ ಹಾಗೂ ಸೂರ್ಯನ ಸುಂದರ ಬಿಂಬಗಳಿವೆ. ಇಂದು ನಾಗ-ನಾಗಿಣಿ ಶಿಲ್ಪವಿರುವ ಗರುಡ ಪೀಠದಲ್ಲಿ ಹಿಂದೆ ವಿಷ್ಣುವಿನ ಮೂರ್ತಿ ಇತ್ತೆಂದು ಊಹಿಸಬಹುದಾಗಿದ್ದು, ಈ ಗರ್ಭಗೃಹಗಳ ಬಾಗಿಲವಾಡವೂ ಪಂಚಶಾಖಾಲಂಕೃತವಾಗಿದ್ದು, ವೈಷ್ಣವ ದ್ವಾರಪಾಲಕರಿದ್ದಾರೆ. ಶಿವಲಿಂಗಕ್ಕೆ ಎದುರಾಗಿ ನವರಂಗದಲ್ಲಿರುವ ನಂದಿಯೂ ಗಮನಾರ್ಹವಾಗಿದೆ. ಅಲ್ಲಿರುವ ನಾಲ್ಕು ದೇವಕೋಷ್ಠಗಳು ಕಿರುಗುಡಿಗಳೇ ಆಗಿದ್ದು, ದ್ರಾವಿಡ ಮಾದರಿಯ ಸುಂದರ ಶಿಖರಗಳನ್ನು ಹೊಂದಿದ್ದು, ಶಾರದೆ(ಸರಸ್ವತಿ), ಗಣಪತಿ, ಮಹಿಷಮರ್ಧಿನಿ, ಹಾಗೂ ಸಪ್ತಮಾತೃಕಾ ಪಟ್ಟಿಕೆಗಳಿವೆ. ನವರಂಗವನ್ನು ಪ್ರವೇಶಿಸಲು ಇರುವ ಬಾಗಿಲವಾಡದ ಲಲಾಟದಲ್ಲಿ ತಾಂಡವೇಶ್ವರ ಶಿಲ್ಪವಿದ್ದು, ಶೈವ ದ್ವಾರಪಾಲಕರು ಹಾಗೂ ಜಾಲಂದ್ರಗಳಿವೆ. ನವರಂಗದ ಪೂರ್ವಭಾಗ ಹಾಗೂ ಮುಖಮಂಟಪದ ಭಿತ್ತಿಗಳ ನಡುವೆ ಒದಗಿಸಿರುವ ಜಾಲಂದ್ರಗಳು ಗಾಳಿ-ಬೆಳಕನ್ನು ನೀಡುತ್ತವೆ. ನವರಂಗದ ಪೂರ್ವಭಾಗ ಹಾಗೂ ಮುಖಮಂಟಪಗಳಲ್ಲಿ ಕಂಡುಬರುವ ಕಕ್ಷಾಸನಗಳಿಂದ, ಮೂಲತ: ಹಿಂದೆ ಇದ್ದ ತೆರೆದ ನವರಂಗ, ಅರ್ಧಮಂಟಪ ಹಾಗೂ ನಂದಿ ಮಂಟಪಗಳಿಗೆ ನಂತರ ಜಾಲಂದ್ರ ಭಿತ್ತಿಗಳನ್ನು ನಿರ್ಮಿಸಿ, ಒಳಕ್ಕೆ ಸೇರಿಸಿಕೊಂಡಂತೆ ತೋರುತ್ತದೆ. ದೇವಾಲಯವನ್ನು ಪ್ರವೇಶಿಸುವ ಮುಖಮಂಟಪದ ಉತ್ತರ-ದಕ್ಷಿಣಗಳಿಗೆ ಒಂದೊಂದೇ ವೈಷ್ಣವ ದ್ವಾರಪಾಲಕ ಶಿಲ್ಪವಿದ್ದು, ಉಳಿದೆರಡು ಕಣ್ಮರೆಯಾಗಿವೆ. ಮುಖಮಂಟಪದಲ್ಲಿರುವ ಆಳೆತ್ತರದ ಬೃಹತ್ ನಂದಿ ಹಾಗೂ ದ್ವಾರಪಾಲಕರ ಶಿಲ್ಪಗಳು ಉತ್ಕೃಷ್ಟವಾಗಿವೆ. ಬಳಪದ ಕಲ್ಲಿನಲ್ಲಿ ನಿರ್ಮಿಸಿರುವ ಈ ದೇವಾಲಯದಲ್ಲಿ ಕನಿಷ್ಠ ಏಳು ಮಾದರಿಯ ಕಂಬಗಳಿದ್ದು, ಭಿತ್ತಿಯಲ್ಲಿ ಅಡಿಯಿಂದ

ಮುಡಿಯವರೆಗೆ ದೇವಲೋಕವನ್ನೇ ಸೃಷ್ಟಿಸಲಾಗಿದ್ದು, ಪುರಾಣ ಕಥನ ಶಿಲ್ಪಗಳಂತೂ ರಾಮಾಯಣ-ಮಹಾಭಾರತ ಭಾಗವತಗಳೊಂದಿಗೆ ಮೈತುಂಬಿ ನಿಂತ ಮೇರುಗಿರಿ ಏನೋ ಎಂಬ ಭಾವನೆಯನ್ನು ಮೂಡಿಸುತ್ತಿದ್ದು, ಇಲ್ಲಿಯ ೧೨೩೪ರ ಶಾಸನದಲ್ಲಿ ಬರುವ "ಮೊದಲಿಂದಂ ಕಳಶಂಬರಂ ಮೆರೆವ ನಾನಾ ಚಿತ್ರಪತ್ರಗಳಿಂ ಮುದಮಂ ಬೀರುವ ಭಾರತಾದಿ ಕಥೆಯಂ ಮೆಯ್ವೆತ್ತ ಕೂಟಂಗಳಿಂದಿದು ಪ್ರಾಂಚಾಳಿಕೆ ತಳ್ತ ಮೇರುಗಿರಿಯೋ ಪೇಳೆಂಬಿನಂ ವಿಭ್ರಮಾಸ್ಪದಮಾಗಿಪ್ಪುದು ದೇವಾಲಯಂ" ಎಂಬ ವರ್ಣನೆಯನ್ನು ದೇವಾಲಯದ ಶಿಲ್ಪ ವೈಭವ ಮಾರ್ದನಿಸುತ್ತದೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ದೇವಾಲಯದ ಅಧಿಷ್ಠಾನವನ್ನು ಆರೋಹಣ ಕ್ರಮದಲ್ಲಿ ಆನೆ, ಕುದುರೆ ಸವಾರರು, ಹೊಯ್ಸಳ ಲಾಂಛನ, ಪುರಾಣ ಕಥನ ಶಿಲ್ಪ, ಮಕರ ಹಾಗೂ ಹಂಸಾವಳಿಯ ಆಕರ್ಷಕ ಸಾಲುಪಟ್ಟಿಕೆಗಳು ಅಲಂಕರಿಸಿದ್ದು, ನವರಂಗದ ಪೂರ್ವಭಾಗ ಹಾಗೂ ಮುಖಮಂಟಪಗಳಲ್ಲಿ ಕಂಡು ಬರುವ, ಭಾಗಶ: ಹಾಳಾಗಿರುವ ಕಕ್ಷಾಸನ (ಒರಗು ಆಸನ)ದ ಹಿಂಬದಿಯಲ್ಲಿರುವ ಮಿಥುನ ಶಿಲ್ಪಗಳೂ ಸೇರಿದಂತೆ ಹಲವಾರು ಸಾಮಾಜಿಕ ದೃಶ್ಯಗಳು ಸಮಕಾಲೀನ ಸಮಾಜವನ್ನು ನೈಜವಾಗಿ ಪ್ರತಿಬಿಂಬಿಸಿವೆ. ಅವುಗಳಲ್ಲಿ ರಾಮಾಯಣದ ವಾಲಿ-ಸುಗ್ರೀವ ಯುದ್ಧ, ಕೈಲಾಸ ಎತ್ತುತ್ತಿರುವ ರಾವಣ, ಮಹಾಭಾರತದ ಮತ್ಸ್ಯಯಂತ್ರಭೇದ್ಯ, ಕಿರಾತಾರ್ಜುನೀಯ, ಚಕ್ರವ್ಯೂಹ, ಭಾಗವತದ ಕೃಷ್ಣಲೀಲಾ ದೃಶ್ಯ, ಗೋವರ್ಧನಧಾರಿ ಮುಂತಾದವು ಮನೋಜ್ಞವಾಗಿ ಮೂಡಿಬಂದಿವೆ. ಅಧಿಷ್ಠಾನದ ಮೇಲಿರುವ ಎರಡು ಹಂತದ ಭಿತ್ತಿಯಲ್ಲಿ ಕೆಳಗಿನ ಹಂತವು ದೇವಾನುದೇವತೆಗಳ ಶಿಲ್ಪಗಳಿಂದ ಅಲಂಕೃತಗೊಂಡಿದ್ದರೆ, ಮೇಲಿನ ಹಂತವು ಕಿರು ಶಿಖರ ಹಾಗೂ ಅಲಂಕಾರಿಕ ಸ್ತಂಭಗಳಿಂದ ಅಲಂಕರಿಸಲ್ಪಟ್ಟಿದ್ದು, ವಲಭಿ, ಪ್ರಸ್ತಾರಗಳೂ ಅಲಂಕಾರಿಕ ಕಿರು ಕೆತ್ತನೆಗಳಿಂದ ತುಂಬಿ ತುಳುಕುತ್ತಿದ್ದು, ವೀಕ್ಷಕರಲ್ಲಿ ಧನ್ಯತೆಯ ಭಾವವನ್ನು ಮೂಡಿಸುತ್ತವೆ. ಸಮುದ್ರ ಮಂಥನ, ಷಣ್ಮುಖ, ಕಾಳಿಂಗ ಮರ್ಧನ, ಕೇಶವ, ನಂದೀರೂಢಶಿವ, ಉಗ್ರನರಸಿಂಹ, (ಸ್ಥಾನಕ ಭಂಗಿ), ಹಯಗ್ರೀವ, ನೃತ್ಯ ಭಂಗಿಯಲ್ಲಿರುವ ಲಕ್ಷ್ಮೀನರಸಿಂಹ, ಯೋಗಾನರಸಿಂಹ, ಅಭಯ ನರಸಿಂಹ, ಲಕ್ಷ್ಮೀನಾರಾಯಣ, ಸೂರ್ಯ, ಗಜಚರ್ಮಾಂಬರಧಾರಿ ಶಿವ, ಹರಿಹರ, ವಿಷ್ಣು, ವಾಮನ, ಬಲಿಚಕ್ರವರ್ತಿ, ತ್ರಿಪುರಾಂತಕ ಶಿವ, ವಿಷ್ಣು, ಬ್ರಹ್ಮ-ಸರಸ್ವತಿ, ಉಮಾಮಹೇಶ್ವರ, ಗಣಪ, ೧೬ ಭುಜದ ದುರ್ಗಿ, ನಟರಾಜ, ಭೈರವ, ಗರುಡಾರೂಡ ವಿಷ್ಣು, ರತಿ-ಮನ್ಮಥ, ದೇವಿ ಮುಂತಾದ ಶಿಲ್ಪಗಳೊಂದಿಗೆ ಶುಕಸುಂದರಿ, ಚೌರಿಧಾರಿ ಸಖಿಯರನ್ನೂ ಭಿತ್ತಿಯ ಮೇಲೆ ನೋಡಬಹುದಾಗಿದ್ದು, ಗರ್ಭಗುಡಿಯ ಮೇಲಿರುವ ದ್ರಾವಿಡ ಶಿಖರವನ್ನು ವೈವಿಧ್ಯಮಯ ಕಿರು ಶಿಲ್ಪಗಳಿಂದ ಅಲಂಕರಿಸಲಾಗಿದ್ದು, ಶುಕನಾಸಿಯ ಮೇಲೆ ಹುಲಿಯನ್ನು ಕೊಲ್ಲುತ್ತಿರುವ ಸಳನನ್ನುಳ್ಳ ಹೊಯ್ಸಳ ಲಾಂಛನವಿದೆ. ದಕ್ಷಿಣಕ್ಕಿರುವ ಪ್ರಾಕಾರದ ದ್ವಾರಮಂಟಪದ ಮೂಲಕವೇ ದೇವಾಲಯದ ಆವರಣವನ್ನು ಪ್ರವೇಶಿಸಬೇಕಾಗಿದ್ದು, ಅದರ ಎತ್ತರವಾದ ಕಂಬ ಹಾಗೂ ಅಧಿಷ್ಠಾನಗಳು ವಿಶೇಷ ಮೆರಗನ್ನು ನೀಡಿದ್ದು, ಸಂಕೀರ್ಣದ ಈಶಾನ್ಯ ಮೂಲೆಯಲ್ಲಿರುವ ಚಂಡಿಕೇಶ್ವರ ಗುಡಿಯ ಗರ್ಭಗೃಹದಲ್ಲಿ ಭೈರವನ ಶಿಲ್ಪವಿದ್ದು, ಮುಂದೆ ಅರ್ಧಮಂಟಪವಿದೆ. ದೇವಾಲಯದ ಪೂರ್ವಕ್ಕೆ ಸುಮಾರು ೨೦ ಅಡಿ ಎತ್ತರದ ಸ್ತಂಭದ ಮೇಲಿನ ಪೀಠದಲ್ಲಿ ಆನೆಯ ಮೇಲಿರುವ ಅಸೀನ ವೀರರ ಶಿಲ್ಪಕೆತ್ತನೆಯು ಅಗ್ರಹಾರ ಬಾಚಹಳ್ಳಿಯ ಗರುಡ ಸ್ತಂಭಗಳನ್ನು ಹೋಲುತ್ತಿದ್ದು, ಯಾವ ಗರುಡ -ಲೆಂಕನಿಗಾಗಿ ನಿಲ್ಲಿಸಿದ ಗರುಡ ಸ್ತಂಭ ಇದೆಂದು ಗೊತ್ತಾಗುವುದಿಲ್ಲ.

ಪೊಲೀಸ್ ಚೌಕಿ ಬಳಿ ಎರಡು (ಒಂದು ಅತ್ಮಾಹುತಿ ಕಲ್ಲು), ಮಲ್ಲಿಕಾರ್ಜುನ ಗುಡಿ ಮಾರ್ಗದಲ್ಲಿ ಒಂದು ಹಾಗೂ ಅರಳೀಮರದ ಬಳಿ ಏಳು ವೀರಗಲ್ಲುಗಳಿದ್ದು, ಅವುಗಳಲ್ಲಿ ಎರಡು ಹೊಯ್ಸಳರ ಕಾಲದ್ದಾದರೆ, ಉಳಿದವು ಸುಮಾರು ೧೭ನೆಯ ಶತಮಾನಕ್ಕೆ ಸೇರಿದ್ದಾಗಿವೆ. ಉಳಿದಂತೆ ಊರಿನಲ್ಲಿ ಕಾಲಭೈರವ, ಬಸವೇಶ್ವರ, ಮಹದೇಶ್ವರ, ಆಂಜನೇಯ, ಕಟ್ಟೆತಿಮ್ಮಪ್ಪ, ಮಾದವೀರನಹಳ್ಳಿ ರಸ್ತೆಯಲ್ಲಿರುವ ವೀರಭದ್ರ, ಕಾಡು ಬಸಪ್ಪ, ಪಟಲದಮ್ಮ, ಲಕ್ಷ್ಮೀದೇವಿ,

ಮಂಚಮ್ಮ, ಚಿನ್ನರದಮ್ಮ, ಹೊನ್ನೂರಮ್ಮ, ಎಲ್ಲಮ್ಮ ಮುಂತಾದ ಗುಡಿಗಳಿದ್ದು, ಯುಗಾದಿಯ ಹಿಂದಿನ ಸೋಮವಾರ ಭೈರವನ ಕೊಂಡವಿದ್ದು, ಆ ಸಂದರ್ಭದಲ್ಲಿ ಜರುಗುವ 'ಕಿಚ್ಚು ಮಾಸ್ತಿ' ಬಹಳ ವಿಶಿಷ್ಟವಾದ ಆಚರಣೆಯಾಗಿದೆ.

**ಬಸ್ತಿ ಹೊಸಕೋಟೆ (೪೬೮)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೨೮ ಕಿ.ಮೀ. ದಕ್ಷಿಣಕ್ಕೆ ಹಾಗೂ ಮಾವಿನಕೆರೆಗೆ ಎರಡು ಕಿ.ಮೀ. ಅಂತರದಲ್ಲಿದ್ದು, ಕನ್ನಂಬಾಡಿ ನಿರ್ಮಾಣದಿಂದಾಗಿ ಮುಳುಗಡೆಯಾಗಿದ್ದರೂ ಬೇಸಿಗೆಯಲ್ಲಿ ಮಾತ್ರ ವೀಕ್ಷಿಸಬಹುದಾದ ಗೊಮ್ಮಟಮೂರ್ತಿಯಿಂದಾಗಿ ಉಲ್ಲೇಖಾರ್ಹವಾಗಿದೆ. ಇಲ್ಲಿಂದ ವರದಿಯಾಗಿರುವ ಎರಡು ಶಾಸನಗಳಲ್ಲಿ, ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನ ಮಹಾಪ್ರಧಾನ ದಂಡನಾಯಕ ಪುಣಿಸಮಯ್ಯನು ಬಸದಿಯನ್ನು ನಿರ್ಮಿಸಿ ಮಾಣಿಕ್ಯದೊಡಲೂರು ಹಾಗೂ ಮಾವಿನಕೆರೆಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಮಾನಸ್ತಂಭದ ಮೇಲಿರುವ ಹೊಯ್ಸಳ ಒಂದನೆಯ ನರಸಿಂಹನ ಕ್ರಿ.ಶ.೧೧೬೫ರ ಶಾಸನದಿಂದ ಮಹಾಪ್ರಧಾನ ಹೆಗ್ಗಡೆ ಶಿವರಾಜನ ಅಧಿಕಾರಿ ಸೋಮಯ್ಯನು, ಮಾಣಿಕ್ಯವೊಳಲಿನ ಹೊಯ್ಸಳ ಜಿನಾಲಯಕ್ಕೆ ಮಾಣಿಕ್ಯ ಹೊಳಲಿನಲ್ಲಿ ಗದ್ದೆ ಹಾಗೂ ಮಗ್ಗದೆರೆಗಳನ್ನು ದಾನ ಬಿಟ್ಟಿದ್ದು ಗೊತ್ತಾಗುತ್ತದೆ. ಮೇಲಿನ ಶಾಸನೋಕ್ತ ಮಾಣಿಕ್ಯ ಜಿನಾಲಯವೇ ಇಲ್ಲಿಯ ಪಾಳು ನಿವೇಶನದ ದಿಬ್ಬವೊಂದರ ಮೇಲಿರುವ ಬಸದಿಯ ಅವಶೇಷವಾಗಿದ್ದು, ಕಮಾನಿನಾಕಾರದ ಗೂಡಿನಲ್ಲಿರುವ ಸುಮಾರು ಹದಿನೈದು ಅಡಿ ಎತ್ತರದ ಗೊಮ್ಮಟಮೂರ್ತಿಗೆ ಪಾದದಿಂದ ಮಂಡಿಯವರೆಗೆ ಬಳ್ಳಿಗಳನ್ನು ಕೊರೆದು ಅಲಂಕರಿಸಲಾಗಿದ್ದು, ತಲೆಗೆ ಗುಂಗುರು ಕೂದಲಿದ್ದು, ಈ ಶಿಲ್ಪವು ವಿಷ್ಣುವರ್ಧನನ ಮಂತ್ರಿ ಪುಣಿಸಮಯ್ಯನ ಕೊಡುಗೆಯಾಗಿದೆ.

**ಬೆಳಕವಾಡಿ (೭೨೮೨)** : ತಾಲೂಕು ಕೇಂದ್ರ ಮಳವಳ್ಳಿಯಿಂದ ೨೦ ಕಿ.ಮೀ. ಆಗ್ನೇಯಕ್ಕೆ ಕಾವೇರಿ ನದಿಯ ಎಡದಂಡೆಯ ಮೇಲಿದ್ದು, ಹೊಳೆದಂಡೆಯಲ್ಲಿ ಬೃಹತ್ ಶಿಲಾಯುಗದ ಮಾನವರ ಕಾಲಕ್ಕೆ ಸೇರಿದ ಕೆಂಪು, ಕಪ್ಪು ಹಾಗೂ ಕಪ್ಪು-ಕೆಂಪು ವರ್ಣದ ನುಣುಪಾದ ಮಡಕೆ ಚೂರುಗಳು ಹೇರಳವಾಗಿ ಲಭಿಸಿದ್ದರೆ, ರಸೆಟ್ ಲೇಪಿತ ಮಡಕೆ ಚೂರುಗಳು ವಿರಳವಾಗಿ ಲಭಿಸಿವೆ. ಅವುಗಳಲ್ಲಿ ಕೆಲವದರ ಮೇಲೆ ಅಲಂಕಾರಿಕ ಗುರುತುಗಳಿವೆ. ಆದರೆ ಬಹಳ ಹಾಳಾಗಿರುವ ಗುಂಡಿಯೊಂದರಲ್ಲಿ ಪ್ರಾಣಿಗಳ ಮೂಳೆಯೂ ದೊರೆತಿದ್ದು, ಅದು ಮೃತ್ತಿಕಾ ಸಮಾಧಿಯಾಗಿರುವ ಸಾಧ್ಯತೆಗಳಿವೆಯೆಂದು ೧೯೪೫-೪೬ರ ಪುರಾತತ್ವ ಇಲಾಖಾ ವರದಿ ತಿಳಿಸುತ್ತದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ವಿಜಯನಗರ ಕಾಲದ ಆರು ಶಾಸನಗಳು ಅಲ್ಲಿಯ ಶಂಭುಲಿಂಗ ಗುಡಿಗೆ ಬಿಟ್ಟ ದತ್ತಿಗಳಾಗಿವೆ. ಹೊಳೆದಂಡೆಯಲ್ಲಿರುವ ಈಶ್ವರ ಗುಡಿಯು ಸುಮಾರು ೧೫ನೆಯ ಶತಮಾನದ ರಚನೆಯಾದರೆ, ನಡುಕೇರಿಯಲ್ಲಿರುವ ವೀರಭದ್ರನ ಗುಡಿಯು ಸುಮಾರು ೧೮ನೇ ಶತಮಾನದ್ದಾಗಿದೆ. ಉಳಿದಂತೆ ಕಟ್ಟೆಬಸಪ್ಪ, ಉಪ್ಪರಿಗೆ ಬಸವೇಶ್ವರ, ಮಂದಲಕಮ್ಮ, ಮುಂತಾದ ಗುಡಿಗಳಿದ್ದು, ಏಳೆಂಟು ವೀರಗಲ್ಲು ಹಾಗೂ ಮೂರ್‍ನಾಲ್ಕು ಮಾಸ್ತಿಕಲ್ಲುಗಳಿವೆ. **ಬೊಪ್ಪಗೌಡನಪುರ (೨೪೯೬)** : ಹೋಬಳಿ ಕೇಂದ್ರವಾದ ಇದು ಬೆಳಕವಾಡಿಯಿಂದ ಆರು ಕಿ.ಮೀ. ದಕ್ಷಿಣಕ್ಕಿದೆ. ಕಲ್ಯಾಣ ಆಂದೋಲನದ ನಂತರ ಅಲ್ಲಿಂದ ಹೊರಟು ದಕ್ಷಿಣದೆಡೆಗೆ ಬಂದ ಮಂಟೇಸ್ವಾಮಿಯು, ಮಹಾದೇಶ್ವರ ಹಾಗೂ ಕೊಂಗಳ್ಳಿ ಮಲ್ಲೇಶ್ವರರ ಸಮಕಾಲೀನರು. ಕೊಡೇಕಲ್ ಬಸವಣ್ಣನ ಶಿಷ್ಯರಾಗಿ ಜ್ಞಾನ ಪಡೆದು ರಾಚಪ್ಪಾಜಿಯೊಂದಿಗೆ ದಕ್ಷಿಣಕ್ಕೆ ಬಂದು, ನಿಡಘಟ್ಟ (ಮಳವಳ್ಳಿ ತಾ.) ದ ಸಿದ್ಧಪ್ಪಾಜಿಯನ್ನು ಶಿಷ್ಯರನ್ನಾಗಿ ಪಡೆದು ಜನಪದರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಿ, ಮಳವಳ್ಳಿ-ಕುಂದೂರು ಮಾರ್ಗವಾಗಿ ನಡೆದು ಬೊಪ್ಪಗೌಡನಪುರವನ್ನು ತಮ್ಮ ಕರ್ಮಭೂಮಿ, ತಪೋಭೂಮಿಯನ್ನಾಗಿ ಮಾಡಿಕೊಂಡು ಧರ್ಮಪ್ರಚಾರಕ್ಕೆಂದು ನೆಲೆ ನಿಂತರು. ಕೆಳವರ್ಗದವರಿಗೆ ನೀಲಗಾರ ದೀಕ್ಷೆ ನೀಡಿ ಅವರ ಏಳ್ಗೆಗಾಗಿ ಶ್ರಮಿಸುತ್ತಾ, ಕೊನೆಗೆ ಅಲ್ಲೆ ಐಕ್ಯವಾಗಿದ್ದು, ಅವರ ಗದ್ದುಗೆ ಇಲ್ಲಿದೆ. ವೀರಶೈವ ಮಾರ್ಗದಲ್ಲೇ ಮುಂದುವರಿದು ಸ್ವತಂತ್ರ ಜನಪದ ಧರ್ಮದ ನಿರ್ಮಾಣಕ್ಕೆ ಮುಂದಾಗುವುದರ ಮೂಲಕ ಜನಪದರ ಗೌರವಾದರಗಳಿಗೆ ಪಾತ್ರರಾದ

ಇವರು 'ಧರೆಗೆ ದೊಡ್ಡವರು' 'ಪರಂಜ್ಯೋತಿ' ಎಂದೆಲ್ಲ ಸ್ತುತಿಸಲ್ಪಟ್ಟಿದ್ದು, 'ಮಂಟೇಸ್ವಾಮಿ' ಜನಪದ ಕಾವ್ಯಕ್ಕೆ ಕಥಾನಾಯಕರಾದವರು. ಈ ಊರನ್ನು ಮೊದಲು ಕಾಡಂಕನಹಳ್ಳಿ ಎಂದು ಕರೆಯಲಾಗುತ್ತಿದ್ದು, ಮಂಟೇಸ್ವಾಮಿ ಇದನ್ನು ಒಪ್ಪಿಕೊಂಡು ಅಲ್ಲೇ ನೆಲಸಿದ್ದರಿಂದ 'ಒಪ್ಪಿಗೊಂಡಪುರ' ಎಂಬ ಹೆಸರು ಬಂದು, ಮುಂದೇ ಅದೇ ಬೊಪ್ಪಗೌಡನಪುರ ಆಯಿತೆಂಬ ಸ್ಥಳೀಯ ಅಭಿಪ್ರಾಯವಿದೆ. ಆದರೆ ನೆರೆಯ ಮುಟ್ಟನಹಳ್ಳಿಯ ಕ್ರಿ.ಶ.೧೫೦೬ರ ಶಾಸನ ಇದನ್ನು ಬೊಪ್ಪಗೌ(ಗೊಂ)ಡನಪುರ ಎಂದೇ ಉಲ್ಲೇಖಿಸಿದೆ. ಈ ಹಿನ್ನೆಲೆಯಲ್ಲಿ 'ಒಪ್ಪಗೊಂಡಪುರ' 'ನಿಷ್ಪತ್ತಿ'ಯನ್ನು ಕೈಬಿಟ್ಟು ಬೊಪ್ಪಗೌಡನೆಂಬುವನು ಈ ಗ್ರಾಮವನ್ನು ನಿರ್ಮಿಸಿದ್ದರಿಂದ ಅದಕ್ಕೆ ಬೊಪ್ಪಗೌಂಡಪುರ ಎಂಬ ಹೆಸರು ಬಂದಿರಬಹುದೆಂದು ಊಹಿಸಬೇಕಾಗುತ್ತದೆ. ಪ್ರತೀ ವರ್ಷ ಯುಗಾದಿಯಲ್ಲಿ ನಡೆಯುವ ಕಪ್ಪಡಿ ರಾಚಪ್ಪಾಜಿಯ ಜಾತ್ರೆಯ ಪೂರ್ವ ಮತ್ತು ಉತ್ತರಾರ್ಧಭಾಗಗಳಲ್ಲಿ ಬೊಪ್ಪಗೌಡನಪುರದಲ್ಲಿ ಜರುಗುವ ಪರಸೆ ಹಾಗೂ ಪಂಕ್ತಿ ಸೇವೆಗಳು ಬಹಳ ವಿಶಿಷ್ಟವಾಗಿದ್ದು, ಮಹತ್ವ ಪಡೆದಿವೆ. ಆ ಸಂದರ್ಭದಲ್ಲಿ ನೀಲಗಾರರು ಹಾಗೂ ಅಸಂಖ್ಯಾತ ಭಕ್ತರು ಇಲ್ಲಿ ಸೇರುತ್ತಾರೆ.

**ಬೆಳಗೊಳ (೬೨೪೭)** : ತಾಲೂಕು ಕೇಂದ್ರ ಶ್ರೀರಂಗಪಟ್ಟಣದಿಂದ ೧೨ ಕಿ.ಮೀ. ಪಶ್ಚಿಮಕ್ಕಿರುವ ಹೋಬಳಿ ಕೇಂದ್ರ. ಪ್ರಾಚೀನ ಕನ್ನಡ ಶಾಸನಗಳಲ್ಲಿ ಬಳ್ಳಿಗೊಳ (ಬಲಮುರಿ ಕ್ರಿ.ಶ.೧೧೧೩), ಬೆಳಗೊಳ, ಬಳಗುಳ (ಬಲಮುರಿ ಕ್ರಿ.ಶ.೧೪೦೩) ಎಂದೂ ತಮಿಳು ಶಾಸನಗಳಲ್ಲಿ 'ವಳ್ಳೈಕುಳ' (ಕ್ರಿ.ಶ.೧೩೩೮) ಎಂದೂ ದಾಖಲಾಗಿದ್ದು, ಕ್ರಿ.ಶ.೧೩೩೮ರ ಶಾಸನದಲ್ಲಿ ಬರುವ 'ಕೊಂಗುಕೊಂಡ ಶ್ರೀ ವಿಷ್ಣುವರ್ಧನ ಪೋಸಳದೇವ ಚತುರ್ವೇದಿ ಮಂಗಲ' ಎಂಬ ಉಲ್ಲೇಖದಿಂದ ಬೆಳಗೊಳವು ವಿಷ್ಣುವರ್ಧನನ ಕಾಲದಲ್ಲಿ ಅಗ್ರಹಾರವಾಗಿ ಮಾರ್ಪಟ್ಟಿದ್ದ ಅಂಶ ವೇದ್ಯವಾಗುತ್ತದೆ.

ಊರಾಚೆ ಇರುವ ಜನಾರ್ದನ ದೇವಾಲಯವು ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಚೋಳ ಶೈಲಿಯಲ್ಲಿ ನಿರ್ಮಿಸಲ್ಪಟ್ಟಿದ್ದು, ಸುಮಾರು ೧೬ನೇ ಶತಮಾನದಲ್ಲಿ ಜೀರ್ಣೋದ್ಧಾರಗೊಂಡು ವಿಸ್ತರಿಸಲ್ಪಟ್ಟಿದೆ. ಅಯತಾಕಾರದ ತಳವಿನ್ಯಾಸವನ್ನು ಹೊಂದಿರುವ ಈ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ಪ್ರದಕ್ಷಿಣಾ ಪಥ, ಕೈಸಾಲೆ ಮಂಟಪ ಹಾಗೂ ಸಭಾಮಂಟಪಗಳಿವೆ. ಒಳಗೆ ಜನಾರ್ದನನ ಆಳೆತ್ತರದ ಸುಂದರ ಶಿಲ್ಪವಿದ್ದು, ಅಂತರಾಳದ ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆ ಇದ್ದು, ಮೇಲೆ ಇಟ್ಟಿಗೆ-ಗಾರೆಯ ಶಿಲ್ಪಾಲಂಕೃತ ಶಿಖರವಿದೆ. ಈ ಗುಡಿಗೆ ಸೇರಿದಂತೆ ರಾಮಾನುಜ ಕೂಟ (ಛತ್ರ) ಇದ್ದ ಅಂಶ ಸುಮಾರು ೧೬ನೆಯ ಶತಮಾನದ ಶಾಸನದಿಂದ ಗೊತ್ತಾಗುತ್ತದೆ. ಇದರ ಎಡಭಾಗದಲ್ಲಿರುವ ಲಕ್ಷ್ಮೀಗುಡಿಯ ಪ್ರಧಾನ ಗರ್ಭಗೃಹದಲ್ಲಿ ಹಂಸ ಪೀಠವಷ್ಟೇ ಉಳಿದಿದ್ದು, ಇಕ್ಕೆಲದ ಎರಡು ಗರ್ಭಗೃಹಗಳೂ ಖಾಲಿ ಇದ್ದು, ಮುಂದೆ ಅಂತರಾಳ ಹಾಗೂ ವಿಶಾಲವಾದ ನವರಂಗಗಳಿವೆ. ಈ ಗುಡಿಯ ಮುಂಭಾಗದ ಎರಡು ಕಂಬಗಳ ಮೇಲಿರುವ ಕೈಮುಗಿದು ನಿಂತ ಭಕ್ತರ ಕೆತ್ತನೆ, ಪ್ರಾಯಶ: ಸಭಾಮಂಟಪವನ್ನು ನಿರ್ಮಿಸಿದ ಪ್ರಧಾನ ಸುಬ್ಬಾಪಂಡಿತ ಮತ್ತವನ ಮಡದಿ, ಅಥವಾ ಇನ್ಯಾರೋ ಸೇವಾರ್ಥದಾರರದ್ದಾಗಿರುವ ಸಾಧ್ಯತೆಗಳಿವೆ. ಇಲ್ಲಿಯ ಹೊಲವೊಂದರಲ್ಲಿದೆ ಎನ್ನಲಾಗುವ ಭಕ್ತವತ್ಸಲ ದೇವಾಲಯವು ಪಾಳು ಬಿದ್ದಿದ್ದರೂ, ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿದ್ದು, ವಿಶಿಷ್ಟವಾಗಿದೆ ಎಂದು ತಿಳಿದು ಬರುತ್ತದೆ. ಊರಾಚೆ ಶ್ರೀನಿವಾಸ ಕ್ಷೇತ್ರಕ್ಕೆ ಹೋಗುವ ದಾರಿಯಲ್ಲಿರುವ ಹಿರಿದೇವಮ್ಮನ ಗುಡಿಯು, ಜೀರ್ಣೋದ್ಧಾರಗೊಂಡಿದ್ದು, ವಿಶಾಲವಾದ ಗರ್ಭಗೃಹ, ತೆರೆದ ನವರಂಗ ಹಾಗೂ ಪ್ರಾಕಾರಗಳನ್ನು ಹೊಂದಿದೆ. ಗರ್ಭಗೃಹದಲ್ಲಿರುವ ಮೂರು ಅಡಿ ಎತ್ತರದ ಸಪ್ತಮಾತೃಕಾ ಬಿಡಿ ಶಿಲ್ಪಗಳಲ್ಲಿ ಬ್ರಾಹ್ಮಿ, ಚಾಮುಂಡಿ ಹಾಗೂ ವೀರಭದ್ರನ ಶಿಲ್ಪಗಳು ಇತ್ತೀಚಿನದ್ದಾಗಿದ್ದು, ಉಳಿದವು ಚೋಳರ ಕಾಲದ್ದಾಗಿವೆ. ದೇವಿಯರ ಕೈಯಲ್ಲಿ ಬೇಲದ ಹಣ್ಣನ್ನು ತೋರಿಸಲಾಗಿದ್ದು, ಹಿಂದೆ ಇಲ್ಲಿ ಬೇಲದ ವನವಿತ್ತೆಂದು ಹೇಳಲಾಗುತ್ತದೆ. ಅನತಿ ದೂರದಲ್ಲೇ ದುರ್ಗಾ-ಪರಮೇಶ್ವರಿಯ ನೂತನ ಗುಡಿ ಇದೆ. ಉಳಿದಂತೆ ಊರಲ್ಲಿ ಗಣಪತಿ, ಭೈರವೇಶ್ವರ, ಜ್ಯೋತಿಲಿಂಗನ ಮಟ್ಟಿ ಹಾಗೂ ರಾಮಮಂದಿರಗಳಿದ್ದು, ಎರಡು ಕಿ.ಮೀ. ಅಂತರದ ಬಸ್ತಿದಿಬ್ಬದಲ್ಲಿದ್ದ ಜೈನ ಶಾಸನ

ಹಾಗೂ ಶಿಲ್ಪಗಳಿಂದಾಗಿ ಹಿಂದೆ ಇದು ಜೈನಕೇಂದ್ರವಾಗಿದ್ದ ಅಂಶ ಗೊತ್ತಾಗುತ್ತದೆ. **ಬಲಮುರಿ :** ಬೆಳಗೊಳದಿಂದ ಮೂರು ಕಿ.ಮೀ. ವಾಯವ್ಯಕ್ಕೆ ತಾಲೂಕು ಕೇಂದ್ರ ಶ್ರೀರಂಗಪಟ್ಟಣದಿಂದ ೧೪ ಕಿ.ಮೀ. ಪಶ್ಚಿಮಕ್ಕೆ ಕಾವೇರಿಯ ಬಲದಂಡೆಯ ಮೇಲಿರುವ ಪ್ರವಾಸಿ ತಾಣವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಬಲಂಬುತೀರ್ಥ, ಬಲಂಬರಿ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಬಳ್ಳಿಗೊಳಕ್ಕೆ (ಬೆಳಗೊಳ) ಸೇರಿದಂತಿದ್ದ ಪುಣ್ಯ ಕ್ಷೇತ್ರವಾಗಿತ್ತು. ಇಲ್ಲಿಯ ಅಗಸ್ತ್ಯೇಶ್ವರ ದೇವಾಲಯವು ಚೋಳ ಪೂರ್ವ ಕಾಲದ್ದಾಗಿದ್ದು, ಒಂದನೆಯ ರಾಜರಾಜಚೋಳನ ಕ್ರಿ.ಶ.೧೦೧೩ರ ಶಾಸನವು ದಂಡನಾಯಕ ಪಂಚವನ್ ಮಹಾರಾಯನು (ಒಂದನೆಯ ರಾಜೇಂದ್ರ) ಈ ದೇವರಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮೊಗಸಾಲೆಗಳನ್ನು ಹೊಂದಿರುವ ಇದರ ಗರ್ಭಗೃಹದಲ್ಲಿ ಶಿವಲಿಂಗ, ನವರಂಗದಲ್ಲಿ ಸೂರ್ಯ, ಕೇಶವ ಹಾಗೂ ರಾಮಾನುಜ ಶಿಲ್ಪಗಳಿವೆ. ಇದು ದುರಸ್ತಿ ಹೊಂದಿದ ಅಂಶವನ್ನು ಅಲ್ಲೇ ಇರುವ ಕ್ರಿ.ಶ. ೧೪೦೩ರ ಶಾಸನ ತಿಳಿಸುತ್ತದೆ. ಇದರ ಬಲಕ್ಕೆ ಇರುವ ನಾರಾಯಣ ಗುಡಿಯೂ ಅಗಸ್ತ್ಯೇಶ್ವರ ಗುಡಿಯ ಮಾದರಿಯಲ್ಲಿದ್ದು, ಗರ್ಭಗೃಹದಲ್ಲಿ ಎತ್ತರದ ಪೀಠದ ಮೇಲೆ ಕೇಶವ ಶಿಲ್ಪವಿದ್ದು, ನವರಂಗದಲ್ಲಿ ಗಣಪತಿ ಹಾಗೂ ಸೂರ್ಯನ ಶಿಲ್ಪಗಳಿವೆ. ಈ ಎರಡೂ ಗುಡಿಗಳ ಹಿಂಭಾಗದಲ್ಲಿದ್ದ ಖಾಲಿ ಸ್ಥಳವನ್ನು ಸೇರಿಸಿ ನೂತನ ಗುಡಿಯೊಂದನ್ನು ಕ್ರಿ.ಶ.೧೭೩೪ರಲ್ಲಿ ಸುಬ್ಬಾಪಂಡಿತರು ನಿರ್ಮಿಸಿದ ಅಂಶವನ್ನು ಅಲ್ಲೇ ಇರುವ ಶಾಸನ ತಿಳಿಸುತ್ತಿದ್ದು, ಬಹುಶಃ ಅಗಸ್ತ್ಯೇಶ್ವರ–ನಾರಾಯಣ ಗುಡಿಗಳು ಇವರಿಂದಲೇ ಪುನರ್ ಜೀರ್ಣೋದ್ಧಾರಗೊಂಡಿರುವಂತೆ ತೋರುತ್ತದೆ. ಇಲ್ಲಿರುವ ಪಾರ್ವತಿ ಅಮ್ಮನವರ (ಕ್ರಿ.ಶ.೧೭೩೪ರ ಶಾಸನಸ್ಥ ಸುಪ್ರಸನ್ನಾಂಬಿಕಾ) ಗುಡಿಯನ್ನೂ ಸುಬ್ಬಾಪಂಡಿತರೇ ನಿರ್ಮಿಸಿರುವ ಅಂಶ ಅಲ್ಲಿರುವ ಶಾಸನದಿಂದ ವೇದ್ಯವಾಗುತ್ತದೆ. ಇಲ್ಲಿ ಕಾವೇರಿ ನದಿಗೆ ಕಟ್ಟಿರುವ ಬಲಮುರಿ ಅಣೆಯಿಂದ ಹೊರಡುವ ವಿರೀಜಾ ಬಲದಂಡೆ ನಾಲೆಯು ಶ್ರೀರಂಗಪಟ್ಟಣ ತಾಲೂಕಿನಲ್ಲಿ ಸುಮಾರು ೫೬ ಕಿ.ಮೀ. ಹರಿದು ಸಾವಿರಾರು ಎಕರೆ ಜಮೀನನ್ನು ಹಸಿರಾಗಿಸಿದೆ. ಈ ಅಣೆಕಟ್ಟಿನಿಂದಾಗಿ ಸದಾ ನೀರಿನಿಂದ ತುಂಬಿರುವ ಈ ಸ್ಥಳ ಪ್ರವಾಸಿಗರಿಗೆ ಮುದ ನೀಡುತ್ತದೆ. **ಶ್ರೀನಿವಾಸಕ್ಷೇತ್ರ** : ಇದು ಬೆಳಗೊಳದಿಂದ ನಾಲ್ಕು ಕಿ.ಮೀ. ಉತ್ತರಕ್ಕೆ, ಕಾವೇರಿ ಬಲದಂಡೆಯ ಮೇಲೆ ಹಿಂದೆ ಇದ್ದ ಪುಣ್ಯಕ್ಷೇತ್ರ. ಸುಮಾರು ೧೯ನೆಯ ಶತಮಾನದ ಶಾಸನಗಳಲ್ಲೂ ಇದು 'ಶ್ರೀನಿವಾಸ ಕ್ಷೇತ್ರ' ಎಂದೇ ಉಲ್ಲೇಖಿತಗೊಂಡಿದೆ. ಇಲ್ಲಿಯ ಶ್ರೀನಿವಾಸ ದೇವಾಲಯವು ಪೂರ್ವಾಭಿಮುಖವಾಗಿದ್ದು, ಪ್ರಧಾನ ಗರ್ಭಗೃಹದಲ್ಲಿ ಆಳೆತ್ತರದ ಶ್ರೀನಿವಾಸನ ಶಿಲ್ಪವಿದ್ದು, ಎಡಭಾಗದ ಗರ್ಭಗೃಹದಲ್ಲಿ ರಾಮ–ಲಕ್ಷ್ಮಣ ಹಾಗೂ ಸೀತಾಮೂರ್ತಿಗಳಿದ್ದು, ಈ ದೇವಾಲಯಕ್ಕಿರುವ ಪೂರ್ವ–ದಕ್ಷಿಣ ಭಾಗದ ದ್ವಾರಗಳಿಗೆ ಮುಖಮಂಟಪವಿದೆ. ಗುಡಿಗೆ ಪ್ರಾಕಾರವಿದ್ದು, ಶಿಥಿಲಾವಸ್ಥೆಯಲ್ಲಿದೆ. ಅನತಿ ದೂರದಲ್ಲಿರುವ ಈಶ್ವರ ಗುಡಿಯೂ ಕೂಡ ಜೀರ್ಣಾವಸ್ಥೆಯಲ್ಲಿದ್ದು, ಸಂರಕ್ಷಿಸುವ ಅಗತ್ಯವಿದೆ. ಎಡತಿಟ್ಟು ದ್ವೀಪದಲ್ಲಿರುವ 'ಸರ್ವಧರ್ಮ ಆಶ್ರಮ' ಕ್ಕೆ ಹೋಗಲು ಇದೇ ಹೆಬ್ಬಾಗಿಲಾಗಿದೆ. **ಎಡತಿಟ್ಟು (೨೪)** ಬೆಳಗೊಳದಿಂದ ಸುಮಾರು ನಾಲ್ಕು ಕಿ.ಮೀ. ಉತ್ತರಕ್ಕೆ ಶ್ರೀನಿವಾಸ ಕ್ಷೇತ್ರದಿಂದಾಚೆಗೆ ಇರುವ ದ್ವೀಪ ಸಮೂಹವಾಗಿದ್ದು, ಅವುಗಳಲ್ಲಿ ಸುಮಾರು ೧೦೦ ಎಕರೆ ವಿಸ್ತಾರದ ದ್ವೀಪದಲ್ಲಿರುವ 'ಸರ್ವಧರ್ಮ ಆಶ್ರಮ' ವು ಪ್ರಶಾಂತವಾದ ವಾತಾವರಣದಲ್ಲಿ 'ಸರ್ವಧರ್ಮ ಸಂದೇಶ' ವನ್ನು ಸಾರುವ ಜ್ಯೋತಿಕಟ್ಟೆಯನ್ನು ಹೊಂದಿದೆ.

**ಬೆಳ್ಳೂರು (೬೧೮೭)** : ತಾಲೂಕು ಕೇಂದ್ರ ನಾಗಮಂಗಲದಿಂದ ೧೬ ಕಿ.ಮೀ. ಉತ್ತರಕ್ಕಿರುವ ಹೋಬಳಿ ಕೇಂದ್ರ. ಹೊಯ್ಸಳ ಶಾಸನಗಳಲ್ಲೂ 'ಬೆಳ್ಳೂರು' ಎಂದೇ ಉಲ್ಲೇಖಿತಗೊಂಡಿರುವ ಇದು ಕ್ರಿ.ಶ. ೧೬೯೦ರ ತಾಮ್ರ ಶಾಸನದಲ್ಲಿ ರತ್ನಗಿರಿ ಎಂದೂ ಜೈನಪುರಾಣಗಳಲ್ಲಿ 'ಶ್ವೇತಪುರ' ಎಂದೂ ಕರೆಯಲ್ಪಟ್ಟಿದೆ. ಹಿಂದೆ ಕಲ್ಕುಣಿ ನಾಡೊಳಗಿದ್ದ ಇದು, 'ಸರ್ವನಮಸ್ಯದ ಅಗ್ರಹಾರ ಉದ್ಭವ ನರಸಿಂಹಪುರ' ಎಂಬ ಅಭಿದಾನವನ್ನೂ ಹೊಂದಿದ್ದು, ವೇದಾಧ್ಯಯನದ ಕೇಂದ್ರವಾಗಿ ಆರಂಭದಲ್ಲಿ ೮೬, ಕ್ರಮೇಣ ೯೬ ಮಹಾಜನರನ್ನೊಳಗೊಂಡಿದ್ದ ಅಂಶವನ್ನು ಬೆಳ್ಳೂರಿನ

ವಿವಿಧ ಶಾಸನಗಳು ವ್ಯಕ್ತಪಡಿಸುತ್ತಿದ್ದು, ಇಲ್ಲಿಂದ ಈವರೆಗೆ ೧೨ ರಿಂದ ೧೮ನೇ ಶತಮಾನಕ್ಕೆ ಸೇರಿದ ೨೭ ಶಾಸನಗಳು ವರದಿಯಾಗಿವೆ. ಹೊಯ್ಸಳರ ಕಾಲದಲ್ಲಿ ಪ್ರಮುಖ ಅಗ್ರಹಾರ ಪಟ್ಟಣವಾಗಿದ್ದ ಇದಕ್ಕೆ ಹಿಂದೆ ಕೋಟೆ ಇದ್ದುದನ್ನು ಸೂಚಿಸುವ ಕುರುಹುಗಳು ಈಗಲೂ ಉಳಿದಿವೆ. ಇಲ್ಲಿಯ ಕ್ರಿ.ಶ.೧೨೭೯ರ ಒಂದು ಶಾಸನವು ಪೆರುಮಾಳೆ ದಂಡನಾಯಕನು ಬೆಳ್ಳೂರಿನಲ್ಲಿ ಹಿರಿಯಕೆರೆ ನಿರ್ಮಿಸಿದ್ದನ್ನು ದಾಖಲಿಸಿದರೆ, ಇನ್ನೊಂದು ಭೂಮಾಪನಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಯಾಗಿದೆ.

ಊರಾಚೆ ಗೌರಿಕೊಳ್ಳ (ಶಾಸನೋಕ್ತ ಮಂಡಲಗೆರೆ)ದ ದಕ್ಷಿಣದಂಡೆಯ ಮೇಲಿರುವ ಗೌರೇಶ್ವರ (ಬೆಳ್ಳಿ ಬೆಟ್ಟಕ್ಕೆ ಸಮನಾದ ಶಾಸನೋಕ್ತ ಮಂಡಲೇಶ್ವರ) ಗುಡಿಯನ್ನು ಮಂಡಲಸ್ವಾಮಿಯು ಕ್ರಿ.ಶ.೧೧೯೯ರಲ್ಲಿ ನಿರ್ಮಿಸಿದ್ದು, ಇದು ಗರ್ಭಗೃಹ, ಅಂತರಾಳ, ದಕ್ಷಿಣ ಪಾರ್ಶ್ವದ್ವಾರವಿರುವ ನವರಂಗ ಹಾಗೂ ಅರ್ಧಮಂಟಪಗಳನ್ನು ಹೊಂದಿದೆ. ಆದರೆ ಜೀರ್ಣೋದ್ಧಾರ ಸಂದರ್ಭದಲ್ಲಿ ಅದರ ದಕ್ಷಿಣದ್ವಾರವನ್ನು ಮುಚ್ಚಿ ಪೂರ್ವದ್ವಾರವನ್ನು ಕಲ್ಪಿಸಿ, ವಿಶಾಲ ಮುಖಮಂಟಪವನ್ನು ಸೇರಿಸಲಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಅಂತರಾಳದ ಬಾಗಿಲವಾಡಕ್ಕೆ ಜಾಲಂದ್ರ ಅಲಂಕಾರವಿದ್ದು, ನವರಂಗದಲ್ಲಿ ವಿನಾಯಕ, ವೀರಭದ್ರ ಹಾಗೂ ನಂದಿಯ ಕಿರು ಶಿಲ್ಪಗಳಿವೆ. ದೇವಾಲಯದ ಭಿತ್ತಿ, ಶಿಖರಗಳನ್ನು ನವೀಕರಿಸಲಾಗಿದೆ. ಇದರ ಬಲಕ್ಕಿರುವ ಶಿವಗಂಗಾಧರೇಶ್ವರ (ಶಾಸನೋಕ್ತ ವಿಶ್ವೇಶ್ವರ) ಗುಡಿಯು ಕ್ರಿ.ಶ.೧೭೭೯ರ ನಿರ್ಮಾಣವಾಗಿದ್ದು, ಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಹೊಯ್ಸಳರ ಕಾಲದ ಗಣಪತಿ, ಭೈರವ ಹಾಗೂ ನಂದಿ ಶಿಲ್ಪಗಳು ಅಲ್ಲಿವೆ.

ಗೌರಿಕೊಳ್ಳದ ಪೂರ್ವದಂಡೆಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ಮೂಲೆಸಿಂಗೇಶ್ವರ (ಶಾಸನೋಕ್ತ ಸಿಂಧೇಶ್ವರ, ಲಕ್ಷ್ಮೀನಾರಾಯಣ ಹಾಗೂ ಗೋಪಾಲ) ತ್ರಿಕೂಟ ದೇವಾಲಯವನ್ನು ಮಹಾಸಾಮಂತ ಕಾಚಿದೇವನು ನಿರ್ಮಿಸಿದ್ದನ್ನು ಕ್ರಿ.ಶ.೧೨೨೪ರ ಶಾಸನ ತಿಳಿಸುತ್ತದೆ. ನವರಂಗದ ಪಶ್ಚಿಮ, ದಕ್ಷಿಣ ಹಾಗೂ ಉತ್ತರ ಭಾಗದಲ್ಲಿ ಕದಂಬನಾಗರ ಶಿಖರವನ್ನುಳ್ಳ ಒಂದೊಂದು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನೂ, ಪೂರ್ವಭಾಗದಲ್ಲಿ ತೆರೆದ ಮುಖಮಂಟಪವನ್ನೂ ಹೊಂದಿರುವ ಈ ಗುಡಿ ಆಕರ್ಷಕವಾಗಿದ್ದರೂ ಗಿಡಗಂಟಿ ಬೆಳೆದು, ಶಿಥಿಲಾವಸ್ಥೆಯಲ್ಲಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಉಳಿದೆರಡರಲ್ಲಿ ಹಿಂದೆ ಇದ್ದ ಲಕ್ಷ್ಮೀನಾರಾಯಣ ಹಾಗೂ ಗೋಪಾಲಕೃಷ್ಣನ ಮೂರ್ತಿಗಳನ್ನು ಇಂದು ಆದಿಮಾಧವರಾಯ ಗುಡಿಯ ಮುಖಮಂಟಪದಲ್ಲಿರುವ ಕಿರು ಕೋಣೆಗಳಲ್ಲಿಡಲಾಗಿದೆ. ಅಂತರಾಳದ ಬಾಗಿಲವಾಡಗಳು ಜಾಲಂದ್ರ, ಪೂರ್ಣಕುಂಭಗಳನ್ನು ಹೊಂದಿದ್ದು, ನವರಂಗದ ಪ್ರತಿಯೊಂದು ಅಂಕಣದ ಛತ್ತು ವೈವಿಧ್ಯಮಯವಾಗಿದ್ದು, ನಡುವಣ ಪ್ರಧಾನ ಛತ್ತು ಉತ್ಕೃಷ್ಟವಾಗಿದೆ. ಗೌರಿಕೊಳ್ಳದ ಪಶ್ಚಿಮ ದಂಡೆ ಮೇಲೆ ಇತ್ತೀಚೆಗೆ ನಿರ್ಮಿಸಿರುವ ಗುಡಿಯಲ್ಲಿ ಗಣಪತಿ ಶಿಲ್ಪವಿದೆ.

ಇಲ್ಲಿಯ ಆದಿಮಾಧವರಾಯನ ಗುಡಿಯು ತ್ರಿಕೂಟ ದೇವಾಲಯವಾಗಿದ್ದು, ಕ್ರಿ.ಶ.೧೨೮೪ರಲ್ಲಿ ನಿರ್ಮಾಣಗೊಂಡಿದ್ದೆಂದು ಈವರೆಗೆ ತಪ್ಪಾಗಿ ಗ್ರಹಿಸಲಾಗಿತ್ತು. ಆದರೆ ಇಲ್ಲಿಯ ಕೆರೆ ಹಾಗೂ ಗುಡಿಗಳು ಕ್ರಿ.ಶ.೧೨೭೯ರ ವೇಳೆಗಾಗಲೇ ಪೆರುಮಾಳೆ ದಂಡನಾಯಕನಿಂದ ನಿರ್ಮಾಣಗೊಂಡಿದ್ದುದಾಗಿ ತಿಳಿದು ಬರುತ್ತದೆ. ಬೆಳ್ಳೂರಿನ ಕ್ರಿ.ಶ.೧೨೭೯ರ ಶಾಸನದಲ್ಲಿ ತ್ರಿಕೂಟ ಲಕ್ಷ್ಮೀನಾರಾಯಣ, ಗೋಪಾಲ, ಕೋಡಿಮಾಧವನೆಂದೂ, ಕ್ರಿ.ಶ.೧೨೮೪ರ ಇನ್ನೊಂದು ಶಾಸನದಲ್ಲಿ ಪ್ರಸನ್ನಮಾಧವ, ರಾಮಕೃಷ್ಣ ವರದ ಅಲ್ಲಾಳನಾಥ ಎಂದೂ ಉಲ್ಲೇಖಿತಗೊಂಡಿರುವ ಇದನ್ನು ಸುಮಾರು ೧೭ನೆಯ ಶತಮಾನದಿಂದೀಚೆಗೆ ಆದಿಮಾಧವನೆಂದು ಕರೆದಿರುವ ಅಂಶ ಶಾಸನವೊಂದರಿಂದ ಗೊತ್ತಾಗುತ್ತದೆ. ಮೂಲ ಗುಡಿಯು ಐದು ಸ್ತರದ ಜಗತಿಯ ಮೇಲೆ ನಿಂತಿದ್ದು, ಪ್ರಧಾನ ಗರ್ಭಗೃಹ, ಅಂತರಾಳ, ಉತ್ತರ–ದಕ್ಷಿಣದ ಗರ್ಭಗೃಹಗಳನ್ನು ಒಗ್ಗೂಡಿಸುವ ನವರಂಗ ಹಾಗೂ ಆರಂಕಣದ ತೆರೆದ ಅರ್ಧಮಂಟಪವನ್ನು

ಹೊಂದಿದೆ. ಅದರ ಮುಂದಿರುವ ರಂಗಮಂಟಪ, ಸೌಮ್ಯನಾಯಕಿ ಮತ್ತು ರಂಗನಾಯಕಿ ದೇವಾಲಯ, ಪ್ರಾಕಾರ, ಮಹಾದ್ವಾರ ಹಾಗೂ ದೀಪಸ್ತಂಭಗಳು ವಿಜಯನಗರ ಕಾಲದ ಸೇರ್ಪಡೆಗಳಾಗಿವೆ. ಪ್ರಧಾನ ಗರ್ಭಗೃಹದಲ್ಲಿ ಗರುಡ ಪೀಠದ ಮೇಲಿರುವ ಚತುರ್ಭುಜಧಾರಿ ಮಾಧವನ ಆಳೆತ್ತರದ ಶಿಲ್ಪವು ಭವ್ಯವಾಗಿದ್ದು, ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆ ಇದ್ದರೆ, ಉಳಿದೆರಡರಲ್ಲಿರುವ ವೇಣುಗೋಪಾಲ ಹಾಗೂ ಜನಾರ್ದನ (ವರದರಾಜ) ಶಿಲ್ಪಗಳೂ ಉತ್ಕೃಷ್ಟವಾಗಿವೆ. ಅಂತರಾಳದಲ್ಲಿ ಹಿತ್ತಾಳೆಯ ಉತ್ಸವಮೂರ್ತಿಗಳಿದ್ದು, ನವರಂಗದ ಕಂಬ, ಛತ್ತುಗಳು, ಸುಂದರವಾಗಿದ್ದು, ರಾಮಾನುಜ, ಆಳ್ವಾರರು, ಗಣಪತಿ ಶಿಲ್ಪಗಳೂ ಅಲ್ಲೇ ಇವೆ. ಈ ದೇವಾಲಯದ ಬಾಗಿಲವಾಡಗಳ ಲಲಾಟದಲ್ಲಿ ಗಜಲಕ್ಷ್ಮಿಯರಿದ್ದು, ಬುಡದಲ್ಲಿ ದ್ವಾರಪಾಲಕ ಶಿಲ್ಪಗಳಿವೆ. ಮುಖಮಂಟಪದ ಇಕ್ಕೆಲದಲ್ಲಿಯ ಇತ್ತೀಚಿನ ಕೊಠಡಿಗಳಲ್ಲಿರುವ ಗೋಪಾಲ ಹಾಗೂ ಲಕ್ಷ್ಮೀನಾರಾಯಣ ಶಿಲ್ಪಗಳನ್ನು ಮೂಲೆಸಿಂಗೇಶ್ವರ ಗುಡಿಯಿಂದ ತಂದು ಇರಿಸಲಾಗಿದೆ. ಪ್ರಾಕಾರದೊಳಗೆ ಪ್ರಧಾನ ಗುಡಿಯ ಎಡಕ್ಕೆ ಸೌಮ್ಯನಾಯಕಿ ಹಾಗೂ ರಂಗಮಂಟಪದ ಬಲಕ್ಕೆ ರಂಗನಾಯಕಿಯರ ಪ್ರತ್ಯೇಕ ಗುಡಿಗಳಿದ್ದು, ಒಳಗೆ ವಿಜಯನಗರ ಕಾಲದ ದೇವಿಶಿಲ್ಪಗಳಿವೆ. ಪ್ರಧಾನ ಗರ್ಭಗೃಹವು ಬಹು (೩೨) ಕೋನಾಕಾರದ ತಳವಿನ್ಯಾಸವನ್ನು ಹೊಂದಿದ್ದು, ಭಿತ್ತಿಯಲ್ಲಿ ಅಲಂಕಾರಿಕ ಅರೆಕಂಬ ಕಿರುಶಿಖರ ಮಾದರಿಗಳಿದ್ದರೂ ನಿರಾಡಂಬರವಾಗಿದ್ದು, ಮೇಲೆ ದ್ರಾವಿಡ ಶಿಖರವಿದೆ. ಗುಡಿಯ ಎಡಭಾಗದ ಭಿತ್ತಿಯನ್ನು ಒತ್ತುಗೋಡೆಯ ನೆರವಿನಿಂದ ಸಂರಕ್ಷಿಸಲಾಗಿದೆ. ಈ ಗುಡಿಗೆ ಅನತಿ ದೂರದಲ್ಲಿರುವ ಕರುಗಲ್ಲು, ಎರಡು ದೊಡ್ಡ ಬಳಪದ ಕಲ್ಲುಗಳಾಗಿದ್ದು, ಕಾರುಹಬ್ಬದಲ್ಲಿ ಬ್ರಹ್ಮನನ್ನು ಇಲ್ಲಿ ಪ್ರತಿಷ್ಠಾಪಿಸಿ, ಆರಾಧಿಸುವ ಸಂಪ್ರದಾಯವಿದ್ದು, ಕ್ರಿ.ಶ.೧೨೭೯ರ ಶಾಸನದಲ್ಲೂ ಇದು ಉಕ್ತವಾಗಿದೆ.

ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಇಲ್ಲಿಯ ವೀರಭದ್ರ ಗುಡಿಯು ಶಿಥಿಲಾವಸ್ಥೆಯಲ್ಲಿದ್ದು, ಅಲ್ಲೇ ಸುಮಾರು ೧೫-೧೬ನೇ ಶತಮಾನದ ಶಾಸನವಿದ್ದು, ಒಳಗೆ ವೀರಭದ್ರನ ಕಿರುಶಿಲ್ಪ, ನಂದಿ, ಗರುಡ ಹಾಗೂ ಮುಕ್ಕೊಡೆಗಳಿವೆ. ಬೆಳ್ಳೂರು ಕ್ರಾಸ್‌ಗೆ ಹೋಗುವ ಮಾರ್ಗದಲ್ಲಿ ಬಲಕ್ಕಿರುವ ಕಲ್ಲೇಶ್ವರ (ಕಲಿ ದೇವರು) ಗುಡಿಯು ಹೊಯ್ಸಳ ಮುಮ್ಮಡಿ ನರಸಿಂಹನ ಕ್ರಿ.ಶ.೧೨೭೯ರ ಶಾಸನದಲ್ಲಿ ಉಕ್ತವಾಗಿದೆ. ಪೂರ್ವಾಭಿಮುಖವಾಗಿರುವ ಇದಕ್ಕೆ ಗರ್ಭಗೃಹ, ಅಂತರಾಳ, ೨೪ ಅಂಕಣದ ವಿಶಾಲವಾದ ನವರಂಗ ಹಾಗೂ ಅರ್ಧಮಂಟಪಗಳಿವೆ. ಒಳಗೆ ಶಿವಲಿಂಗವಿದ್ದು, ಮುಂಭಾಗದಲ್ಲಿ ನಂದಿಕಂಬವಿದೆ. ಪೂರ್ಣ ಶಿಥಿಲಾವಸ್ಥೆಯಲ್ಲಿರುವ ಈ ದೇವಾಲಯದ ಇಟ್ಟಿಗೆಯ ಶಿಖರ ಜೀರ್ಣಗೊಂಡಿದೆ. ಗುಡಿಯ ಮುಂಭಾಗದಲ್ಲಿ ಸುಮಾರು ೧೫-೧೬ನೇ ಶತಮಾನದ ಹುಲಿಬೇಟೆ ವೀರಗಲ್ಲು ಹಾಗೂ ಮಾಸ್ತಿಕಲ್ಲುಗಳಿವೆ. ಎಡಭಾಗದಲ್ಲಿರುವ ಎರಡಂಕಣದ ದೇವಿಗುಡಿಯಲ್ಲಿಂದು ನಾಗರಕಲ್ಲಷ್ಟೇ ಇದೆ. ಜೈನಕೇರಿಯಲ್ಲಿರುವ ವಿಮಲನಾಥ ಬಸದಿಯನ್ನು ಹಿಂದೆ ಲಕ್ಷ್ಮೀಸೇನಾಚಾರ್ಯರ ಶಿಷ್ಯನಾದ ಸಕ್ಕರೆಶೆಟ್ಟಿಯು ನಿರ್ಮಿಸಿದ್ದು, ನಂತರದಲ್ಲಿ ಪಾಳು ಬಿದ್ದಿದ್ದ ಅದನ್ನು ಹರತಿಯ ಸಾಮಂತ ರಾಯಪ್ಪ ರಾಜನು ಜೀರ್ಣೋದ್ಧಾರ ಮಾಡಿಸಿದ್ದನ್ನು ಕ್ರಿ.ಶ.೧೬೮೮ರ ತಾಮ್ರಶಾಸನ ದಾಖಲಿಸಿದೆ. ಇದು ಇತ್ತೀಚೆಗೆ ಪುನರ್ ಜೀರ್ಣೋದ್ಧಾರಗೊಂಡಿದೆ. ಒಳಗೆ ವಿಮಲನಾಥ ತೀರ್ಥಂಕರ ಶಿಲ್ಪವೂ ಸೇರಿದಂತೆ ನಾಲ್ಕಾರು ತೀರ್ಥಂಕರ ಶಿಲ್ಪಗಳಿದ್ದು, ಸೂರನಹಳ್ಳಿಯಿಂದ ತಂದಿಟ್ಟಿರುವ ಹೊಯ್ಸಳ ಶಾಸನವೂ ಅಲ್ಲೇ ಇದೆ. ಉಳಿದಂತೆ ಊರಲ್ಲಿ ಈಶ್ವರ, ಆಂಜನೇಯ, ಗಣಪತಿ, ಪಾಂಡುರಂಗ, ರಾಮ, ಮಹಾದೇಶ್ವರ, ವೆಂಕಟೇಶ್ವರ, ಎಲ್ಲಮ್ಮ, ಮಾರಮ್ಮ, ಮುಂತಾದ ಗುಡಿಗಳಷ್ಟೇ ಅಲ್ಲದೇ, ಕ್ರಿ.ಶ.೧೭೮೬ರಷ್ಟು ಹಳೇ ಮಸೀದಿಯೂ ಸೇರಿದಂತೆ ಎರಡು ಮಸೀದಿ ಹಾಗೂ ದರ್ಗಾಗಳಿದ್ದು, ಸೋಮವಾರದಂದು ವಾರದ ಸಂತೆಯಾಗುತ್ತದೆ. **ಶ್ರೀರಂಗಪುರ (೪೦೦) :** ಬೆಳ್ಳೂರಿನಿಂದ ಮೂರು ಕಿ.ಮೀ.ಉತ್ತರಕ್ಕಿದ್ದು, ಈವರೆಗೆ ಶಾಸನಗಳಾವುದೂ ಇಲ್ಲಿಂದ ವರದಿಯಾಗಿಲ್ಲ. ಆದರೆ ನೆರೆಯ ಬೆಳ್ಳೂರಿನ ಮೂರು ಶಾಸನಗಳ ನೆರವಿನಿಂದ ಈ ಊರಿನ ಪ್ರಾಚೀನತೆಯನ್ನು ಹೊಯ್ಸಳರಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಬೆಳ್ಳೂರಿನ ಕ್ರಿ.ಶ.೧೨೨೪ರ ಶಾಸನದಲ್ಲಿ ಸಿರಿರಂಗಪುರ, ಶ್ರೀರಂಗಪುರ ಎಂದೇ

ಉಲ್ಲೇಖಿತಗೊಂಡಿರುವ ಇದನ್ನು ಕಾಚೀದೇವನು ಬೆಳ್ಳೂರಿನಲ್ಲಿ ತಾನು ನಿರ್ಮಿಸಿದ ಸಿಂಧೇಶ್ವರ ಗೋಪಾಲ ಹಾಗೂ ಲಕ್ಷ್ಮೀನಾರಾಯಣರನ್ನೊಳಗೊಂಡ ತ್ರಿಕೂಟ ದೇವಾಲಯದ ಪೂಜಾವಿಧಿಗಳಿಗೆಂದು ದಾನ ಬಿಟ್ಟ ವಿಷಯವನ್ನು ತಿಳಿಸುತ್ತವೆ. ಅಲ್ಲದೆ ಬೆಳ್ಳೂರಿನ ಕ್ರಿ.ಶ.೧೨೨೪ರ ಇನ್ನೊಂದು ಶಾಸನದಿಂದ ಬಸದಿ, ಮಾಚೇಸ್ವರ, ಸೋಮನಾಥ, ಕೇಶವ, ಕಮ್ಮಟೇಶ್ವರ, ಹಾಗೂ ಭೈರವ ದೇವರ ಗುಡಿಗಳೂ ಇಲ್ಲಿದ್ದ ಅಂಶ ಗೊತ್ತಾಗುತ್ತದೆ. ಮಿಗಿಲಾಗಿ ಕಾಚಿದೇವನ ದಾಯಾದಿಯಾದ ಸಿರಿರಂಗನಾಯಕನು ಈ ಊರನ್ನು ನಿರ್ಮಿಸಿ, ಒಂದೆರಡು ಗುಡಿಗಳನ್ನು ಕಟ್ಟಿಸಿರಬಹುದೆಂದು ಈ ಶಾಸನದಿಂದ ತರ್ಕಿಸಬಹುದಾಗಿದೆ. ಅಲ್ಲೇ ಇರುವ ಕ್ರಿ.ಶ. ೧೨೬೯ರ ಇನ್ನೊಂದು ಶಾಸನದಿಂದ ಶ್ರೀರಂಗಪುರವೂ ಅಗ್ರಹಾರವಾಗಿದ್ದು, ಬೆಳ್ಳೂರಿನಲ್ಲಿ ಪೆರುಮಾಳೆ ದಂಡನಾಯಕನು ಅಲ್ಲಾಳಸಮುದ್ರವನ್ನು ಕ್ರಿ.ಶ.೧೨೬೯ರಲ್ಲಿ ನಿರ್ಮಿಸಿದ್ದರ ಪರಿಣಾಮವಾಗಿ ಭೂಸಾಗುವಳಿಯಲ್ಲಿ ಉಂಟಾದ ಬದಲಾವಣೆಯನ್ನು ದಾಖಲಿಸುತ್ತಾ ಅದಕ್ಕೆ ಪೂರಕವಾಗಿ ರೂಪಿಸಿಕೊಂಡ ಪರ್ಯಾಯ ವ್ಯವಸ್ಥೆಯನ್ನು ಸೂಚಿಸುತ್ತದೆ. ಬೆಳ್ಳೂರಿನ ಆದಿ ಮಾಧವಗುಡಿಯ ಚಂದ್ರಶಾಲೆಯಲ್ಲಿರುವ ಕ್ರಿ.ಶ.೧೨೮೪ರ ಶಾಸನವು, ಅಲ್ಲಾಳಸಮುದ್ರದ ಪಡುವಣ ಕೋಡಿಯಲ್ಲಿ ಶ್ರೀರಂಗಪುರದವರಿಗೆಂದು ಕಲ್ಲುನೆಟ್ಟು, ಗದ್ದೆಯನ್ನು ಮಾಡಿಕೊಟ್ಟ ಅಂಶವನ್ನು ತಿಳಿಸುತ್ತದೆ. ಈ ಶಾಸನಗಳಿಂದ ಶ್ರೀರಂಗಪುರದ ಸಾಂಸ್ಕೃತಿಕ ಮಹತ್ವ ಗೊತ್ತಾಗುತ್ತದೆ. **ಸೂರನಹಳ್ಳಿ :** ಬೆಳ್ಳೂರಿಗೆ ಅನತಿ ದೂರದಲ್ಲಿರುವ ಗ್ರಾಮ. ಊರಾಚೆ ಪಾಳು ಬಸದಿ ಬಳಿ ಬಿದ್ದಿದ್ದ ಜೈನ ಶಾಸನವು (ಈಗ ಬೆಳ್ಳೂರಿನ ಬಸದಿಯಲ್ಲಿದೆ) ಒಂದನೆಯ ನರಸಿಂಹನ ಆಳ್ವಿಕೆಯಲ್ಲಿ ಮಹಾಪ್ರಧಾನ ದೇವರಾಜ ಹಾಗೂ ಅವನ ಸತಿ ಕಾಮಲದೇವಿಯರು, ಸೂರನಹಳ್ಳಿಯಲ್ಲಿ 'ರಾಜ–ರಾಷ್ಟ್ರ–ಯಶೋ–ಧನ' ವೃದ್ಧಿಗಾಗಿ ತ್ರಿಕೂಟ ಪಾರ್ಶ್ವ ಜಿನಾಲಯವನ್ನು ನಿರ್ಮಿಸಿ, ಪೂಜಾವಿಧಿಗೆಂದು ಸೂರನಹಳ್ಳಿಯನ್ನು ಸ್ಥಾನಾಚಾರ್ಯ ಮುನಿಚಂದ್ರದೇವರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಯಲಾದಹಳ್ಳಿ ಅಥವಾ ಚೋಳಸಂದ್ರಕ್ಕೆ ಸೇರಿದ ಬಸದಿಯೆಂದು ಈವರೆಗೆ ದಾಖಲಾಗಿರುವ ಇದು ನಾಗಮಂಗಲ–ಬೆಳ್ಳೂರು ರಸ್ತೆಯಲ್ಲಿ, ಚೋಳಸಂದ್ರದ ಬಳಿ ಎಡಕ್ಕಾದಂತೆ ಎತ್ತರದ ಬಂಡೆಯ ಮೇಲೆ ಶಿಥಿಲಾವಸ್ಥೆಯಲ್ಲಿರುವ ತ್ರಿಕೂಟ ಜೈನ (ಪಾರ್ಶ್ವನಾಥ) ಬಸದಿಯಾಗಿದ್ದು, ದಾರಿಹೋಕರ ಗಮನ ಸೆಳೆಯುತ್ತದೆ. ನಡುವಣ ನವರಂಗದ ಸುತ್ತ ಮೂರು ದಿಕ್ಕಲ್ಲಿ ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿರುವ ಇದರ ನವರಂಗ ಹಾಗೂ ಮುಖಮಂಟಪಗಳು ಹಾಳಾಗಿದ್ದು, ಗರ್ಭಗೃಹ, ಅಂತರಾಳ ಭಾಗಗಳಷ್ಟೆ ಉಳಿದಿವೆ. ಬಳಪದಕಲ್ಲನ್ನು ಬಳಸಿ, ನಿರ್ಮಿಸಲ್ಪಟ್ಟಿರುವ ಈ ಬಸದಿಯು ನಿರಾಡಂಬರ ಅಧಿಷ್ಠಾನವನ್ನು ಹೊಂದಿದ್ದು, ಭಿತ್ತಿಯಲ್ಲಿ ಕಿರುದೇವಕೋಷ್ಠ ಹಾಗೂ ಅಲಂಕಾರಿಕ ಕಂಬಗಳಿವೆ. ಗರ್ಭಗೃಹಗಳ ಬಾಗಿಲುವಾಡಗಳು ರೇಖಾಲಂಕಾರದಿಂದ ಕೂಡಿದ್ದು, ಲಲಾಟದಲ್ಲಿ ತೀರ್ಥಂಕರ ಕೆತ್ತನೆ ಇದೆ. ಗರ್ಭಗೃಹಗಳಿಗೆ ಹಿಂದೆ ಇದ್ದ ಕದಂಬ ನಾಗರ ಶಿಖರಗಳಿಂದು ಹಾಳಾಗಿದ್ದು, ಬಸದಿಯ ಹಿಂಬದಿಯಲ್ಲಿ ಕೆರೆ ಇದೆ. ಇಲ್ಲಿದ್ದ ಶಾಸನ ಹಾಗೂ ತೀರ್ಥಂಕರ ಶಿಲ್ಪಗಳನ್ನು ಬೆಳ್ಳೂರಿಗೆ ಸಾಗಿಸಲಾಗಿದೆಯೆಂದು ತಿಳಿದು ಬರುತ್ತದೆ. **ಆರಣಿ (೭೪೪):** ತಾಲೂಕು ಕೇಂದ್ರ ನಾಗಮಂಗಲದಿಂದ ೨೫ ಕಿ.ಮೀ.ವಾಯವ್ಯಕ್ಕೆ ಇದ್ದು, ಪ್ರಾಚೀನ ಶಾಸನಗಳಲ್ಲಿ 'ಆರಣಿ', 'ಆರಣಿಯೂರು' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಕಲ್ಕುಣಿ ನಾಡಿಗೆ ಸೇರಿತ್ತು. ಇಲ್ಲಿಂದ ಈವರೆಗೆ ವರದಿಯಾಗಿರುವ ಸುಮಾರು ೧೦–೧೩ನೇ ಶತಮಾನದ ಮೂರು ಶಾಸನಗಳಲ್ಲಿ ನೆರೆಯ ಬೆಳ್ಳೂರಿನ ಕ್ರಿ.ಶ.೧೧೮೭ (ಕ್ರಿ.ಶ.೧೨೬೫) ರ ಶಾಸನದಿಂದ, ಮಂಡಲಸ್ವಾಮಿಯು ಆರಣಿಯಲ್ಲಿ ಗುಡಿ ಕಟ್ಟಿ, ತೋಪು ನಿರ್ಮಿಸಿ, ಸಂತೆಯನ್ನು ಆರಂಭಿಸಿದ ಮಹತ್ವದ ಅಂಶ ಗೊತ್ತಾಗುತ್ತದೆ. ಅದೇ ಊರಿನ ಕ್ರಿ.ಶ.೧೨೬೯ರ ಇನ್ನೊಂದು ಶಾಸನ ಒಡಂಬಡಿಕೆಗಳಿಗೆ ಸಾಕ್ಷಿಯಾಗಿದ್ದ ನಾಲ್ಕು ಊರವರಲ್ಲಿ ಆರಣಿ ಗ್ರಾಮದವರೂ ಇದ್ದ ಅಂಶವನ್ನು ದಾಖಲಿಸಿದೆ. ಊರ ಕೆರೆಗೆ ಹೋಗುವ ದಾರಿಯಲ್ಲಿರುವ ಗೋಪಾಲಕೃಷ್ಣ ದೇವಾಲಯ ಸಮುಚ್ಚಯವು ಪುರಾತನದ್ದಾಗಿದೆ. ಪೂರ್ವಾಭಿಮುಖವಾಗಿರುವ ಇದರ ಗರ್ಭಗೃಹದಲ್ಲಿ ಸುಮಾರು ಐದೂವರೆ ಅಡಿಯ ಗೋಪಾಲಕೃಷ್ಣನ ಸುಂದರ ಮೂರ್ತಿ, ವಿಶಾಲವಾದ ನವರಂಗದ ದೇವಕೋಷ್ಠಗಳಲ್ಲಿ ಗಣಪತಿ ಹಾಗೂ ಮಹಿಷಮರ್ಧಿನಿ ಶಿಲ್ಪಗಳಿವೆ. ನವರಂಗದ

ಛತ್ತು ಕಮಲಾಲಂಕೃತವಾಗಿದ್ದು, ಬಾಗಿಲವಾಡದಲ್ಲಿ ಪೂರ್ಣಕುಂಭ, ಲಲಾಟದಲ್ಲಿ ಬಾಲಕೃಷ್ಣನ ಕಿರುಕೆತ್ತನೆಗಳಿವೆ. ಮುಂದಕ್ಕಾದಂತೆ ಇರುವ ವಿಶಾಲವಾದ ಮುಖಮಂಟಪದ ಬಳಿ ದ್ವಾರಪಾಲಕರ ಶಿಲ್ಪಗಳಿವೆ. ಸುಮಾರು ೧೩ನೆಯ ಶತಮಾನದ ರಚನೆಯಾದ ಇದರ ಭಿತ್ತಿಯು ನಿರಾಡಂಬರವಾಗಿದ್ದು, ಎದುರಲ್ಲಿ ೧೩ ಅಡಿ ಎತ್ತರದ ಗರುಡಗಂಬವಿದೆ. ಗುಡಿಯ ಬಲಕ್ಕಿರುವ ದೇವಿಗುಡಿಯ ಗರ್ಭಗೃಹ ಹಾಗೂ ಅಂತರಾಳಗಳಷ್ಟೇ ಉಳಿದಿದ್ದು, ಮಹಿಷಮರ್ಧಿನಿ, ಬಾಲಗೋಪಾಲ, ಕೇಶವ, ಗರುಡ ಮುಂತಾದ ಶಿಲ್ಪಗಳಿವೆ. ಕೆರೆಯ ಬಳಿ ಇರುವ ನಾಲ್ಕಾರು ಹಾಗೂ ಬೇವಿನ ಮರದ ಬಳಿ ಇರುವ ಮೂರ್ನಾಲ್ಕು ವೀರಗಲ್ಲುಗಳಲ್ಲಿ ಕೆಲವು ಹೊಯ್ಸಳರ ಕಾಲದ್ದಾಗಿವೆ. ಅಲ್ಲದೆ ಗಂಗರ ಕಾಲದ್ದೆಂದು ಗುರುತಿಸಬಹುದಾದ ನಾಲ್ಕಾರು ಗಿಡ್ಡನೆಯ ಕಂಬಗಳೂ ಇದ್ದು, ಬಳಿಯಲ್ಲೇ ಗಣಪತಿ ಶಿಲ್ಪವಿದೆ. **ದೊಡ್ಡಜಟಕಾ (೫೮೮)** : ನಾಗಮಂಗಲ ರಸ್ತೆಯಲ್ಲಿ ಸ್ವಲ್ಪ ಒಳಕ್ಕಾದಂತೆ ಇದ್ದು, ಹೊಯ್ಸಳ ಶಾಸನಗಳಲ್ಲಿ 'ಜೆಟ್ಟಿಗ' ಎಂದೂ ವಿಜಯನಗರ ಕಾಲದ ಶಾಸನದಲ್ಲಿ 'ಹಿರೀಜಟ್ಟಿಗ' ಎಂದೂ ಉಲ್ಲೇಖಿತಗೊಂಡಿದೆ. ಹಿಂದೆ ಕಲ್ಕಣಿ ನಾಡೊಳಗಿದ್ದ ಈ ಊರನ್ನು ಹುಳ್ಳೆಯನಾಯಕನು ಕಟ್ಟಿ ಕೆರೆಯನ್ನು ನಿರ್ಮಿಸಿದನೆಂದು ಕ್ರಿ.ಶ.೧೧೭೯ರ ಶಾಸನದಿಂದ ಗೊತ್ತಾಗುತ್ತಿದ್ದು, ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಸೋಮೇಶ್ವರ ಗುಡಿಯ ರಂಗಮಂಟಪದ ತೊಲೆಯಲ್ಲಿರುವ ಶಾಸನಗಳು ಇಮ್ಮಡಿ ಬಲ್ಲಾಳನ ಆಡಳಿತಾವಧಿಯಲ್ಲಿ ಮಹಾಸಾಮಂತ ದುಮ್ಮೆಯನಾಯಕನು ಕಲ್ಕಣಿ ನಾಡ ಜೆಟ್ಟಿಗದಲ್ಲಿ ಕಳಶಯುಕ್ತ ಹೇಮೇಶ್ವರ ದೇವಾಲಯ ಹಾಗೂ ಕೆರೆಗಳನ್ನು ಕ್ರಿ.ಶ.೧೧೭೯ರಲ್ಲಿ ನಿರ್ಮಿಸಿ, ದೇವರ ಪೂಜಾವಿಧಿಗೆಂದು ಸ್ಥಾನಾಚಾರ್ಯ ಬಾಚಜೀಯರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತವೆ. ಗುಡಿಯ ಎಡಗಡೆ ಗೋಡೆ ಮೇಲಿದ್ದ ಶಾಸನ, ಐವತ್ತು ಗೇಣಿನ ಈ ಗಡಿಂಬ (ಕೋಲು)ವನ್ನು ಕಿತ್ತವನು ಕುಂಬಿನಿ ನರಕ ಹಾಗೂ ಸಂತಾನ ಕ್ಷಯಗಳಿಗೆ ತುತ್ತಾಗಲೆಂದು ಶಪಿಸುತ್ತದೆ. ಇಲ್ಲಿ ಪ್ರಸ್ತಾಪಿಸಿರುವ ಐವತ್ತು ಗೇಣಿನ ಗಡಿಂಬವು ಗುಡಿಯ ಮೇಲೆ ರೇಖಿಸಿದ್ದ ಭೂಮಾಪನಕ್ಕೆ ಸಂಬಂಧಿಸಿದ ಅಳತೆಕೋಲನ್ನು ನಿರ್ದೇಶಿಸುವಂತೆ ತೋರುತ್ತದೆ.

ಊರಲ್ಲಿರುವ ಸೋಮೇಶ್ವರ (ಶಾಸನೋಕ್ತ ಹೆಮ್ಮೇಶ್ವರ) ಗುಡಿಯನ್ನು, ಮೂಲರೂಪ ಉಳಿಸಿಕೊಂಡು ಜೀರ್ಣೋದ್ಧಾರ ಮಾಡಲಾಗಿದೆ. ಎತ್ತರದ ಸ್ಥಳದಲ್ಲಿ ಪೂರ್ವಾಭಿಮುಖನಾಗಿರುವ ಇದಕ್ಕೆ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳಿದ್ದು, ನವರಂಗಕ್ಕೆ ಪಾರ್ಶ್ವದ್ವಾರವಿದೆ. ಒಳಗೆ ಶಿವಲಿಂಗ, ಅಂತರಾಳದಲ್ಲಿ ನಂದಿ ಶಿಲ್ಪವಿದ್ದು, ನವರಂಗದ ಪೂರ್ವಾಕ್ಕಾದಂತೆ ಜಾಲಂದ್ರವಿದೆ. ನವರಂಗದ ಆಕರ್ಷಕ ಛತ್ತನ್ನು ಸುಂದರವಾದ ಕಮಲದಿಂದ ಅಲಂಕರಿಸಲಾಗಿದೆ. ಗುಡಿ ಬಾಗಿಲಲ್ಲಿರುವ ಫಕೀರಸ್ವಾಮಿ ಗದ್ದುಗೆಯು ಇಲ್ಲೇ ಜೀವಂತ ಸಮಾಧಿ ಹೊಂದಿ ಶಿವೈಕ್ಯರಾದ ಫಕೀರಸ್ವಾಮಿಯವರದೆಂಬ ಸ್ಥಳೀಯ ಅಭಿಪ್ರಾಯವಿದ್ದು, ಶಿರಹಟ್ಟಿಯ ಭಕ್ತರು ಇಲ್ಲಿಗೂ ಇಲ್ಲಿಯ ಭಕ್ತರು ಶಿರಹಟ್ಟಿಗೂ ಹೋಗುವ ಸಂಪ್ರದಾಯವಿದೆ. ಬದಿಯಲ್ಲಿ ಸುಮಾರು ೧೬ನೆಯ ಶತಮಾನದ ಗೋಗ್ರಹಣ ವೀರಗಲ್ಲೊಂದಿದೆ. ಊರ ನಡುವೆ ಇರುವ ಕೇಶವ (ವಿಷ್ಣು) ದೇವಾಲಯವೇ ಕ್ರಿ.ಶ.೧೩೧೨ರ ತಾಮ್ರಶಾಸನದಲ್ಲಿ ಉಕ್ತವಾಗಿರುವ ವಿಷ್ಣುಗುಡಿಯಾಗಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿರುವ ಇದು ಸುಮಾರು ೧೩ನೇ ಶತಮಾನದ ರಚನೆಯಾಗಿದ್ದು, ಮುಂದಿನ ಸಭಾಮಂಟಪವನ್ನು ನಂತರದಲ್ಲಿ ಸೇರಿಸಿ ವಿಸ್ತರಿಸಲಾಗಿದೆ. ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ಕೇಶವನ ಆಳೆತ್ತರದ ಶಿಲ್ಪವಿದ್ದರೆ, ಮುಖಮಂಟಪದಲ್ಲಿ ದ್ವಾರಪಾಲಕರಿದ್ದು, ಸಭಾಮಂಟಪದ ಕಂಬದ ಮೇಲೆ ಗಣಪತಿಯ ಕೆತ್ತನೆ ಇದೆ. ಗರ್ಭಗುಡಿಯ ಇಟ್ಟಿಗೆ ಶಿಖರವು ಶಿಥಿಲಾವಸ್ಥೆಯಲ್ಲಿದ್ದು, ನವರಂಗದ ಗೋಡೆಗಳೂ ಇಟ್ಟಿಗೆಯದಾಗಿವೆ. ಉಳಿದಂತೆ ಊರಿನಲ್ಲಿ ಮಾದೇಶ್ವರ, ಮಾರಮ್ಮ, ಪಟಾಲದಮ್ಮ ಮುಂತಾದ ಗುಡಿಗಳಿವೆ. ಅಲ್ಲದೇ ಮಸೀದಿ ಹಾಗೂ ಫಕೀರ್ ಷಾವಲೆ ದರ್ಗಾ ಕೂಡಾ ಇದ್ದು ರಂಜಾನ್ ತಿಂಗಳಲ್ಲಿ ಉರುಸಾಗುತ್ತದೆ. **ಹಟ್ಟಣ (೪೬೫)** : ಇದು ಕುಣಿಗಲ್ ರಸ್ತೆಯಲ್ಲಿದ್ದು ಅಲ್ಲಿಂದ ಈವರೆಗೆ ವರದಿಯಾಗಿರುವ ಕ್ರಿ.ಶ.೧೧೭೮ರ ಏಕೈಕ ಶಾಸನವು ಹೊಯ್ಸಳ ಪಟ್ಟಣಸ್ವಾಮಿ ಸೋಮಿಸೆಟ್ಟಿಯು ತನ್ನ ಹೆಸರಲ್ಲಿ ನಿರ್ಮಿಸಿದ

'ಸೋಮಿಸೆಟ್ಟಿಪಟ್ಟಣ'ದಲ್ಲಿ ಅಮರಗಿರಿತುಂಗಕ್ಕೆ ಸಮಾನವಾದ ಪಾರ್ಶ್ವಜಿನಾಲಯ ಹಾಗೂ ಮೂರು ತಟಾಕಗಳನ್ನು ನಿರ್ಮಿಸಿ, ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಮಿಗಿಲಾಗಿ ಈ ಸೋಮಿಸೆಟ್ಟಿಯ ಪೂರ್ವಿಕರಲ್ಲಿ ಎರಗಸೆಟ್ಟಿಯೆಂಬುವನು ಮುದುವೊಳಲಿನಲ್ಲಿ ಹೊಸದಾಗಿ ಬಸದಿ ಹಾಗೂ ಕೆರೆಗಳನ್ನು ನಿರ್ಮಿಸಿದ್ದು, ಆ ದೇಗುಲದ ಭಿತ್ತಿಯನ್ನು ಸುರಾಸುರರ ಯುದ್ಧಕಥನ ಶಿಲ್ಪಗಳು ಅಲಂಕರಿಸಿದ್ದವೆಂದು ಈ ಶಾಸನ ದಾಖಲಿಸಿರುವುದು ಉಲ್ಲೇಖಾರ್ಹವಾಗಿದ್ದು, ಆ ಮುದುವೊಳಲು ಯಾವುದೆಂದು ಪತ್ತೆಯಾಗಬೇಕಾಗಿದೆ.

ಊರ ಪ್ರವೇಶದಲ್ಲಿರುವ ವೀರಭದ್ರನ (ಶಾಸನೋಕ್ತ ಪಾರ್ಶ್ವನಾಥ) ಗುಡಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಹೊಯ್ಸಳ ದೇವಾಲಯವಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ಗರ್ಭಗೃಹದಲ್ಲಿ ತೀರ್ಥಂಕರ ಪೀಠದ ಮೇಲೆ ಸುಮಾರು ೧೪-೧೫ನೇ ಶತಮಾನಕ್ಕೆ ಸೇರಿದ ವೀರಭದ್ರನ ನಾಲ್ಕಡಿಯ ಶಿಲ್ಪವಿದ್ದು, ಬಾಗಿಲವಾಡ ನಿರಾಡಂಬರವಾಗಿದೆ. ಅಂತರಾಳದಲ್ಲಿ ನಂದಿ ಇದ್ದು, ನವರಂಗದ ಕಂಬಗಳು ಸರಳವಾಗಿದ್ದು, ನಡುವಣ ಛತ್ತಲ್ಲಿ ಕಮಲವಿದೆ. ಗುಡಿಯ ಭಿತ್ತಿ ಶಿಥಿಲಗೊಂಡಿದ್ದು, ನಿರಾಡಂಬರವಾಗಿದೆ. ಯುಗಾದಿಯಾದ ೧೫ ದಿನಕ್ಕೆ ಈ ದೇವರ ಜಾತ್ರೆಯಾಗುತ್ತದೆ. ಇದರ ಬಲಭಾಗಕ್ಕಾದಂತೆ ಇರುವ ಗರುಡ ದೇವಾಲಯವು ನಂತರದ್ದಾಗಿದ್ದು, ಒಳಗೆ ಶಂಖ, ಚಕ್ರ, ಖಡ್ಗ, ಗುರಾಣಿ ಹಿಡಿದು ವೀರಮಂಡಿ ಹಾಕಿ ಕುಳಿತಿರುವ ಗರುಡನಿದ್ದಾನೆ. ಉಳಿದಂತೆ ಊರಲ್ಲಿ ಬಸವಣ್ಣ, ನಂದಿ, ಕಾಳಘಟ್ಟಮ್ಮ ಮುಂತಾದ ನವೀನ ಗುಡಿಗಳಿವೆ.

**ಬೆಳ್ಳೂರು (ಕೊಕ್ಕರೆ) (೧೩೮೪)** : ತಾಲೂಕು ಕೇಂದ್ರ ಮದ್ದೂರಿನಿಂದ ೧೮ ಕಿ.ಮೀ. ವಾಯವ್ಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ಬೆಲ್ಲೂರು, ಬೆಳೂರು, ಚಿಕ್ಕಬೆಳೂರು' ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಹಿಂದೆ ಕಳಲೆ ನಾಡಿಗೆ ಸೇರಿತ್ತು. ಅಲ್ಲಿಂದ ಈವರೆಗೆ ಮೂರು ವೀರಗಲ್ಲು ಶಾಸನಗಳು ವರದಿಯಾಗಿವೆ. ಆದರೂ ಕಳೆದ ಐದು ಶತಮಾನಗಳಿಂದಲೂ ಹೊಂದಿರುವ ಕೊಕ್ಕರೆಗಳ ನಿಕಟ ಸಂಬಂಧದಿಂದಾಗಿ ನಿಸರ್ಗ ಪಕ್ಷಿಧಾಮವೆಂದೇ ಪ್ರಸಿದ್ಧವಾಗಿದೆ. ಜಿಲ್ಲೆಯ ರಂಗನತಿಟ್ಟು, ಹೇಮಗಿರಿ, ಮತ್ತು ಗೆಂಡೇಹೊಸಹಳ್ಳಿಯ ಪರಿಸರಕ್ಕಿಂತ ಇದು ಸ್ವಲ್ಪ ಭಿನ್ನವಾಗಿದ್ದು, ಊರ ಮಧ್ಯದಲ್ಲಿರುವ ಹುಣಸೆ, ಗೊಬ್ಬಳಿ ಮುಂತಾದ ಹತ್ತಾರು ಮರಗಳ ಮೇಲೆ, ಬೇರೆಡೆಗಳಿಂದ ವಲಸೆ ಬಂದು ಜನವರಿಯಿಂದ ಜುಲೈವರೆಗೆ ನೆಲೆಯೂರುವ ಕೊಕ್ಕರೆಗಳು ಗೂಡು ಕಟ್ಟಿ, ಮರಿ ಮಾಡಿಕೊಂಡು ಸ್ವಸ್ಥಾನಕ್ಕೆ ಹಿಂತಿರುಗುವುದರಿಂದ, ಬೆಳ್ಳೂರಿನೊಂದಿಗೆ ಕೊಕ್ಕರೆ ಪದವೂ ತಳಕು ಹಾಕಿಕೊಂಡಿದ್ದು, ಕೊಕ್ಕರೆ ಬೆಳ್ಳೂರು ಪ್ರಾಕೃತಿಕ ಪಕ್ಷಿಧಾಮವಾಗಿದೆ. ಈ ಊರ ಗಿಡಮರಗಳ ತುಂಬಾ ಕುಳಿತ ಕೊಕ್ಕರೆಗಳೆಷ್ಟೋ! ಗಗನದಲ್ಲಿ ಹಾರಾಡುತ್ತಿರುವುದೆಷ್ಟೋ ! ಅವುಗಳ ಕೊಕ್ಕು, ಕೊರಳು, ಪಾದ ಹಾಗೂ ಪುಕ್ಕಗಳಲ್ಲಿರುವ ಕಿಂಚಿತ್ ವರ್ಣವ್ಯತ್ಯಾಸ ಒಡೆದು ಕಾಣುತ್ತಿದ್ದು, ಕೆಲವು ನಸುಗೆಂಪಾಗಿದ್ದರೆ, ಹಲವು ನಸುಕಪ್ಪಾಗಿದ್ದು, ಹೆಚ್ಚಿನವು ಬಿಳುಪು ಬಣ್ಣದವು. ಪ್ರತೀ ವರ್ಷ ಸಂಕ್ರಾಂತಿ (ಜನವರಿ) ಆಸುಪಾಸಲ್ಲಿ ಕಾಣಿಸಿಕೊಳ್ಳುವ ಹೆಜ್ಜಾರ್ಲೆ (ಪೆಲಿಕಾನ್) ಹಾಗೂ ಬೆಳ್ಳಕ್ಕಿಗಳು ಗೂಡು ಕಟ್ಟಿ, ಮೊಟ್ಟೆಯಿಕ್ಕಿ ಮರಿ ಮಾಡಿಕೊಂಡು ಮಳೆಗಾಲಕ್ಕೆ (ಜುಲೈ) ಮೊದಲು, ಬಾಣಂತನಕ್ಕೆ ತೌರಿಗೆ ಬಂದ ಹೆಣ್ಣು ಮಗಳಂತೆ ಬಲಿತ ಮರಿಗಳೊಂದಿಗೆ ಸ್ವಸ್ಥಾನಕ್ಕೆ ಕಾಲ್ತೆಗೆಯುತ್ತವೆ. ಇಲ್ಲಿಯ ಕೊಕ್ಕರೆಗಳಲ್ಲಿ ಇಂದು ಅಲ್ಪಸಂಖ್ಯಾತವಾಗುತ್ತಿರುವ ಹೆಜ್ಜಾರ್ಲೆಗಳೇ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬರುವುದರಿಂದ ಇದನ್ನು ಹೆಜ್ಜಾರ್ಲೆ ಪಕ್ಷಿಧಾಮ ಎಂದು ಕರೆಯಬಹುದೇನೋ. ದೈತ್ಯಾಕಾರದ, ಶ್ವೇತವರ್ಣದ, ಎಲ್ಲಾ ದಿಕ್ಕಿಗೂ ತಿರುಗಿಸಬಹುದಾದ ಉದ್ದನೆಯ ಫ್ಲೆಕ್ಸಿಬಲ್ ಕೊಕ್ಕು, ಅದಕ್ಕೆ ಜೋತು ಬಿದ್ದಿರುವ ನೀಲಿನರಗಳ ಜಾಲವಿರುವ ತೊಗಲು ಚೀಲವನ್ನು ಹೊಂದಿದ್ದು, ಒಂದೇ ತುತ್ತಿಗೆ ಇಡೀ ಮೀನನ್ನು ಗುಳುಂ ಮಾಡುವ ಇದು ಇಂದು ನಾನಾ ಕಾರಣಗಳಿಂದ ಕ್ಷೀಣಿಸುತ್ತಿದ್ದು, ಅದರ ರಕ್ಷಣೆಗಾಗಿ ಊರಲ್ಲೊಂದು ಹೆಜ್ಜಾರ್ಲೆ ಬಾಲವಾಡಿಯನ್ನೂ ಸ್ಥಳೀಯ ಯುವಕರು ನಡೆಸುತ್ತಿದ್ದು, ಹೆಜ್ಜಾರ್ಲೆಗಳಿಗೆ ಪೂರಕವಾದ ವಾತಾವರಣವನ್ನು

ಒದಗಿಸುವುದು, ಗಾಯಗೊಂಡ ಹೆಜ್ಜಾರ್ಲೆ ಮರಿಗಳನ್ನು ರಕ್ಷಿಸಿ, ಪೋಷಿಸಿ, ಹಾರಿ ಬಿಡುವುದೇ ಅದರ ಧ್ಯೇಯೋದ್ದೇಶವಾಗಿದೆ. ಜನವಸತಿ ನೆಲೆಯಲ್ಲಿ ನಿರ್ಭಿಡೆಯಿಂದ ಹಾರಾಡುತ್ತಾ, ಮರದ ಮೇಲೆ ಕೂರುತ್ತಾ, ಗೂಡಲ್ಲಿ ಮೊಟ್ಟೆಯಿಟ್ಟು ಮರಿಮಾಡುತ್ತಾ ಸ್ವೇಚ್ಛೆಯಿಂದ ಇರುವ ಪಕ್ಷಿಗಳೊಂದಿಗೆ ಸಹಬಾಳ್ವೆ ನಡೆಸುತ್ತಿರುವ, ಇಲ್ಲಿಯ ಜನರ ಪ್ರಕೃತಿ ಪ್ರೇಮ ವೀಕ್ಷಕರಿಗೆ ವಿಶಿಷ್ಟ ಅನುಭವವನ್ನು ನೀಡುತ್ತಿದ್ದು, ಇದನ್ನು ಜನಪದ ಪಕ್ಷಿಧಾಮವೆಂದು ಕರೆಯಬಹುದಾಗಿದೆ. ಪ್ರವಾಸೋದ್ಯಮದ ಅಭಿವೃದ್ಧಿಗೆ ಹೇರಳ ಅವಕಾಶವಿರುವ ಈ ಸ್ಥಳವನ್ನು 'ರಾಷ್ಟ್ರೀಯ ಸಂರಕ್ಷಿತ ಪಕ್ಷಿಧಾಮ' ಎಂದು ಘೋಷಿಸಲಾಗಿದ್ದು ಅಭಿವೃದ್ಧಿಪಡಿಸಬೇಕಾಗಿದೆ. **ಮಾದನಾಯಕನಹಳ್ಳಿ (೯೮೭) :** ತಾಲೂಕು ಕೇಂದ್ರ ಮದ್ದೂರಿನಿಂದ ಎಂಟು ಕಿ.ಮೀ. ಈಶಾನ್ಯಕ್ಕಿರುವ ಇಲ್ಲಿಂದ ಏಕೈಕ ಶಾಸನ ಈವರೆಗೆ ವರದಿಯಾಗಿದೆ. ಊರಾಚೆ ಕೆರೆ ಏರಿ ಕೆಳಗಿರುವ ಮಹಾಬಲೇಶ್ವರ (ಈಶ್ವರ) ಗುಡಿಗೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳಿವೆ. ಒಳಗೆ ಶಿವಲಿಂಗವಿದ್ದು, ಕಮಲ ಛತ್ತಿರುವ ನವರಂಗದಲ್ಲಿ ಸೂರ್ಯ, ಭೈರವ, ಗಣಪ, ಸಪ್ತಮಾತೃಕಾ ಶಿಲ್ಪಗಳ ಜೊತೆಗಿರುವ ಅಪರೂಪದ ಪಂಚಮಾತೃಕಾ ಪಟ್ಟಿಕೆಯಲ್ಲಿ ವೀಣಾಧಾರಿ ವೀರಭದ್ರ, ವೈಷ್ಣವಿ, ಇಂದ್ರಾಣಿ, ಬ್ರಾಹ್ಮಿ, ವಾರಾಹಿ, ಚಾಮುಂಡಿ ಹಾಗೂ ಗಣಪತಿಯ ಕೆತ್ತನೆಗಳಿದ್ದು ಬಹಳ ವಿಶಿಷ್ಟವಾಗಿದೆ. ದೇವಾಲಯದ ಪ್ರಧಾನ ಬಾಗಿಲವಾಡವು ಆಕರ್ಷಕವಾಗಿದ್ದು, ಮುಖಮಂಟಪದ ಛತ್ತನ್ನು ಹನ್ನೆರಡು ಕಿರುಕಮಲಗಳಿಂದ ಅಲಂಕರಿಸಲಾಗಿದೆ. ಅಲಂಕಾರಿಕ ಕಂಬಗಳಿಂದ ಕೂಡಿದ ಭಿತ್ತಿಯನ್ನೂ ಕದಂಬ ನಾಗರ ಶಿಖರವನ್ನೂ ಹೊಂದಿರುವ ಈ ದೇವಾಲಯವು ಸುಮಾರು ೧೩ನೇ ಶತಮಾನದ ರಚನೆಯಾಗಿದೆ. ಇದರ ಎಡಭಾಗದಲ್ಲಿರುವ ಮಲ್ಲಿಕಾರ್ಜುನ ಗುಡಿಯು ಗರ್ಭಗೃಹ, ಅಂತರಾಳ, ಹಾಗೂ ಮುಖಮಂಟಪಗಳನ್ನಷ್ಟೇ ಹೊಂದಿದ್ದು, ಒಳಗೆ ಮೂರು ಅಡಿ ಎತ್ತರದ ಭೈರವ, ಗಣಪ, ಸೂರ್ಯ ಹಾಗೂ ಸಪ್ತಮಾತೃಕಾ ಶಿಲ್ಪಗಳಿವೆ. ವೀರಗಾರರ ಗುಡಿ ಎಂದೇ ಕರೆಯಲ್ಪಡುವ ಗೂಡಲ್ಲಿ ನಾಲ್ಕು ಹಂತದ ಶಿಲ್ಪ ಕೆತ್ತನೆಯುಳ್ಳ ವೀರಗಲ್ಲಿನ ಮೇಲೆ ಅಪ್ರಕಟಿತ ಶಾಸನವಿದೆ. ಕೆರೆ ದಂಡೆಯ ಮೇಲಿರುವ ವಿಜಯನಗರ ಕಾಲದ ವೀರಗಲ್ಲುಗಳಲ್ಲಿ ಎರಡು ಬೃಹತ್ತಾಗಿದ್ದು, ಮಾರಮ್ಮನ ಗುಡಿ ಮುಂದೆ ನಾಲ್ಕು, ಕಾಳಿಂಗ ಗೌಡರ ತೋಪು, ಗದ್ದೆಯ್ಯನ ಮನೆ ಹಾಗೂ ಹುಚ್ಚಮ್ಮನ ಗುಡಿ ಬಳಿ ತಲಾ ಮೂರ್ಮೂರು ವೀರಗಲ್ಲುಗಳೊಂದಿಗೆ ಒಂದು ಮಾಸ್ತಿಕಲ್ಲೂ ಇದೆ. ಉಳಿದಂತೆ ಇಲ್ಲಿ ನಾರಾಯಣ, ಹಟ್ಟಿಮಾರಮ್ಮ, ಮಲ್ಲಮ್ಮ, ಲಕ್ಷ್ಮಮ್ಮ ಮುಂತಾದ ನವೀನ ಗುಡಿಗಳಿವೆ. ಊರಾಚೆ ತೋಪಿನಲ್ಲಿರುವ ಸುಮಾರು ೧೭ನೆಯ ಶತಮಾನದ ಬೃಹತ್ತಾದ ಸಿದ್ಧರಾಮೇಶ್ವರ ಗುಡಿಯ ಪುಷ್ಕರಣಿ ಬಳಿ ಆಳೆತ್ತರದ ವೀರಭದ್ರನ ಶಿಲ್ಪವಿದೆ. ಈ ಗುಡಿ ಆವರಣದಲ್ಲೇ ತೈಲೂರಮ್ಮನ ಗುಡಿಯು ಇದೆ. ಶಿವರಾತ್ರಿಯ ಸಂದರ್ಭದಲ್ಲಿ ಎರಡು ದಿನ ಮಾತ್ರ ತೆರೆಯಲ್ಪಡುವ ಇಲ್ಲಿಯ ಹುಚ್ಚಮ್ಮನ ಗುಡಿಯ ಜಾತ್ರೆಯು ನಾಲ್ಕು ವರ್ಷಗಳಿಗೊಮ್ಮೆ ಶಿವರಾತ್ರಿ ಸಂದರ್ಭದಲ್ಲಿ ಜರುಗುತ್ತದೆ. **ತೈಲೂರು** (೧೯೬೨) : ತಾಲೂಕು ಕೇಂದ್ರ ಮದ್ದೂರಿನಿಂದ ಏಳು ಕಿ.ಮೀ.ವಾಯವ್ಯಕ್ಕೆ, ಮದ್ದೂರು–ಹಲಗೂರು ರಸ್ತೆಯಲ್ಲಿದ್ದು, ಪ್ರಾಚೀನ ಶಾಸನಗಳಲ್ಲಿ 'ತೈರೂರು, ತೈಲೂರು' ಎಂದೆಲ್ಲಾ ಉಲ್ಲೇಖಿತಗೊಂಡಿದೆ. ಇಲ್ಲಿಂದ ವರದಿಯಾಗಿರುವ ಗಂಗರ ಕಾಲದ ಎರಡು ಶಾಸನಗಳಲ್ಲಿ, ಜಿಲ್ಲೆಗೇ ಪ್ರಾಚೀನವಾದ ಕ್ರಿ.ಶ.೪೯೬ರ ಹಳೆಗನ್ನಡ ಶಾಸನವು ನಾಗಮಯ್ಯನು ತೈರೂರಿನಲ್ಲಿ ಕಲ್ಲದೇಗುಲ ನಿರ್ಮಿಸಿ ಭೂದಾನ ಬಿಟ್ಟಿದ್ದನ್ನು ತಿಳಿಸಿದರೆ, ಕ್ರಿ.ಶ.೯೦೭ರ ಇನ್ನೊಂದು ಶಾಸನದಿಂದ ಕಚ್ಚವರದ ಪೊಳಲಿಸೆಟ್ಟಿಯಿಂದ ಊರ ಕೆರೆ ನಿರ್ಮಾಣಗೊಂಡ ಅಂಶ ಗೊತ್ತಾಗುತ್ತದೆ. ಆದರೆ ಇಲ್ಲಿಯ ಪ್ರಾಚೀನ ಗುಡಿಗಳೆಲ್ಲವೂ ಜೀರ್ಣೋದ್ಧಾರಗೊಂಡಿದ್ದು, ಮಹಾದೇಶ್ವರ ಗುಡಿಯ ಪ್ರಾಕಾರದ ಕಿರುಗುಡಿಯೊಂದರಲ್ಲಿರುವ, ಸತ್ಯನಾರಾಯಣನೆಂದು ಕರೆಯಲ್ಪಡುವ, ನಾಲ್ಕೂವರೆ ಅಡಿ ಎತ್ತರದ ಚತುರ್ಭುಜಧಾರಿ ವಿಷ್ಣುವಿನ ಶಿಲ್ಪ ಕಲಾತ್ಮಕವಾಗಿದ್ದು, ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯೂ ಇದೆ. ಅದೇ ಗುಡಿ ಬಳಿ ವೀರಗಲ್ಲುಗಳಿದ್ದು, ಕೆರೆ ದಂಡೆಯ ಮೇಲೆ ಗಂಗರ ಕಾಲದ ವಿಷ್ಣು ಹಾಗೂ ಸಪ್ತಮಾತೃಕಾ ಶಿಲ್ಪಗಳಿವೆ.

**ಬೋಗಾದಿ (೫೫೮)** : ತಾಲೂಕು ಕೇಂದ್ರ ನಾಗಮಂಗಲದಿಂದ ೧೬ ಕಿ.ಮೀ. ನೈಋತ್ಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ ಭೋಗವ(ಸ)ದಿ ಎಂದೇ ಉಲ್ಲೇಖಿತಗೊಂಡಿದ್ದು, ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಹೊಯ್ಸಳ ಒಂದನೆಯ ನರಸಿಂಹನ ಕಾಲದ ಕ್ರಿ.ಶ.೧೧೪೪ರ ಜೈನ ಶಾಸನ, ಶ್ರೀಕರಣದ ಹೆಗಡೆ ಮಾದಿರಾಜನು ಭೋಗವತಿಯಲ್ಲಿ ಶ್ರೀಕರಣದ ಜಿನಾಲಯವನ್ನು ನಿರ್ಮಿಸಿ, ಪಾರ್ಶ್ವನಾಥ ತೀರ್ಥಂಕರ ಮೂರ್ತಿಯನ್ನು ಪ್ರತಿಷ್ಠಾಪಿಸಿದಾಗ, ಅರಸನು ಭೋಗವತಿ ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ದಾಖಲಿಸಿದರೆ, ಕ್ರಿ.ಶ.೧೧೭೫ರ ಇನ್ನೊಂದು ಶಾಸನ, ಮಂತ್ರಿ ಬಲ್ಲಯ್ಯನ ದಾನವನ್ನು ದಾಖಲಿಸುತ್ತದೆ.

ಊರ ಪ್ರವೇಶದಲ್ಲೇ ಕಾಣುವ ಪಾಳು (ಶಾಸನೋಕ್ತ ಪಾರ್ಶ್ವನಾಥ) ಬಸದಿಗೆ ಗರ್ಭಗೃಹ, ನವರಂಗ ಹಾಗೂ ಮುಖಮಂಟಪಗಳಿದ್ದು, ನಂತರದಲ್ಲಿ ಜೀರ್ಣೋದ್ಧಾರಗೊಂಡಿದೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ಭಿತ್ತಿ ಭಾಗ ಕುಸಿದು ಬೀಳುತ್ತಿದೆ. ನಂತರದ ಸೇರ್ಪಡೆಯಾದ ಅರ್ಧಮಂಟಪವೂ ಶಿಥಿಲಾವಸ್ಥೆಯಲ್ಲಿದೆ. ಊರ ನಡುವೆ ಇರುವ ವೆಂಕಟರಮಣ ಗುಡಿಗೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳಿದ್ದು, ಗರ್ಭಗೃಹದಲ್ಲಿ ನಾರಾಯಣ ಶಿಲ್ಪ ಹಾಗೂ ಅಂತರಾಳದಲ್ಲಿ ಶ್ರೀದೇವಿ-ಭೂದೇವಿಯರನ್ನೊಳಗೊಂಡ ನಾರಾಯಣನ ಉತ್ಸವಮೂರ್ತಿ ಇದ್ದು, ಭಿತ್ತಿಯನ್ನು ನವೀಕರಿಸಲಾಗಿದೆ. ಊರಾಚೆ ತೋಪಿನಲ್ಲಿ ಈಶ್ವರ ಗುಡಿಯಿದ್ದು, ಬೋರೇಶ್ವರ ಗುಡಿಯ ಬಳಿ ವೀರಗಲ್ಲುಗಳಿವೆ. ಉಳಿದಂತೆ ಊರಿನಲ್ಲಿ ಆಂಜನೇಯ, ಪಟಲದಮ್ಮ, ಸಿಂಗಮ್ಮ, ಕನ್ನಂಬಾಡಿಯಮ್ಮ ಮುಂತಾದ ಗುಡಿಗಳಿವೆ. ನೆರೆಯ ಕೆಂದನಹಳ್ಳಿಯ ಗುಡ್ಡದ ಮೇಲೆ ಪತ್ತೆಯಾದ ಸುಮಾರು ೧೦ ಅಡಿ ಎತ್ತರದ ತೀರ್ಥಂಕರ ಶಿಲ್ಪವನ್ನು (ಹೊಯ್ಸಳ) ಅಲ್ಲೇ ಸಮೀಪದ ಗುಡ್ಡದ ಬುಡದ ಗುಡಿಯೊಂದರಲ್ಲಿಡಲಾಗಿದೆ ಎಂದು ಪ್ರಾಚ್ಯ ವಸ್ತು ಸಂಗ್ರಹಾಲಯ ಇಲಾಖೆಯ ೧೯೯೯ರ ವರದಿ ದಾಖಲಿಸಿದೆ.

**ಭಾರತೀಪುರ (೮೧೩)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೨ ಕಿ.ಮೀ. ಉತ್ತರಕ್ಕಿದ್ದು, ಹೊಯ್ಸಳರ ಕಾಲದಲ್ಲಿ ಅಗ್ರಹಾರವಾಗಿದ್ದ ಇದು ಪ್ರಾಚೀನ ರಾಮಲಿಂಗೇಶ್ವರ ಹಾಗೂ ನಾರಾಯಣ ದೇವಾಲಯಗಳಿಂದಾಗಿ ಉಲ್ಲೇಖಾರ್ಹವಾಗಿದೆ. ಇತ್ತೀಚೆಗೆ ಜೀರ್ಣೋದ್ಧಾರಗೊಂಡಿರುವ ಇಲ್ಲಿಯ ರಾಮಲಿಂಗೇಶ್ವರ ಗುಡಿಯಲ್ಲಿ ಪ್ರಾಚೀನ ಕಾಲದ ವಿಷ್ಣು, ಗಣಪತಿ, ಮಹಿಷಮರ್ಧಿನಿ, ಶಿವಲಿಂಗ, ನಂದಿ ಮುಂತಾದ ಸುಂದರ ಕಿರು ಶಿಲ್ಪಗಳಿವೆ. ಇಲ್ಲಿಯ ಪಾಳು ನಾರಾಯಣದೇವರ (ಗೋಪಾಲಕೃಷ್ಣ) ಗುಡಿಯನ್ನು ಇತ್ತೀಚೆಗೆ ಧರ್ಮಸ್ಥಳದ ಧರ್ಮೋತ್ಥಾನ ಸಮಿತಿಯು ಸ್ಥಳೀಕರ ನೆರವಿನೊಂದಿಗೆ ದುರಸ್ತಿಗೊಳಿಸಿ ಅದರ ಗತವೈಭವ ಮರುಕಳಿಸುವಂತೆ ಮಾಡಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಗರ್ಭಗೃಹದಲ್ಲಿರುವ ಸುಮಾರು ಆರು ಅಡಿ ಎತ್ತರದ ವಿಷ್ಣು ಮೂರ್ತಿಯು ಭವ್ಯವಾಗಿದ್ದು, ಇಕ್ಕೆಲಗಳಲ್ಲಿ ಶ್ರೀದೇವಿ-ಭೂದೇವಿಯರಿದ್ದು, ಗರ್ಭಗೃಹದ ಶಿರವನ್ನು ಗಾರೆ ಶಿಖರದಿಂದ ಅಲಂಕರಿಸಲಾಗಿದೆ. ಉಳಿದಂತೆ ಇಲ್ಲಿ ಗ್ರಾಮದೇವತೆ, ಗಣಪತಿ ಮುಂತಾದ ನವೀನ ಗುಡಿಗಳಿವೆ.

**ಭೈರಾಪುರ (೬೮೧)** ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೫ಕಿ.ಮೀ. ಪೂರ್ವಕ್ಕಿದ್ದು, ಇಲ್ಲಿಂದ ವರದಿಯಾಗಿರುವ ನಾಲ್ಕು ಶಾಸನಗಳಲ್ಲಿ ಹೊಯ್ಸಳ ಮುಮ್ಮಡಿ ನರಸಿಂಹನ ಕ್ರಿ.ಶ.೧೨೬೭ರ ಶಾಸನದಿಂದ, ರೇಕವ್ವೆ ದಂಡನಾಯಕಿತಿಯು ಬೊಮ್ಮಯ್ಯನಾಯಕಹಳ್ಳಿಯ ಬಳಿ ಅಗ್ರಹಾರ ಹೊಸವಾಡವನ್ನು ರೂಪಿಸಿ, 'ಭೈರವಪುರ' 'ಭೈರಮೇಶ್ವರಪುರ'ವೆಂದು ಅದಕ್ಕೆ ಹೆಸರಿಟ್ಟು, ಆ ಊರ ಈಶಾನ್ಯ ಭಾಗದಲ್ಲಿ ಭೈರಮೇಶ್ವರ ದೇವಾಲಯವನ್ನು ಮಾಡಿಸಿ, ಬಿಜ್ಜಲೇಶ್ವರಪುರವಾದ ಮಾಚನಘಟ್ಟದ ಸ್ಥಾನಪತಿಗೆ ದಾನಬಿಟ್ಟ ಅಂಶ ಗೊತ್ತಾಗುತ್ತದೆ. ರಾಮಲಿಂಗ, ಈಶ್ವರ (ಶಾಸನೋಕ್ತ ಭೈರವೇಶ್ವರ) ಎಂದೂ ಕರೆಯಲ್ಪಡುವ ಇದಕ್ಕೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳಿದ್ದು, ಗರ್ಭಗೃಹದಲ್ಲಿ ಶಿವಲಿಂಗ, ನವರಂಗದಲ್ಲಿ ಗಣಪ, ಮಹಿಷಮರ್ಧಿನಿ, ಸಪ್ತಮಾತೃಕಾ,

ಕೇಶವ ಹಾಗೂ ಭೈರವ ಶಿಲ್ಪಗಳಿವೆ. ಆಕರ್ಷಕ ಛತ್ತು ಹಾಗೂ ಕದಂಬನಾಗರ ಶಿಖರಗಳನ್ನು ಹೊಂದಿರುವ ಈ ಗುಡಿಯ ಭಿತ್ತಿಯಲ್ಲಿ ತ್ರಿದಳ ಕಮಲ, ಸ್ತಂಭಶಿಖರಗಳಿದ್ದು, ಬಾಗಿಲವಾಡಗಳು ಪಂಚಶಾಖಾಲಂಕಾರಗಳಿಂದ ಕೂಡಿವೆ. ಈ ಗುಡಿಯ ಬಲ ಅಧಿಷ್ಠಾನದ ಮೇಲೆ ಸುಮಾರು ೧೩ನೆಯ ಶತಮಾನದ ಲಿಪಿಯಲ್ಲಿ 'ಅರೆಗಳೆ' ಎಂದು ಬರೆಯಲಾಗಿದ್ದು, ೧೫ ಅಡಿ (ಹತ್ತು ಮೊಳ) ಅಂತರದಲ್ಲಿ '+' ಚಿಹ್ನೆಯನ್ನು ರೇಖಿಸುವ ಮೂಲಕ ಅಳತೆಗೋಲಿನ ಎರಡು ತುದಿಗಳನ್ನು ರೇಖಿಸಲಾಗಿದ್ದು, ಅಂದಿನ ದಿನಗಳಲ್ಲಿ ಭೂಮಾಪನಕ್ಕೆ ಬಳಸಲ್ಪಡುತ್ತಿದ್ದ ಅಳತೆಗೋಲನ್ನು ಇದು ಪ್ರತಿನಿಧಿಸುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಶೋಧಿಸಲ್ಪಟ್ಟಿರುವ ಇದು ಜಿಲ್ಲೆಯ ಅಪೂರ್ವ ಉದಾಹರಣೆಯಾಗಿದೆ. ಉಳಿದಂತೆ ಊರಿನಲ್ಲಿ ಚನ್ನಕೇಶವ, ಲಕ್ಷ್ಮೀದೇವಿ, ಕೋಡಿಭೈರವ ಹಾಗೂ ಮಾರಮ್ಮನ ಗುಡಿಗಳೊಂದಿಗೆ ಹತ್ತಾರು ವೀರಗಲ್ಲುಗಳೂ ಇವೆ.

**ಮಂಡ್ಯ (೧,೩೧,೨೧೧)** : ಜಿಲ್ಲಾ ಕೇಂದ್ರವಾಗಿರುವ ಇದು ರಾಜಧಾನಿ ಬೆಂಗಳೂರಿನಿಂದ ೯೬ ಕಿ.ಮೀ. ದಕ್ಷಿಣಕ್ಕೆ, ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯಲ್ಲಿರುವ ಪ್ರಮುಖ ಪಟ್ಟಣ. ನೆರೆಯ ಹೊಸಬೂದನೂರಿನ ಅನಂತಪದ್ಮನಾಭ ಗುಡಿಯಲ್ಲಿರುವ, ಹೊಯ್ಸಳ ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ಕ್ರಿ.ಶ.೧೨೭೬ರ ಶಾಸನದಲ್ಲಿ ಇದು 'ಅನಾದಿ ಅಗ್ರಹಾರ ಮಂಡೆಯ' ಎಂದೇ ದಾಖಲಿಸಲ್ಪಟ್ಟಿದ್ದರೆ, ವಿಜಯನಗರದ ಅರಸ ಕೃಷ್ಣದೇವರಾಯನ ಕಾಲದ ಕ್ರಿ.ಶ.೧೫೧೬ರ ಮಂಡ್ಯ ತಾಮ್ರ ಶಾಸನದಲ್ಲಿ 'ಅಗ್ರಹಾರ ಮಂತೇಯ' ಹಾಗೂ 'ಚಿಕ್ಕಮಂಟೆಯ' ಗಳ ಪ್ರಸ್ತಾಪವಿದೆ. ಈ ಶಾಸನಗಳಿಂದ ಮಂಡ್ಯ ಸ್ಥಳನಾಮದ ಮೂಲ ರೂಪವು 'ಮಂಡೆಯ, ಮಂತೆಯ' ಆಗಿದ್ದು, ಶ್ರೀವೈಷ್ಣವ ಬ್ರಾಹ್ಮಣರಿಗೆ ನೀಡಲ್ಪಟ್ಟಿದ್ದ ದತ್ತಿ ಅಗ್ರಹಾರವಾಗಿದ್ದು, ಪ್ರಮುಖ ವಿದ್ಯಾಕೇಂದ್ರವೂ ಆಗಿದ್ದ ಅಂಶ ವೇದ್ಯವಾಗುತ್ತದೆ. ಇದರ ಪ್ರಾಚೀನತೆಯನ್ನು ಪೌರಾಣಿಕವಾಗಿ ಕೃತಯುಗದಷ್ಟು ಹಿಂದಕ್ಕೆ ಗುರುತಿಸಲಾಗುತ್ತದೆ. ಅದರಂತೆ ಕೃತಯುಗದಲ್ಲಿ ದಟ್ಟವಾದ ಅರಣ್ಯದಿಂದೊಡಗೂಡಿದ್ದ ಈ ಪ್ರದೇಶದಲ್ಲಿ ತಪಸ್ಸು ಮಾಡುತ್ತಿದ್ದ ಮಾಂಡವ್ಯ ಋಷಿಗಳು, ಪ್ರಾಣಿಗಳಿಗೂ ವೇದೋಪದೇಶ ನೀಡುತ್ತಿದ್ದುದರಿಂದ ಇದಕ್ಕೆ ವೇದಾರಣ್ಯ ಎಂಬ ಹೆಸರಿದ್ದು, ಮಾಂಡವ್ಯ ಮುನಿಗಳಿಂದಾಗಿ ಮುಂದೆ ಅದೇ 'ಮಂಡೆಯ' ಆಯಿತೆಂದೂ ಇಲ್ಲಿಯ ಜನಾರ್ದನನ ಪ್ರತಿಷ್ಠಾಪನೆ ಅವರದೆಂದೂ ಹೇಳಲಾಗುತ್ತದೆ. ಅದೇ ಯುಗದಲ್ಲಿ ಇದ್ದ ಇನ್ನೊಬ್ಬ ಋಷಿಗಳು ಇಲ್ಲಿ ಸಕಲೇಶ್ವರ ಸ್ವಾಮಿ ಗುಡಿಯನ್ನು ಸ್ಥಾಪಿಸಿ, ವಿಷ್ಣು ದರ್ಶನ ಪಡೆದು ಈ ಸ್ಥಳಕ್ಕೆ ವಿಷ್ಣುಪುರ ಎಂದು ಹೆಸರಿಟ್ಟರೆಂದೂ ತಿಳಿದು ಬರುತ್ತದೆ. ಹಾಗೇಯೇ ಪುತ್ರ ಸಂತಾನವಿಲ್ಲದೆ ಕೊರಗುತ್ತಿದ್ದ ಇಂದ್ರವರ್ಮನೆಂಬ ರಾಜನು, ದ್ವಾಪರ ಯುಗದಲ್ಲಿ ಇಲ್ಲಿಗೆ ಬಂದು ಜನಾರ್ದನನನ್ನು ಆರಾಧಿಸಿ, ಸೋಮವರ್ಮನೆಂಬ ಪುತ್ರನನ್ನು ಪಡೆದನಂತೆ. ಮುಂದೆ ಅವನೇ ಇಲ್ಲಿ ಕೋಟೆ ಕಟ್ಟಿ ಅಗ್ರಹಾರ ನಿರ್ಮಿಸಿ ಅದಕ್ಕೆ 'ಮಂಡೆವೇಮು' ಎಂದು ಹೆಸರಿಟ್ಟಿದ್ದು, ಕ್ರಮೇಣ ಅದೇ ಮಂಡ್ಯ ಆಯಿತೆಂಬ ಐತಿಹ್ಯವೂ ಇದೆ. ತಿರುಪತಿ ಬಳಿಯ ಮಂಡವೇಮು ಗ್ರಾಮದವರು ಇಲ್ಲಿಗೆ ವಲಸೆ ಬಂದು ಊರು ಕಟ್ಟಿ, ತಮ್ಮ ಹಳೇ ಊರ ಹೆಸರನ್ನೇ ಇದಕ್ಕೂ ಇಟ್ಟರೆಂಬ ಹೇಳಿಕೆಯೂ ಇದೆ. ರಾಗಿ ವ್ಯಾಪಾರಕ್ಕೆ ಹೆಸರಾದ ಮಂಡಿಯಿಂದ ಇಲ್ಲವೇ ಹೈನುಗಾರಿಕೆಗೆ ಅದರಲ್ಲೂ ವಿಶೇಷವಾಗಿ ಬೆಣ್ಣೆಗೆ ಹೆಸರಾಗಿದ್ದುದರಿಂದ ಈ ಸ್ಥಳಕ್ಕೆ 'ಮಂಡ್ಯ' ಎಂದು ಹೆಸರು ಬಂದಿತೆಂಬ ಅಭಿಪ್ರಾಯವೂ ಇದೆ.

ಮಂಡ್ಯದಿಂದ ಈವರೆಗೆ ವರದಿಯಾಗಿರುವ ಏಳು ಶಾಸನಗಳಲ್ಲಿ, ವಿಜಯನಗರದ ಅರಸ ಕೃಷ್ಣದೇವರಾಯನ ಕ್ರಿ.ಶ. ೧೫೧೬ರ ಮಂಡ್ಯ ತಾಮ್ರಶಾಸನವು ಗುರು ಗೋವಿಂದರಾಜರಿಗೆ 'ಘೃತಪರ್ವತದಾನ' ಸಂದರ್ಭದಲ್ಲಿ ಕಲ್ಲಹಳ್ಳಿ, ಚಿಕ್ಕಮಂಟೇಯ, ಹೊಸಹಳ್ಳಿ, ತಂಡಸೇಹಳ್ಳಿ ಹಾಗೂ ಕೊಣೆಹಳ್ಳಿ ಉಪಗ್ರಾಮಗಳನ್ನು ಹೊಂದಿದ್ದ ಮಂತೆಯ ಗ್ರಾಮವನ್ನು ಕೃಷ್ಣರಾಯಪುರ ಎಂಬ ಅಭಿದಾನದೊಂದಿಗೆ ಸರ್ವಮಾನ್ಯ ಅಗ್ರಹಾರವಾಗಿ ದಾನ ನೀಡಿದ ಅಂಶವನ್ನು ದಾಖಲಿಸುತ್ತದೆ. ನೆರೆಯ ಹೊಸಬೂದನೂರಿನ ಕ್ರಿ.ಶ. ೧೨೭೬ರ ಶಾಸನದಲ್ಲೂ 'ಅಗ್ರಹಾರ ಮಂಡೆಯ' ಎಂದೇ ಇದು ಉಲ್ಲೇಖಿಸಲ್ಪಟ್ಟಿದೆ. ಇಲ್ಲಿಯ ಲಕ್ಷ್ಮೀಜನಾರ್ದನ ಹಾಗೂ ಸಕಲೇಶ್ವರ ದೇವಾಲಯಗಳು ಪ್ರಮುಖವಾಗಿದ್ದು, ಮೇಲುಕೋಟೆಯ ವೈರಮುಡಿ

ಉತ್ಸವದಂದೇ ಲಕ್ಷ್ಮೀಜನಾರ್ದನ ಗುಡಿಯಲ್ಲೂ ಅಭಿನವ ವೈರಮುಡಿ ಉತ್ಸವ ಜರುಗುತ್ತದೆ. ಮಕ್ಕಳಾಗದೇ ಹರಕೆ ಹೊತ್ತವರಿಗೆ ಸಂತಾನ ಪ್ರಾಪ್ತಿಯಾಗುವುದರಿಂದ ಈ ದೇವರಿಗೆ ಮಕ್ಕಳ ಜನಾರ್ದನ ಎಂಬ ಹೆಸರೂ ಇದೆ. ಬಳಿಯಲ್ಲೇ ಇರುವ ವೇದವಲ್ಲಿ ಅಮ್ಮನವರ ಗುಡಿಯನ್ನು ದುದ್ದದ ಹಾಳು ಗುಡಿಯೊಂದರ ಕಲ್ಲುಗಳನ್ನು ಬಳಸಿ ನಂತರದಲ್ಲಿ ನಿರ್ಮಿಸಲಾಗಿದ್ದು, ಆನಂದಾಳ್ವಾರರ ವಿಗ್ರಹವಿರುವುದು ಅಲ್ಲೇ. ರಾಮಾನುಜರ ಶಿಷ್ಯರಾದ ಕಿರಂಗೂರಿನ ಅನಂತಸೂರಿಗಳು, ಗುರುಗಳ ಅಪೇಕ್ಷೆಯಂತೆ ತಿರುಪತಿಯಲ್ಲಿ ನೆಲೆಸಿ, ವೆಂಕಟೇಶನ ಸಲುವಾಗಿ ಹೂದೋಟವೊಂದನ್ನು ಬೆಳೆಸಿ, ಅನನ್ಯ ಭಕ್ತಿಯಿಂದ ಆರಾಧಿಸಿ, ವೆಂಕಟೇಶನ ದರ್ಶನ ಪಡೆದರೆಂದೂ ಅವರ ಮಹತ್ತಿನ ಕುರುಹೇ ಈ ವಿಗ್ರಹವೆಂದೂ ಹೇಳಲಾಗುತ್ತದೆ. ನಗರದಲ್ಲಿ ಅಕರ್ಷಕ ಮಸೀದಿ, ದರ್ಗಾ ಹಾಗೂ ಇಗರ್ಜಿಗಳೂ ಇವೆ. ಮಂಡ್ಯದ ಸಕ್ಕರೆ ಕಾರ್ಖಾನೆ ಜಿಲ್ಲೆಗೇ ಮೊದಲಿನದಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ ಮುಂದಿರುವ ಸಂಗೀತ ಕಾರಂಜಿ ನಾಗರಿಕರ ಗಮನ ಸೆಳೆದಿದೆ. ನಗರದ ಮಧ್ಯೆ ಇರುವ ಮಹಾತ್ಮಗಾಂಧಿವನ ಉಲ್ಲೇಖಾರ್ಹವಾಗಿದ್ದು, ಆಧುನಿಕ ರೀತಿಯ ವಿನ್ಯಾಸದೊಂದಿಗೆ ನವೀಕರಣಗೊಂಡಿದ್ದು, ವಿಶೇಷ ಮೆರಗನ್ನು ನೀಡುವಲ್ಲಿ ಯಶಸ್ವಿಯಾಗಿದೆ. **ಹೊಳಲು (೪೮೮೮) :** ತಾಲೂಕು ಕೇಂದ್ರ ಮಂಡ್ಯದಿಂದ ಆರು ಕಿ.ಮೀ. ವಾಯುವ್ಯಕ್ಕಿದ್ದು, ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಊರಾಚೆ ಮಂಡ್ಯ ರಸ್ತೆಯಲ್ಲಿ ಗದ್ದೆಯ ನಡುವಿರುವ ಹೊಳಲ (ಹೊಂಬಾಳ)ಮ್ಮನ ಗುಡಿಯು ಗಿಡ್ಡನೆಯ ೨೦ ಕಂಬಗಳ ಮೇಲೆ ನಿಂತಿರುವ ೧೬ ಅಂಕಣದ ಆಯತಾಕಾರದ ರಚನೆಯಾಗಿದ್ದು, ಒಳಗೆ ಗಂಗರ ಕಾಲದ ಸಪ್ತಮಾತೃಕಾ ಶಿಲ್ಪಗಳಿದ್ದು, ಈ ದೇವಾಲಯವು ನಂತರದಲ್ಲಿ ಪುನರ್ ನಿರ್ಮಾಣಗೊಂಡಿರುವಂತೆ ತೋರುತ್ತದೆ. ಎಡಕ್ಕಿರುವ ಒಂದಂಕಣದ ಗುಡಿಯಲ್ಲಿ ಭೈರವ ಹಾಗೂ ಬೃಹತ್ ಪ್ರಮಾಣದ ಆಯುಧದಂತಹ ಕರಿಕಲ್ಲುಗಳಿದ್ದು, ಇಂದು ಪಾಳು ಬಿದ್ದಿವೆ. ಕೆರೆ ದಂಡೆಯಲ್ಲಿರುವ ಕೋಡಿಲಿಂಗ (ಭೀಮೇಶ್ವರ)ನ ಗುಡಿಯಲ್ಲಿ ಕೇಶವ, ಗಣಪ ಹಾಗೂ ಸೂರ್ಯನ ಪ್ರಾಚೀನ ಶಿಲ್ಪಗಳಿದ್ದು ಬಳಿಯಲ್ಲೇ ಬೋರಲಿಂಗೇಶ್ವರವೆಂದು ಹೇಳುವ ಮಂಟಪವಿದೆ. ಊರಾಚೆ ಇರುವ ಸುಮಾರು ೧೫ನೆಯ ಶತಮಾನದ ತಾಂಡವೇಶ್ವರ ಗುಡಿಗೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳಿವೆ. ಗುತ್ತಲಿನ ಅರ್ಕೇಶ್ವರ ಲಿಂಗದಿಂದ ಸಿಡಿದ ಮೇಲ್ತುದಿಯೇ ಇಲ್ಲಿ ತಾಂಡವೇಶ್ವರನೆಂದು ಪ್ರಸಿದ್ಧವಾಗಿದ್ದು, 'ಇಲಿಯ ವಿಷ'ವನ್ನು ಇದು ಪರಿಹರಿಸುತ್ತದೆಂಬ ನಂಬಿಕೆ ಇದೆ. ಈ ಗುಡಿಯೊಳಗೆ ತಾಂಡವೇಶ್ವರ ಲಿಂಗವಿದ್ದು ಮೇಲೆ ನೂತನ ಶಿಖರವಿದೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದು, ಅಲಂಕಾರಿಕ ಕಂಬಗಳಷ್ಟೇ ಇವೆ. ಗುಡಿಯ ದ್ವಾರಬಂಧಗಳು ಆಕರ್ಷಕವಾಗಿದ್ದು, ಸುತ್ತಾಲಯದ ದ್ವಾರದ ಮೇಲೆ ಗಾರೆಯ ನಂದಿ ಮೂರ್ತಿ ಇದೆ. ಊರ ಹೆಬ್ಬಾಗಿಲ ಬಳಿ ನಾಲ್ಕಾರು ವೀರಗಲ್ಲುಗಳಿದ್ದು, ಅನತಿ ದೂರದಲ್ಲಿರುವ ಕೇಶವನಾರಾಯಣ ಗುಡಿಯಲ್ಲಿ ನಾರಾಯಣ ಶಿಲ್ಪವಿದೆ. ಉಳಿದಂತೆ ಊರಿನಲ್ಲಿ ರಾಮಮಂದಿರ, ಗಣೇಶ, ಆಂಜನೇಯ, ಬಸವೇಶ್ವರ, ನವಗ್ರಹ, ಶನಿಮಹಾತ್ಮ, ಸಿದ್ಧಪ್ಪಾಜಿ, ದೊಡ್ಡಯ್ಯ, ಮಾರಮ್ಮ, ಕಾಳಮ್ಮ, ದೊಡ್ಡಮ, ಪಟಲದಮ್ಮ ಮತ್ತು ಚಿತ್ತಾಲಮ್ಮನ ಎರಡೆರಡು ಹಾಗೂ ಮುದ್ದಮ್ಮಮ ಮೂರು ಗುಡಿಗಳಿದ್ದು, ಊರಾಚೆ ಇರುವ ಚಿತ್ತಾಲಮ್ಮ (ಚಿತ್ತೇನಹಳ್ಳಿ ಅಮ್ಮ)ನ ಗುಡಿಯಲ್ಲಿರುವ ಹುತ್ತ, ಮಂಟಪಗಳು ಉಲ್ಲೇಖಾರ್ಹವಾಗಿವೆ.

**ಮಡುವಿನಕೋಡಿ (೨೬೯೬) :** ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೨ ಕಿ.ಮೀ. ಈಶಾನ್ಯಕ್ಕಿದ್ದು, ಹಳೆಯೂರಿನ ನಿವೇಶನದಲ್ಲಿರುವ ಕ್ರಿ.ಶ.೧೨೦೦-೧೩೪೬ರ ಕಾಲಾವಧಿಯ ಮೂರು ವೀರಗಲ್ಲು ಶಾಸನಗಳಲ್ಲೂ ಇದು 'ಮೊಡವನಕೋಡಿ' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಕಬ್ಬಾಹು ನಾಡಿಗೆ ಸೇರಿತ್ತು. ಹೊಯ್ಸಳರ ಕಾಲದ ರಾಮೇಶ್ವರ ಗುಡಿಯು ಪಾಳು ಬಿದ್ದಿದ್ದು, ಸಂರಕ್ಷಿಸಬೇಕಿದೆ. ಕಾಲುವೆಯಾಚೆ ಇರುವ ಸಪ್ತಮಾತೃಕಾ ಗುಡಿಯು ಗಂಗರ ಕಾಲದ್ದಾಗಿದ್ದು, ಒಳಗೆ ಮಾತೃಕೆಯರ ಆಕರ್ಷಕ ಬಿಡಿ ಶಿಲ್ಪಗಳಿವೆ.

**ಮದ್ದೂರು (೨೬,೪೫೬)** : ತಾಲೂಕು ಕೇಂದ್ರವಾಗಿದ್ದು, ಜಿಲ್ಲಾ ಕೇಂದ್ರ ಮಂಡ್ಯದಿಂದ ೧೫ಕಿ.ಮೀ. ನೈಋುತ್ಯಕ್ಕೆ ಕಾವೇರಿಯ ಉಪನದಿ ಶಿಂಷಾ (ಮದ್ದೂರು ಹೊಳೆ) ಬಲದಂಡೆಯ ಮೇಲಿದೆ. ಹಿಂದೆ ಅಗ್ರಹಾರವಾಗಿ ವೇದಾಧ್ಯಯನಕ್ಕೆ ಪ್ರಸಿದ್ಧವಾದ ವಿದ್ಯಾಕೇಂದ್ರವಾಗಿದ್ದು, ಆದಿದೈವ ವೈದ್ಯನಾಥೇಶ್ವರನಿಂದಾಗಿ ಇಂದು ರೋಗರುಜಿನಗಳಿಗೆ ಮದ್ದು (ಔಷಧ) ನೀಡುವ ಕೇಂದ್ರವಾಗಿದೆ. ವೈದ್ಯನಾಥ, ದೇಶೇಶ್ವರ, ನರಸಿಂಹ, ಅಲ್ಲಾಳನಾಥ, ಮುಂತಾದ ದೇವಾಲಯಗಳಿಂದಾಗಿ ಶೈವ– ಶ್ರೀವೈಷ್ಣವ ಧರ್ಮ ಸಮನ್ವಯ ಕೇಂದ್ರವಾಗಿ ಸಾಂಸ್ಕೃತಿಕ ಪ್ರಾಮುಖ್ಯತೆ ಪಡೆದಿದೆ. ಅಲ್ಲದೆ 'ಮದ್ದೂರು ವಡೆ'ಯಿಂದಾಗಿಯೂ ಪ್ರಸಿದ್ಧವಾಗಿದೆ. ಶಿಂಷಾ ನದಿಗೆ ಕದಂಬ ಎಂಬ ಪರ್ಯಾಯ ನಾಮವೂ ಇದ್ದು, ಕದಂಬ ಋುಷಿಗಳು ಇಲ್ಲಿ ಆಶ್ರಮವಾಸಿಗಳಾಗಿದ್ದುದರಿಂದ ಇದಕ್ಕೆ ಕದಂಬ ಕ್ಷೇತ್ರ ಎಂಬ ಹೆಸರು ಬಂತೆಂಬ ಅಭಿಪ್ರಾಯವಿದೆ. ದ್ವಾಪರ ಯುಗದಲ್ಲಿ ಯಾತ್ರಾರ್ಥಿಗಳಾಗಿ ಕೃಷ್ಣಾರ್ಜುನರು ಈ ಕ್ಷೇತ್ರಕ್ಕೆ ಭೇಟಿ ನೀಡಿದ್ದರಿಂದ ಈ ಊರಿಗೆ ಅರ್ಜುನಪುರಿ ಎಂಬ ಹೆಸರೂ ರೂಢಿಗೆ ಬಂದಿತೆಂಬ ಪೌರಾಣಿಕ ಕಥೆಗಳೂ ಇವೆ. ಆದರೆ ಪ್ರಾಚೀನ ತಮಿಳು ಶಾಸನಗಳಲ್ಲಿ 'ಮರದೂರು' ಎಂದೂ ಕನ್ನಡ ಶಾಸನಗಳಲ್ಲಿ 'ಮದ್ದೂರು' ಎಂದೂ ಉಲ್ಲೇಖಿತಗೊಂಡಿರುವ ಇದು 'ಶಿವಪುರ' , 'ಅನಾದಿ ಅಗ್ರಹಾರ ನಾರಸಿಂಹ ಚತುರ್ವೇದಿ ಮಂಗಲ' ಎಂಬ ಅಭಿದಾನಗಳನ್ನೂ ಹೊಂದಿದ್ದು, ಹಿಂದೆ ಕಳಲೆ ಸಹಸ್ರ ಪ್ರಾಂತಕ್ಕೆ ಸೇರಿದ ಚಿಕ್ಕಗಂಗವಾಡಿ ನಾಡಿನಲ್ಲಿತ್ತು. ತಮಿಳಿನ 'ಮರುಂದು' ಕನ್ನಡದ ಮದ್ದಾಗಿದ್ದು ಎರಡೂ "ಔಷಧಿ" ಎಂದೇ ಅರ್ಥ ನೀಡುತ್ತಿದ್ದು, ಮದ್ದೂರು ಇದೇ ಅರ್ಥವನ್ನು ನೀಡುತ್ತದೆ. ಆದರೆ ಮರಗಳಿಂದ ಕೂಡಿದ ಊರು ಮರದೂರು, ಮದ್ದೂರು ಎಂದೂ ಸಿಡಿಗುಂಡಿನ ಮದ್ದನ್ನು ತಯಾರಿಸುತ್ತಿದ್ದರಿಂದ ಮದ್ದೂರು ಎಂಬ ಹೆಸರು ಬಂದಿತೆಂದೂ ಹೇಳಲಾಗುತ್ತದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ಸುಮಾರು ೧೧ ರಿಂದ ೧೯ನೆಯ ಶತಮಾನದ ಒಟ್ಟು ೨೧ (ತಮಿಳಿನ ೧೨, ಕನ್ನಡದ ೭, ಸಂಸ್ಕೃತ ಹಾಗೂ ಆಂಗ್ಲಭಾಷೆಯ ತಲಾ ಒಂದೊಂದು) ಶಾಸನಗಳು ಮದ್ದೂರಿನ ನರಸಿಂಹ, ಕೈಲಾಸನಾಥ, ಅಲ್ಲಾಳನಾಥ (ವರದರಾಜ) ದೇವಿನಾಚ್ಚಿಯರ್ ಮುಂತಾದ ದೇವರುಗಳಿಗೆ ಬಿಟ್ಟ ದತ್ತಿ ಶಾಸನಗಳಾಗಿವೆ.

ಮದ್ದೂರಿನ ಕೋಟೆ ಪ್ರದೇಶದಲ್ಲಿರುವ ವಿಶ್ವೇಶ್ವರ, ದೇಶೇಶ್ವರ, ನರಸಿಂಹ, ಕೈಲಾಸೇಶ್ವರ, ಹಾಗೂ ವರದರಾಜ ಗುಡಿಗಳು ಬಹಳ ಪುರಾತನದ್ದಾಗಿವೆ. ವಿಶ್ವೇಶ್ವರ ಗುಡಿಯು ಗಂಗರ ಕಾಲದ ರಚನೆಯಾಗಿದ್ದು, ಚೋಳ ಶೈಲಿಯಲ್ಲಿರುವ ನಂದಿ ಮಂಟಪವನ್ನು ಹೊಂದಿದ್ದರೇ ಉಳಿದೆರಡು, ಹೊಯ್ಸಳ ವಿಷ್ಣುವರ್ಧನನ ಕಾಲದ (ಕ್ರಿ.ಶ.೧೧೦೮–೧೧೪೮) ರಚನೆಗಳಾಗಿದ್ದು, ಚೋಳ ಶೈಲಿಯಲ್ಲಿರುವ ಸುಂದರ ದೇವಾಲಯಗಳಾಗಿವೆ. ವೈದ್ಯನಾಥಪುರದ ಕ್ರಿ.ಶ.೧೧೩೨ರ ಶಾಸನದಲ್ಲಿ 'ನಾರಸಿಂಹ ಚತುರ್ವೇದಿ ಮಂಗಲ' ದ ಉಲ್ಲೇಖವಿರುವುದರಿಂದ ಇಲ್ಲಿಯ ನರಸಿಂಹ ಗುಡಿಯು ಆ ವೇಳೆಗಾಗಲೇ ನಿರ್ಮಾಣಗೊಂಡಿದ್ದ ಅಂಶ ವೇದ್ಯವಾಗುತ್ತದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಇರುವ ದತ್ತಿ ಶಾಸನಗಳಿಂದ ಅದರ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ಎತ್ತರದ ದ್ವಾರಗೋಪುರವಿರುವ ವಿಶಾಲವಾದ ಪ್ರಾಕಾರದೊಳಗೆ ಗರ್ಭಗೃಹ, ಅಂತರಾಳ, ನವರಂಗ, ಪಾತಾಳಾಂಕಣ, ಸಭಾಮಂಟಪ ಹಾಗೂ ಸುತ್ತಾಲಯಗಳನ್ನು ಹೊಂದಿರುವ ಈ ದೇವಾಲಯದ ಗರ್ಭಗುಡಿಯಲ್ಲಿರುವ ಸುಮಾರು ಏಳು ಅಡಿ ಎತ್ತರದ ಉಗ್ರ ನರಸಿಂಹನ ಮೂರ್ತಿಯು ಬ್ರಹ್ಮ ಪ್ರತಿಷ್ಠಿತವೆಂಬ ಅಭಿಪ್ರಾಯವಿದ್ದು, ಮೂರ್ತಿಯ ಅಷ್ಟಭುಜಗಳಲ್ಲಿ ನಾಲ್ಕರಲ್ಲಿ ಚಕ್ರ, ಶಂಖ, ದಂತ ಹಾಗೂ ಗದೆಗಳಿದ್ದು, ಎರಡು ಕೈಗಳಲ್ಲಿ ಹಿರಣ್ಯಕಶೀಪುವಿನ ಹೊಟ್ಟೆಯನ್ನು ಬಗಿಯುತ್ತಿದ್ದು, ಉಳಿದೆರಡು ಕೈಗಳಿಂದ ರಾಕ್ಷಸನ ಕರುಳನ್ನು ಮಾಲೆಯಾಗಿ ಕೊರಳಿಗೆ ಧರಿಸುತ್ತಿರುವಂತೆ ಕೆತ್ತಲಾಗಿದ್ದು, ಪಾದದ ಬಳಿಯಿರುವ ಪ್ರಹ್ಲಾದನು ನರಸಿಂಹನ ಉಗ್ರತೆಯನ್ನು ಸೌಮ್ಯಗೊಳಿಸಲು, ಕೈಮುಗಿದು ವಿಷ್ಣುಸ್ತುತಿ ಮಾಡುತ್ತಿದ್ದು, ನರಸಿಂಹ ಮೂರ್ತಿಯ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆ ಇದೆ. ದೇವಾಲಯದ ಬದಿಯಲ್ಲೇ ಸೌಮ್ಯನಾಯಕಿ ಹಾಗೂ ನರಸಿಂಹನಾಯಕಿ ಅಮ್ಮನವರ ಗುಡಿಗಳಿದ್ದು, ವರದರಾಜ, ರಾಮ, ಕೃಷ್ಣ, ಯಶೋಧೆ, ಶ್ರೀನಿವಾಸ, ರಾಮ–

ಲಕ್ಷ್ಮಣ–ಸೀತೆ–ಹನುಮ, ರಾಮಾನುಜ, ವೇದಾಂತಾಚಾರ್ಯ, ವಿಶ್ವಕಸೇನ, ನಮ್ಮಾಳ್ವಾರ, ಮನವಾಲಮಾಮುನಿ ಮುಂತಾದ ಶಿಲ್ಪಗಳಿದ್ದು, ಅವುಗಳಲ್ಲಿ ರಾಮ–ಲಕ್ಷ್ಮಣ–ಸೀತೆ–ಹನುಮ ಶಿಲ್ಪ ಸಮೂಹವೂ ವಿಜಯನಗರ ಕಾಲಕ್ಕೆ ಸೇರಿದ್ದು, ಇಲ್ಲಿಯ ಹನುಮಂತನ ಭಂಗಿ ಬಹಳ ವಿಶಿಷ್ಟವಾಗಿದೆ. ಈ ದೇವಾಲಯದ ದ್ವಾರಗೋಪುರವು ನವೀಕರಿಸಲ್ಪಟ್ಟಿದೆ.

ಈ ಗುಡಿಯ ಎಡಭಾಗದಲ್ಲಿ ಕೃತಕವಾಗಿ ರಚಿಸಿಲ್ಪಟ್ಟಿದ್ದ ಹಸ್ತಗಿರಿ ದಿಣ್ಣೆಯ ಮೇಲೆ ನಿಂತಿರುವ ವರದರಾಜ (ಅಲ್ಲಾಳನಾಥ) ದೇವಾಲಯವೂ ಹೊಯ್ಸಳರ ಕಾಲದ್ದಾಗಿದ್ದು, ವಿಷ್ಣುವರ್ಧನನು ಕಂಚಿಗೆ ಹೋಗಲಾಗದ ತನ್ನ ವೃದ್ಧ ತಾಯಿಯ ಸಲುವಾಗಿ, ಇಲ್ಲೇ ಅಲ್ಲಾಳನಾಥನನ್ನು ಪ್ರತಿಷ್ಠಾಪಿಸಿದನೆಂಬ ಅಭಿಪ್ರಾಯವಿದೆ. ಈ ಗುಡಿಯ ಉಲ್ಲೇಖ ಕ್ರಿ.ಶ.೧೨೭೮ರ ಶಾಸನವೂ ಸೇರಿದಂತೆ ಮೂರು ಶಾಸನಗಳಲ್ಲಿ ಕಂಡು ಬರುತ್ತಿದ್ದು ಅವು ಇದಕ್ಕೆ ಬಿಟ್ಟ ದತ್ತಿಗಳಾಗಿವೆ. 'ಎಲ್ಲಾ ದೇವರ ಮುಂದೆ ನೋಡು, ಅಲ್ಲಾಳನಾಥನ ಹಿಂದೆ ನೋಡು' ಎಂಬ ಜನಪದ ಹೇಳಿಕೆಗೆ ಸ್ಫೂರ್ತಿಯಾಗಿರುವ, ಸುಮಾರು ೧೨ ಅಡಿ ಎತ್ತರದ ಶಂಖ, ಚಕ್ರ, ಗದಾ, ಪದ್ಮಧಾರಿಯಾದ ಸರ್ವಾಲಂಕೃತ ಈ ದುಂಡು ಶಿಲ್ಪವು ಭವ್ಯವಾಗಿದ್ದು, ಸೂಕ್ಷ್ಮ ಕೆತ್ತನೆ ಮತ್ತು ಅಲಂಕಾರಿಕ ಅಂಶಗಳಿಂದಾಗಿ ಅತ್ಯಾಕರ್ಷಕವಾಗಿದೆ. ಈ ದೇವಾಲಯದ ಜೀರ್ಣೋದ್ಧಾರ ಸಂದರ್ಭದಲ್ಲಿ ಏಳು ಅಡಿ ಎತ್ತರ ಮತ್ತು ನಾಲ್ಕು ಅಡಿ ಅಗಲದ ನಾಲ್ಕು ಕಂಬದ ಮಂಟಪ ಹಾಗೂ ಒಂದು ತಮಿಳು ಶಾಸನವೂ ಪತ್ತೆಯಾಗಿದ್ದು, ಅವನ್ನು ಸುಮಾರು ೧೧ನೆಯ ಶತಮಾನದ್ದೆಂದು ವಿದ್ವಾಂಸರು ಗುರುತಿಸಿದ್ದಾರೆ. ಈ ಗುಡಿಯ ಬಲ ಹಿಂಬದಿಯಲ್ಲಿರುವ, ಕೈಲಾಸೇಶ್ವರ ಎಂದು ಕರೆಯಲ್ಪಡುವ ಗುಡಿಯನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಿ ಶ್ರೀರಾಮದೇವರನ್ನು ಪ್ರತಿಷ್ಠಾಪಿಸಲಾಗಿದೆ. ಊರಾಚೆ ಹೆದ್ದಾರಿ ಬದಿಯಲ್ಲಿರುವ ಮದ್ದೂರಮ್ಮನ ಗುಡಿಯು ಛಾವಣಿ ರಹಿತ ಬಯಲು ಗುಡಿಯಾಗಿದ್ದು, ಈ ದೇವತೆ ಕೊಡಗಿನ ಕಡೆಗೆ ಹೋಗಿದ್ದ ಮದ್ದೂರಿನ ವ್ಯಾಪಾರಿಗಳ ಜೊತೆ ಇಲ್ಲಿಗೆ ಬಂದು ನೆಲೆಸಿದಳೆಂಬ ಅಭಿಪ್ರಾಯವಿದೆ. ವಿಶಾಲವಾದ ಪ್ರಾಕಾರದಲ್ಲಿ ನಡುವೆ ಮಂಡಿಮಟ್ಟದ ತಗ್ಗಿನಲ್ಲಿ ಸಪ್ತಮಾತೃಕೆಯರು ಹಾಗೂ ತ್ರಿಶೂಲಗಳಿದ್ದು, ಅದರ ಹಿಂಭಾಗದಲ್ಲಿರುವ ಮರದ ಬುಡದಲ್ಲಿ ಬನ್ನಿಯಮ್ಮನದೆಂದು ಹೇಳುವ ಮೂರು ದೇವತಾ ಶಿಲೆಗಳಿವೆ. ಊರಲ್ಲಿ ಈ ದೇವಿಯ ವಸ್ತ್ರಾಭರಣ, ಜಾತ್ರೆ ಸಾಮಾನುಗಳನ್ನಿಡುವ ಮಠಮನೆ ಇದೆ. ವಹ್ನಿ ಕುಲದವರು ಇದರ ಅರ್ಚಕರಾಗಿದ್ದು, ಮದ್ದೂರಮ್ಮನ ಜಾತ್ರೆಯು ವರ್ಷಂಪ್ರತಿ ಚೈತ್ರ ಶುಕ್ಲಪಕ್ಷದಲ್ಲಿ ಐದು ದಿನ ನಡೆಯುತ್ತಿದ್ದು, ಸೋಮವಾರದಂದು ಬೆಳಗಿನ ಜಾವ ನಡೆಯುವ ಕೊಂಡದಲ್ಲಿ ವಹ್ನಿಕುಲ (ತಿಗುಳರು)ದವರು ಹಾಯುತ್ತಿದ್ದು, ಕೊಂಡ ಸಿದ್ಧಪಡಿಸುವುದು, ಒಕ್ಕಲಿಗರ ಹಕ್ಕಾದರೆ, ಎಡೆ ಒಪ್ಪಿಸುವುದು ಬಣಜಿಗರ ಹಕ್ಕಾಗಿದ್ದು, ವಾದ್ಯ ನುಡಿಸುವುದು ಹರಿಜನರದ್ದಾಗಿರುತ್ತದೆ. ಬುಧವಾರದಂದು ಹೂಪಲ್ಲಕ್ಕಿ ಸೇವೆ ಮತ್ತು ಸಿಡಿಯಾಟ, ಶುಕ್ರವಾರದಂದು ಓಕಳಿ ಹಾಗೂ ಮುತ್ತಿನ ಪಲ್ಲಕ್ಕಿ ಸೇವೆಗಳಿದ್ದು, ಶನಿವಾರದಂದು ಎಣ್ಣೆಮಜ್ಜನ ಹಾಗೂ ದೇವಿಯ ಮೆರವಣಿಗೆಯೊಂದಿಗೆ ಜಾತ್ರೆ ಮುಗಿಯುತ್ತದೆ. ಈ ಜಾತ್ರೆ ಆರಂಭವಾಗುವುದಕ್ಕೆ ಒಂದು ತಿಂಗಳ ಮೊದಲೇ ದನದ ಜಾತ್ರೆ ಆರಂಭಗೊಂಡರೂ ದೇವಿಯ ಜಾತ್ರೆ ವೇಳೆಗೆ ರಾಸುಗಳ ವಿಲೇವಾರಿಯಾಗಿ ಬಿಡುತ್ತದೆ. ತೋಟಗಾರಿಕೆ ಇಲಾಖೆಯವರೇ ಅಭಿವೃದ್ಧಿ ಪಡಿಸಿರುವ ಸೀಬೆ, ಮಾವು, ಸಪೋಟ ಮುಂತಾದ ಹಣ್ಣಿನ ತೋಟವನ್ನಿಲ್ಲಿ ನೋಡಬಹುದಾಗಿದೆ. ಎಳನೀರಿನ ವ್ಯಾಪಾರಕ್ಕೆ ಮದ್ದೂರಿನ ಕೃಷಿ ವ್ಯವಸಾಯೋತ್ಪನ್ನ ಮಾರುಕಟ್ಟೆ ಹೆಸರಾಗಿದ್ದು, ಏಷ್ಯಾದಲ್ಲೇ ವಿಶಿಷ್ಟ ಸ್ಥಾನ ಪಡೆದಿದೆ. **ವೈದ್ಯನಾಥಪುರ (೯೪೫)** : ತಾಲೂಕುಕೇಂದ್ರ ಮದ್ದೂರಿನಿಂದ ಮೂರು ಕಿ.ಮೀ. ಆಗ್ನೇಯಕ್ಕೆ, ಶಿಂಷಾ ಬಲದಂಡೆಯ ಮೇಲಿರುವ ತೀರ್ಥಕ್ಷೇತ್ರ. ಶಿಂಷಾ ನದಿಗೆ ಕದಂಬ ಎಂಬ ಹೆಸರೂ ಇದ್ದು, ಕದಂಬ ಋಷಿಗಳ ಆಶ್ರಮ ಇಲ್ಲಿತ್ತೆಂಬ ಪೌರಾಣಿಕ ಹಿನ್ನೆಲೆಯಿದೆ. ಪ್ರಾಚೀನ ತಮಿಳು ಮತ್ತು ಕನ್ನಡ ಶಾಸನಗಳಲ್ಲಿ 'ವೈಜನಾಥ' ನೆಂದು ಉಲ್ಲೇಖಿತಗೊಂಡಿರುವ ವೈದ್ಯನಾಥೇಶ್ವರ, ಈ ಕ್ಷೇತ್ರದ ಆದಿದೈವವಾಗಿರುವುದರಿಂದ 'ವೈದ್ಯನಾಥಪುರ' ಎಂಬ ಹೆಸರು ಬಂದಿದೆ. ಆದರೆ ಪ್ರಾಚೀನ ಶಾಸನಗಳಲ್ಲಿ ಇದು 'ಶಿವಪುರ' ಎಂದೇ ಉಲ್ಲೇಖಿತಗೊಂಡಿದ್ದು, 'ನಾರಾಸಿಂಹ ಚತುರ್ವೇದಿ ಮಂಗಲ'ವಾದ ಮದ್ದೂರಿನ ಭಾಗವಾಗಿ ಇದು ದಾಖಲಿಸಲ್ಪಟ್ಟಿದೆ.

ಇಲ್ಲಿಯ ಹನ್ನೊಂದು (ಒಂಬತ್ತು ಕನ್ನಡ ಮತ್ತು ಎರಡು ತಮಿಳು)ಶಾಸನಗಳು ಗಂಗ, ಚೋಳ, ಹೊಯ್ಸಳ ಹಾಗೂ ವಿಜಯನಗರ ಕಾಲದಲ್ಲಿ ವೈದ್ಯನಾಥದೇವರಿಗೆ ಬಿಟ್ಟ ದತ್ತಿ ದಾಖಲೆಗಳಾಗಿವೆ. ಇಲ್ಲಿಯ ವೈಜ(ದ್ಯ)ನಾಥ ದೇವಾಲಯಕ್ಕೆ ಗಂಗ ಶಿವಮಾರಸಿಂಹನು (ಒಂದನೇ ಅಥವಾ ಎರಡನೇ ಶಿವಮಾರ) ಹಲಗೂರನ್ನು ಸುಮಾರು ಎಂಟನೇ ಶತಮಾನದಲ್ಲಿ ದತ್ತಿ ಬಿಟ್ಟು ತಾಮ್ರಶಾಸನವನ್ನು ನೀಡಿದ್ದು, ಅದನ್ನು ಹೊಯ್ಸಳ ವಿಷ್ಣುವರ್ಧನನು ನವೀಕರಿಸಿದ್ದನ್ನು ಕ್ರಿ.ಶ.೧೧೩೨ರ ಶಾಸನವು ಸಾಂದರ್ಭಿಕವಾಗಿ ದಾಖಲಿಸಿದ್ದು, ಕೊನ್ನಾಪುರ (ಮಳವಳ್ಳಿ ತಾ.) ದ ಕ್ರಿ.ಶ.೧೧೩೨ರ ಎರಡು ಶಾಸನಗಳೂ ಇದನ್ನು ಪುಷ್ಟೀಕರಿಸುತ್ತವೆ.

ಉತ್ತರ-ದಕ್ಷಿಣವಾಗಿ ಹರಿದಿರುವ ಶಿಂಷಾ ಬಲದಂಡೆಯ ಮೇಲೆ, ಪೂರ್ವಾಭಿಮುಖವಾಗಿ ನಿಂತಿರುವ ವೈದ್ಯನಾಥೇಶ್ವರ ಗುಡಿಗೆ ಗರ್ಭಗೃಹ, ನವರಂಗ, ಸಭಾಮಂಟಪ ಹಾಗೂ ದಕ್ಷಿಣ ಮುಖಮಂಟಪವುಳ್ಳ ಪ್ರಾಕಾರವಿದ್ದು, ಇತ್ತೀಚೆಗೆ ಉತ್ತರದಲ್ಲೂ ದ್ವಾರವನ್ನು ಕಲ್ಪಿಸಲಾಗಿದೆ. ಗರ್ಭಗೃಹದಲ್ಲಿ ಪ್ರಾಚೀನ ಶಿವಲಿಂಗವಿದ್ದು, ನವರಂಗದ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗದಲ್ಲಿರುವ ಲಕ್ಷ್ಮಿ, ಷಣ್ಮುಖ, ಭೈರವ, ಪರಶುರಾಮ, ಎಡಹರಿ ಶಿವಲಿಂಗ (೨), ಬಲಹರಿ ಶಿವಲಿಂಗ (೨), ಮಹಿಷಮರ್ಧಿನಿ, ಸರಸ್ವತಿ,ಉಮಾಮಹೇಶ್ವರ ಮುಂತಾದ ಶಿಲ್ಪಗಳಲ್ಲಿ ಕೆಲವು ಗಂಗ-ಚೋಳ ಲಕ್ಷಣವನ್ನೂ ಹೊಂದಿವೆ. ಈ ಗುಡಿಯ ಇತಿಹಾಸವನ್ನು ಅರುಹುವ ಶಾಸನಗಳು ನವರಂಗದ ಗೋಡೆ ಮತ್ತು ಛಾವಣಿಗಳಲ್ಲಿ ಸೇರಿಸಲ್ಪಟ್ಟಿವೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು, ಅಲಂಕಾರಿಕ ಕಂಬಗಳಷ್ಟೇ ಇದ್ದು, ಗಂಗ-ಚೋಳ-ಹೊಯ್ಸಳ-ವಿಜಯನಗರದ ಅರಸರ ಕಾಲದಲ್ಲಿ ದುರಸ್ತಿ, ವಿಸ್ತರಣೆಗಳನ್ನು ಕಂಡಿದ್ದು, ಇತ್ತೀಚೆಗೆ ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ ಮೂಲರೂಪ ಅಲ್ಲಲ್ಲಿ ಉಳಿದುಕೊಂಡಿದೆ. ಗರ್ಭಗೃಹದ ಶಿವಲಿಂಗದ ಹಿಂಬದಿಯಲ್ಲಿರುವ ಹುತ್ತದ ಮಣ್ಣನ್ನು ಚರ್ಮವ್ಯಾಧಿಗೆ ದಿವ್ಯ ಔಷಧವಾಗಿ ಬಳಸಲಾಗುತ್ತಿದ್ದು, ಇಂದಿಗೂ ಭಕ್ತರು ದೂರದ ಊರುಗಳಿಂದ ರೋಗ ಪರಿಹಾರಕ್ಕೆಂದು ಇಲ್ಲಿಗೆ ಬರುತ್ತಾರೆ. ಗುಡಿಯ ಆವರಣದಲ್ಲಿ ಚಂಡಿಕಾ, ಪಾರ್ವತಿ, ಸೂರ್ಯನಾರಾಯಣ ಹಾಗೂ ನವಗ್ರಹ ದೇವಾಲಯಗಳಿವೆ. ಈ ದೇವಾಲಯದ ಆವರಣದಲ್ಲಿ ಗಂಗರ ಕಾಲದ (ಸಿಂಹಗಳು ಹೊತ್ತಿರುವ) ಕಂಬಗಳು, ಭೈರವ ಮತ್ತು ದೇವಿಶಿಲ್ಪಗಳೊಂದಿಗೆ ಇರುವ ನಾಲ್ಕಾರು ವೀರಗಲ್ಲುಗಳಲ್ಲಿ ಎಡಗೈಯೋಧನನ್ನೇ ಪ್ರಧಾನವಾಗಿ ಕೆತ್ತಿರುವ ಸುಮಾರು ೧೩-೧೪ನೆಯ ಶತಮಾನದ ಅಪರೂಪದ ವೀರಗಲ್ಲೂ ಇದೆ. ಸ್ಥಳ ಅಭಾವದಿಂದಲೋ, ಶಿಲ್ಪಿಯ ಅಚಾತುರ್ಯದಿಂದಲೋ ಇಲ್ಲವೇ ಉದ್ದೇಶಪೂರ್ವಕವಾಗಿಯೋ ಕೆತ್ತಲ್ಪಟ್ಟಿರುವ ಇದು ತುರುಗೋಳದಲ್ಲಿ ಹೋರಾಡುತ್ತಾ ಮಡಿದ ಎಡಗೈಯೋಧನ ಅಪರೂಪದ ಸ್ಮಾರಕವಾಗಿದೆ. ವೈದ್ಯನಾಥಪುರ-ನಗರಕೆರೆ ಕವಲಲ್ಲಿ ನಿಂತಿರುವ ಸ್ಮಾರಕ ಶಿಲ್ಪ ಬಹಳ ವಿಶಿಷ್ಟವಾಗಿದೆ. ವೈದ್ಯೆನಾಥೇಶ್ವರನ ವಾರ್ಷಿಕ ರಥೋತ್ಸವವು ಫೆಬ್ರವರಿ ತಿಂಗಳಲ್ಲಿ ಜರುಗುತ್ತಿದ್ದು, ಗಣೇಶ ಚತುರ್ಥಿ, ಕಾರ್ತಿಕ ಸೋಮವಾರಗಳಂದು ವಿಶೇಷ ಪೂಜೆ ಇರುತ್ತದೆ. ಟ್ರಸ್ಟಿನ ವತಿಯಿಂದ ಇಲ್ಲಿ ಕಲ್ಯಾಣಮಂದಿರವನ್ನು ನಡೆಸಲಾಗುತ್ತಿದ್ದು, ಯಾತ್ರಾರ್ಥಿಗಳ ಸಲುವಾಗಿ ಅನ್ನಸಂತರ್ಪಣೆ, ವಸತಿ ಸೌಕರ್ಯಗಳನ್ನೂ ಕಲ್ಪಿಸಲಾಗಿದೆ. **ಸೋಮನಹಳ್ಳಿ (೨೪೦೩)** : ಮದ್ದೂರಿನಿಂದ ಮೂರು ಕಿ.ಮೀ. ಈಶಾನ್ಯಕ್ಕಿದ್ದು, ಇಲ್ಲಿ ೧೯೩೯ರಲ್ಲಿ ಸ್ಥಾಪಿಸಲ್ಪಟ್ಟಿರುವ ಕೃಷಿ ತರಬೇತಿ ಕೇಂದ್ರವು, ಮೈಸೂರು ಸಂಸ್ಥಾನದ ಅತ್ಯಂತ ಪ್ರಾಚೀನ ಕೃಷಿ ಪಾಠಶಾಲೆಯಾಗಿದ್ದು, ಜೊತೆಗೆ ಪ್ರಾಚೀನ ಮಣ್ಣು ಸಂರಕ್ಷಣಾ ತರಬೇತಿ ಕೇಂದ್ರವೂ ಆಗಿತ್ತು. ಜಿಲ್ಲೆಯ ಕೈಗಾರಿಕಾ ಪ್ರದೇಶಗಳಲ್ಲಿ ಒಂದಾದ ಇಲ್ಲಿ, ಬಿ.ಪಿ.ಎಲ್ (ಬ್ರಿಟಿಷ್ ಫಿಜಿಕಲ್ ಲ್ಯಾಬೊರೇಟರಿ) ಕಂಪನಿಯು ೧೯೯೧ರಿಂದ ಕಾರ್ಯನಿರ್ವಹಿಸುತ್ತಿದ್ದು, ಸದ್ಯ ಡ್ರೈಸೆಲ್‌ಗಳ ಉತ್ಪಾದನೆಯಲ್ಲಿ ತೊಡಗಿದೆ. ಕರ್ನಾಟಕ ರಾಜ್ಯದ ಹಾಲಿ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣ ಈ ಗ್ರಾಮದವರು.

**ಮಹಾದೇವಪುರ (೪೯೯೪)** : ತಾಲೂಕು ಕೇಂದ್ರ ಶ್ರೀರಂಗಪಟ್ಟಣದಿಂದ ೧೫ ಕಿ.ಮೀ. ಪೂರ್ವಕ್ಕೆ, ಕಾವೇರಿಯ ಬಲದಂಡೆಯ ಮೇಲಿದ್ದು, ಕಾವೇರಿಗೆ ಅಭಿಮುಖವಾಗಿರುವ ಕಾಶಿವಿಶ್ವೇಶ್ವರ ದೇವಾಲಯವು ಮೈಸೂರು ಅರಸರ ಕಾಲದ್ದಾಗಿದೆ. ಪ್ರತ್ಯೇಕವಾದ ಒಂದೊಂದು ಗರ್ಭಗೃಹ ಮತ್ತು ಅಂತರಾಳಗಳನ್ನು (ಪೂರ್ವಾಭಿಮುಖವಾಗಿ ಕಾಶಿ ವಿಶ್ವನಾಥ, ದಕ್ಷಿಣಮುಖವಾಗಿ ಅಮ್ಮನವರು) ಒಗ್ಗೂಡಿಸುವ, ವಿಶಾಲವಾದ ನವರಂಗಕ್ಕೆ ಪೂರ್ವ–ದಕ್ಷಿಣಗಳಲ್ಲಿ ದ್ವಾರಗಳಿದ್ದು, ಪ್ರಧಾನ ದ್ವಾರಕ್ಕೆ ವಿಶಾಲವಾದ ಮುಖಮಂಟಪವಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗ, ಅಂತರಾಳದಲ್ಲಿ ನಂದಿ ಹಾಗೂ ನವರಂಗದಲ್ಲಿ ಗಣಪತಿ ಮೂರ್ತಿಗಳಿದ್ದು, ಅನ್ನಪೂರ್ಣೇಶ್ವರಿಯು ಇನ್ನೊಂದು ಗರ್ಭಗುಡಿಯಲ್ಲಿದ್ದಾಳೆ. ವಿಶಾಲವಾದ ಪ್ರಾಕಾರ, ಎತ್ತರವಾದ ದ್ವಾರಮಂಟಪ ಹಾಗೂ ಆಕರ್ಷಕ ದ್ವಾರಗೋಪುರವನ್ನೂ ಹೊಂದಿರುವ ಈ ದೇವರ ಜಾತ್ರೆಯು ವೈಶಾಖ ಶುದ್ಧ ಪೌರ್ಣಿಮೆಯಂದು ಜರುಗುತ್ತದೆ. ನದಿ ತೀರದಲ್ಲಿ ಬಿಂದುಮಾಧವ, ಆಂಜನೇಯ, ಚನ್ನಕೇಶವ ಹಾಗೂ ಊರೊಳಗೆ ಬಸವಣ್ಣ, ವೀರಭದ್ರ, ಚೌಡೇಶ್ವರಿ, ಪಟ್ಟಲದಮ್ಮ, ಚಿಕ್ಕಮ್ಮ, ಮುಂತಾದ ಗುಡಿಗಳಿವೆ. ಕಾವೇರಿ ತೀರದಲ್ಲಿರುವ ಘಟ್ಟ ಹಾಗೂ ದೇವಾಲಯಗಳಿಂದಾಗಿ ವಾರಾಂತ್ಯದ ವಿಹಾರಕ್ಕೆ ಇದು ಪ್ರಶಸ್ತವಾಗಿದೆ.

**ಮಳವಳ್ಳಿ (೩೫,೮೦೦)** : ಜಿಲ್ಲಾ ಕೇಂದ್ರ ಮಂಡ್ಯದಿಂದ ೨೫ ಕಿ.ಮೀ. ವಾಯವ್ಯಕ್ಕೆ, ಬೆಂಗಳೂರಿನಿಂದ ೧೦೦ ಕಿ.ಮೀ. ದಕ್ಷಿಣಕ್ಕಿರುವ ತಾಲೂಕು ಕೇಂದ್ರ, ಹೊಯ್ಸಳರ ಕಾಲದಷ್ಟು ಪ್ರಾಚೀನ ನೆಲೆಯಾದ ಇದು ಮೈಸೂರರಸ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಪ್ರಮುಖ ಪಟ್ಟಣವಾಗಿದ್ದು, ಕೋಟೆ, ಆಳವಾದ ಕಂದಕ, ಸುಂದರವಾದ ಕಲ್ಯಾಣಿ, ಹಾಗೂ ಮಾವಿನ ತೋಪುಗಳನ್ನು ಕ್ರಿ.ಶ.೧೬೮೫ರಲ್ಲಿ ಅವರೇ ಇಲ್ಲಿ ನಿರ್ಮಿಸಿದರೆಂದು ಶಾಸನವೊಂದರಿಂದ ತಿಳಿದು ಬರುತ್ತದೆ. ಹೈದರಾಲಿಯು ಇದನ್ನು ತನ್ನ ಮಗ ಟಿಪ್ಪುವಿಗೆ ಜಹಗೀರಾಗಿ ನೀಡಿದ್ದು, ಕ್ರಿ.ಶ.೧೭೯೨ರ ಯುದ್ಧದಲ್ಲಿ ಮಳವಳ್ಳಿಯು ಬ್ರಿಟಿಷರಿಗೆ ಆಯಕಟ್ಟು ಸ್ಥಳವಾಗಿದ್ದುದನ್ನು ಮನಗಂಡ ಟಿಪ್ಪು, ಯುದ್ಧಾನಂತರ ಮಳವಳ್ಳಿಯನ್ನು ಹಾಳುಗೆಡವಿದನು. ಮೈಸೂರು ರಸ್ತೆಯಲ್ಲಿ ಎರಡು ಕಿ.ಮೀ. ದೂರದಲ್ಲಿ ಇಂದಿಗೂ ಹ್ಯಾರಿಸ್–ಟಿಪ್ಪು ನಡುವೆ ಕದನ ನಡೆದ ಸ್ಥಳದಲ್ಲಿ ಮದ್ದು ಗುಂಡುಗಳು ಲಭಿಸುತ್ತವೆ. ಮಳವಳ್ಳಿಯ ಮೊದಲ ಉಲ್ಲೇಖ ನೆರೆಯ ಬಂಡೂರಿನ ಕ್ರಿ.ಶ.೧೨೧೫ರ ಶಾಸನದಲ್ಲಿ ಕಂಡುಬರುತ್ತಿದ್ದು, ಬಡಗೆರೆ ನಾಡಿಗೆ ಇದು ಸೇರಿದ್ದ ಅಂಶವೂ ಗೊತ್ತಾಗುತ್ತಿದ್ದು, ಅಲ್ಲಿಂದ ಈವರೆಗೆ ಐದು ಶಾಸನಗಳು ವರದಿಯಾಗಿವೆ. ಹಿಂದೆ ಊರನ್ನು ಬಳಸಿ ನಿಂತಿದ್ದ. ಕೋಟೆಯಿಂದು ಸಂಪೂರ್ಣ ನಾಶವಾಗಿದ್ದರೂ ಮೂರ್‍ನಾಕ್ಕೆಡೆಗಳಲ್ಲಿ ಕೋಟೆಯ ಅಗಸಿ ಬಾಗಿಲುಗಳನ್ನು ನೋಡಬಹುದಾಗಿದ್ದು, ಪ್ರಾಚೀನ ಕಾಲದ ಶಾರ್ಙ್ಗಪಾಣಿ, ಗಂಗಾಧರೇಶ್ವರ, ಅರಕೇಶ್ವರ, ಮಹಾದೇಶ್ವರ, ವೀರಭದ್ರ, ಈಶ್ವರ, ಗಣೇಶ, ಆಂಜನೇಯ, ಪಟಾಲದಮ್ಮ ಮುಂತಾದ ಗುಡಿಗಳಿವೆ. ಇಲ್ಲಿಯ ಗಂಗಾಧರೇಶ್ವರ ಹಾಗೂ ಅರಕೇಶ್ವರ ನಾಮಾಂಕಿತ ಶಿವಲಿಂಗಗಳು ವಿದ್ಯಾರಣ್ಯ ಪ್ರತಿಷ್ಠಿತವೆಂಬ ಅಭಿಪ್ರಾಯವಿದೆ. **ಮತ್ತಿತಾಳೇಶ್ವರ** : ಮಳವಳ್ಳಿಯಿಂದ ಆರು ಕಿ.ಮೀ. ಈಶಾನ್ಯಕ್ಕೆ ಇರುವ ಕಂದಗಾಲದ ಉಪಗ್ರಾಮವಾಗಿದ್ದು, ಜನಪದ ವೈದ್ಯಕ್ಕೆ ಹೆಸರಾಗಿದೆ. ಇಲ್ಲಿಯ ಮತ್ತಿತಾಳೇಶ್ವರ, ಅನೇಕ ಕುಟುಂಬಗಳ ಕುಲದೈವವಾಗಿದ್ದು, ಹಳ್ಳದ ದಂಡೆಯ ಮೇಲೆ ಮತ್ತಿ ಮರಗಳ ತೋಪಿನಲ್ಲಿರುವ ಈ ಗುಡಿಯು ಗರ್ಭಗೃಹ, ಅಂತರಾಳ ನವರಂಗಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ಮಹಾದೇಶ್ವರನಿದ್ದು, ಬಳಿಯಲ್ಲಿರುವ ಕೊಳದಲ್ಲಿ ಸ್ನಾನ ಮಾಡಿ ಮಡಿಯಲ್ಲಿ ದೇವರ ಸೇವೆ ಮಾಡುವುದು ಇಲ್ಲಿಯ ಸಂಪ್ರದಾಯವಾಗಿದ್ದು, ಸರ್ಪ–ನಾಗರ ದೋಷ ಹಾಗೂ ಚರ್ಮರೋಗಗಳಿಗೆ ಮತ್ತಿ ತಾಳಿನ ಸಿಪ್ಪೆಯನ್ನು ಒಣಗಿಸಿ ಪುಡಿ ಮಾಡಿ, ಹುತ್ತದ ಮಣ್ಣಿನೊಂದಿಗೆ ಬೆರೆಸಿ, ಸಿದ್ಧಪಡಿಸಿದ ಔಷಧಿಯನ್ನು ನೀಡಿ ಗುಣಪಡಿಸಲಾಗುತ್ತದೆ. ಪ್ರತೀ ಗುರುವಾರ ಹಾಗೂ ಭಾನುವಾರಗಳಂದು ಪೂಜೆ ನಡೆಯುತ್ತಿದ್ದು, ಪ್ರತೀವರ್ಷ ಯುಗಾದಿ ಸಂದರ್ಭದಲ್ಲಿ ಜಾತ್ರೆಯಾಗುತ್ತದೆ.

**ಮಾಚಲಘಟ್ಟ (೧೭೦)** : ತಾಲೂಕು ಕೇಂದ್ರ ನಾಗಮಂಗಲದಿಂದ ೧೮ ಕಿ.ಮೀ. ದಕ್ಷಿಣಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ಮಾಚನಘಟ್ಟ' ಎಂದು ಉಲ್ಲೇಖಿತಗೊಂಡಿದ್ದು, 'ಬಿಜ್ಜಲೇಶ್ವರಪುರ' ಎಂಬ ಅಭಿದಾನವೂ ಇದ್ದ ಅಂಶ ಮಲ್ಲೇಶ್ವರ ಗುಡಿ ಮುಂದಿರುವ ಕ್ರಿ.ಶ.೧೪೨೬ರ ಶಾಸನವೂ ಸೇರಿದಂತೆ ಕೃಷ್ಣರಾಜಪೇಟೆ ತಾಲೂಕಿನ ಭೈರಾಪುರ (ಕ್ರಿ.ಶ.೧೨೬೭) ಹಾಗೂ ಸಿಂಧಘಟ್ಟ (ಕ್ರಿ.ಶ.೧೯೯) ಶಾಸನಗಳಿಂದ ವೇದ್ಯವಾಗುತ್ತದೆ. ಹೊಯ್ಸಳ ಸೋಮೇಶ್ವರನ (ಕ್ರಿ.ಶ.೧೨೩೦–೫೩) ಅರಸಿ, ಬಿಜ್ಜಲರಾಣಿಯ ಹೆಸರಲ್ಲಿ ಬಿಜ್ಜಲೇಶ್ವರ ದೇವಾಲಯವನ್ನು ನಿರ್ಮಿಸಿ, ಮಾಚನಕಟ್ಟೆ ಗ್ರಾಮವನ್ನು ಅಗ್ರಹಾರವನ್ನಾಗಿಸಿ, ಅದಕ್ಕೆ 'ಬಿಜ್ಜಲೇಶ್ವರಪುರ' ಎಂಬ ಅಭಿದಾನವನ್ನು ನೀಡಿರುವಂತೆ ತೋರುತ್ತದೆ.

ಊರಾಚೆ ಪೂರ್ವಾಭಿಮುಖವಾಗಿರುವ ಮಲ್ಲೇಶ್ವರ ಗುಡಿಯು ಮೂಲತ: ಬಿಜ್ಜಲೇಶ್ವರ ಎಂಬ ಹೆಸರನ್ನು ಹೊಂದಿತ್ತೆಂದು ತರ್ಕಿಸಬಹುದಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಅದರ ಪಂಚಶಾಖಾಲಂಕೃತ ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆ ಇದ್ದು, ಬುಡದಲ್ಲಿ ಶೈವ ದ್ವಾರಪಾಲಕರಿದ್ದಾರೆ. ಅಂತರಾಳದ ಜಾಲಂದ್ರಯುಕ್ತ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಪಾರ್ವತಿ–ಪರಮೇಶ್ವರ ಕೆತ್ತನೆಯಿದ್ದು, ಬುಡದಲ್ಲಿ ದ್ವಾರಪಾಲಕರಿದ್ದಾರೆ. ಚಿತ್ತಾಕರ್ಷಕ ಅಲಂಕಾರದಿಂದ ಕೂಡಿದ, ನಾಲ್ಕು ಮಾದರಿಯ ಕಂಬಗಳುಳ್ಳ ನವರಂಗದ ನಾಲ್ಕು ದೇವಕೋಷ್ಠಗಳಲ್ಲಿ ಗಣಪತಿ (೨), ಸಪ್ತಮಾತೃಕಾ ಹಾಗೂ ನಾಗಶಿಲ್ಪಗಳಿದ್ದು, ನಡುವೆ ನಂದಿ ಮೂರ್ತಿಯಿದೆ. ನವರಂಗದ ಒಂದೊಂದು ಛತ್ತು ವಿಶಿಷ್ಟ ಕೆತ್ತನೆಯಿಂದಾಗಿ ವೈವಿಧ್ಯಮಯವಾಗಿದ್ದು, ನಡುವಣ ಛತ್ತನ್ನು ೩೨ ಕೋನದ ನಕ್ಷತ್ರಾಕಾರದ ಕೆತ್ತನೆಯ ಇಳಿಬಿದ್ದ ಕಮಲ, ಅಷ್ಟದಿಕ್ಪಾಲಕರು, ಮಾವಿನ ಎಲೆಯ ತಳಿರು ತೋರಣ, ವಾದ್ಯಗಾರರು ಹಾಗೂ ಮುತ್ತಿನ ಅಲಂಕಾರಿಕ ಅಂಚುಗಳಿಂದ ಅಲಂಕರಿಸಲಾಗಿದೆ. ನವರಂಗದ ಪ್ರವೇಶದ್ವಾರವು ಸರಳವಾಗಿದ್ದು, ಮುಖಮಂಟಪದ ಛತ್ತು ಉತ್ಕೃಷ್ಟವಾಗಿದ್ದು, ಛಾವಣಿ ಇಳಿಜಾರಾಗಿದೆ. ಕದಂಬನಾಗರ ಶಿಖರ, ಶುಕನಾಸಿಗಳನ್ನು ಹೊಂದಿರುವ ಈ ಗುಡಿಯ ಭಿತ್ತಿಯು ಅಲಂಕಾರಿಕ ಅರೆಗಂಬಗಳನ್ನು ಹೊಂದಿದ್ದು, ನಿರಾಡಂಬರವಾಗಿದೆ. ಎಡಭಾಗದ ಭಿತ್ತಿಯು ಶಿಥಿಲಗೊಂಡಿದ್ದು, ಗುಡಿಯ ಸಂರಕ್ಷಣೆಯಾಗಬೇಕಿದೆ. ಈ ದೇವಾಲಯದ ಬಳಿಯಲ್ಲೇ ಇರುವ ಕಿರು ಗುಡಿಯು ಎರಡಂಕಣದ್ದಾಗಿದ್ದು, ಒಳಗಿರುವ ಭೈರವನ ಮೂರು ಶಿಲ್ಪಗಳಲ್ಲಿ ಒಂದು ಹೊಯ್ಸಳ ಶಿಲ್ಪವಾಗಿದೆ. ಮಲ್ಲೇಶ್ವರ ಗುಡಿಯ ಪರಿಸರದಲ್ಲಿ ಸುಮಾರು ೧೬ನೇ ಶತಮಾನದ ಎರಡು ವೀರಗಲ್ಲುಗಳಿವೆ. ಉಳಿದಂತೆ ಊರಿನಲ್ಲಿ ಬೋರೆದೇವರು, ರಾಮ, ಲಕ್ಷ್ಮಿ, ಮಾರಮ್ಮ, ಹೊನ್ನಮ್ಮ, ಮುಂತಾದ ಗುಡಿಗಳಿವೆ.

**ಮಾರೇಹಳ್ಳಿ (೧೪೫೧)** : ತಾಲೂಕು ಕೇಂದ್ರ ಮಳವಳ್ಳಿಯಿಂದ ಎರಡು ಕಿ.ಮೀ. ಆಗ್ನೇಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ರಾಜಾಶ್ರಯ ವಿಣ್ಣಾಗರ' (ರಾಜಾಶ್ರಯ ವಿಷ್ಣುನಗರ), ಚೋಳೇಂದ್ರ ಚತುರ್ವೇದಿ ಮಂಗಲ, 'ಸರ್ವನಮಸ್ಯದ ಉತ್ತಮ ಜಾತಿಯ ಗ್ರಾಮ ಮಾರ(ರೇ)ಹಳ್ಳಿ' ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ವಡಗೆರೆ ನಾಡಿಗೆ ಸೇರಿತ್ತು. ಇಲ್ಲಿಂದ ಈವರೆಗೆ ಸುಮಾರು ೧೧–೧೯ನೇ ಶತಮಾನಕ್ಕೆ ಸೇರಿದ ೨೫ ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಕ್ರಿ.ಶ. ೧೦೧೪ರ ತೇದಿಯನ್ನುಳ್ಳ ಮೂರು ಶಾಸನಗಳು ರಾಜಾಶ್ರಯ ವಿಣ್ಣಾಗರ ದೇವರನ್ನು ಉಲ್ಲೇಖಿಸಿದ್ದು, ಚೋಳ ಅರಸ ಒಂದನೆಯ ರಾಜರಾಜ (೯೮೫–೧೦೧೨)ನಿಗೆ ರಾಜಾಶ್ರಯ ವಿಣ್ಣಾಗರ ಎಂಬ ಬಿರುದಿದ್ದ ಹಿನ್ನೆಲೆಯಲ್ಲಿ ಈ ದೇವಾಲಯದ ನಿರ್ಮಾಣ ಕಾರ್ಯ ಚೋಳರಸನ ನಿರ್ದೇಶದನ್ವಯ ಆರಂಭವಾಗಿದ್ದು, ಪೂರ್ಣಗೊಳ್ಳುವ ಮೊದಲೇ ಅವನು ಗತಿಸಿರುವಂತೆ ತೋರುತ್ತದೆ. ಈ ದೇವಾಲಯದ ಅಧಿಷ್ಠಾನದ ಮೇಲಿರುವ, ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಗೆ ಸೇರಿದ ಕ್ರಿ.ಶ. ೧೧೪೮ರ ಶಾಸನವನ್ನು ಆಧರಿಸಿ, ಹೊಯ್ಸಳ ವಿಷ್ಣುವರ್ಧನನು ೧೧೪೮ರವರೆಗೆ ರಾಜ್ಯಭಾರ ಮಾಡಿರುವ ಅಂಶವನ್ನು ಎಂ.ಜಿ. ಮಂಜುನಾಥ್ ತೀರಾ ಇತ್ತೀಚೆಗೆ ಪ್ರತಿಪಾದಿಸಿದ್ದಾರೆ. ಮಳವಳ್ಳಿ–ಕೊಳ್ಳೇಗಾಲ

ರಸ್ತೆಯಲ್ಲಿ ಮಾರೇಹಳ್ಳಿಯಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿರುವ, ಸುಮಾರು ೧೧೧ ಅಂಕಣದ ಲಕ್ಷ್ಮೀನರಸಿಂಹನ (ಮಾರೇಹಳ್ಳಿ ಮುದುಕಪ್ಪ) ದೇವಾಲಯವು ಗರ್ಭಗೃಹ, ಅಂತರಾಳ, ನವರಂಗಗಳನ್ನಷ್ಟೇ ಮೂಲದಲ್ಲಿ ಹೊಂದಿದ್ದು, ಇದರ ಸುತ್ತಾಲಯ, ಪಾತಾಳಾಂಕಣಗಳು ಸ್ವಲ್ಪ ನಂತರದ ಸೇರ್ಪಡೆಯಾಗಿದೆ. ವಿಜಯನಗರ ಕಾಲದಲ್ಲಿ ಸಭಾಮಂಟಪ, ಅರ್ಧಮಂಟಪ, ಮಹಾದ್ವಾರಗಳನ್ನು ಸೇರಿಸಿ ದೇವಾಲಯವನ್ನು ವಿಸ್ತರಿಸಿರುವಂತೆ ತೋರುತ್ತದೆ. ಗರ್ಭಗೃಹದಲ್ಲಿ ಚೋಳರ ಕಾಲದ ಲಕ್ಷ್ಮೀನರಸಿಂಹನ ಸುಂದರ ಶಿಲ್ಪವಿದ್ದು, ಅದರ ಬಾಗಿಲವಾಡವು ಪಂಚಶಾಖಾಲಂಕೃತಗೋಂಡಿದ್ದು ಆಕರ್ಷಕವಾಗಿದೆ. ದೇವಾಲಯದ ಭಿತ್ತಿಯನ್ನು ಅಲಂಕಾರಿಕ ಸ್ತಂಭಗಳು ಅಪ್ಪಿ ನಿಂತಿವೆ. ಸುತ್ತಾಲಯದ ಹಿಂತುದಿಯಲ್ಲಿ ಭೂದೇವಿ ಹಾಗೂ ನೀಳಾದೇವಿಯರ ಕಿರುಗುಡಿಗಳಿದ್ದು, ಗುಡಿಯ ಪ್ರವೇಶದಲ್ಲೇ, ಎಡಭಾಗದಲ್ಲಿ ಆಂಜನೇಯನ ಗುಡಿಯೂ ಇದೆ. ದೇವಾಲಯದ ಎದುರಿಗೆ ಗರುಡಗಂಬವಿದ್ದು, ಬಳಿಯಲ್ಲೇ ೧೨ ಕಂಬದ ತೆರೆದ ಮಂಟಪವಿದೆ. ಈ ಗುಡಿಯ ಬಳಿಯಲ್ಲಿರುವ ಗರುಡ ಕೊಳ, ಗರುಡ ಮಂಟಪ ಗಮನಾರ್ಹವಾಗಿವೆ. ಲಕ್ಷ್ಮೀನರಸಿಂಹನ ಜಾತ್ರೆಯು ವರ್ಷಂಪ್ರತಿ ಜ್ಯೇಷ್ಠ ಶುದ್ದ ದಶಮಿಯಿಂದ ೧೨ ದಿನಗಳ ಕಾಲ ನಡೆಯುತ್ತದೆ. ಅದರಲ್ಲೂ ಜ್ಯೇಷ್ಠ ಬಹುಳ ದ್ವಿತಿಯದಂದು ಜರುಗುವ ರಥೋತ್ಸವಕ್ಕೆಂದು ತಮಿಳುನಾಡಿನಿಂದಲೂ ಭಕ್ತಾದಿಗಳು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಾರೆ. ಗುಡಿಯ ಎಡಮುಂಭಾಗದಲ್ಲಿರುವ ಅಮೃತೇಶ್ವರ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮೇಲೆ ಸುಂದರ ಗಾರೆ ಶಿಖರವಿದೆ. ನಿರಾಡಂಬರವಾಗಿರುವ ಈ ದೇವಾಲಯವನ್ನು ಕ್ರಿ.ಶ.೧೫೨೧ರ ಶಾಸನದಲ್ಲಿ ಮೂಲಸ್ಥಾನ ದೇವರೆಂದು ಕರೆಯಲಾಗಿದ್ದು, ಪುರಾತತ್ವ ಇಲಾಖೆಯ ಸಂರಕ್ಷಣೆಗೆ ಒಳಪಟ್ಟಿದೆ. ಕೊಳ್ಳೇಗಾಲ ರಸ್ತೆಯಲ್ಲಿರುವ ಇನ್ನೊಂದು ಈಶ್ವರಾಲಯವೂ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ನವರಂಗದ ದಕ್ಷಿಣ ಪ್ರವೇಶದ್ವಾರಕ್ಕೆ ಎದುರಾಗಿರುವ ಹೆಚ್ಚುವರಿ ಅಂಕಣದಲ್ಲಿಂದು ಪೀಠವಷ್ಟೇ ಉಳಿದಿದೆ. ಇದರ ಭಿತ್ತಿಯು ನಿರಾಡಂಬರವಾಗಿದ್ದು, ಗಾರೆ ಶಿಖರದಿಂದ ಗರ್ಭಗೃಹವನ್ನು ಅಲಂಕರಿಸಲಾಗಿದೆಯಾದರೂ ಇಂದು ಶಿಥಿಲಾವಸ್ಥೆಯಲ್ಲಿದೆ.

**ಮುತ್ತತ್ತಿ (೧೯೩)** : ಜಿಲ್ಲೆಯ ರಮ್ಯ ವನಪ್ರಾಂತ ಎಂದೇ ಪ್ರಸಿದ್ಧವಾದ ಬಸವನಬೆಟ್ಟ ಕಾಯ್ದಿಟ್ಟ ಅರಣ್ಯ ಪ್ರದೇಶದ ನಡುವೆ ಕಾವೇರಿ ನದಿಯ ಎಡದಂಡೆಯ ಮೇಲಿದ್ದು, ತಾಲೂಕು ಕೇಂದ್ರ ಮಳವಳ್ಳಿಯಿಂದ ೪೫ ಕಿ.ಮೀ. ಆಗ್ನೇಯಕ್ಕಿದೆ. ರಾಮಾಯಣ ಕಾಲದಷ್ಟು ಪ್ರಾಚೀನ ಪೌರಾಣಿಕ ಪರಂಪರೆಯುಳ್ಳ ಇಲ್ಲಿಗೆ ಶ್ರೀರಾಮ, ಲಕ್ಷ್ಮಣ, ಸೀತೆ ಹಾಗೂ ಹನುಮಂತಾದಿಗಳು ಆಯೋಧ್ಯೆಗೆ ಹಿಂತಿರುಗುವ ಮಾರ್ಗದಲ್ಲಿ ಬಂದು ತಂಗಿದ್ದರಂತೆ. ಆಗ ಕಾವೇರಿಯಲ್ಲಿ ಸ್ನಾನ ಮಾಡುತ್ತಿದ್ದ ಸೀತೆಯ ಮುತ್ತಿನ ಮೂಗುತಿ ಜಾರಿದಾಗ, ಸೀತೆಯ ಕೋರಿಕೆಯಂತೆ ಹನುಮಂತನು ತನ್ನ ಬಾಲವನ್ನು ಬೆಳೆಸಿ ಇಳಿ ಬಿಟ್ಟು, ಕಾವೇರಿ ಜಲವನ್ನು ಕಡೆದು ಮೂಗುತಿಯನ್ನು ಮೇಲೆತ್ತಿ ಕೊಟ್ಟನಂತೆ. ಅದರಿಂದಾಗಿ ಈ ಸ್ಥಳಕ್ಕೆ ಮುತ್ತತ್ತಿ ಎಂದೂ, ಕ್ಷೇತ್ರದೇವತೆಯಾಗಿ ಅಲ್ಲೇ ನೆಲೆಸುವ ಹನುಮಂತನಿಗೆ ಮುತ್ತೆತ್ತರಾಯನೆಂಬ ಅಭಿದಾನವು ಬರಲೆಂದೂ ಹನುಮಂತನಿಗೆ ಸೀತೆ ವಚನ ಕೊಟ್ಟಳೆಂಬ ಜನಪದ ನಂಬಿಕೆ ಇದೆ.

ಪುರಾಣ ಕಾಲಕ್ಕೂ ಹಿಂದಿನ ನವಶಿಲಾಯುಗ ಕಾಲಕ್ಕೆ (ಕ್ರಿ.ಪೂ.೨೦೦೦–ಕ್ರಿ.ಪೂ.೮೦೦) ಸೇರಿದ ಕಲ್ಲಿನ ಕೊಡಲಿ–ಬಾಚಿಗಳು ಮುತ್ತತ್ತಿಯಲ್ಲಿ ಲಭಿಸಿದ್ದು, ನೆರೆಯ ಕನಕಪುರ ತಾಲೂಕಿನ ಸಂಬಾಪುರ, ಪರಿಹರ, ಗೊಟ್ಟಿಗೆಪಳ್ಳಿ, ಗದ್ದೆಮಡಿನಕಲ್ಲು, ಮುಂತಾದೆಡೆಗಳಲ್ಲೂ ಈ ಸಂಸ್ಕೃತಿಯ ಅವಶೇಷಗಳು ಲಭಿಸಿವೆ. ಮುತ್ತೆತ್ತರಾಯನ ಗುಡಿ ಮುಂದಿನ ಬೆಟ್ಟಗುಡ್ಡಗಳಲ್ಲಿರುವ ಹಲವಾರು ಗವಿಗಳಲ್ಲಿ ಸೂಜಿಗಲ್ಲು ಗವಿ ಪ್ರಮುಖವಾಗಿದೆ. ಈ ಗುಡಿಯ ಆವರಣದಲ್ಲಿ ಮರವೊಂದರ ಬುಡದಲ್ಲಿರುವ ಸುಮಾರು ೧೨ನೆಯ ಶತಮಾನಕ್ಕೆ ಸೇರಿದ ಮೊಸಳೆ ವೀರಗಲ್ಲು ಶಾಸನ ಐದು ಸಾಲಿನದಾಗಿದ್ದು, ಗ್ರಂಥಾಕ್ಷರದಲ್ಲಿದೆ. ಹೊಳೆಯಂಚಲ್ಲಿ ಮೊಸಳೆಯೊಂದು ಹೋರಾಡುತ್ತಿರುವ ವೀರನೊಬ್ಬನ ಕಾಲನ್ನು ಬಾಯಲ್ಲಿ ಹಿಡಿದು ನೀರಿನೆಡೆಗೆ ಜಗ್ಗುತ್ತಿದ್ದು, ಅವನನ್ನು ಇನ್ನೊಬ್ಬ ತೀರದೆಡೆಗೆ ಎಳೆಯುತ್ತಿರುವಂತೆ ಅದರಲ್ಲಿ

ಶಿಲ್ಪಿಸಲಾಗಿದ್ದು, ಬಳಿಯಲ್ಲೇ ಎರಡು ಕುರಿಗಳಿವೆ. ಬಹುಶ: ನೀರು ಕುಡಿಯಲು ಹೋದ ಕುರಿಗಳನ್ನು ಕಬಳಿಸಲು ಮೊಸಳೆಯು ಹವಣಿಸಿದಾಗ, ಅದರೊಂದಿಗೆ ಹೋರಾಟಕ್ಕಿಳಿದು ಮಡಿದ ಕುರಿಗಾಹಿಯ ಅಪೂರ್ವ ವೀರಗಲ್ಲು ಇದಾಗಿದೆ. ದೇವಾಲಯದ ಹಿಂಭಾಗದಲ್ಲಿರುವ ಮನೆಗಳ ಬಳಿ ವಿಜಯನಗರ ಕಾಲಕ್ಕೆ ಸೇರಿದ ಎರಡು ಹುಲಿಬೇಟೆ ವೀರಗಲ್ಲುಗಳಿವೆ. ಅವುಗಳಲ್ಲೊಂದು, ಹಿಂಗಾಲ ಮೇಲೆ ನಿಂತು ಧಾಳಿ ಮಾಡುತ್ತಿರುವ ಹುಲಿಯನ್ನು ಕೊಡಲಿಯೊಂದಿಗೆ ಎದುರಿಸುತ್ತಿರುವ ವೀರನ ಹಿಂದೆ ಗಾಬರಿಗೊಂಡು ನಿಂತಿರುವ ಅವನ ಮಡದಿಯ ಕೆತ್ತನೆಯನ್ನು ಹೊಂದಿದ್ದರೆ, ಇನ್ನೊಂದು ಸ್ವಲ್ಪ ಭಿನ್ನವಾಗಿದೆ.

ಮುತ್ತತ್ತಿಯ ಮುತ್ತೆತ್ತರಾಯನು (ಆಂಜನೇಯ) ಸೀತೆಯ ಆಜ್ಞೆಯಂತೆ ಹುತ್ತವೊಂದರಲ್ಲಿ ನೆಲೆಸಿದ್ದು ಬಹಳ ಹಿಂದೆ ದೊರೆ ದೊಡ್ಡಗಂಗರಾಜನು ದೇವರಿಗೆ ಹುಲ್ಲಿನ ಮಾಡನ್ನು ಒದಗಿಸಿಕೊಟ್ಟನಂತೆ. ಅಲ್ಲಿಂದೀಚೆಗೆ ಒಂದೂವರೆ ಅಡಿ ಎತ್ತರದ ಕಕ್ಕೆ ಮರದಲ್ಲಿ ನೆಲೆಸಿದ್ದ ದೇವರಿಗೆ ಗುಡಿ ನಿರ್ಮಾಣವಾಗಿ ೧೯೮೬ರಲ್ಲಿ ಈಗಿನ ಮುತ್ತೆತ್ತರಾಯನ ಶಿಲಾಪ್ರತಿಮೆಯನ್ನು ಪ್ರತಿಷ್ಠಾಪಿಸಲಾಯಿತು. ಈ ದೇವರಿಗೆ ಸಂಬಂಧಿಸಿದ ಸುಮಾರು ೧೮-೧೯ನೆಯ ಶತಮಾನದ ಲಿಪಿಯುಳ್ಳ ಕೂಟ ತಾಮ್ರಶಾಸನವೊಂದು ನಾಯಕನಹಳ್ಳಿ (ಕನಕಪುರ ತಾ.)ಯ ಸಂಜೀವಯ್ಯನವರ ಬಳಿ ಇದೆ.

ಗರ್ಭಗೃಹ, ಅಂತರಾಳ ಹಾಗೂ ಕಂಬರಹಿತ ನವರಂಗವನ್ನು ಹೊಂದಿರುವ ಮುತ್ತೆತ್ತರಾಯನ ನೂತನ ಗುಡಿಯ ಗರ್ಭಗೃಹದಲ್ಲಿ ಆಳೆತ್ತರದ ಮುತ್ತೆತ್ತರಾಯನ ಇತ್ತೀಚಿನ ಸುಂದರ ಶಿಲ್ಪವಿದ್ದು, ಎದುರಲ್ಲಿ ಗರುಡಗಂಬ ಹಾಗೂ ಭೈರವನ ಗುಡಿಗಳಿವೆ. ಇಲ್ಲಿಗೆ ಬರುವ ಪ್ರವಾಸಿಗಳಿಗೆಂದು ಲೋಕೋಪಯೋಗಿ ಇಲಾಖೆಯ ಪ್ರವಾಸಿ ಮಂದಿರವಿದ್ದು, ಅದರ ಕಚೇರಿಯು ಹಲಗೂರಿನಲ್ಲಿದೆ. ಶ್ರಾವಣ ಮಾಸದಲ್ಲಿ ನಡೆಯುವ ಮುತ್ತೆತ್ತರಾಯನ ಜಾತ್ರೆಯಲ್ಲಿ ಭಕ್ತರು ಸಹಸ್ರ ಸಂಖ್ಯೆಯಲ್ಲಿ ಸೇರುತ್ತಾರೆ. ಆ ಸಂದರ್ಭದಲ್ಲಿ ಸೇರುವ ಪರಸೆಯಲ್ಲಿ ನೀಲಗಾರರು ಮಂಟೇಸ್ವಾಮಿಯ ಕಥೆಯನ್ನು ರಾತ್ರಿಯೆಲ್ಲಾ ಹಾಡುತ್ತಾರೆ. ಜಾತ್ರೆಯ ಅಂಗವಾಗಿ ನಡೆಯುವ ಹಾಲರ್ಬಿಸೇವೆ, ಹುಲಿವಾಹನೋತ್ಸವ, ಕೆಂಚಣ್ಣ-ಕರಿಯಣ್ಣರ ಹಲಗೆ, ಬೆತ್ತ, ಜಾಗಟೆ ಹಿಡಿದು ಕುಣಿಯುವ ದಾಸಯ್ಯಗಳಿಗೆ ಬಾಯ್ಗೆಮಣೆಯಿಕ್ಕುವ, ಬಾಯಿಕವಳ ನೀಡುವ ವಿಶಿಷ್ಟ ಆಚರಣೆಗಳು ಗಮನಾರ್ಹವಾಗಿರುತ್ತವೆ. ಕಾಡುಕೋತಿ ಮತ್ತು ಕಾಡಾನೆಗಳು ಮುತ್ತತ್ತಿ ಕ್ಷೇತ್ರದ ವಿಶೇಷವಾಗಿದ್ದು, 'ಕಾವೇರಿ ವನ್ಯಜೀವಿ ಧಾಮ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಇಲ್ಲಿ ಆಗೊಮ್ಮೆ ಈಗೊಮ್ಮೆ ಕಾಡಾನೆಗಳ ಹಿಂಡನ್ನು ನೋಡಬಹುದಾಗಿದ್ದು, ಇದನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು ಹೇರಳ ಅವಕಾಶ ಇದೆ. **ತಿರುಗಣೆಮಡು** : ಮುತ್ತತ್ತಿಗೆ ಹೋಗುವ ಹಾದಿಯಲ್ಲಿರುವ ಇದು ಹೆಸರೇ ಸೂಚಿಸುವಂತೆ ಆಳವಾದ ಸುಳಿಯಿಂದ ಕೂಡಿದ್ದು, ಜೊತೆಗೆ ಮೊಸಳೆಗಳ ಭೀತಿಯೂ ಇದೆ. ಸೀತೆಯ ಮುತ್ತಿನ ಮೂಗುತಿಯನ್ನು ಹನುಮಂತನು ಹುಡುಕಿ ಕೊಟ್ಟ ಸ್ಥಳ ಇದೆಂದೂ ಅದರಿಂದಾಗಿ ಇಲ್ಲಿ ಆಳವಾದ ಮಡು ಆಯಿತೆಂಬ ಸ್ಥಳೀಯ ಅಭಿಪ್ರಾಯವಿದ್ದು, ಅಪಾಯಕಾರಿ ಸ್ಥಳವಾಗಿದೆ. **ಭೀಮೇಶ್ವರಿ** : ಮುತ್ತತ್ತಿಗೆ ಐದು ಕಿ.ಮೀ. ದೂರದಲ್ಲಿದ್ದು, ಪೂರ್ಣ ಜೀರ್ಣೋದ್ಧಾರಗೊಂಡಿರುವ ಆಲಯದಲ್ಲಿ ಭೀಮೇಶ್ವರ ಲಿಂಗವಿದ್ದು, ಹಾಲು ಮತಸ್ಥರು ಅದರ ತಮ್ಮಡಿ (ಅರ್ಚಕರು)ಗಳಾಗಿದ್ದು, ಯುಗಾದಿ ನಂತರ ಕೊಂಡವಿರುತ್ತದೆ. ಈ ದೇವಾಲಯಕ್ಕೆ ಅರ್ಧ ಕಿ.ಮೀ. ದೂರದಲ್ಲಿರುವ ಎಣ್ಣೆಹೊಳೆತಿಟ್ಟು ಬೆಟ್ಟ ದ್ವೀಪ (ಕಿರುಗುಡ್ಡ)ದ ಮೇಲೆ ಮೈಸೂರು ಅರಸರ ಕಾಲದ ಪಂಚಲಿಂಗೇಶ್ವರ ದೇವಾಲಯದ ಮೂರು ಗರ್ಭಗೃಹಗಳಷ್ಟೇ ಉಳಿದಿದ್ದು ಗುಡಿಯ ಮುಂದೆ ಗ್ರಂಥಲಿಪಿಯ ಎರಡು ಅಪ್ರಕಟಿತ ತಮಿಳು ಶಾಸನಗಳಿವೆ. **ಸಂಗಮ** : ಕಾವೇರಿ ಹಾಗೂ ಶಿಂಷಾ ನದಿಗಳ ಸಂಗಮ (ತೊರೆಕೂಡಲ) ಸ್ಥಳವು ಭೀಮೇಶ್ವರಿಯಿಂದ ದನದದೊಡ್ಡಿ ಮಾರ್ಗವಾಗಿ ಮೂರು ಕಿ. ಮೀ. ಅಂತರದಲ್ಲಿದ್ದು ದುರ್ಗಮ ಎಂದೆನಿಸಿದರೂ ರಮ್ಯವಾಗಿದೆ.

**ಮೇಲುಕೋಟೆ (೩೨೫೪)** : ತಾಲೂಕು ಕೇಂದ್ರ ಪಾಂಡವಪುರದಿಂದ ೨೪ ಕಿ.ಮೀ. ಉತ್ತರಕ್ಕೆ, ಜಿಲ್ಲಾ ಕೇಂದ್ರ ಮಂಡ್ಯದಿಂದ ೪೦ ಕಿ.ಮೀ. ವಾಯವ್ಯಕ್ಕೆ ಹಾಗೂ ರಾಜಧಾನಿ ಬೆಂಗಳೂರಿನಿಂದ ೧೩೦ ಕಿ.ಮೀ.ನೈಋತ್ಯಕ್ಕೆ ಸುಮಾರು ೩೫೮೯ ಅಡಿ ಎತ್ತರದ ಯದುಗಿರಿ ಬೆಟ್ಟದ ಮೇಲಿರುವ ಚಾರಿತ್ರಿಕ, ಧಾರ್ಮಿಕ ಮಹತ್ವದ ಸ್ಥಳ. ತೀರ್ಥಕ್ಷೇತ್ರಪುರ. ಶ್ರೀವೈಷ್ಣವಯತಿ, ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕರಾದ ಆಚಾರ್ಯ ರಾಮಾನುಜರ ಕರ್ಮಭೂಮಿ, ಪವಿತ್ರತಾಣ.

ಮೇಲುಕೋಟೆಯ ಬಂಡೆಯೊಂದರ ಮೇಲೆ ಇತ್ತೀಚೆಗೆ ಪತ್ತೆಯಾಗಿರುವ ರೇಖಾಚಿತ್ರ ಹಾಗೂ ಬೆಟ್ಟಸಾಲಲ್ಲಿರುವ ಪಾಂಡವರ ಗವಿ ಮುಂತಾದವನ್ನು ಆಧರಿಸಿ, ಹಿಂದೆ ಇದು ಬೃಹತ್ ಶಿಲಾಯುಗದ ಮಾನವ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿತ್ತೆಂಬ ಅಭಿಪ್ರಾಯವಿದೆ. ನಾರಾಯಣನಿರುವ ಮೇಲುಕೋಟೆಯನ್ನು ಕೃತಯುಗದಲ್ಲಿ ನಾರಾಯಣಾದ್ರಿ, ತ್ರೇತಾಯುಗದಲ್ಲಿ ವೇದಾದ್ರಿ, ದ್ವಾಪರಯುಗದಲ್ಲಿ ಯಾದವಾದ್ರಿ ಹಾಗೂ ಕಲಿಯುಗದಲ್ಲಿ ಯತಿಶೈಲವೆಂದೂ ಕರೆಯಲಾಗುತ್ತಿತ್ತೆಂದು ಸ್ಥಳಪುರಾಣಗಳು ತಿಳಿಸುತ್ತದೆ. ಇಲ್ಲಿಯ ಧನುಷ್ಕೋಟಿಯು ಸೀತೆಯ ದಾಹ ನೀಗಿಸಲೆಂದು ರಾಮ ಹೂಡಿದ ಬಾಣದಿಂದ ರೂಪುಗೊಂಡಿತೆಂದೂ ಯೋಗಾನರಸಿಂಹನ ಗುಡಿಗೆ ಹೋಗುವ ಹಾದಿಯಲ್ಲಿ ಎಡಕ್ಕಾದಂತಿರುವ ಗವಿಗಳನ್ನು ಪಾಂಡವರ ಗುಡಿಗಳೆಂದೂ, ಪಾಂಡವರು ಬಳಸುತ್ತಿದ್ದ ಆರು ತಟ್ಟೆಗಳೆಂದು ಸವೆದ ಬಂಡೆಯನ್ನೂ ಸ್ಥಳೀಯವಾಗಿ ತೋರಿಸಲಾಗುತ್ತದೆ. ಆದರೆ ಇವೂ ಕೂಡಾ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಕುರುಹುಗಳೇ ಆಗಿವೆ.

ಸುಮಾರು ಕ್ರಿ.ಶ. ೯೩೦ರಲ್ಲಿ ಜೀವಿಸಿದ್ದ ನಾಥಮುನಿಯನ್ನು ತಿರುನಾರಾಯಣಪುರದ ಶ್ರೀವೈಷ್ಣವರು ತಮಿಳುನಾಡಿನ ವೀರನಾರಾಯಣಪುರದಲ್ಲಿ ಸಂಧಿಸಿದ್ದರೆಂಬ ಹೇಳಿಕೆಯು, ಮೇಲುಕೋಟೆಯ ಪ್ರಾಚೀನತೆಯನ್ನು ಅಷ್ಟು ಹಿಂದಕ್ಕೆ ಕೊಂಡೊಯ್ಯುತ್ತದೆಂಬ ಅಭಿಪ್ರಾಯವಿದೆ. ಹೊಯ್ಸಳ ಶಾಸನಗಳಲ್ಲಿ 'ಯಾದವಗಿರಿ', ತಿರುನಾರಾಯಣಪುರ , ಮೇಲುಗೋಟೆ ಎಂದು ಉಲ್ಲೇಖಿತಗೊಂಡಿರುವ ಇದು, ವೈಕುಂಠ ವರ್ಧನ ಕ್ಷೇತ್ರ ಎಂಬ ವಿಶೇಷಣವನ್ನೂ ಹೊಂದಿತ್ತು. ವಿಜಯನಗರ ಕಾಲದ ಶಾಸನಗಳಲ್ಲಿ 'ಘಟಿಕಾಸ್ಥಾನ ಮೇಲುಕೋಟೆ' (ದೇವಲಾಪುರ ಕ್ರಿ.ಶ.೧೪೭೨), ಅನಾದಿ ಮಹಾಸ್ವಾಮಿಸ್ಥಾನ, ವೈಕುಂಠ ವರ್ಧನ ಕ್ಷೇತ್ರ, ಭೂಲೋಕ ವೈಕುಂಠ, ಜ್ಞಾನಮಂಟಪ, ದಕ್ಷಿಣಬದರಿಕಾಶ್ರಮ ಎಂಬ ವಿಶೇಷಣಗಳನ್ನು ಹೊಂದಿದ್ದು, ಮೈಸೂರು ಅರಸರ ಕಾಲದಲ್ಲೂ ಅದೇ ಮುಂದುವರಿಯಿತು.

ಹೋಬಳಿ ಕೇಂದ್ರವಾದ ಇದು, ಹೊಯ್ಸಳ ವಿಷ್ಣುವರ್ಧನನ ಕಾಲದಿಂದ (ಕ್ರಿ.ಶ. ೧೦೦೮–೧೧೪೮) ಮೈಸೂರು ಅರಸರ ಕಾಲದವರೆಗೆ ನಿರಂತರ ರಾಜಾಶ್ರಯ ಪಡೆದಿದ್ದು, ಇಲ್ಲಿಂದ ಈವರೆಗೆ ವರದಿಯಾಗಿರುವ ೯೬ ಶಾಸನಗಳಲ್ಲಿ ತಲಾ ಮೂರ್ಮೂರು ತಾಮ್ರಫಲಕ ಹಾಗೂ ಆಭರಣ ಶಾಸನಗಳಾದರೆ ಉಳಿದ ೯೦, ಶಿಲಾಶಾಸನಗಳಾಗಿವೆ. ಕನ್ನಡ (೮೫), ಸಂಸ್ಕೃತ (೫), ಸಂಸ್ಕೃತ–ಕನ್ನಡ (೨), ತಮಿಳು (೨), ತೆಲುಗು (೧), ಹಾಗೂ ಪರ್ಷಿಯನ್ (೧) ಭಾಷೆಯಲ್ಲಿರುವ ಈ ಶಾಸನಗಳಲ್ಲಿ ಹೆಚ್ಚಿನವು ಚೆಲುವನಾರಾಯಣನಿಗೆ ಬಿಟ್ಟ ದತ್ತಿ ಶಾಸನಗಳಾದರೆ, ಬೆಟ್ಟದ ಮೇಲಿನ ನರಸಿಂಹನಿಗೆ ಸಂಬಂಧಿಸಿದಂತೆ ಸುಮಾರು ೧೨ ಶಾಸನಗಳಿವೆ. ಮೇಲುಕೋಟೆಯ ಅಧಿಕೃತ ಇತಿಹಾಸ ಆಚಾರ್ಯ ರಾಮಾನುಜರ ಆಗಮನದೊಂದಿಗೆ ಆರಂಭವಾಗುತ್ತಾದರೂ, ಪೂರ್ಣಯ್ಯನ ಹೊಂಡದ ಸಮೀಪವಿರುವ ಗಂಗರ ಕಾಲದ ಸಿಂಹಸ್ತಂಭಗಳು ಮತ್ತು ನರಸಿಂಹನ ಬೆಟ್ಟದ ವಾಯವ್ಯ ತಪ್ಪಲಿನಲ್ಲಿರುವ ಎರಡಂತಸ್ತಿನ ಗುಹಾಂತರ ದೇವಾಲಯ ರಚನಾ ಪ್ರಯತ್ನವನ್ನು ಆಧರಿಸಿ ಗಂಗರ ಕಾಲದಲ್ಲೂ ಇಲ್ಲಿ ವಾಸ್ತುಶಿಲ್ಪ ಚಟುವಟಿಕೆ ನಡೆದಿತ್ತೆಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ.

ಹೊಯ್ಸಳರ ಆಳ್ವಿಕೆಯಲ್ಲಿ ಆಚಾರ್ಯ ರಾಮಾನುಜರಿಂದಾಗಿ ಶ್ರೀವೈಷ್ಣವ ಕೇಂದ್ರವಾಗಿ ಮಹತ್ವ ಪಡೆದಿದ್ದ ಅಂಶವನ್ನು ಇಲ್ಲಿರುವ ಹೊಯ್ಸಳರ ಎಂಟು ಶಾಸನಗಳು ಖಚಿತಪಡಿಸುತ್ತವೆ. ಅವುಗಳಲ್ಲಿ ನಾಮದಕಟ್ಟೆ ತೋಟದ ಗರುಡದೇವರ ಗುಡಿಯಲ್ಲಿರುವ ಕ್ರಿ.ಶ.೧೩೧೯ರ ಶಾಸನವು ಹಿಂದೆ ಎಂಬೆರುಮಾನರು (ರಾಮಾನುಜಾಚಾರ್ಯರು) ಮೇಲುಕೋಟೆಯಲ್ಲಿ ದೊರಕುತ್ತಿದ್ದ ತಿರುಮಣ್ಣಿನ (ಬಿಳಿ/ಶುದ್ದೆ/ನಾಮದ ಉಂಡೆ) ಮಹತ್ವವನ್ನು ಅರಿತು, ಅದನ್ನು ನಾಮಧಾರಣೆಗೆ ಬಳಸಿಕೊಂಡಿದ್ದು, ಆ ಮಣ್ಣಿನ ಒಡೆತನದ ಹಕ್ಕನ್ನು ತಿರುಮಣ್ಣ ಪೆರುಮಾಳಿಗೆ ಎಡತಲೆಯ ಮಾದಪ್ಪದಂಡನಾಯಕನು ಬಿಟ್ಟುಕೊಟ್ಟ ಅಂಶವನ್ನು ತಿಳಿಸಿದರೆ, ದೇವಸ್ಥಾನದ ಐವತಿಬ್ಬರು ಆಡಳಿತಾಧಿಕಾರಿಗಳೇ ಮುಂತಾದ ಸಾಂಸ್ಕೃತಿಕ ಮಹತ್ವದ ಹಲವಾರು ಅಂಶಗಳನ್ನು ಉಳಿದ ಹೊಯ್ಸಳ ಶಾಸನಗಳು ಒದಗಿಸುತ್ತವೆ.

ಮೇಲುಕೋಟೆಗೆ ಸಂಬಂಧಿಸಿದಂತೆ ಹೊಯ್ಸಳರ ಉದಾರ ನೀತಿಯನ್ನೇ ಅನುಸರಿಸಿದ ವಿಜಯನಗರದ ಅರಸರು ಹಾಗೂ ಪ್ರಾಂತಾಧಿಕಾರಿಗಳು ಸುಮಾರು ೩೦ ಶಾಸನಗಳನ್ನು ನೀಡಿದ್ದಾರೆ. ಅವುಗಳಲ್ಲಿ ಐವತಿಬ್ಬರು ಶ್ರೀವೈಷ್ಣವರನ್ನೊಳಗೊಂಡ ಆಡಳಿತ ಮಂಡಳಿ, ಅಲ್ಲಿ ಬಳಸುತ್ತಿದ್ದ ದೇಶಾಂತ್ರಿ, ಹನುಮ ಹಾಗೂ ರಾಮಾನುಜ ಮುದ್ರೆ, ಮೇಲುಕೋಟೆಯ ಸಂತೆ ಮುಂತಾದ ಹತ್ತು ಹಲವು ವಿಷಯಗಳ ಉಲ್ಲೇಖ ಕಂಡು ಬರುವುದರ ಜೊತೆಗೆ ಮೇಲುಕೋಟೆಯ ಧಾರ್ಮಿಕ ಮಹತ್ವವೂ ಮನದಟ್ಟಾಗುತ್ತದೆ.

ಊರಿಗೆ 'ಮೇಲುಕೋಟೆ' ಎಂಬ ಹೆಸರು ಬರಲು ಕಾರಣವಾಗಿರುವ ಇಲ್ಲಿಯ ಕೋಟೆಯು ಗಿರಿದುರ್ಗವಾಗಿದ್ದು, ಸುಮಾರು ೧೫ ಚ.ಕಿ.ಮೀ. ಪ್ರದೇಶವನ್ನು ಆವರಿಸಿದೆ. ರಕ್ಷಣಾ ಆಯಕಟ್ಟಿನಿಂದಾಗಿ ಇದು ಹೊಯ್ಸಳರ ಕಾಲದಲ್ಲಿ ಸೈನಿಕ ತುಕಡಿಯನ್ನಿರಿಸಿದ್ದ ದಂಡು ಸ್ಥಳವಾಗಿದ್ದಂತೆ ತೋರುತ್ತದೆ. ನೆರೆಯ ಕೆರೆತೊಣ್ಣೂರಿನ ಕ್ರಿ.ಶ.೧೧೮೯ರ ಶಾಸನದಿಂದ ಯಾದವಗಿರಿಯ ಕೋಟೆಗೆ ರಕ್ಷಾಪಾಲಕರಿದ್ದ ಅಂಶ ಗೊತ್ತಾಗುತ್ತದೆ. ಮೈಸೂರು ಅರಸ ಯದುರಾಯರ ಅರಸಿಯು ಈ ಪಟ್ಟಣಕ್ಕೆ ಕೋಟೆ ನಿರ್ಮಿಸಿ, ನಾಲ್ಕು ಅಗಸೆ ಬಾಗಿಲುಗಳನ್ನು ಕ್ರಿ.ಶ.೧೪೮೯ರಲ್ಲಿ ಅಳವಡಿಸಿದಳೆಂದು ಹೇಳಲಾಗುತ್ತದೆ. 'ಯಾದವಗಿರಿ ಜೀರ್ಣೋದ್ಧಾರಕ' ಎಂಬ ಬಿರುದನ್ನು ಹೊಂದಿದ್ದ ವಿಜಯನಗರದ ಪ್ರಧಾನ, ನಾಗಮಂಗಲದ ಮಹಾಪ್ರಭು, ತಿಮ್ಮಣ್ಣ ದಂಡನಾಯಕ ಮತ್ತವನ ಮಡದಿ ರಂಗಾಂಬಿಕೆಯರು ಮೇಲುಕೋಟೆಯಲ್ಲಿ ಹಲವು ಧರ್ಮಕಾರ್ಯಗಳನ್ನು ಕ್ರಿ.ಶ.೧೪೫೮ರಲ್ಲಿ ಕೈಗೊಂಡಿದ್ದು, ಅದರಲ್ಲಿ ಕೋಟೆಯ ದುರಸ್ತಿಯೂ ಸೇರಿರುವ ಸಾಧ್ಯತೆಗಳಿವೆ. ರಾಜ ಒಡೆಯರ ಕಾಲದಲ್ಲಿ ಇಲ್ಲಿಯ ಕೋಟೆಯನ್ನು ಬಲಪಡಿಸುವ ಯತ್ನ ನಡೆಯಿತೆಂದೂ, ಅದರ ಕುರುಹಾಗಿ ಊರ ದಕ್ಷಿಣದಲ್ಲಿ ಅಪೂರ್ಣ ಸ್ಥಿತಿಯಲ್ಲಿ ನಿಂತಿರುವ ಗೋಪಾಲರಾಯನ ಬಾಗಿಲೇ ಅದೆಂಬ ಅಭಿಪ್ರಾಯವಿದೆ. ವಿಜಯನಗರ (ಹಂಪೆ) ದ 'ಮಹಾನವಮಿ ದಿಬ್ಬ' ಪರಿಸರದಲ್ಲಿರುವ ಬೃಹತ್ ದ್ವಾರಮಂಟಪವನ್ನುಳ್ಳ ಅಗಸೆ ಬಾಗಿಲನ್ನು ನೆನಪಿಸುವ ಇದೂ ಕೂಡ ಬೃಹತ್ತಾಗಿದ್ದು, ಆಕರ್ಷಕ ಕೆತ್ತನೆಗಳನ್ನು ಹೊಂದಿರುವ ಇದರ ಅಧಿಷ್ಠಾನವು ಗಮನಾರ್ಹವಾಗಿದ್ದು, ಸುಮಾರು ೧೨ನೆಯ ಶತಮಾನದ ಶಾಸನವೊಂದರಲ್ಲಿ ಉಲ್ಲೇಖಿತಗೊಂಡಿರುವ ಗೋಪಾಲರಾಯನೊಂದಿಗೆ ಈ ಬಾಗಿಲ ನಿರ್ಮಾಣವನ್ನು ಗುರುತಿಸಲು ವಿದ್ವಾಂಸರು ಯತ್ನಿಸಿದ್ದಾರಾದರೂ ಅದನ್ನು ಪುಷ್ಟೀಕರಿಸುವ ಪುರಾವೆಗಳ ಅಗತ್ಯವಿದೆ.

ಪ್ರಾಚೀನ ಶಾಸನಗಳಲ್ಲಿ ನಾರಾಯಣದೇವರು, ತಿರುನಾರಾಯಣ, ಸಂಪತ್ಕುಮಾರ ನಾರಾಯಣ, ಚೆಲ್ಲ(ಶೆಲ್ವ)ಪಿಳ್ಳೆರಾಯ, ಚೆಲುವನಾರಾಯಣ ಎಂದೆಲ್ಲಾ ಉಲ್ಲೇಖಿತಗೊಂಡಿರುವ ಇಲ್ಲಿಯ ನಾರಾಯಣನನ್ನು ಕೃತಯುಗದಲ್ಲಿ ಸನತ್ಕುಮಾರರೂ, ತ್ರೇತಾಯುಗದಲ್ಲಿ ದತ್ತಾತ್ರೇಯ–ರಾಮರೂ, ದ್ವಾಪರಯುಗದಲ್ಲಿ ಬಲರಾಮ–ಕೃಷ್ಣ ಮುಂತಾದವರು ಆರಾಧಿಸಿದರೆಂಬ ಪೌರಾಣಿಕ ಐತಿಹ್ಯವಿದ್ದು, ಕಲಿಯುಗದಲ್ಲಿ ಆಚಾರ್ಯ ರಾಮಾನುಜರಿಂದಲೂ ಆರಾಧಿಸಲ್ಪಟ್ಟಿದೆ. ಇಲ್ಲಿಯ ನಾರಾಯಣಮೂರ್ತಿಯು ಆಚಾರ್ಯ ರಾಮಾನುಜರಿಗೆ ಕನಸಿನಲ್ಲಿ ಕಾಣಿಸಿಕೊಂಡು, ತನ್ನನ್ನು

ಪುನರ್ ಪ್ರತಿಷ್ಠಾಪಿಸುವಂತೆ ಆಜ್ಞಾಪಿಸಿತೆಂದೂ, ಅದರಂತೆ ಆಗ ಕೆರೆತೊಣ್ಣೂರಿನಲ್ಲಿದ್ದ ರಾಮಾನುಜರು ಮೇಲುಕೋಟೆಗೆ ಆಗಮಿಸಿ, ನಾರಾಯಣಮೂರ್ತಿಯಿದ್ದ ಸ್ಥಳ ಪತ್ತೆ ಹಚ್ಚಿ, ಸ್ವಚ್ಛ ಮಾಡಿ ಗುಡಿ ಕಟ್ಟಿ, ಆ ಮೂರ್ತಿಯನ್ನು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸುವಲ್ಲಿ, ಅವರಿಗೆ ಹೊಯ್ಸಳ ವಿಷ್ಣುವರ್ಧನನ ಸಂಪೂರ್ಣ ಬೆಂಬಲ ಲಭಿಸಿತೆಂದೂ ತಿಳಿದು ಬರುತ್ತದೆ. ಅಲ್ಲದೆ ಈ ಕಾರ್ಯದಲ್ಲಿ ತಮಗೆ ನೆರವಾದ ಹರಿಜನರಿಗೆ ವರ್ಷದಲ್ಲೊಮ್ಮೆ ವೈರಮುಡಿ ಉತ್ಸವ ಸಂದರ್ಭದಲ್ಲಿ ದೇವಾಲಯಕ್ಕೆ ಮೂರು ದಿನಗಳ ಮುಕ್ತ ಪ್ರವೇಶವನ್ನು ರಾಮಾನುಜರು ನೀಡಿದ್ದರು. ನಾರಾಯಣ ದೇವರ ಉತ್ಸವಕ್ಕೆ ಅಗತ್ಯವಿದ್ದ ಮೂರ್ತಿಗಾಗಿ ಪರಿತಪಿಸುತ್ತಿದ್ದ ರಾಮಾನುಜರಿಗೆ ನಾರಾಯಣನು ಕನಸಿನಲ್ಲಿ ಕಾಣಿಸಿಕೊಂಡು ತಾನು ದಿಲ್ಲಿಯ ಬಾದಷಹನ ಹತ್ತಿರ ಇರುವುದಾಗಿಯೂ ತನ್ನನ್ನು ಬಂದು ಕರೆದುಕೊಂಡು ಹೋಗುವಂತೆಯೂ ಅಪ್ಪಣೆ ಮಾಡಿದನಂತೆ, ಅದರಂತೆ ನೂರಾರು ಜನ ಹಿಂಬಾಲಕರೊಂದಿಗೆ ಉತ್ಸವ ಮೂರ್ತಿ ಚೆಲ್ಲಪಿಳ್ಳೆರಾಯನಿಗಾಗಿ ದೆಹಲಿಗೆ ತೆರಳಿದ ಆಚಾರ್ಯರು, ಸುಲ್ತಾನನ ಪುತ್ರಿಯಾದ ಶಹಜಾದಿಯು ಬಳಿ ಇದ್ದ ಮೂರ್ತಿಯನ್ನು ತರುವಲ್ಲಿ ಯಶಸ್ವಿಯಾದ ಸಂದರ್ಭದಲ್ಲಿ ಅವರನ್ನು ಅನುಸರಿಸಿ ಬಂದ ಸುಲ್ತಾನನ ಪುತ್ರಿಯು ಊರಾಚೆ ಹೊಗರಮ್ಮನ ಗವಿಯಲ್ಲಿ ನೆಲೆಸಿ, ಗುಪ್ತವಾಗಿ ಚೆಲುವರಾಯನನ್ನು ಸಂಧಿಸುತ್ತಿದ್ದಳೆಂದು 'ವರನಂದಿ ಕಲ್ಯಾಣ' ಗ್ರಂಥವು ದಾಖಲಿಸಿದೆ. ಅವಳ ಕಿರುಮೂರ್ತಿ ದೇವರ ಸನ್ನಿಧಿಯಲ್ಲಿದೆ. ಆದರೆ ಈ ಘಟನೆಯ ಹಿಂದಿರುವ ಚಾರಿತ್ರಿಕ ಸತ್ಯವನ್ನು ವಿವೇಚಿಸುವ ಅಗತ್ಯವಿದೆ.

ತಿರುನಾರಾಯಣನಿರುವ ಪುರವಾದ್ದರಿಂದ 'ತಿರುನಾರಾಯಣಪುರ' ಎಂದೂ ಬೆಟ್ಟದ ಮೇಲೆ ಕೋಟೆ ಇರುವುದರಿಂದ ಮೇಲುಕೋಟೆ ('ಮೇಲುಕೋಟೆ' ಪದವು ತಮಿಳಿನ 'ಮೆರ್ಕುಕೊಟ್ಟೆ' ಯ ಸವಕಲು ರೂಪವಾಗಿದ್ದು, ತಮಿಳಿನಲ್ಲಿ ಇದು 'ಪಶ್ಚಿಮಕೋಟೆ' ಎಂದಾಗುತ್ತದೆಂದೂ, ಮೇಲುಕೋಟೆಯು ಚೋಳ ರಾಜ್ಯದ ಪಶ್ಚಿಮ ಭಾಗದಲ್ಲಿದ್ದುದರಿಂದ ಇದಕ್ಕೆ ಆ ಹೆಸರು ಬಂದಿತೆಂಬ ಅಭಿಪ್ರಾಯವೂ ಇದೆ) ಎಂದೂ ಕರೆಯಲ್ಪಟ್ಟಿದ್ದು, ಇಲ್ಲಿರುವ ಚೆಲುವನಾರಾಯಣನ ಗುಡಿಯು ಮೂರು ಕಾಲಘಟ್ಟದ ರಚನೆಗಳನ್ನು ಹೊಂದಿದೆ.

ಪೂರ್ವಾಭಿಮುಖವಾಗಿರುವ ಈ ವಿಶಾಲ ದೇವಾಲಯದ ಗರ್ಭಗೃಹದಲ್ಲಿ ಸ್ಥಾನಕ ಭಂಗಿಯಲ್ಲಿರುವ ಚತುರ್ಭುಜಧಾರಿ ನಾರಾಯಣನ ಆಳೆತ್ತರದ ಸುಂದರ ಶಿಲ್ಪವು ಚಕ್ರ, ಶಂಖ, ಗದಾ, ಅಭಯಹಸ್ತಧಾರಿಯಾಗಿ ಸರ್ವಾಭರಣ ಭೂಷಿತವಾಗಿದ್ದು, ಪದತಳದಲ್ಲಿ ಚತುರ್ಭುಜೆ ಲಕ್ಷ್ಮಿ ಇದ್ದು, ಮುಂದಿರುವ ಅಂತರಾಳಕ್ಕೆ ದ್ವಾರಪಾಲಕ ಜಯ–ವಿಜಯರಿದ್ದಾರೆ. ಇದರ ಸುತ್ತ ಕತ್ತಲೆ ಪ್ರದಕ್ಷಿಣ ಪಥವಿದ್ದು,ವರ್ಷದಲ್ಲೊಮ್ಮೆ ದೇವರಿಗೆ ಕತ್ತಲೆ ಪ್ರದಕ್ಷಿಣೆ ಸೇವೆಯೂ ಆಗುತ್ತದೆ. ವೇಸರ ಮಾದರಿಯ ವಿಮಾನವನ್ನು ಹೊಂದಿರುವ ಗರ್ಭಗೃಹಕ್ಕೆ ಸಿಂಹ ಪ್ರಣಾಳವಿದ್ದು, ಅಧಿಷ್ಠಾನವು ಆಕರ್ಷಕವಾಗಿದೆ. ಅಂತರಾಳದ ಮುಂದಿರುವ ೩೬ ಕಂಬಗಳನ್ನುಳ್ಳ ೨೫ ಅಂಕಣದ ವಿಶಾಲ ನವರಂಗದ ಪಶ್ಚಿಮ ದ್ವಾರದ ಇಕ್ಕೆಲಗಳಲ್ಲಿರುವ ಎರಡು ಕೊಠಡಿಗಳಲ್ಲಿ ಬಲಭಾಗದ್ದು ಬೊಕ್ಕಸವಾದರೆ, ಎಡಭಾಗದ್ದು ವಿಶ್ವಕ್ಸೇನರ ಸನ್ನಿಧಿಯಾಗಿದ್ದು, ತಿರುಮಂಗೈ ಹಾಗೂ ನಮ್ಮಾಳ್ವಾರರ ಉತ್ಸವಮೂರ್ತಿಗಳಿರುವುದು ಅಲ್ಲೇ. ನವರಂಗದಲ್ಲಿ ಉತ್ತರಮುಖನಾಗಿರುವ ಕಿರು ಗರ್ಭಗೃಹದಲ್ಲಿ ಉಭಯ–ನಾಚ್ಚಿಯರರನ್ನು (ಶ್ರೀದೇವಿ–ಭೂದೇವಿ) ಒಳಗೊಂಡ ಚೆಲುವನಾರಾಯಣನ ಉತ್ಸವಮೂರ್ತಿಯನ್ನು ಇಡಲಾಗಿದ್ದು, ಕಂಬವೊಂದರ ಮೇಲೆ ಶಾಸನಯುಕ್ತ 'ರಾಜ ಒಡೆಯರ' ಭಕ್ತ ಶಿಲ್ಪವನ್ನು ಪ್ರಾತಿನಿಧಿಕವಾಗಿ ಕೆತ್ತಲಾಗಿದೆ. ದೇವರ ಸನ್ನಿಧಿಯಲ್ಲಿರುವ ಚಿನ್ನದ ಮಂಟಪ ಹಾಗೂ ಸನ್ನಿಧಿಯ ದ್ವಾರದ ಬಂಗಾರದ ಹೊದಿಕೆಗಳು, ಶೇಟ್ಲೂರಿನ ಬಿಳಿಗಿರಿ ತಿರುಮಲಾಚಾರ್ಯರ ಸೋದರ ಶಿಂಗಾಚಾರ್ಯರ ಸೇವೆ ಎಂದು ಶಾಸನವೊಂದರಿಂದ ಗೊತ್ತಾಗುತ್ತದೆ. ನವರಂಗವನ್ನು ಪ್ರವೇಶಿಸಲು ಮೂರು ದಿಕ್ಕುಗಳಲ್ಲೂ ದ್ವಾರಗಳಿದ್ದು, ಪ್ರಧಾನದ್ವಾರಕ್ಕೆ ಮುಖಮಂಟಪವಿದ್ದು, ಮುಂದಿನ ಪಾತಾಳಾಂಕಣವು ಪ್ರಾಕಾರದ ದ್ವಾರಮಂಟಪದವರೆಗೂ ಇದೆ. ನವರಂಗದಿಂದ ಹೊರಕ್ಕಿರುವ ವಿಶಾಲವಾದ ಪ್ರಾಕಾರದ ಆಗ್ನೇಯ ಮೂಲೆಯಲ್ಲಿ ೧೮ ಅಂಕಣದ ಪಾಕಶಾಲೆಯ ಪಕ್ಕದಲ್ಲೇ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತವರ ನಾಲ್ವರು ಪತ್ನಿಯರ (ನಾಮಾಂಕಿತ) ಅಂಜಲಿಬದ್ಧ ಸ್ಥಾನಕ

ಭಕ್ತಮೂರ್ತಿಗಳಿವೆ. ಪ್ರಾಕಾರದ ನೈಋತ್ಯ ಮೂಲೆಯಲ್ಲಿ ಚಕ್ರತ್ತಾಳ್ವಾರ್ (ಸುದರ್ಶನ) ಸನ್ನಿಧಿ ಇದ್ದು ಬಲಕ್ಕೆ ೧೨ ಆಳ್ವಾರರು ಹಾಗೂ ಪರಮಪದನಾಥರ ಸನ್ನಿಧಿಗಳಿದ್ದು, ವಾಯವ್ಯ ಮೂಲೆಯಲ್ಲಿ ಯದುಗಿರಿ (ಶ್ರೀಲಕ್ಷ್ಮಿ) ಅಮ್ಮನ ಸನ್ನಿಧಿ ಇದೆ. ಗರ್ಭಗೃಹ, ಶುಕನಾಸಿ ಹಾಗೂ ಮುಖಮಂಟಪಗಳನ್ನು ಹೊಂದಿರುವ ಇದರಲ್ಲಿ ಚತುರ್ಭುಜಧಾರಿ ಪದ್ಮಾಸೀನ ಲಕ್ಷ್ಮೀದೇವಿಯ ಶಿಲ್ಪವಿದ್ದು, ಬಾಗಿಲಲ್ಲಿ ದ್ವಾರಪಾಲಕಿಯರಿದ್ದಾರೆ. ಯದುಗಿರಿ ಅಮ್ಮನವರ ಗುಡಿ ಮುಂದಿರುವ ರಂಗಮಂಟಪವನ್ನು ನಾಗಮಂಗಲದ ಪ್ರಭು, ತಿಮ್ಮಣ್ಣ ದಂಡನಾಯಕನ ಮಡದಿಯಾದ ರಂಗಾಂಬಿಕೆಯು ಕ್ರಿ.ಶ.೧೪೫೮ರಲ್ಲಿ ನಿರ್ಮಿಸಿದಳೆಂದು ಹೇಳುವ ಶಾಸನವಿಲ್ಲಿದ್ದು, ಅಲ್ಲಿಯ ಕಂಬಗಳ ಮೇಲೆ ರಾಮಾಯಣ, ಮಹಾಭಾರತ, ಭಾಗವತ ಸಂಬಂಧಿ ಕಥಾವಳಿ ದೃಶ್ಯಗಳನ್ನು ಕಿರು ಶಾಸನಗಳೊಂದಿಗೆ ಬಿಡಿಸಲಾಗಿದ್ದು, ಉಲ್ಲೇಖಾರ್ಹವಾಗಿವೆ. ಗುಡಿಯ ಪೂರ್ವಕ್ಕೆ ಇರುವ ಗಜೇಂದ್ರ, ವರದರಾಜ, ಕೂರತ್ತಾಳ್ವಾರ ಹಾಗೂ ರಾಮಾನುಜಾಚಾರ್ಯರ ಪ್ರತ್ಯೇಕ ಸನ್ನಿಧಿಗಳಲ್ಲಿ, ಗರ್ಭಗೃಹ, ಮುಖಮಂಟಪಗಳಷ್ಟೇ ಇರುವ ರಾಮಾನುಜರ ಗುಡಿಯ ಹಿತ್ತಾಳೆ ಬಾಗಿಲವಾಡವನ್ನು ಅಳಹಿಯ ಶಿಂಗರಾಚಾರ್ಯರೂ ಹಾಗೂ ಹಾಸುಗಲ್ಲ ಸೇವೆಯನ್ನು ತಿಮ್ಮರಸಯ್ಯ ಮಾಡಿಸಿದ ಅಂಶವನ್ನು ಅಲ್ಲೇ ಇರುವ ಶಾಸನಗಳು ದಾಖಲಿಸಿವೆ. ಇಲ್ಲಿರುವ ರಾಮಾನುಜರ ಪದ್ಮಾಸೀನ ದ್ವಿಬಾಹು ಮೂರ್ತಿಯನ್ನು ಆಚಾರ್ಯ ರಾಮಾನುಜರೇ ಸ್ವತಃ ರೂಪಿಸಿದ ಪ್ರತಿಕೃತಿಯೆಂಬ ಅಭಿಪ್ರಾಯವಿದ್ದು, ಮೂರ್ತಿಯ ಬದಿಯಲ್ಲೇ ಸನ್ಯಾಸ ಸೂಚಿ ತ್ರಿದಂಡವೂ ಇದೆ. ಅಲ್ಲದೆ ತಿರುಕಂಚಿನಂಬಿ, ನಮ್ಮಾಳ್ವಾರ, ಆಂಡಾಳ್, ಶೂಡಿಕೊಡುತ್ತ ನಾಚ್ಚಿಯಾರ್, ವೇದಾಂತ ದೇಶಿಕ ಮಣವಾಳಮಾಮುನಿ ಮುಂತಾದ ಆಳ್ವಾರರ ಶಿಲ್ಪಗಳೂ ಇಲ್ಲಿವೆ. ಬದಿಯ ಯಾಗಶಾಲೆಯ ಪಕ್ಕದಲ್ಲೇ ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ.೧೮೪೯ರಲ್ಲಿ ಪ್ರತಿಷ್ಠಾಪಿಸಿದ ಪಿಳ್ಳೈಲೋಕಾಚಾರ್ಯರ ಸನ್ನಿಧಿ ಇದೆ. ಪ್ರಾಕಾರದ ಆಗ್ನೇಯ ಮೂಲೆಯಲ್ಲಿರುವ ಪಾಕಶಾಲೆಯಿಂದ ನೈಋತ್ಯ ಮೂಲೆಯ ಚಕ್ರತ್ತಾಳ್ವಾರ ಸನ್ನಿಧಿ ಹಾಗೂ ಯದುಗಿರಿ ಅಮ್ಮನ ಸನ್ನಿಧಿವರೆಗಿನ ಮಂಟಪವನ್ನು ವಿಜಯನಗರದ ಪ್ರತಿನಿಧಿ, ನಾಗಮಂಗಲದ ಮಹಾಪ್ರಭು ತಿಮ್ಮಣ್ಣದಂಡನಾಯಕನು ಕ್ರಿ.ಶ.೧೪೫೮ರಲ್ಲಿ ನಿರ್ಮಿಸಿದನೆಂದು ಶಾಸನದಿಂದ ಗೊತ್ತಾಗುತ್ತದೆ. ದೇವಾಲಯದ ಪ್ರಾಕಾರದ ಮಹಾದ್ವಾರಕ್ಕೆ ಆಕರ್ಷಕವಾದ ಗೋಪುರವಿದ್ದು, ದ್ವಾರಮಂಟಪದ ಇಕ್ಕೆಲಗಳಲ್ಲಿರುವ ಒಂದೊಂಕಣದ ಮೊಗಸಾಲೆ ಮಂಟಪ ಹಾಗೂ ದೇವಾಲಯದ ಸುತ್ತಲೂ ಇರುವ ಒಂದಂಕಣದ ಕೈಸಾಲೆ ಮಂಟಪಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ್ದಾಗಿದ್ದು, ವೈರಮುಡಿ ಉತ್ಸವಕ್ಕೆ ಬರುವ ಭಕ್ತರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡಲು ನೆರವಾಗುತ್ತವೆ.

**ಚೆಲುವ ನಾರಾಯಣನ ಉತ್ಸವಗಳು** : ಪಾಂಚರಾತ್ರಾಗಮ ಪ್ರಕಾರ ಇಲ್ಲಿ ನಿತ್ಯಪೂಜೆ, ವಿಶೇಷಪೂಜೆ, ಉತ್ಸವಾದಿಗಳು ನಡೆಯುತ್ತಿದ್ದು, ಆ ಸಂದರ್ಭದಲ್ಲಿ ನಡೆಯುವ ದಿವ್ಯಪ್ರಬಂಧ ಪಠಣ (ದ್ರಾವಿಡ ವೇದ) ಈ ಕ್ಷೇತ್ರದ ವೈಶಿಷ್ಟ್ಯವಾಗಿದೆ. ಇಲ್ಲಿಯ ಉತ್ಸವಗಳಲ್ಲಿ **ವೈರಮುಡಿ ಬ್ರಹ್ಮೋತ್ಸವ** ಪ್ರಧಾನವಾಗಿದ್ದು, ಫಾಲ್ಗುಣ ಮಾಸದಲ್ಲಿ ಹತ್ತು ದಿನ ನಡೆಯುವ ಇದು ಅಂಕುರಾರ್ಪಣ, ವಾಹನೋತ್ಸವ (ಶೇಷ, ಅಶ್ವ, ಗರುಡ, ಹಂಸ ಇತ್ಯಾದಿ), ರಥೋತ್ಸವ, ತೆಪ್ಪೋತ್ಸವ ಹಾಗೂ ಅವಭೃತೋತ್ಸವಗಳನ್ನು ಒಳಗೊಂಡಿದ್ದು, ನಾಲ್ಕನೆಯ ದಿನ ಜರುಗುವ ವೈರಮುಡಿ ಉತ್ಸವದಲ್ಲಿ ರತ್ನ, ವಜ್ರ, ವೈಢೂರ್ಯಗಳಿಂದ ಕೂಡಿದ, ಗರುಡನೇ ತಂದದ್ದೆಂದು ಹೇಳಲಾಗುವ ಬಹಳ ಪುರಾತನವಾದ ವೈರಮುಡಿ ಕಿರೀಟವನ್ನು ಶ್ರೀದೇವಿ-ಭೂದೇವಿಯರನ್ನೊಳಗೊಂಡ ಚಲುವನಾರಾಯಣನ ಸುಂದರ ಉತ್ಸವಮೂರ್ತಿಗೆ ತೊಡಿಸಿ, ರಾತ್ರಿ ೧೦ ಗಂಟೆಯಿಂದ ಬೆಳಗಿನ ಜಾವದವರೆಗೂ ಗುಡಿಯ ಸುತ್ತ ಗರುಡ ವಾಹನದಲ್ಲಿ ಮೆರೆಸಿದ ನಂತರ ವೈರಮುಡಿಯನ್ನು ತೆಗೆದು, ರಾಜ ಒಡೆಯರು ಚೆಲುವ ನಾರಾಯಣನಿಗೆ ಭಕ್ತಿಯಿಂದ ಸಲ್ಲಿಸಿರುವ ರಾಜಮುಡಿಯನ್ನು ಧರಿಸಿ, ಉತ್ಸವಮೂರ್ತಿಯನ್ನು ಗುಡಿಯೊಳಗೆ ಕೊಂಡೊಯ್ಯುತ್ತಾರೆ. ಪ್ರಹ್ಲಾದ ಪರಿಪಾಲನಾ ಹಾಗೂ ಗಜೇಂದ್ರಮೋಕ್ಷ ಉತ್ಸವಗಳು ನಂತರದ ದಿನಗಳಲ್ಲಿ ಜರುಗುತ್ತವೆ. ರಥೋತ್ಸವ, ತೆಪ್ಪೋತ್ಸವಗಳಾದ ಮೇಲೆ ಅವಭೃತೋತ್ಸವ

(ಮುಕ್ತಾಯ)ದ ಮಾರನೆಯ ದಿನ ಸಂಜೆ ನಡೆಯುವ ಮಹಾಭಿಷೇಕ ಸಂದರ್ಭದಲ್ಲಿ ಉಭಯ ನಾಚ್ಚಿಯರನ್ನು ಒಳಗೊಂಡ ಚೆಲುವನಾರಾಯಣನ ಉತ್ಸವಮೂರ್ತಿಯು ಮೂಲ ಗರ್ಭಗೃಹವನ್ನು ಪ್ರವೇಶಿಸಿ, ಮೂಲಮೂರ್ತಿಯೊಂದಿಗೆ ಕಂಗೊಳಿಸುವ ಅಪೂರ್ವ ಸಂದರ್ಭ ವಿಶಿಷ್ಟವಾಗಿರುತ್ತದೆ. ಇದೇ ರೀತಿ ಒಂಬತ್ತು ದಿನ ಜರುಗುವ ಅನ್ನಕೋಟಿ ಉತ್ಸವ, ರಾಜಮುಡಿ ಹಾಗೂ ಕೃಷ್ಣರಾಜಮುಡಿ ಉತ್ಸವ, ವಸಂತೋತ್ಸವ, ಜೂನ್ ತಿಂಗಳಲ್ಲಿ ನಡೆಯುವ ಏಳು ದಿನದ ಪಲ್ಲವೋತ್ಸವ, ತಿರುವಾಡಿಪೂರಂ (ಅಂಡಾಳ್ ಜನ್ಮೋತ್ಸವ), ಶಿಖ್ಯೋತ್ಸವ, ಪವಿತ್ರೋತ್ಸವ, ನವರಾತ್ರಿ ಕಾರ್ತಿಕ ದೀಪೋತ್ಸವ, ಮಾರ್ಗಶೀರ್ಷರೋತ್ಸವ, ರಥಸಪ್ತಮಿ, ಮೋಕ್ಷೋತ್ಸವ, ಅಂಗಮಣಿ ಉತ್ಸವ, ಅಳ್ಳಂತಳ್ಳಂಚೆರುಪು, ನಮ್ಮಾಳ್ವಾರ್ ಪುನರ್ವಸು ಉತ್ಸವ ಹಾಗೂ ತೆಪ್ಪೋತ್ಸವಗಳು ಉಲ್ಲೇಖಾರ್ಹ. ಅಲ್ಲದೆ ರಾಮಾನುಜಾಚಾರ್ಯರ ತಿರುನಾಳಿನಂದು, ಅಚಾರ್ಯರಿಗೆಂದೇ ನಡೆಯುವ ಬ್ರಹ್ಮೋತ್ಸವವು ಒಂಬತ್ತು ದಿನಗಳ ಕಾಲ ಮೇಲುಕೋಟೆಯಲ್ಲಿ ಮಾತ್ರ ನಡೆಯುವ ವಿಶಿಷ್ಟ ಆಚರಣೆಯಾಗಿದೆ. ಮಿಗಿಲಾಗಿ ಇಲ್ಲಿ ವರ್ಷದುದ್ದಕ್ಕೂ ಒಂದಲ್ಲ ಒಂದು ಉತ್ಸವ, ಹಬ್ಬಗಳು ನಡೆದಿರುತ್ತವೆ.

ಬೆಟ್ಟದ ಮೇಲಿರುವ ಯೋಗಾನರಸಿಂಹ ದೇವಾಲಯ ಹಾಗೂ ಬುಡದಲ್ಲಿರುವ ಕಲ್ಯಾಣಿಗಳು ರಾಮಾನುಜರಷ್ಟೇ ಪ್ರಾಚೀನವೆಂಬ ಅಭಿಪ್ರಾಯವಿದೆ. ನರಸಿಂಹನ ದೇವಾಲಯವು ವಿಶಿಷ್ಟವಾಗಿದ್ದು, ಅದರ ಗೋಪುರ, ದ್ವಾರಪಾಲಕರು ಹಾಗೂ ನೆಲಹಾಸನ್ನು ರಾಮಾನುಜರೇ ಮಾಡಿಸಿದರೆಂದು ಯತಿರಾಜ ಮಠದಲ್ಲಿರುವ ಹಸ್ತಪ್ರತಿ ದಾಖಲೆ ತಿಳಿಸುತ್ತದೆ. ಆದರೆ ರಾಜ ಒಡೆಯರು ಅದರ ಗೋಪುರ ಕಟ್ಟಿಸಿದರೆಂದು ಸಾಹಿತ್ಯ ಮೂಲಗಳು ದಾಖಲಿಸಿವೆ. ಗರ್ಭಗೃಹದಲ್ಲಿರುವ ಭವ್ಯವಾದ ಯೋಗಾನರಸಿಂಹನ ಮೂರ್ತಿಯ ಪದತಳಸ್ಪರ್ಶಕ್ಕೆ ನೆಲಗವಿಯಲ್ಲಿ ನುಸುಳಬೇಕಾಗುತ್ತದೆ. ಈ ದೇವರಿಗೆ ಕ್ರಿ.ಶ. ೧೭೮೬ರಲ್ಲಿ ಟೀಪೂ ನಗಾರಿ ಹಾಗೂ ಆನೆಗಳನ್ನೂ, ಮತ್ತು ಕ್ರಿ.ಶ.೧೮೪೨ರಲ್ಲಿ ಮುಮ್ಮಡಿ ಕೃಷ್ಣರಾಜರ ಮಡದಿ ಲಿಂಗರಾಜಮ್ಮಣ್ಣಿಯು ಬಂಗಾರದ ಕಿರೀಟವನ್ನು ನೀಡಿದ್ದನ್ನೂ ಶಾಸನಗಳು ದಾಖಲಿಸಿವೆ.

**ಇತರ ದೇವಾಲಯಗಳು :** ಇಲ್ಲಿ ಆಂಜನೇಯನ ಏಳು, ಗರುಡನ ನಾಲ್ಕು, ಕಲ್ಯಾಣಿಯ ಸುತ್ತ ಇರುವ ಪಂಚಭಾಗವತರು, ಅಮ್ಮನವರು, ಅಚ್ಯುತರಾಮಾನುಜದೇವರು, ಕರಣಿಕ ನಾರಾಯಣ, ಲಕ್ಷ್ಮೀನರಸಿಂಹ, ಮಹಾಶೇಷ, ಪೆರಿಯಾಳ್ವಾರ್, ಗೋಪಾಲಕೃಷ್ಣ, ಗಜೇಂದ್ರ, ಬಿಂದುಮಾಧವ ಗುಡಿಗಳ ಜೊತೆಗೆ, ಹೊಸ ವೆಂಕಟರಮಣ, ಚಿಕ್ಕಯ್ಯನ ಕೊಳದ ವೆಂಕಟರಮಣ, ಪೇಟೆಕೃಷ್ಣ, ವಿನಾಯಕ, ಬದರಿ ನಾರಾಯಣ ಮುಂತಾದ ದೇವಾಲಯಗಳೂ ಇವೆ.

**ಮಠಗಳು :** ಇಲ್ಲಿರುವ ಮಠಗಳಲ್ಲಿ ರಾಮಾನುಜಾಚಾರ್ಯರು ಸ್ಥಾಪಿಸಿದ ಯತಿರಾಜ ಮಠ ಪ್ರಾಚೀನದ್ದಾಗಿದ್ದು, ಉಳಿದವು ವಿವಿಧ ಶಾಖಾ ಮಠಗಳಾಗಿದ್ದು, ಅವುಗಳ ಮೂಲಕೇಂದ್ರ ಬೇರೆಡೆಯಲ್ಲಿವೆ. ಇಲ್ಲಿರುವ ಅಹೋಬಲ ಮೂಲ ಮಠವು ಅದಿವಣ್ ಶಠಕೋಪ (ಕ್ರಿ.ಶ. ೧೪೩೭–೧೫೧೬) ಜೀಯರಿಂದ ಸ್ಥಾಪಿಸಲ್ಪಟ್ಟಿದ್ದು, ಈಗಲೂ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿಯ ಪರಕಾಲಮಠವೂ ಶಾಖಾ ಮಠವಾಗಿದ್ದು, ಕಲ್ಯಾಣಿಯ ಬಳಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ನಿರ್ಮಿಸಲ್ಪಟ್ಟಿದೆ. ಅಲ್ಲದೇ ವಾಮನಮಲೈಮಠ, ತಿರುಪತಿ ಜೀಯರ ಮಠ, ಅಳಹಿಯ ಮಣವಾಳ ಜೀಯರಮಠ ಹಾಗೂ ಭೈರಾಗಿ ಮಠಗಳೂ ಇಲ್ಲಿವೆ.

**ಕೊಳ ಹಾಗೂ ಮಂಟಪಗಳು :** ದೇವಾಲಯ ಪಟ್ಟಣವಾದ ಮೇಲುಕೋಟೆಯಲ್ಲಿ ಧರ್ಮಸೇವಾರ್ಥವಾಗಿ ಕಟ್ಟಲ್ಪಟ್ಟಿರುವ ಕೊಳ ಹಾಗೂ ಮಂಟಪಗಳು ಸಾಕಷ್ಟು ಸಂಖ್ಯೆಯಲ್ಲಿವೆ. ೧೯೩೦ರಲ್ಲಿ ನೋಂದಣಿಸಿರುವಂತೆ ಇಲ್ಲಿ ವಿವಿಧ ಹೆಸರಿನ ೨೯ ಕೊಳ ಹಾಗೂ ೭೬ ಮಂಟಪಗಳಿದ್ದವೆಂದು ತಿಳಿದುಬರುತ್ತದೆ. ಬೇರೆ ಬೇರೆ ಕಾಲದಲ್ಲಿ ಧಾರ್ಮಿಕ ಮನೋಭಾವದ ದಾನಿಗಳಿಂದ ವಿವಿಧೋದ್ದೇಶಗಳಿಗಾಗಿ ನಿರ್ಮಿಸಲ್ಪಟ್ಟಿರುವ ಇವು ಮೇಲುಕೋಟೆಯ ಮಹತ್ವವನ್ನು ಸೂಚಿಸುತ್ತವೆ. ದಳವಾಯಿ ಕೆರೆ, ಯೋಗಾನರಸಿಂಹನ ಬೆಟ್ಟದ ಬುಡದಲ್ಲಿರುವ ವಿಶಾಲವಾದ ಕಲ್ಯಾಣಿ,

ಚೆಲುವನಾರಾಯಣದ ತೆಪ್ಪೋತ್ಸವಕ್ಕೆಂದೇ ನಿರ್ಮಿಸಿರುವ ತೆಪ್ಪಕೊಳ, ದತ್ತಾತ್ರೇಯರು ಶಿಷ್ಯರೊಂದಿಗೆ ವೇದ ಬೋಧಿಸಿದ ವೇದ ಪುಷ್ಕರಣಿ, ಧನುಷ್ಕೋಟಿ, ಯಾದವತೀರ್ಥ, ನಾರಾಯಣತೀರ್ಥ, ದರ್ಭತೀರ್ಥ, ಮೈತ್ರೇಯ ತೀರ್ಥ ಹಾಗೂ ಕೊಳ, ಪದ್ಮತೀರ್ಥ, ಪಲಾಶತೀರ್ಥ, ವೈಕುಂಠ ಗಂಗೆ, ಚಕ್ರಕಟ್ಟೆ, ಬ್ರಹ್ಮಚಾರಿ ಕೊಳ, ಚಲುವೆ ಅರಸಿನ ಕೊಳ (ಎರಡು), ಪುಟ್ಟನರಸಿಕೊಳ, ದೊಡ್ಡಯ್ಯನ ಕೊಳ, ಚಿಕ್ಕಯ್ಯನ ಕೊಳ, ಬಸವರಾಜ ಕೊಳ, ತಮ್ಮಣ್ಣಿ ಅಲಸಿಂಗ್ರ ಕೊಳ, ಸಿಂಗ್ರೈಯ್ಯಂಗಾರ ಕೊಳ, ಸಂಪಿಗೆ ಕೊಳ, ಉಳ್ಳಿ ಹಾಗೂ ಬಾವಿಗಳೇ ಅಲ್ಲಿಯ ೨೯ ಕೊಳಗಳಾಗಿವೆ. ಇವುಗಳಲ್ಲಿ ವೇದ, ದರ್ಭ, ಪದ್ಮ, ಯಾದವ, ಪಲಾಶ, ಪರಾಶರ, ನಾರಾಯಣ ಹಾಗೂ ವೈಕುಂಠ ತೀರ್ಥಗಳನ್ನು ಅಷ್ಟತೀರ್ಥೋದಕಗಳೆಂದು ಕರೆಯಲಾಗುತ್ತದೆ.

ಇಲ್ಲಿರುವ ೭೬ ಮಂಟಪಗಳಲ್ಲಿ ವೇದ ಪುಷ್ಕರಣಿ, ಧನುಷ್ಕೋಟಿ, ದರ್ಭ, ಪದ್ಮ, ಯಾದವ, ಪಲಾಶ, ನಾರಾಯಣ ಹಾಗೂ ವೈಕುಂಠ ತೀರ್ಥಗಳ ಬಳಿ ಇರುವ ಮಂಟಪ; ಕಲ್ಯಾಣಿ ಸುತ್ತ ಇರುವ ಕೈಸಾಲೆ ಮಂಟಪ, ಭುವನೇಶ್ವರಿ ಹಾಗೂ ಗಜೇಂದ್ರಮೋಕ್ಷ ಮಂಟಪ ; ವಿವಿಧ ತೀರ್ಥ, ಗುಡಿ, ಬೀದಿ ಹಾಗೂ ಕೊಳಗಳ ಬಳಿ ಇರುವ ಮಂಟಪ ; ರಥಗಳ ಮಂಟಪ, ಹೆಬ್ಬಾಗಿಲ ಮಂಟಪ, ತುಲಾಭಾರ ಮಂಟಪ (೨), ನಾಮ ತೀರ್ಥ ಮಂಟಪ, ಸಹಸ್ರ ಗದಾಮಂಟಪ, ತೆಪ್ಪದಕೊಳದ ಕೈಸಾಲೆ ಮಂಟಪ, ವಸಂತೋದ್ಯಾನ ಮಂಟಪ, ಅಂಗಮಣಿ ಮಂಟಪ, ನಯನಕ್ಷೇತ್ರ ಮಂಟಪ, ಮಧ್ಯಮಂಟಪ, ಧಾರೆಮಂಟಪ, ಮುಂತಾದವನ್ನಿಲ್ಲಿ ಉದಾಹರಿಸಬಹುದಾಗಿದೆ. ಈ ಮಂಟಪಗಳಲ್ಲಿ ಹೆಚ್ಚಿನವು ವಿಜಯನಗರ ಹಾಗೂ ಮೈಸೂರು ಅರಸರ ಕಾಲದ ರಚನೆಗಳಾಗಿದ್ದು, ಮೇಲುಕೋಟೆಯ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡು ತಮ್ಮದೇ ಆದ ವೈಶಿಷ್ಟ್ಯವನ್ನು ಪಡೆದಿವೆ.

ಮೇಲುಕೋಟೆಯು ರಾಮಾನುಜರ ಕಾಲದಿಂದಲೂ ವೈದಿಕ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನು ನೀಡಿದೆ. ಅಚಾರ್ಯ ರಾಮಾನುಜರೇ ಹಲವಾರು ಗ್ರಂಥಗಳ ಕರ್ತೃಗಳಾಗಿದ್ದು, ಮೇಲುಕೋಟೆಯಿಂದ ಶ್ರೀರಂಗಕ್ಕೆ ತೆರಳುವ ಮೊದಲು ತಮ್ಮ ಪ್ರತಿಕೃತಿಯೊಂದನ್ನು ನಿರ್ಮಿಸಿ, ಇಲ್ಲೇ ಪ್ರತಿಷ್ಠಾಪಿಸಿ, ತಮ್ಮ ಐವತ್ತಿಬ್ಬರು (ಐವತ್ತೆರಡು) ಶಿಷ್ಯರಿಗೆ ದೇವಾಲಯ, ರಾಮಾನುಜ (ಯತಿರಾಜ) ಮಠ ಹಾಗೂ ಏಳು ವಿಭಾಗಗಳ ಆಡಳಿತ ವ್ಯವಸ್ಥೆಯನ್ನು ವಹಿಸಿ, ಅದಕ್ಕೆ ಪೂರಕವಾಗಿ ರೂಪಿಸಿದ ನೇಮಗಳನ್ನು ಒಳಗೊಂಡ 'ಉಡೈಯವರ್ ನಿಯಮನಪ್ಪಡಿ' ಯನ್ನು ಕ್ರಿ.ಶ.೧೧೧೭ರಲ್ಲಿ ನೀಡಿದ್ದರೆಂದು ತಿಳಿದುಬರುತ್ತದೆ. ಇಲ್ಲಿ ಪಠಿಸಲ್ಪಡುವ ದಿವ್ಯಪ್ರಬಂಧ (ದ್ರಾವಿಡ ವೇದ) ವು ಆಳ್ವಾರುಗಳು ರಚಿಸಿದ 'ನಾಲಾಯಿರ' ಶ್ಲೋಕಗಳಾಗಿದ್ದು, ಅದರಲ್ಲಿ ಸಹಸ್ರ ಶ್ಲೋಕಗಳಿರುವ ತಿರುವಾಯ್ಮೊಳಿಯೂ ಸೇರಿದ್ದು, ಅವುಗಳ ಪಠಣ ಮೇಲುಕೋಟೆಯ ನಾರಾಯಣನ ವಿವಿಧ ಉತ್ಸವ ಸಂದರ್ಭದಲ್ಲಿ ನಿರಂತರವಾಗಿ ನಡೆಯುತ್ತದೆ. ಮೈಸೂರು ಅರಸ ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ.೧೮೫೩ರಲ್ಲಿ ಆರಂಭಿಸಿದ ಸಂಸ್ಕೃತ ಪಾಠಶಾಲೆ, ದೇಶದಲ್ಲೇ ಎರಡನೇಯದಾಗಿದ್ದು, ಕಾಶಿಯ ಸಂಸ್ಕೃತ ಕಾಲೇಜು ಅಂತಹ ಇನ್ನೊಂದಾಗಿತ್ತು.

ಊರ ದಕ್ಷಿಣಕ್ಕೆ ಗೋಪಾಲರಾಯನ ಬಾಗಿಲಿನಿಂದಾಚೆಗೆ ಹೊರವಲಯದಲ್ಲಿರುವ ಸಂಸ್ಕೃತ ಸಂಶೋಧನಾ ಅಕಾಡೆಮಿಯು, ವಿಶಾಲವಾದ ಪ್ರದೇಶದಲ್ಲಿ ವೈವಿಧ್ಯಮಯ ಸಸ್ಯೋದ್ಯಾನದ ನಡುವೆ ಆಧುನಿಕ ಸೌಕರ್ಯಗಳಿಂದ ಕೂಡಿದ್ದು, ಸಂಸ್ಕೃತ ಸಾಹಿತ್ಯದ ಅಧ್ಯಯನ, ಹಸ್ತಪ್ರತಿಗಳ ಸಂಗ್ರಹ, ಅಧ್ಯಯನ ಹಾಗೂ ಪ್ರಕಟಣೆಗಳಲ್ಲಿ ತೊಡಗಿದ್ದು, ೨೫೦೦೦ ಗ್ರಂಥಗಳಿರುವ ಉತ್ತಮ ಗ್ರಂಥಾಲಯ ಹಾಗೂ ವೈಜ್ಞಾನಿಕ ವಿಧಾನವನ್ನು ಅನುಸರಿಸಿ ಸಂರಕ್ಷಿಸಿರುವ ೧೦೫೦೦ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಾಲಯವನ್ನೂ ಹೊಂದಿದೆ. ಈ ಸಂಸ್ಥೆಯು ಭೂತ-ವರ್ತಮಾನಗಳಿಗೆ ಸೇತುವೆಯನ್ನು ನಿರ್ಮಿಸಿ, ಭವಿಷ್ಯಕ್ಕೆ ನಾಂದಿ ಹಾಡಲು ವಿದ್ಯುಕ್ತವಾಗಿದ್ದು, ಎಂ.ಎ.ಲಕ್ಷ್ಮೀತಾತಾಚಾರ್ಯ ಅಕಾಡೆಮಿಯ

ಸಂಸ್ಥಾಪಕ ನಿರ್ದೇಶಕರಾಗಿದ್ದಾರೆ. ಅಕಾಡೆಮಿಯ ಆವರಣದಲ್ಲಿರುವ ಮತ್ಸ್ಯೋದ್ಯಾನ ಕೊಳ, ವನ್ಯಜೀವಿಧಾಮ, ವೈದ್ಯಕೀಯ ಸಸ್ಯೋದ್ಯಾನ, ಹಾಗೂ ಸಾಂಪ್ರದಾಯಿಕ ಕೃಷಿ ಪರಿಸರಗಳು ಉಲ್ಲೇಖಾರ್ಹವಾಗಿವೆ. ಪ್ರವಾಸಿಗರಿಗೆಂದು ನಿರೀಕ್ಷಣಾ ಮಂದಿರ ಹಾಗೂ ಪ್ರವಾಸಿ ಬಂಗಲೆಗಳಿವೆ. ಮೇಲುಕೋಟೆಯ ಮೂಲ ಸ್ವರೂಪಕ್ಕೆ ಧಕ್ಕೆ ಬಾರದ ಹಾಗೆ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ.

**ಮೋದೂರು (೧೬೧೧)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೦ ಕಿ.ಮೀ. ಆಗ್ನೇಯಕ್ಕಿದ್ದು, ರಾಮಲಿಂಗೇಶ್ವರ ಗುಡಿಯ ಆವರಣದಲ್ಲಿದ್ದ, ಸುಮಾರು ೧೪ನೆಯ ಶತಮಾನದ ಶಾಸನವೊಂದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಆಕಳು, ಕರುವಿನ ಕೆತ್ತನೆಯೇ ಪ್ರಧಾನವಾಗಿರುವ ಈ ಕಲ್ಲು ಎಣ್ಣೆಯ ಜಿಡ್ಡಿನಿಂದ ಮುಚ್ಚಿಹೋಗಿದ್ದರೂ, ದಾನ ಶಾಸನದಂತೆ ತೋರುತ್ತದೆ. ಪೂರ್ವಾಭಿಮುಖವಾಗಿರುವ ಇಲ್ಲಿಯ ರಾಮಲಿಂಗೇಶ್ವರ ಗುಡಿಯು ಹೊಯ್ಸಳ ದೇವಾಲಯವೆಂಬ ಪ್ರತೀತಿ ಇದೆಯಾದರೂ, ವಿಜಯನಗರ ಕಾಲದ ರಚನೆಯಾಗಿದೆ. ಇದರ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳೆಲ್ಲವೂ ವಿಶಾಲವಾಗಿದ್ದು, ಗರ್ಭಗೃಹದಲ್ಲಿರುವ ಬೃಹತ್ತಾದ ಶಿವಲಿಂಗದ ಸೋಮಸೂತ್ರವು ಬನವಾಸಿಯ ಶಿವಲಿಂಗದ ಸೋಮಸೂತ್ರವನ್ನು ಹೋಲುವುದರ ಜೊತೆಗೆ ಈ ಊರಿನ ಪ್ರಾಚೀನತೆಯನ್ನು ಮತ್ತಷ್ಟು ಹಿಂದಕ್ಕೆ ದೂಡಲು ಪ್ರೇರೇಪಿಸುತ್ತದೆ. ನವರಂಗದಲ್ಲಿ ಗಣಪತಿ, ನಂದಿ ಶಿಲ್ಪಗಳಿದ್ದು, ಆಗ್ನೇಯ ಮೂಲೆಯ 'ಸರ್ಪದ ಮನೆ' ಕೋಣೆಯಲ್ಲಿ ಸರ್ಪವಿದೆ ಎನ್ನುವ ವಾಡಿಕೆಯಿದೆ. ಗುಡಿಯ ಭಿತ್ತಿ ನಿರಾಡಂಬರವಾಗಿದ್ದು, ಆಕರ್ಷಕ ಗಾರೆ ಶಿಖರ ಗರ್ಭಗೃಹವನ್ನು ಅಲಂಕರಿಸಿದೆ. ಎಡಭಾಗದಲ್ಲಿ ಪಾರ್ವತಿ ದೇವಾಲಯ, ಪ್ರಾಕಾರದಲ್ಲಿ ಪಾಕಶಾಲೆ, ಯಾಗಶಾಲೆ, ಆಗ್ನೇಯ ಮೂಲೆಯಲ್ಲಿ ಕ್ಷೇತ್ರಪಾಲ ಭೈರವ ಹಾಗೂ ನೈಋತ್ಯ ಭಾಗದಲ್ಲಿ ಚಂಡಿಕೇಶ್ವರರ ಕಿರುಗುಡಿಗಳಿದ್ದು, ಹೊರಗೆ ಸುಮಾರು ೩೬ ಅಡಿ ಎತ್ತರದ ನಂದಿ ಕಂಬವಿದೆ. ಗುಡಿಯ ಬಲಭಾಗದಲ್ಲಿ ಕಲ್ಯಾಣವಿದ್ದು, ವಿವಿಧ ಪ್ರಮಾಣದ ಸುಮಾರು ೩೦ ವೀರಗಲ್ಲು ಹಾಗೂ ನಾಲ್ಕು ಮಾಸ್ತಿಕಲ್ಲುಗಳೂ ಇವೆ. ಅನತಿ ದೂರದಲ್ಲಿರುವ ಸುಮಾರು ೩೨ ಗುಂಟೆಯ ಪ್ರದೇಶವನ್ನು 'ವಿಭೂತಿ ಪಾಳು' ಎಂದು ಕರೆಯಲಾಗುತ್ತಿದ್ದು, ಅಲ್ಲಿ ಬೂದಿಮಿಶ್ರಿತ ಬಿಳಿಮಣ್ಣು ಯಥೇಚ್ಛವಾಗಿ ಲಭಿಸುತ್ತಿದ್ದು, ಹಿಂದೆ ಇಲ್ಲಿಂದ ಸರಬರಾಜಾಗುತ್ತಿದ್ದ ವಿಭೂತಿ ಗಟ್ಟಿಯು 'ಕ್ಯಾತನಹಳ್ಳಿ ಗಟ್ಟಿ' ಎಂದೇ ಹೆಸರು ಪಡೆದಿತ್ತೆಂದು ತಿಳಿದುಬರುತ್ತದೆ. ಉಳಿದಂತೆ ಊರಲ್ಲಿ ಮಾರಮ್ಮ, ಗಣಪತಿ, ಮುಂತಾದ ನೂತನ ಗುಡಿಗಳಿವೆ.

**ರಂಗನತಿಟ್ಟು** : ತಾಲೂಕು ಕೇಂದ್ರ ಶ್ರೀರಂಗಪಟ್ಟಣದಿಂದ ಮೂರು ಕಿ.ಮೀ. ಪಶ್ಚಿಮಕ್ಕೆ, ಪಶ್ಚಿಮವಾಹಿನಿಗೆ ಅನತಿ ದೂರದಲ್ಲಿ ಸುಮಾರು ೦.೬೭ ಚದುರ ಕಿ.ಮೀ. ವಿಸ್ತೀರ್ಣದ ನಾಲ್ಕಾರು ಕಿರುದ್ವೀಪಗಳನ್ನು ತನ್ನೊಡಲಲ್ಲಿ ನಿರ್ಮಿಸಿರುವ ಕಾವೇರಿಯು, ಇಲ್ಲಿ ಕವಲೊಡೆದು ನಾಲ್ಕು ಫರ್ಲಾಂಗ್ ದೂರ ಹರಿದು ಮತ್ತೆ ಒಂದಾಗುತ್ತದೆ. ಸುಣ್ಣದ ಕಲ್ಲಿನಿಂದೊಡಗೂಡಿದ ಈ ದ್ವೀಪಕ್ಕೆ ನಿರ್ದಿಷ್ಟ ಸಮಯದಲ್ಲಿ ದೇಶ-ವಿದೇಶಗಳಿಂದ ಬಂದು ಹೋಗುವ ವಿವಿಧ ಪಕ್ಷಿಗಳಿಂದಾಗಿ ಇದೊಂದು ಪ್ರಾಕೃತಿಕ ಪಕ್ಷಿಧಾಮವಾಗಿದೆ. ಪಕ್ಷಿಪ್ರೇಮಿ ಹಾಗೂ ಪಕ್ಷಿ ಶಾಸ್ತ್ರಜ್ಞ ಸಲೀಂ ಅಲಿ ಅವರಿಂದಾಗಿ ೧೯೪೦ರ ಜೂನ್ ಒಂದರಿಂದ ಇದನ್ನು 'ರಾಷ್ಟ್ರೀಯ ಪಕ್ಷಿಧಾಮ'ವೆಂದು ಘೋಷಿಸಿ ಸಂರಕ್ಷಿಸಲಾಗುತ್ತಿದೆ. ಹಿಂದೆ ಶ್ರೀರಂಗನಾಥನು ಇಲ್ಲಿಗೆ ಸ್ನಾನ ಮಾಡಲು ಬರುತ್ತಿದ್ದುದರಿಂದ ಇದಕ್ಕೆ ರಂಗನತಿಟ್ಟು ಎಂದು ಹೆಸರು ಬಂತೆಂಬ ಐತಿಹ್ಯವಿದ್ದು, ಅವನು ಏರಿ ಬರುತ್ತಿದ್ದ ಕಂಚಿನ ತೇರು ಮಡುವಿನಲ್ಲಿ ಮುಳುಗಿದ ನಂತರ ಇಲ್ಲಿಗೆ ಬರುವುದನ್ನು ಬಿಟ್ಟರೂ, ಆ ತೇರಿನ ಗಾಲಿಯ ಗುರುತನ್ನು ಹಾಸು ಬಂಡೆಯ ಮೇಲೆ ಈಗಲೂ ನೋಡಬಹುದೆಂದು ಹೇಳಲಾಗುತ್ತದೆ. ಸ್ಥಳೀಯವಾಗಿ 'ಬೊಂಬಿನ ಮಡು' (ಬೊಂಬು - ಬಿದಿರು ಮೆಳೆಗಳಿಂದ ಕೂಡಿರುವ ದ್ವೀಪ ಇದು) ಎಂದೇ ಕರೆಯಲ್ಪಡುವ ಇಲ್ಲಿ ಕಾವೇರಿಯು ಸುಮಾರು ೪೦-೬೦ ಅಡಿ ಆಳವಾಗಿ ಹರಿದು ರೂಪಿಸಿರುವ ೬೫ ಎಕರೆಯ ಪ್ರಧಾನ ದ್ವೀಪದ ನಡುವೆ ಕಿರುದಿಬ್ಬಗಳಿದ್ದು, ಹಿಂದೆ ಮೈಸೂರು ಅರಸರು ವಿಹಾರಕ್ಕೆಂದು ಬಂದಾಗ ಈ ದ್ವೀಪದಲ್ಲಿ

ಶಿಕಾರಿ ಮಾಡುತ್ತಿದ್ದು, ಎತ್ತರದಿಂದ ನೋಡಲು ಅನುಕೂಲವಾಗುವಂತೆ ಅವರೇ ನಿರ್ಮಿಸಿರುವ ಮರದ ಅಟ್ಟವೂ ಅಲ್ಲಿದ್ದು, ಕಂಠೀರವ ನರಸರಾಜ ಒಡೆಯರು ಇಲ್ಲಿ ಒಡ್ಡೊಂದನ್ನು ನಿರ್ಮಿಸಿದ್ದರೆಂದೂ ತಿಳಿದು ಬರುತ್ತದೆ.

ಇಲ್ಲಿಯ ಮಡುವಿನಲ್ಲಿ ಮೊಸಳೆಗಳೊಂದಿಗೆ ನೀರುನಾಯಿ; ಬಳಿ, ಕೂರಲು, ಮುಚ್ಯಾಲು, ಕೆಮ್ಮೀನು, ಬಾಳೆ, ಗೂಡ್ಲೆ, ಬಂಗಿಸಿದ್ದ, ಅವಲುಕುಚ್ಚು, ಕೊರವ, ಹಾವು, ಅರ್ಜಗೆಂಡ, ಮುಂತಾದ ಜಾತಿಯ ಮೀನುಗಳೂ ಇದ್ದು, ದೊಡ್ಡ ದ್ವೀಪದಲ್ಲಿ ಗಿಡಮರಗಳು ದಟ್ಟವಾಗಿರುವ ಎಡೆಯಲ್ಲಿ ನವಿಲು, ನರಿ, ಮೊಲ, ಕಾಡುದನ, ಜಿಂಕೆ, ಮುಂತಾದ ಪ್ರಾಣಿಗಳೂ ಇವೆ.

ಪ್ರಕೃತಿ ನಿರ್ಮಿತ ಈ ದ್ವೀಪ ಸಮೂಹವು ಪಕ್ಷಿಗಳಿಗೆ ಪ್ರಾಕೃತಿಕ ರಕ್ಷಣೆ, ನೈಸರ್ಗಿಕ ಆಹಾರ ಲಭ್ಯತೆಯ ಅವಕಾಶಗಳನ್ನು ಕಲ್ಪಿಸಿದ್ದು, ಡಿಸೆಂಬರ್–ಜನವರಿಯಿಂದ ಅಕ್ಟೋಬರ್ ವರೆಗೆ ಇಲ್ಲಿಗೆ ಬಂದು ಹೋಗುವ ವಿವಿಧ ಪ್ರದೇಶದ ಪಕ್ಷಿಗಳ ಹಿಂಡು ಕಣ್ಣಿಗೆ ಮುದ ನೀಡುತ್ತದೆ. ಅದರಲ್ಲೂ ಪಕ್ಷಿಗಳು ಮರಿ ಮಾಡುವ ಜುಲೈ–ಅಕ್ಟೋಬರ್ ನಡುವಣ ಅವಧಿಯಲ್ಲಿ ಈ ಪಕ್ಷಿಧಾಮಕ್ಕೆ ಭೇಟಿ ನೀಡುವುದು ಯೋಗ್ಯವಾಗಿದ್ದು ಗಿಳಿ, ಗೊರವಂಕ, ಚಮಚಕೊಕ್ಕು, ಬುಲ್ ಬುಲ್, ಕಾಜಾಣ, ಗೀಜಗ, ಸೂರಕ್ಕಿ, ಚಂಚುಕುಟಿಗ, ಮಿಂಚಳ್ಳಿ, ಸಣ್ಣ ಮಿಂಚಳ್ಳಿ, ನೀರುಕಾಗೆ, ಬೆಳವಲ, ದೇವನಹಕ್ಕಿ, ಕಳ್ಳಿಪೀರ, ಕೌಜುಗ, ಸಣ್ಣ ಬೆಳ್ಳಕ್ಕಿ, ಕೊಳದ ಬಕ, ರಾತ್ರಿಬಕ, ಕೆಂಗಲ್ ಬಾತು, ಹಾವಕ್ಕಿ, ನಾರಾಯಣಿ, ನೀಲಿ ರೆಕ್ಕೆಯ ಜಿರಳೆ, ಬಿಳಿಕೊಕ್ಕರೆ, ಬಣ್ಣದ ಕೊಕ್ಕರೆ, ತಾಳೆಗುಬ್ಬಿ, ಚುಕ್ಕೆಮುನಿಯ, ಕಪ್ಪು ತಲೆ ಮುನಿಯ, ಬಿಳಿಕೊರಳ ಮುನಿಯ, ಉಲಿಹಕ್ಕಿ, ಪುಷ್ಪಪ್ರಿಯ ಮುಂತಾದ ವಿವಿಧ ಜಾತಿಯ, ವಿವಿಧ ವರ್ಣದ , ವಿವಿಧ ಗಾತ್ರದ ಪಕ್ಷಿಗಳಿಂದ ಧಾಮವು ತುಂಬಿ ತುಳುಕುತ್ತಿದ್ದು, ಬಹುದೂರದ ಸೈಬೀರಿಯಾ, ನೈಜೀರಿಯಾ, ಅಮೇರಿಕಾ, ಆಸ್ಟ್ರೀಯಾ, ರಷ್ಯಾ, ಆಫ್ಘಾನಿಸ್ಥಾನ, ಮುಂತಾದ ದೇಶದವುಗಳೊಂದಿಗೆ ದೇಶಿಯ ಪಕ್ಷಿಗಳೂ ಇಲ್ಲಿಗೆ ವಲಸೆ ಬಂದು ಹೋಗುತ್ತಿದ್ದು, ಅವುಗಳಿಗೆ ನಮ್ಮ ಜನಪದರು ನೀಡಿರುವ ಹೆಸರುಗಳೇ ಇವಾಗಿದ್ದು, ಈ ರಮ್ಯತಾಣವು ಪಕ್ಷಿಸಂಕುಲದ ಕಲ್ಯಾಣಧಾಮವಾಗಿ ಮನಸೂರೆಗೊಳ್ಳುತ್ತಿದೆ.

ಪಕ್ಷಿಧಾಮದ ಕಾಲುದಾರಿಯ ಇಕ್ಕೆಲಗಳಲ್ಲಿ ಅಲ್ಲಿಯ ವಿಶಿಷ್ಟ ಪಕ್ಷಿಗಳ ನಾಮಫಲಕಗಳನ್ನು ಹಾಕುವ ಮೂಲಕ ಪ್ರವಾಸಿಗರಿಗೆ ಸ್ಥಳೀಯ ಅರಿವನ್ನು ನೀಡಲು ಯತ್ನಿಸಿದ್ದು, ಪಕ್ಷಿಧಾಮದ ಸೌಂದರ್ಯವನ್ನು ಆಸ್ವಾದಿಸಲೆಂದೇ ವೀಕ್ಷಣಾ ಗೋಪುರವನ್ನು ನಿರ್ಮಿಸಲಾಗಿದ್ದು, ಅಲ್ಲಿರುವ ಹತ್ತು ದೋಣಿಗಳ ಮೂಲಕ ಪ್ರವಾಸಿಗರಿಗೆ ದೋಣಿ ವಿಹಾರದ ಸವಿಯನ್ನು ಒದಗಿಸುವ ವ್ಯವಸ್ಥೆಯನ್ನೂ ಅರಣ್ಯ ಇಲಾಖೆಯು ಮಾಡಿದೆ.

**ಲಾಳನಕೆರೆ (೧೪೦೭)** : ತಾಲೂಕು ಕೇಂದ್ರ ನಾಗಮಂಗಲದಿಂದ ೨೪ ಕಿ.ಮೀ. ವಾಯುವ್ಯಕ್ಕಿದ್ದು, ಹೊಯ್ಸಳ ಶಾಸನಗಳಲ್ಲಿ 'ನಾನಲಕೆರೆ' ಎಂದೇ ಉಲ್ಲೇಖಿತಗೊಂಡಿದ್ದು, ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಊರ ಪ್ರವೇಶದಲ್ಲೇ ಇರುವ ದೇವಾಲಯ ಸಮೂಹದಲ್ಲಿ ಮೊದಲಿರುವ ಮಲ್ಲೇಶ್ವರ (ಶಾಸನೋಕ್ತ ಮೂಲಸ್ಥಾನದ ಮಲ್ಲಿಕಾರ್ಜುನ) ಗುಡಿಯು ಮೂಲತ: ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಅದಕ್ಕೆ ಇತ್ತೀಚೆಗೆ ತೆರೆದ ಮಂಟಪವನ್ನು ಸೇರಿಸಲಾಗಿದೆ. ಅಲ್ಲೇ ಇರುವ ಕ್ರಿ.ಶ.೧೧೩೮ ಹಾಗೂ ಕ್ರಿ.ಶ.೧೨೧೮ರ ಶಾಸನಗಳು ಈ ದೇವರಿಗೆ ಬಿಟ್ಟ ದತ್ತಿ ಶಾಸನಗಳಾಗಿವೆ. ಅದರಲ್ಲೂ ಕ್ರಿ.ಶ.೧೨೧೮ರ ಶಾಸನದಲ್ಲಿ ಬರುವ 'ಗಂಡರ ಮೂಕುತಿಗಳುಂ' ಉಲ್ಲೇಖ, 'ನಾಸಾಭರಣ ಮೂಗುತಿ'ಯನ್ನು ಸೂಚಿಸುವ ಅಪರೂಪದ ಪ್ರಾಚೀನ ಉಲ್ಲೇಖವಾಗಿದೆ. ಅಲ್ಲದೆ, ಲಾಳನಕೆರೆಯು ಕಲುಕಣಿ–೨೦ ಆಡಳಿತ ವಿಭಾಗಕ್ಕೆ ಶಿರೋಮಣಿಯಾಗಿತ್ತೆಂದು ಹೇಳುವ ಮೂಲಕ ಕಲುಕಣಿ – ೨೦ ಕಲುಕಣಿ–೩೦೦ರ ಉಪ ಆಡಳಿತ ವಿಭಾಗವಾಗಿದ್ದ ಅಂಶವನ್ನೂ ದಾಖಲಿಸಿರುವುದು ಗಮನಾರ್ಹವಾಗಿದೆ. ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಅಂತರಾಳದ ಬಾಗಿಲವಾಡವು ಜಾಲಂಧ್ರದಿಂದ ಕೂಡಿದ್ದು, ನವರಂಗದ

ಭುವನೇಶ್ವರಿಯೂ ಆಕರ್ಷಕವಾಗಿದೆ. ಜೀರ್ಣೋದ್ಧಾರಗೊಂಡಿರುವ ಈ ಗುಡಿಗೆ ಕದಂಬನಾಗರ ಶಿಖರವಿದ್ದು, ಭಿತ್ತಿಯು ನಿರಾಡಂಬರವಾಗಿದೆ. ಗುಡಿಯ ಎದುರಲ್ಲಿ ನಂದಿ ಕಂಬವಿದೆ. ಇದರ ಎಡಭಾಗದಲ್ಲಿರುವ ಮಾದೇಶ್ವರ (ಶಾಸನೋಕ್ತ ಶಿವರಮ್ಯ ಮಧುಕೇಶ್ವರ) ಗುಡಿಯನ್ನು ಶಿವದೇವನು ನಿರ್ಮಿಸಿ, ಮಧುಕರಾಶಿ ಪಂಡಿತನಿಗೆ ದತ್ತಿ ಬಿಟ್ಟಿದ್ದನ್ನು ಕ್ರಿ.ಶ.೧೧೯೫ರ ಶಾಸನ ದಾಖಲಿಸಿದೆ. ಎದುರುಬದುರಾಗಿ ಪ್ರತ್ಯೇಕ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಇದೊಂದು ಜೋಡಿ ದೇಗುಲವಾಗಿದ್ದು, ಒಂದರಲ್ಲಿ ಶಿವಲಿಂಗವಿದ್ದರೆ, ಇನ್ನೊಂದರಲ್ಲಿ ನಂದಿ ಇದೆ. ಊರ ಅಗಸಿ ಬಳಿ ಇರುವ ಅಚಲಾಪರಮೇಶ್ವರಿಯ (ಚಟ್ಟನಹಳ್ಳಿ ಅಮ್ಮನ) ಹೆಸರಿನ ಎತ್ತರದ ಎರಡು ಅಡಕೆ ಮರಗಳನ್ನು ಪ್ರತೀವರ್ಷ ಪ್ರತಿಷ್ಠಾಪಿಸಿ, ೧೨ ದಿನಗಳ ಜಾತ್ರೆ ನಡೆಸಲಾಗುತ್ತಿದ್ದು, ಯುಗಾದಿಯಾದ ಎಂಟು ದಿನಕ್ಕೆ ಉತ್ಸವವನ್ನು ಆಚರಿಸಲಾಗುತ್ತದೆ. ಈ ಕಂಬಗಳು ಹಿಂದೆ ರೂಢಿಯಲ್ಲಿದ್ದ ಸಿಡಿ ಸೇವೆಯನ್ನು ನೆನಪಿಸುತ್ತವೆ. ಊರಾಚೆ ಇರುವ ಕೋಡಿಲಿಂಗೇಶ್ವರ ಗುಡಿಯು ಸುಮಾರು ೧೬ನೆಯ ಶತಮಾನದ ರಚನೆಯಾಗಿದ್ದು, ಶಿಥಿಲಾವಸ್ಥೆಯಲ್ಲಿದೆ.

**ವರಾಹನಾಥ ಕಲ್ಲಹಳ್ಳಿ (೪೨೪)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೮ ಕಿ.ಮೀ. ನೈಋತ್ಯಕ್ಕೆ ಪಶ್ಚಿಮೋತ್ತರವಾಗಿ ಹರಿಯುವ ಹೇಮಾವತಿಯ ಎಡದಂಡೆಯ ಮೇಲಿದೆ. ಇಲ್ಲಿಯ ವರಾಹ ದೇವಾಲಯದ ಮುಂದಿರುವ ಹೊಯ್ಸಳ ಮುಮ್ಮಡಿ ಬಲ್ಲಾಳನ ಕಾಲದ ಕ್ರಿ.ಶ.೧೩೩೪ರ ಶಿಲಾಶಾಸನವು ಮಹಾಪ್ರಧಾನ ಅದಿಸಿಂಗೇಯನಾಯಕನು ಚಕ್ರವರ್ತಿಯ ಅನುಮತಿಯೊಂದಿಗೆ ಕಲ್ಲಹಳ್ಳಿ ಗ್ರಾಮವನ್ನು ಅಗ್ರಹಾರವನ್ನಾಗಿಸಿ, ರಾಣಿ ದೇಮಲಾದೇವಿಯ ಹೆಸರಲ್ಲಿ ದೇವಲಾಪುರವೆಂದು ಅದಕ್ಕೆ ಪುನರ್ ನಾಮಕರಣ ಮಾಡಿ, ರಾಜಗುರು ಗುಮ್ಮಟದೇವನಿಗೆ ದಾನ ನೀಡಿದ್ದನ್ನು ದಾಖಲಿಸಿದೆ. ಈ ಶಾಸನದ ಶಿರೋಭಾಗದಲ್ಲಿ ಸೂರ್ಯ-ಚಂದ್ರರ ಚಿಹ್ನೆ, ಕಮಂಡಲ, ದೀಪಮಾಲೆ ಕಂಬ, ಶಬರ-ಭೇರುಂಡ (ಮಾನವ ದೇಹ- ಭೇರುಂಡ ದೇಹ) ಹಾಗೂ ಹಿಂಗಾಲ ಮೇಲೆ ಕುಳಿತು ಬಲಮುಂಗಾಲಿನ ಪಂಜವನ್ನು ಮೇಲೆತ್ತಿ ಘರ್ಜಿಸುತ್ತಿರುವ ಹುಲಿಯ ಕೆತ್ತನೆಯು ವಿಶಿಷ್ಟವಾಗಿದೆ. ಈ ಶಾಸನದ ನಾಂದಿ ಶ್ಲೋಕದಲ್ಲಿ ಬರುವ ವರಾಹ ಸ್ತುತಿಯಿಂದ ವರಾಹ ಗುಡಿಯು ಕನಿಷ್ಠ ಮುಮ್ಮಡಿ ಬಲ್ಲಾಳನ ಕಾಲದ ನಿರ್ಮಾಣವೆಂದು ತರ್ಕಿಸಬಹುದಾಗಿದೆ.

ಮೇಲುಕೋಟೆಯ ಕ್ರಿ.ಶ.೧೫೪೫ರ ಶಾಸನದಲ್ಲಿ ವರಾಹನ ಕಲಹಳ್ಳಿ ಎಂದೇ ಈ ಊರ ಹೆಸರು ದಾಖಲಾಗಿದೆ. ಊರಾಚೆ ಕೆರೆ ಬಳಿಯಿರುವ ಈ ದೇವಾಲಯವು ವಿಶಾಲವಾದ ಗರ್ಭಗೃಹ ಹಾಗೂ ಸಭಾಮಂಟಪಗಳನ್ನು ಹೊಂದಿದ್ದು, ಪೂರ್ವಾಭಿಮುಖವಾಗಿದೆ. ಒಳಗೆ ಎತ್ತರದ ಪೀಠದ ಮೇಲೆ ಲಲಿತಾಸೀನ ಚತುರ್ಭುಜಧಾರಿ ನರಸಿಂಹನ ಎಡತೊಡೆಯ ಮೇಲೆ ಭೂದೇವಿಯು ಅಸೀನಳಾಗಿದ್ದು, ಅವಳ ಸೊಂಟವನ್ನು ವರಾಹಸ್ವಾಮಿಯ ಎಡಗೈ ಬಳಸಿದ್ದು, ಬಹಳ ವಿಶಿಷ್ಟ ಭಂಗಿಯಲ್ಲಿದೆ. ಅಡಿಯಿಂದ ಮುಡಿಯವರೆಗೆ ಸುಮಾರು ೧೫ ಅಡಿ ಎತ್ತರವಿರುವ ಕರಿಕಲ್ಲಿನ ಈ ಶಿಲ್ಪವು ಸರ್ವಾಭರಣಾಲಂಕೃತವಾಗಿದ್ದು, ಅಭಿಷೇಕ ಮಾಡಲು ಮಗ್ಗುಲಲ್ಲಿ ಏಣಿ ಇದೆ. ಇದೊಂದು ಅಪರೂಪದ ಶಿಲ್ಪವಾಗಿದ್ದು, ಇಂತಹ ಇನ್ನೊಂದು ನಿದರ್ಶನ ವಿರಳ. ಗುಡಿಯ ಎಡಭಾಗದಲ್ಲಿ ಗರ್ಭಗೃಹ, ಅಂತರಾಳಗಳಷ್ಟೇ ಇರುವ ನಾರಾಯಣ ಗುಡಿ ಬರಿದಾಗಿದ್ದು, ಅನತಿ ದೂರದಲ್ಲಿ ಹೇಮಾವತಿ ನದಿಯು ಹರಿದಿದ್ದು, ಬಳಿಯಲ್ಲೇ ಪ್ರಾಚೀನ ಕಟ್ಟುಕಾಲುವೆಯೂ ಇದೆ.

**ಶಿವಸಮುದ್ರ (ಬ್ಲಫ್)** : ತಾಲೂಕು ಕೇಂದ್ರ ಮಳವಳ್ಳಿಯಿಂದ ೨೦ ಕಿ.ಮೀ. ಆಗ್ನೇಯಕ್ಕೆ, ಮಳವಳ್ಳಿ-ಕೊಳ್ಳೇಗಾಲ ರಸ್ತೆಯಲ್ಲಿ ಶಿವಸಮುದ್ರ ತೋಳ್ಗಂಬದಿಂದ ಒಂದು ಕಿ.ಮೀ. ಒಳಕ್ಕಾದಂತಿದೆ. ಮಾರ್ಗದಲ್ಲೇ ಮಾವಿನ ತೋಪಿನ ಬಳಿಯ **ಚಿಕ್ಕ ಮುತ್ತತ್ತಿ**ಯಲ್ಲಿರುವ ಮುತ್ತೆತ್ತರಾಯನ ಗುಡಿಯು ವಿಸ್ತಾರವಾಗಿದ್ದು, ಗರ್ಭಗೃಹದಲ್ಲಿ ಹನುಮಂತನನ್ನು ಕಡೆದಿರುವ ಶಿಲಾಸ್ತಂಭ (ಗರುಡ ಸ್ತಂಭ) ವು ಆರಾಧಿಸಲ್ಪಡುತ್ತದೆ. ಸೀತಾದೇವಿಯ ಕಳೆದು ಹೋದ ಚಿಕ್ಕ ಮೂಗುತಿಯನ್ನು ಹನುಮಂತನು ಇಲ್ಲಿ ಎತ್ತಿಕೊಟ್ಟನೆಂಬ ಪೌರಾಣಿಕ ಕಥೆ ರೂಢಿಯಲ್ಲಿದ್ದು, ಇಲ್ಲೂ

ಪ್ರತೀ ವರ್ಷ ನಡೆಯುವ ಜಾತ್ರೆಯಲ್ಲಿ ಹುಲಿವಾಹನೋತ್ಸವ, ದಾಸಯ್ಯಗಳಿಗೆ ಬಾಯಿಮಣೆ ಇಕ್ಕಿಸುವಂತಹ ವಿಶಿಷ್ಟ ಆಚರಣೆಗಳು ನಡೆಯುತ್ತವೆ. ಕಾವೇರಿ ನೀರಿನಿಂದ ವಿದ್ಯುತ್ತನ್ನು ಉತ್ಪಾದಿಸುವ ಸಲುವಾಗಿ ಅಂದಿನ ದಿವಾನರಾಗಿದ್ದ ಸರ್. ಕೆ. ಶೇಷಾದ್ರಿ ಅಯ್ಯರ್ ಅವರು ನಿರಂತರವಾಗಿ ಪರಿಶ್ರಮಿಸಿದ್ದರ ಪರಿಣಾಮವಾಗಿ ೩೦-೬-೧೯೦೨ರಂದು, ಅಂದಿನ ಬ್ರಿಟೀಷ್ ರೆಸಿಡೆಂಟರಾದ ಕರ್ನಲ್ ಡೊನಾಲ್ಡ್ ರಾಬರ್ಟಸನ್ನರ ಪತ್ನಿಯಿಂದ ಇದು ಉದ್ಘಾಟಿಸಲ್ಪಟ್ಟಾಗ, ಆ ವೇಳೆಗಾಗಲೇ ನಿಧನರಾಗಿದ್ದ ದಿವಾನ ಕೆ. ಶೇಷಾದ್ರಿ ಅಯ್ಯರ್ ಅವರ ಹೆಸರನ್ನೇ ಈ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಇಡಲಾಯಿತು. ವಿದ್ಯುತ್ ಉತ್ಪಾದನೆಗೆ ಅನುಕೂಲವಾಗಲೆಂದು ಜಲಸಂಗ್ರಹಕ್ಕೆಂದು ಫೋರ್ಟ್ ಸಾಗರವನ್ನು ನಿರ್ಮಿಸಲಾಗಿದೆ. ಮುಂದೆ ಅಲ್ಲಿಂದ ಬರುವ ನೀರನ್ನು ಫೊರ್ ಬೇ ಜಲಾಶಯದಲ್ಲಿ ನಿಯಂತ್ರಿಸಲಾಗಿದ್ದು, ಅಲ್ಲಿಂದ ದೊಡ್ಡ ಕೊಳವೆ ಮೂಲಕ ನೀರನ್ನು ಸುಮಾರು ೪೫೦ ಅಡಿ ಆಳದಲ್ಲಿರುವ ವಿದ್ಯುತ್ ಜನಕ ಯಂತ್ರಗಳಿಗೆ ಹರಿಸಿದಾಗ ಯಂತ್ರಗಳು ವೇಗವಾಗಿ ಚಲಿಸಿ, ವಿದ್ಯುತ್ ಉತ್ಪಾದನೆ ಆಗುತ್ತದೆ. ಕಾರ್ಯಾಗಾರಕ್ಕೆ ಹೋಗಲು ಟ್ರ್ಯಾಲಿ ಇದ್ದು, ವೀಕ್ಷಿಸಲು ಪೂರ್ವಾನುಮತಿ ಪಡೆದಿರಬೇಕು. ದಿನಾಂಕ ೬-೮-೧೯೦೨ರಲ್ಲಿ ೧೨೫೦ ಎಚ್.ಪಿ.ಯ ಎರಡು ಸಂಚರಣ ಯಂತ್ರಗಳೊಂದಿಗೆ ವಿದ್ಯುತ್ ಉತ್ಪಾದಿಸತೊಡಗಿದ ಇದು ಆರಂಭದಲ್ಲಿ ೫೬೦೦ ಕಿ.ವ್ಯಾ ವಿದ್ಯುತ್ತನ್ನು ಉತ್ಪಾದಿಸುತ್ತಿದ್ದು, ೧೪೪ ಕಿ.ಮೀ. ದೂರದಲ್ಲಿದ್ದ ಕೋಲಾರದ ಚಿನ್ನದ ಗಣಿಗೆ ಅಗತ್ಯವಿದ್ದ ವಿದ್ಯುತ್ತನ್ನು ತಂತಿಯ ಮೂಲಕ ಸರಬರಾಜು ಮಾಡುವುದೇ ಇದರ ಪ್ರಧಾನ ಉದ್ದೇಶವಾಗಿತ್ತು. ಆವರೆಗೆ ವಿದ್ಯುತ್ತನ್ನು ಅಷ್ಟು ದೂರ ಕೊಂಡೊಯ್ದ ಇನ್ನೊಂದು ನಿದರ್ಶನ ಜಗತ್ತಿನಲ್ಲೆಲ್ಲೂ ಆಗಿರದೇ ಇದೇ ಅಂತಹ ಮೊದಲ ಉದಾಹರಣೆಯಾಗಿತ್ತು. ಬೆಳಗಾವಿಯ ಗೋಕಾಕ್ ಬಳಿ ಖಾಸಗಿ ಕಂಪನಿಯೊಂದು ೧೮೮೭ರಷ್ಟು ಹಿಂದೆಯೇ ಸಣ್ಣ ಪ್ರಮಾಣದಲ್ಲಿ ಜಲ ವಿದ್ಯುತ್ ಉತ್ಪಾದನೆಗೆ ತೊಡಗಿದ್ದ ಅಂಶ ಬೆಳಕಿಗೆ ಬಂದಿರುವ ಹಿನ್ನೆಲೆಯಲ್ಲಿ ಏಷ್ಯಾದಲ್ಲೇ ಪ್ರಥಮ ಜಲವಿದ್ಯುತ್ ಉತ್ಪಾದನಾ ಕೇಂದ್ರ ಶಿವಸಮುದ್ರ ಎಂಬ ಹೆಗ್ಗಳಿಕೆ ಇಲ್ಲವಾಗಿದೆ. **ಗಗನಚುಕ್ಕಿ :** ಕಾವೇರಿಯ ಎಡದಡದಲ್ಲಿರುವ 'ಗಗನಚುಕ್ಕಿ ಜಲಪಾತ'ವನ್ನು ಇಲ್ಲಿಂದಲೇ ನೋಡಿದರೆ ಚೆನ್ನ. ಕಾವೇರಿಯ ಆಚೆದಡದಲ್ಲಿರುವ ದರ್ಗಾ ಭಾಗದಿಂದಲೂ ಕೆಳಕ್ಕಿಳಿದು ನೋಡಬಹುದಾದ ಗಗನಚುಕ್ಕಿ ಜಲಪಾತದ ಪಾರ್ಶ್ವ ದೃಶ್ಯ ವಿಶಿಷ್ಟ ಅನುಭವವನ್ನು ನೀಡುತ್ತದೆ. ಇದು ಕಾವೇರಿಯ ಎಡ ಕವಲಾಗಿದ್ದು, ಸುಮಾರು ಮುನ್ನೂರು ಅಡಿ ಎತ್ತರದಿಂದ ವೈಯ್ಯಾರದಿಂದ ಗಗನದಿಂದಲೇ ಧುಮುಕುತ್ತಿರುವಂತೆ ಭಾಸವಾಗುತ್ತಿದ್ದು, ಆದ್ದರಿಂದಲೇ ಗಗನಚುಕ್ಕಿ ಎಂಬ ಹೆಸರು ಬಂದಿದೆ. **ಮಧ್ಯರಂಗ :** ಇದು ಮಳವಳ್ಳಿಯಿಂದ ೨೫ ಕಿ.ಮೀ. ಆಗ್ನೇಯಕ್ಕೂ, ಸತ್ತೆಗಾಲ ಕೈಮರ (ಕೊಳ್ಳೆಗಾಲ ತಾ.)ದಿಂದ ಐದು ಕಿ.ಮೀ. ಉತ್ತರಕ್ಕೂ ಇದೆ. ಕಾವೇರಿ ನದಿಯು ರೂಪಿಸಿರುವ ಸುಮಾರು ಐದು ಕಿ.ಮೀ. ಉದ್ದ ಒಂದೂವರೆ ಕಿ.ಮೀ. ಅಗಲದ ದ್ವೀಪ (ಕುರಾವು) ಇದಾಗಿದ್ದು, ಸತ್ತೇಗಾಲ ಕಂದಾಯ ಗ್ರಾಮದ ವ್ಯಾಪ್ತಿಗೆ ಸೇರಿದ್ದು, ಪ್ರಾದೇಶಿಕವಾಗಿ ಹೆಗ್ಗುರ ಎಂದೂ ಕರೆಯುತ್ತಾರೆ. ಇದು ಶ್ರೀರಂಗನಾಥನ ಆಲಯವಿರುವ ಮಧ್ಯರಂಗವಾಗಿದ್ದು, ಅಲ್ಲಿ ಸೋಮೇಶ್ವರ ಮತ್ತು ವೀರಭದ್ರ ದೇವಾಲಯ; ಹಜರತ್ ಸೈಯದ್ ಮರ್ದಾನೆ ಘಯಬ್ ದರ್ಗಾಗಳಿದ್ದು ಈ ಸಂತನ ಉರುಸ್ ಪ್ರತೀ ರಂಜಾನ್ ತಿಂಗಳ ೧೯ ಹಾಗೂ ೨೦ನೇ ದಿನದಂದು ಜರುಗುತ್ತದೆ. ಗಗನಚುಕ್ಕಿ ಹಾಗೂ ಭರಚುಕ್ಕಿ ಜಲಪಾತಗಳಿವೆ. (ವಿವರಗಳಿಗೆ ಮೈಸೂರು ಜಿಲ್ಲಾ ಗ್ಯಾಸೆಟಿಯರ್(೧೯೮೫) ನೋಡಿ)

**ಶಿಂಷಾಪುರ :** ಧನಗೂರಿಗೆ ಸೇರಿದ ಉಪಗ್ರಾಮವಾಗಿದ್ದು, ಧನಗೂರಿನಿಂದ ಎಂಟು ಕಿ.ಮೀ. ಹಾಗೂ ತಾಲೂಕು ಕೇಂದ್ರ ಮಳವಳ್ಳಿಯಿಂದ ೨೫ ಕಿ.ಮೀ.ಆಗ್ನೇಯಕ್ಕೆ ಗಿರಿ-ವನ ಶ್ರೇಣಿಗಳ ನಡುವೆ ಇರುವ ರಮಣೀಯ ಪ್ರಕೃತಿಧಾಮವಾಗಿದೆ. ಶಿಂಷಾ ನದಿಯ ಬಲದಂಡೆಯ ಮೇಲಿರುವ ಇದನ್ನು ಹಿಂದೆ ಗ್ರಾಮಸ್ಥರು 'ಪಲ್ಲಕ್ಕಿವಾರ' ಎಂದೂ ಕರೆಯುತ್ತಿದ್ದರಂತೆ. ಇಲ್ಲಿಯ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಶಿವಸಮುದ್ರದ ಬಳಿಯಿಂದ ಶಾಖಾ ಕಾಲುವೆಯ ಮೂಲಕ ಕಾವೇರಿ ನೀರನ್ನು ತರಲಾಗಿದ್ದು, ಸುಮಾರು ೬೦೦ ಅಡಿ ಎತ್ತರದಿಂದ ನೀರು ಕ್ರಮಬದ್ಧವಾಗಿ

ಕೆಳಗೆ ಜೋಡಿಸಿರುವ ಎರಡು ಯಂತ್ರಗಳಿಗೆ ಹರಿಯುವಂತೆ ಮಾಡುವುದರ ಮೂಲಕ ೧೭,೨೦೦ ಕಿ.ವ್ಯಾ ವಿದ್ಯುತ್ತನ್ನು ಕ್ರಿ.ಶ.೧೯೩೯–೪೦ರಿಂದ ಉತ್ಪಾದಿಸಲಾಗುತ್ತಿದೆ. ಇಲ್ಲಿಯ ವಿದ್ಯುತ್ ಉತ್ಪಾದನಾ ಸ್ಥಾವರವನ್ನು ವೀಕ್ಷಿಸಲು ಇಲಾಖಾ ಟ್ರಾಲಿಯಲ್ಲಿ ಹೋಗಲು ಪೂರ್ವಾನುಮತಿ ಪಡೆದಿರಬೇಕು. ಉತ್ಪದನಾ ಕೇಂದ್ರದ ಹಿಂಭಾಗದಲ್ಲೇ ಹಾದು ಹೋಗುವ ಶಿಂಷಾ ನದಿಗೆ 'ಕೊಂಡದ ಹೊಳೆ' ಎಂಬ ಹೆಸರೂ ಇದ್ದು 'ಹುಳಿಬಳ್ಳ' ವೆಂಬ ಸಣ್ಣ ತೊರೆಯೊಂದು ಅಲ್ಲೇ ಕೂಡಿಕೊಳ್ಳುವುದರಿಂದ ಸಂಗಮ ಎನಿಸಿದೆ. ಶಿಂಷಾ ಜಲಪಾತ ಹಾಗೂ ಕೊಂಡದಮ್ಮನ ನೆಲೆಯನ್ನು ನೋಡಲು ವಿದ್ಯುತ್ ಉತ್ಪಾದನಾ ಕೇಂದ್ರದ ಹಿಂಬದಿಯಲ್ಲಿ ಕಬ್ಬಿಣದ ಸರಳುಗಳನ್ನು ಬಿಗಿದು ಮಾಡಿರುವ ಶಿಸ್ತಾದ ತೂಗು ಸೇತುವೆಯ ಮೇಲೆ ಹಾದು ಒಂದು ಕಿ.ಮೀ. ದೂರ ಸಾಗಿದರೆ, ಸುಮಾರು ೨೦೦ ಅಡಿ ಎತ್ತರದಿಂದ ಮೈದುಂಬಿ ಧುಮುಕುವ ಜಲಧಾರೆಯನ್ನು ಮಳೆಗಾಲದಲ್ಲಿ ವೀಕ್ಷಿಸಬಹುದಾದರೆ, ಬೇಸಿಗೆಯಲ್ಲಿ ತೆಳುವಾಗಿ ಹರಿಯುವ ಧಾರೆಯಷ್ಟೇ ಲಭ್ಯ. ಸಮೀಪವೇ ಇರುವ ಕೊಂಡದಮ್ಮನಿಗೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ನಡೆದುಕೊಳ್ಳುತ್ತಾರೆ. ಶಿಂಷಾಪುರವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು ಅವಕಾಶಗಳಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವಿಶ್ರಾಂತಿ ಗೃಹವೂ ಇಲ್ಲಿದೆ.

**ಶೀಳನೆರೆ (೧೮೮೨) :** ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೦ ಕಿ.ಮೀ. ಆಗ್ನೇಯಕ್ಕಿರುವ ಹೋಬಳಿ ಕೇಂದ್ರವಾಗಿದ್ದು, ಕೆರೆತೊಣ್ಣೂರಿನ ಕ್ರಿ.ಶ.೧೧೫೭ರ ಶಾಸನದಲ್ಲಿ 'ಶೀಳನೆರೆ' ಎಂದು ಉಲ್ಲೇಖಿತಗೊಂಡಿದೆ. ಊರ ಕೆರೆ ದಂಡೆಯಲ್ಲಿರುವ ಈಶ್ವರ ದೇವಾಲಯವು ಬಳಪದ ಕಲ್ಲಿನಲ್ಲಿ ಅರಳಿರುವ ಸುಂದರ ಹೊಯ್ಸಳ ವಾಸ್ತುಶಿಲ್ಪವಾಗಿದ್ದು ಶಿಥಿಲಾವಸ್ಥೆಯಲ್ಲಿದೆ. ಪೂರ್ವಾಭಿಮುಖವಾಗಿರುವ ಇದಕ್ಕೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಕಮಲ ಛತ್ತುಳ್ಳ ಛಾವಣಿಯ ಮೇಲೆ ಸುಂದರ ಕದಂಬನಾಗರ ಶಿಖರ ಹಾಗೂ ಕಳಶಗಳಿವೆ. ಅಂತರಾಳದಲ್ಲಿ ಗಣಪತಿ, ನವರಂಗದಲ್ಲಿ ಗಣಪತಿ–ನಂದಿ ಶಿಲ್ಪಗಳಿದ್ದು, ನಡುವಣ ಛತ್ತನ್ನು ಕಮಲದಿಂದ ಅಲಂಕರಿಸಲಾಗಿದೆ. ಈ ಗುಡಿಯ ಎಡಭಾಗದಲ್ಲಿರುವ ಕ್ಷೇತ್ರಪಾಲ ಭೈರವನ ಗುಡಿಯು ಜೀರ್ಣೋದ್ಧಾರಗೊಂಡಿದೆ. ಗುಡಿಯ ಮುಂಭಾಗದಲ್ಲಿರುವ ರಾಶಿ ಚಕ್ರ ಕಲ್ಲು ವಿಶಿಷ್ಟವಾಗಿದ್ದು, ಆಕರ್ಷಕವಾಗಿದೆ. ಚೌಕಾಕಾರದ ಪೀಠದ ಮೇಲೆ ವೃತ್ತಾಕಾರದಲ್ಲಿರುವ ಇದರ ಮಧ್ಯದಲ್ಲಿ ಸೂರ್ಯನಿದ್ದು, ಒಳಭಾಗದಂಚಲ್ಲಿ ಕಮಲದ ೧೨ ದಳಗಳ ಮೇಲೆ ದ್ವಾದಶ (೧೨) ಆದಿತ್ಯರ ಕಿರುಕೆತ್ತನೆಗಳಿದ್ದು, ಹೊರಭಾಗದಲ್ಲಿ ಮೇಷದಿಂದ ಮೀನ ರಾಶಿಯವರೆಗೆ ಎಲ್ಲಾ ೧೨ ರಾಶಿ ಚಿಹ್ನೆಗಳನ್ನು ಕ್ರಮವಾಗಿ ಎಡದಿಂದ ಬಲಕ್ಕೆ ಕೆತ್ತಲಾಗಿದ್ದು, ಮುಂಭಾಗದಲ್ಲಿ ಸಪ್ತಾಶ್ವಗಳೊಂದಿಗೆ ಆರುಣನನ್ನೂ ಬಿಡಿಸಲಾಗಿದ್ದು, ಕಿರಣಸ್ತಂಭವೆಂದೂ ಕರೆಯಲ್ಪಡುವ ಇದೊಂದು ಅಪೂರ್ವ ಉದಾಹರಣೆಯಾಗಿವೆ. ಹೂತುಹೋಗಿರುವುದರಿಂದ ಹಿಂದೆ ಇದನ್ನು ಸ್ತಂಭದ ಮೇಲಿಟ್ಟು ಆರಾಧಿಸುತ್ತಿದ್ದರೋ ಹೇಗೆಂದು ಗೊತ್ತಾಗುವುದಿಲ್ಲ. ಗುಡಿಯ ಬಲಭಾಗದಲ್ಲಿರುವ ವೀರಗಲ್ಲು, ನಾಲ್ಕು ಹಂತದ ಕೆತ್ತನೆಗಳನ್ನು ಹೊಂದಿದ್ದು, ಅವುಗಳಲ್ಲಿ ಕೆಳಗಿನ ಮೂರು ಹಂತಗಳು ಕ್ರಮವಾಗಿ ಹೋರಾಟ, ಆರೋಹಣ ಹಾಗೂ ಶಿವಸಾನಿಧ್ಯವನ್ನು ಸೂಚಿಸಿದರೆ ಕೊನೆಯ ಹಂತದಲ್ಲಿ ಶಿವಪಾರ್ವತಿಯರನ್ನೊಳಗೊಂಡ ಕೈಲಾಸವನ್ನು ವೀರ ಸೇರಿದನೆಂದು ಸೂಚಿಸುವ ಅಪರೂಪದ ಕೈಲಾಸ ದೃಶ್ಯವಿದೆ. ಉಳಿದಂತೆ ಊರಲ್ಲಿ ಕಂಬದ ಆಂಜನೇಯ (ಗರುಡ ಗಂಭ), ಲಕ್ಷ್ಮೀದೇವಿ, ಭೈರವ, ಬಸವೇಶ್ವರ, ಅರೆಕಲ್ಲು ತಿಮ್ಮಪ್ಪ, ರಾಮಮಂದಿರ, ಮಾರಮ್ಮ, ಪಟಲದಮ್ಮ, ದೊಡ್ಡಮ್ಮ, ಚಿಕ್ಕಮ್ಮ ಹಾಗೂ ತಲೆಪಟರಾಯನ ಗುಡಿಗಳಿವೆ.

**ಗುಡುಗನಹಳ್ಳಿ (೪೪೮):** ಶೀಳನೆರೆಯಿಂದ ಮೂರು ಕಿ.ಮೀ. ಪೂರ್ವಕ್ಕಿದ್ದು, ಊರಾಚೆ ಇರುವ ಈಶ್ವರ ದೇವಾಲಯಕ್ಕೆ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳಿದ್ದು, ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಗುಡಿಯ ಒಳ ಅಂಕಣಗಳನ್ನು ಮೂಲರೂಪದಲ್ಲೇ ಉಳಿಸಿಕೊಳ್ಳಲಾಗಿದ್ದರೂ, ಹೊರಗಿನಿಂದ ನೋಡಿದವರಿಗೆ ಈ ಗುಡಿಯು ಪ್ರಾಚೀನ ಅನಿಸುವುದಿಲ್ಲ. ಒಳಗೆ ಶಿವಲಿಂಗವಿದ್ದು, ಚರಕಿ ಕಂಬಗಳುಳ್ಳ ನವರಂಗದ ಛತ್ತು ಆಕರ್ಷಕವಾಗಿದ್ದು, ಗಣಪತಿ,

ಮಹಿಷಮರ್ಧಿನಿ, ಅಸೀನಭೈರವ ಹಾಗೂ ನಾಗರಕಲ್ಲುಗಳಿವೆ. ಇದರ ಬಾಗಿಲವಾಡಗಳು ಚತುರ್ ಶಾಖಾಲಂಕೃತವಾಗಿದ್ದು, ಎದುರಿಗಿರುವ ಸಿಡಿಲಕಲ್ಲು, ಗರಿಗಲ್ಲು, ಒಳಮಂಟೆ ಮುಂತಾದ ಗುಡ್ಡಗಳಲ್ಲಿ ಗವಿಗಳಿವೆಯೆಂಬ ಅಭಿಪ್ರಾಯವಿದೆ. ಉಳಿದಂತೆ ಊರ ಪ್ರವೇಶದಲ್ಲೇ ಸುಮಾರು ೧೮ನೆಯ ಶತಮಾನಕ್ಕೆ ಸೇರಿದ ವಿವಿಧ ಗಾತ್ರದ ೩೦, ಪರಿಜನರ ಓಣಿ ಬಳಿ ಏಳೆಂಟು, ಹಾಗೂ ಹೊಲವೊಂದರಲ್ಲಿ ನಾಲ್ಕಾರು ವೀರಗಲ್ಲುಗಳಿವೆ. **ಚಟ್ಟಂಗೆರೆ (೧೧೦೭)** : ಶೀಳನೆರೆಯಿಂದ ನಾಲ್ಕು ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ಕೃಷ್ಣರಾಜ ಒಡೆಯರ ಆಳ್ವಿಕೆಗೆ ಸೇರಿದ ಕ್ರಿ.ಶ.೧೭೫೯ರ ಮೂರು ಶಾಸನಗಳು ವರದಿಯಾಗಿವೆ. ಊರ ಪ್ರವೇಶದಲ್ಲೇ ಇರುವ ಇವು ತೊಣ್ಣೂರಿನ ನೀಲಾ ಮಸೂದ್ ಖಾದ್ರಿ ದರ್ಗಾದ ಸೇವೆಗೆಂದು ಹೈದರಾಲಿಯು ಅರಸರಿಂದ ಚಟ್ಟಮಗೆರೆಯನ್ನು ಖರೀದಿಸಿ ದಾನ ಬಿಟ್ಟಿದ್ದನ್ನು ದಾಖಲಿಸುತ್ತವೆ. ಊರ ಗುಡ್ಡದ ಮೇಲಿರುವ ಸುಮಾರು ೧೩ನೆಯ ಶತಮಾನದ ಗುಡಿಗಳು ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು, ಒಂದನ್ನು ಸಾರಂಗಪಾಣಿ ಎಂದೂ ಇನ್ನೊಂದನ್ನು ಆಂಜನೇಯ ಗುಡಿ ಎಂದೂ ಕರೆಯಲಾಗುತ್ತಿದ್ದು, ಮೊದಲಿನದರಲ್ಲಿ ಮಾತೃಕೆಯರ ಪಟ್ಟಿಕೆಯಿದ್ದರೆ, ಇನ್ನೊಂದು ಬರಿದಾಗಿದೆ. ಊರಲ್ಲಿರುವ ಸೋಮೇಶ್ವರ ಗುಡಿಯಲ್ಲಿ ಪ್ರಾಚೀನ ಲಿಂಗ, ಗಣಪ, ಮಹಿಷಮರ್ಧಿನಿ, ಮುಂತಾದ ಕಿರು ಶಿಲ್ಪಗಳಿವೆ. ಇಲ್ಲಿಯ ನಾರಾಯಣ ಗುಡಿಯು ಮೂಲತ: ಹೊಯ್ಸಳ ರಚನೆಯಾಗಿದ್ದು, ಗರ್ಭಗೃಹ ಹಾಗೂ ಅಂತರಾಳಗಳು ಮೂಲ ರೂಪದಲ್ಲಿದ್ದು, ನವರಂಗ ಭಾಗವನ್ನು ಪುನರ್ ನಿರ್ಮಿಸಲಾಗಿದೆ. ಒಳಗೆ ಗರುಡಪೀಠವಿದ್ದು, ಊರಾಚೆ ನೇರಳೆ ತೋಪಿನಲ್ಲಿ ಬಿದ್ದಿರುವ ಸಾರಂಗಪಾಣಿಯ ಮೂರ್ತಿಯು ಮೂಲತ: ಈ ದೇವಾಲಯದ್ದಾಗಿದ್ದು, ಬಾಗಿಲವಾಡವು ಪಂಚ ಶಾಖಾಲಂಕೃತವಾಗಿದ್ದು, ಆಕರ್ಷಕವಾಗಿದೆ. ಊರ ಅಗಸಿ ಬಳಿ ನಾಲ್ಕಾರು ವೀರಗಲ್ಲು, ಮೂರ್‍ನಾಲ್ಕು ಮಾಸ್ತಿಗಲ್ಲು ಹಾಗೂ ವೃಂದಾವನ ಮಂಟಪಗಳಿದ್ದು, ನೀಲ ಶೆಟ್ಟರ ಹಿತ್ತಲಲ್ಲಿ ಇನ್ನಷ್ಟು ವೀರಗಲ್ಲುಗಳಿವೆ. ಉಳಿದಂತೆ ಊರಿನಲ್ಲಿ ಬಸವಣ್ಣ, ಮಾರಮ್ಮ, ಪಟ್ಟಲದಮ್ಮ, ಹಾಗೂ ವೆಂಕಟೇಶ್ವರ ಗುಡಿಗಳಿವೆ.

**ಶ್ರೀರಂಗಪಟ್ಟಣ (೨೩,೪೪೮)** : ಹೋಬಳಿ ಹಾಗೂ ತಾಲೂಕು ಕೇಂದ್ರವಾಗಿದ್ದು, ಜಿಲ್ಲಾ ಕೇಂದ್ರ ಮಂಡ್ಯದಿಂದ ೨೬ ಕಿ.ಮೀ. ಈಶಾನ್ಯಕ್ಕೆ ಕಾವೇರಿಯಿಂದ ಆವೃತ್ತವಾಗಿರುವ ದ್ವೀಪ. ಪ್ರಾಚೀನ ಶಾಸನಗಳಲ್ಲಿ 'ಶ್ರೀರಂಗಪುರ', 'ತಿರುವರಂಗ ನಾರಾಯಣ ಚತುರ್ವೇದಿಮಂಗಲ' , 'ಗೌತಮ ಕ್ಷೇತ್ರ', 'ಉಭಯ ಕಾವೇರಿ ಮಧ್ಯವರ್ತಿ' ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಸಂಸ್ಕೃತ ಕವಿ ಅವಿನಾಶೀಶ್ವರನು ಇದನ್ನು 'ಕರಿವರದರಾಜಪುರ' ಎಂದು ಕರೆದಿದ್ದರೆ, ಬ್ರಿಟೀಷ್ ದಾಖಲೆಗಳಲ್ಲಿ ಇದು 'ಸೆರಿಂಗಪಟಮ್' (Seringapatam) ಎಂದಿದೆ. ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ಕೊಡಲಿ, ಸುತ್ತಿಗೆ, ಮುಂತಾದವನ್ನು ರಾಬರ್ಟ್ ಬ್ರೂಸ್ ಫ್ರೂಟ್ ೧೯೧೬ರಷ್ಟು ಹಿಂದೆಯೇ ಇಲ್ಲಿ ಪತ್ತೆಹಚ್ಚಿದ್ದಾರೆ. ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗೆ ಸೇರಿದ ಮೊನೆ, ಅರ್ಧಚಂದ್ರ, ಹೆಬ್ಬೆರಳಾಕಾರದ ಹೆರೆಯುವ ಚಕ್ಕೆ ಮುಂತಾದ ಶಿಲಾ ಉಪಕರಣಗಳನ್ನು ಎಸ್.ಮಹಾದೇವು ೧೯೮೪ರಲ್ಲಿ ಪತ್ತೆ ಹಚ್ಚಿದ್ದು, ಅವುಗಳನ್ನು ತಯಾರಿಸಲು ಜಾಸ್ಪರ್, ಚರ್ಟ್, ಮುಂತಾದ ಶಿಲಾ ಮಾದರಿಗಳನ್ನು ಬಳಸಿರುವುದು ಗಮನಾರ್ಹವಾಗಿದೆ. ಇಲ್ಲಿ ಯಥೇಚ್ಛವಾಗಿ ಲಭಿಸಿರುವ ಸೂಕ್ಷ್ಮ ಶಿಲಾಯುಧಗಳಿಂದಾಗಿ ಹಿಂದೆ ಇದೊಂದು 'ಶಿಲಾಯುಧ ಕಾರ್ಯಾಗಾರ' (Factory Site) ವಾಗಿದ್ದಿರಬೇಕೆಂಬ ಅಭಿಪ್ರಾಯಕ್ಕೆ ವಿದ್ವಾಂಸರು ಬಂದಿದ್ದಾರೆ.

ಹೊಯ್ಸಳರ ಕಾಲದಲ್ಲಿ ಪ್ರಮುಖ ಅಗ್ರಹಾರವಾಗಿದ್ದು, ವಿಜಯನಗರ ಸಾಮ್ರಾಜ್ಯದಡಿಯಲ್ಲಿ ಕ್ರಿ.ಶ.೧೪೫೫ರಿಂದ ಪ್ರಾಂತೀಯ ಕೇಂದ್ರವಾಗಿದ್ದು, ಕ್ರಿ.ಶ. ೧೬೧೦ರಿಂದ ಮೈಸೂರು ಅರಸರ ರಾಜಧಾನಿ ಪಟ್ಟಣವಾಗಿದ್ದು, ಮುಂದೆ ಕ್ರಿ.ಶ.೧೭೯೯ರಲ್ಲಿ ಟಿಪ್ಪುವಿನ ಅವನತಿಯೊಂದಿಗೆ ತಮ್ಮ ಅಧಿಕಾರವನ್ನು ಪುನರಾರಂಭಿಸಿದ ಒಡೆಯರ್ ಮನೆತನ, ಮೈಸೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಮೇಲೆ ಇದು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ಕಾವೇರಿ

ದಂಡೆಯಲ್ಲಿರುವ ಮೂರು ರಂಗನಾಥ ಕ್ಷೇತ್ರಗಳಲ್ಲಿ ಮೊದಲಿನದೇ ಇದಾಗಿರುವುದರಿಂದ 'ಆದಿರಂಗ' ಎಂಬ ಹೆಸರೂ ಇದಕ್ಕಿದ್ದು, ಪೂರ್ವದ ಶ್ರೀರಂಗಂನಿಂದ ಪಶ್ಚಿಮಕ್ಕಿರುವುದರಿಂದ ಪಶ್ಚಿಮ ರಂಗನಾಥಕ್ಷೇತ್ರ ಎಂದೂ ಕರೆಯಲ್ಪಡುತ್ತದೆ. ಇಲ್ಲಿಂದ ಈವರೆಗೆ (ಸುಮಾರು ಕ್ರಿ.ಶ.೮–೯ನೆಯ ಶತಮಾನಕ್ಕೆ ಸೇರಿದ) ಗಂಗ (೨), ಹೊಯ್ಸಳ (೨), ವಿಜಯನಗರ (೧೨), ಒಡೆಯರು (೧೫), ಹೈದರ್–ಟಿಪ್ಪು (೧೪) ಹಾಗೂ ಇತರ (೨೨) ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ನಾಲ್ಕು ತಮಿಳು, ೩೬ ಕನ್ನಡ, ಎಂಟು ಸಂಸ್ಕೃತ, ೧೪ ಪರ್ಷಿಯನ್, ತೆಲುಗು ಹಾಗೂ ಆಂಗ್ಲಭಾಷೆಯ ತಲಾ ಎರಡೆರಡು ಶಾಸನಗಳೂ ವರದಿಯಾಗಿವೆ. ಕಾವೇರಿಯ ಉತ್ತರ–ದಕ್ಷಿಣ ಕವಲುಗಳು ಪ್ರಾಕೃತಿಕವಾಗಿ ನಿರ್ಮಿಸಿರುವ ಜಲದುರ್ಗದಿಂದಾಗಿ ಆಯಕಟ್ಟಾದ ನೆಲೆಯಾಗಿರುವ ಇದು ಇತಿಹಾಸ ಪೂರ್ವ ಕಾಲದಿಂದಲೂ ಜನಜೀವನ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ.

ಪೂರ್ವ–ಪಶ್ಚಿಮವಾಗಿ ಸುಮಾರು ಒಂದರಿಂದ ಎರಡು ಕಿ.ಮೀ., ದಕ್ಷಿಣೋತ್ತರವಾಗಿ ಸುಮಾರು ಅರ್ಧದಿಂದ ಒಂದು ಕಿ.ಮೀ. ಉದ್ದದ ಒಳಪ್ರದೇಶವನ್ನು ಹೊಂದಿದ್ದು, ಬ್ರಿಟೀಷರ ಮೆಚ್ಚುಗೆಗೂ ಪಾತ್ರವಾಗಿದ್ದ ಮೂರು ಸುತ್ತಿನ ಈ ಕೋಟೆಯನ್ನು ಬಂದೂಕುಗಳ ಬಳಕೆಗೆ ಮೊದಲು ಮುತ್ತುವುದು ಅಸಾಧ್ಯದ ಕೆಲಸವಾಗಿದ್ದುದ್ದು ಅದರ ಮಹತ್ವವನ್ನು ಸೂಚಿಸುತ್ತದೆ. ಮೊದಲ ಸುತ್ತಿನ ಕಂದಕ–ಕೋಟೆಗಳು ನಾಗಮಂಗಲದ ಪಾಳೇಗಾರ, ವಿಜಯನಗರದ ಸಾಮಂತ ತಿಮ್ಮಣ್ಣ ಹೆಬ್ಬಾರನ (ಕ್ರಿ.ಶ.೧೪೫೪) ರಚನೆಯಾಗಿದ್ದು, ಪೂರ್ವಭಾಗದ ಎರಡನೆಯ ಸುತ್ತಿನ ಕೋಟೆ ರಾಜ ಒಡೆಯ (ಕ್ರಿ.ಶ.೧೬೧೦) ಹಾಗೂ ಕಂಠೀರವ ನರಸರಾಜರ (ಕ್ರಿ.ಶ.೧೬೫೪) ಕಾಲದ್ದಾಗಿದ್ದು, ಚಿಕ್ಕದೇವರಾಜ ಒಡೆಯರು ಒಳಕೋಟೆ, ಹೊರಕೋಟೆ ಹಾಗೂ ಜೀಬಿ ಬಾಗಿಲ ಬಳಿಯ ಕೊತ್ತಲಗಳಲ್ಲಿ ಫಿರಂಗಿಗಳನ್ನು ಇರಿಸಿದರೆಂದೂ ತಿಳಿದು ಬರುತ್ತವೆ. ಮೂರನೆಯ ಸುತ್ತಿನ ಹೊರಕೋಟೆಗೆ ಟಿಪ್ಪುವಿನ (ಕ್ರಿ.ಶ.೧೭೯೩) ಕಾಲದಲ್ಲಿ ಹಲವಾರು ಸೇರ್ಪಡೆಗಳಾಗಿರುವಂತೆ ತೋರುತ್ತದೆ.

ಶತ್ರುಗಳನ್ನು ಬಂಧಿಸಿಡಲು ಅನುಕೂಲವಾಗುವಂತೆ ಕೋಟೆಯ ಗೋಡೆಗೆ ಸೇರಿದಂತೆ ನಿರ್ಮಿಸಿರುವ ಎರಡು ನೆಲಮಾಳಿಗೆ ಸೆರೆಮನೆಗಳಲ್ಲಿ (ಡಂಜನ್) ಕೋಟೆಯ ಪೂರ್ವಕ್ಕೆ, ಬೆಂಗಳೂರು (ಗಂಜಾಂ) ಬಾಗಿಲು ಮತ್ತು ಕಂದಕಗಳ ನಡುವೆ ಇರುವ, ದೊಂಡಿಯಾವಾಘವನ್ನು ಬಂಧಿಸಿ ಸೆರೆಯಲ್ಲಿಟ್ಟಿದ್ದ ಬಂದಿಖಾನೆ (ಥಾಮಸ್ ಇನ್ ಮೇನ್ ಪತ್ತೆ ಹಚ್ಚಿದ ಡಂಜನ್) ಒಂದಾದರೆ, ಕೋಟೆಯ ವಾಯುವ್ಯಕ್ಕೆ ಜೀಬಿ ಬಾಗಿಲ ಬಲಕ್ಕೆ ಇರುವ, 'ಬೇಲಿ ಡಂಜನ್' ಎಂದೇ ಹೆಸರಾಗಿರುವ ಡಂಜನ್ ಇನ್ನೊಂದಾಗಿದೆ. ಮೂರನೆಯ ಸುತ್ತಿನ ಕೋಟೆಯ ದಕ್ಷಿಣ ಭಾಗದಲ್ಲಿರುವ 'ಮೈಸೂರು ಬಾಗಿಲು' ಕಿರಿದಾಯಿತೆಂದು, ೧೫ ಅಡಿ ಎತ್ತರದ ಆನೆಬಾಗಿಲನ್ನು ಟಿಪ್ಪು ಕ್ರಿ.ಶ. ೧೭೯೧ಲ್ಲಿ ನಿರ್ಮಿಸಿದನು. ಸುಮಾರು ಐದೂವರೆ ಮೀ. ಎತ್ತರ, ೩.೭೫ ಮೀ. ಉದ್ದವಿದ್ದ ಇದಕ್ಕೆ ಮರದ ಬಾಗಿಲಿದ್ದು, ಬೇಕೆಂದಾಗ ಬಳಸಬಹುದಾದ ಮರದ ಸೇತುವೆಯೂ ಹಿಂದೆ ಇತ್ತು. ಈ ಕೋಟೆಯ ನೈಋತ್ಯ ಮೂಲೆಯಲ್ಲಿ ಸೋಮಲಿಂಗನಕಟ್ಟೆ ಬಾಗಿಲು, ವಾಯುವ್ಯ ಮೂಲೆಯಲ್ಲಿ ದೆಹಲಿ ಹಾಗೂ ಜೀಬಿ ಬಾಗಿಲುಗಳ ನಡುವೆ ಇರುವ ಸುಲ್ತಾನ ಬತೇರಿ; ಉತ್ತರ ದಿಕ್ಕಿನಲ್ಲಿ ಸ್ನಾನ ಘಟ್ಟದ ಬಾಗಿಲು, ಕೃಷ್ಣದಿಡ್ಡಿ, ಕಳಲೆ ದಿಡ್ಡಿ, ಹಳೆದಿಡ್ಡಿ, ನೀರು ಬಾಗಿಲು ಮುಂತಾದ ಉಪ ಬಾಗಿಲುಗಳಿದ್ದು, ಗಂಜಾಂ ಬಾಗಿಲ ಬಳಿಯಲ್ಲೇ ರಾಜದ್ರೋಹಿ ಎಂದು ಪರಿಗಣಿಸಲಾಗಿರುವ ಮೀರ್ ಸಾದಕನ ಸಮಾಧಿ ಎಂದು ಹೇಳಲಾಗುವ ದಿಬ್ಬವಿದ್ದು, ಹಾದಿಹೋಕರು ಅದಕ್ಕೆ ಅಗೌರವ ಸೂಚಿಸಿ ಮುನ್ನಡೆಯುತ್ತಿದ್ದುದು ಹಿಂದೆ ಸಾಮಾನ್ಯ ಸಂಗತಿಯಾಗಿತ್ತು.

**ಜಾಮಿಯಾ ಮಸೀದಿ :** ಗಂಜಾಂ ಬಾಗಿಲ ಬಲಭಾಗಕ್ಕಿರುವ ಜಾಮಿಯಾ ಮಸೀದಿಯನ್ನು ಫಕೀರನೊಬ್ಬನ ಅಪೇಕ್ಷೆಯಂತೆ ಟಿಪ್ಪುವು ಕ್ರಿ.ಶ.೧೭೮೨ರಲ್ಲಿ ನಿರ್ಮಿಸಿದ್ದು, ಹಿಂದೆ ಅಲ್ಲಿದ್ದ ಹನುಮಂತನ ದೇವಾಲಯದ ಅಡಿಪಾಯದ

ಮೇಲೆ ಮಸೀದಿಯನ್ನು ಟಿಪ್ಪೂ ರಚಿಸಿದನೆಂದು ೧೯೩೫ರ ಪ್ರಾಚ್ಯವಸ್ತು ಇಲಾಖೆ ವರದಿ ದಾಖಲಿಸಿದೆ. ಎತ್ತರಕ್ಕಾದಂತೆ ಪಶ್ಚಿಮಾಭಿಮುಖವಾಗಿರುವ ಈ ಮಸೀದಿಯ ಮೆಹರಬ್ ಕಲಾತ್ಮಕವಾಗಿದೆ. ಮುಂದಿರುವ ಕೊಳವನ್ನು ದಾಟಿ, ಮೆಟ್ಟಿಲುಗಳನ್ನೇರಿದರೆ ಸಿಗುವ ವಿಶಾಲವಾದ ಉಪ್ಪರಿಗೆಯ ಗೋಡೆಯನ್ನಲಂಕರಿಸಿರುವ ಕಲಾತ್ಮಕ ಕ್ಯಾಲಿಗ್ರಫಿ ಬರವಣಿಗೆಯು ಕುರಾನಿನ ಆಯ್ದ ಭಾಗಗಳ ಜೊತೆಗೆ, ಅಲ್ಲಾನ ೯೯ ನಾಮಾವಳಿಗಳನ್ನೂ ಒಳಗೊಂಡಿದ್ದು, ಅಲ್ಲೇ ಇರುವ ಕ್ರಿ.ಶ.೧೭೮೭ರ ಪರ್ಷಿಯನ್ ಶಾಸನ ಸಾಲೊಮನ್ನನು ಹಿಂದೆ ತಾನು ಜೆರುಸಲೇಮಿನಲ್ಲಿ ನಿರ್ಮಿಸಿದ ಮಸೀದಿಗೆ 'ಜಾಮಿಯಾ ಎ ಅಕ್ಷ' (ಉತ್ಕೃಷ್ಟವಾದ ಮಸೀದಿ) ಎಂದು ಹೆಸರಿಟ್ಟಿದ್ದರೆ, ಟಿಪ್ಪು ಕಟ್ಟಿಸಿದ ಈ ಮಸೀದಿಗೆ ದೇವಕನ್ನಿಕೆಯೋರ್ವಳು 'ಜಾಮಿಯಾ ಅಲ' (ಶ್ರೇಷ್ಠ ಮಸೀದಿ) ಎಂದು ನಾಮಕರಣ ಮಾಡಿದಳೆಂದು ವರ್ಣಿಸುತ್ತದೆ. ಮಸೀದಿಯ ಆಕರ್ಷಕ ಕಮಾನುಗಳು ಹಾಗೂ ಎತ್ತರದ ಅಷ್ಟಕೋನಾಕಾರದ ಮಿನಾರುಗಳು ಗಮನಾರ್ಹವಾಗಿವೆ.

ಮಸೀದಿಯ ಎಡಭಾಗದಲ್ಲಿರುವ ನೆಲಮಾಳಿಗೆ ಸೆರೆಮನೆಯಿಂದ (ಇನ್ ಮ್ಯಾನ್ ಡಂಜನ್) ಪೂರ್ವ ದಿಕ್ಕಲ್ಲಿ ಮುನ್ನಡೆದರೆ, ಸಿಗುವ ಜ್ಯೋತಿಷ್ಯ ಹಿನ್ನೆಲೆಯ 'ಬಿದ್ದ ಕೋಟೆಯ ಬಾಗಿಲು', ನೀರ ಬಾಗಿಲುಗಳನ್ನು ದಾಟಿದರೆ ಬ್ರಿಟೀಷರೊಂದಿಗೆ ಹೋರಾಡುತ್ತಾ ಮೇ.೪, ೧೭೯೯ರಂದು ಮಡಿದ ಟಿಪ್ಪುವಿನ ಶವ ದೊರೆತ ಸ್ಥಳ ಸಿಗುತ್ತದೆ. ಅದನ್ನು ಹಿಂದಕ್ಕೆ ಹಾಕಿ ಮುನ್ನಡೆದರೆ ಸಿಗುವುದೇ ಗಂಗಾಧರೇಶ್ವರ ದೇವಾಲಯ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಮೂಲತ: ಹೊಯ್ಸಳರ ರಚನೆಯಾಗಿದ್ದು, ವಿಜಯನಗರ–ಮೈಸೂರು ಅರಸರ ಹಾಗೂ ದಳವಾಯಿಗಳ ಕಾಲದಲ್ಲಿ ಸಾಕಷ್ಟು ಸೇರ್ಪಡೆಗಳೊಂದಿಗೆ ವಿಸ್ತಾರಗೊಂಡಿದೆ. ಪ್ರಧಾನ ಗರ್ಭಗೃಹದಲ್ಲಿ ಗಂಗಾಧರೇಶ್ವರ ಲಿಂಗವಿದ್ದು, ಎಡಭಾಗದಲ್ಲಿ ಹಿಂಭಾಗಕ್ಕಾದಂತೆ ಪ್ರಸನ್ನ ಪಾರ್ವತಿ ಅಮ್ಮನವರ ಗುಡಿಯಿದೆ. ಈ ಗುಡಿಗೆ ಸಂಬಂಧಿಸಿದಂತೆ ಇರುವ ಐದು ಶಾಸನಗಳಲ್ಲಿ ಮೂರು ಭೂದತ್ತಿ ಶಾಸನಗಳಾಗಿದ್ದು, ಉಳಿದೆರಡರಿಂದ ಪಂಚಲೋಹದ ದಕ್ಷಿಣಾ ಮೂರ್ತಿಯ ಸುಂದರ ವಿಗ್ರಹವು ಕಳಲೆ ನಂಜರಾಜಯ್ಯನ ಸೇವೆಯೆಂದೂ ತಾಂಡವೇಶ್ವರ ಮೂರ್ತಿಯು ಶಿವರಾಮಪಂಡಿತರ ಸೇವೆಯೆಂದೂ ಗೊತ್ತಾಗುತ್ತದೆ. ಈ ದೇವಾಲಯದಲ್ಲಿ ಷಣ್ಮುಖ, ಸಪ್ತಮಾತೃಕಾ, ನಾರಾಯಣ, ಮಹಿಷಮರ್ಧಿನಿ, ಸೂರ್ಯ, ಭೈರವ, ವೀರಭದ್ರ, ಪಂಚಮುಖಿ ಗಾಯಿತ್ರಿ ಮುಂತಾದ ಸುಂದರ ಶಿಲ್ಪಗಳಿವೆ. ಈ ಗುಡಿಯ ಪ್ರಾಕಾರದಲ್ಲಿರುವ ಕಿರುಗುಡಿಗಳಲ್ಲಿ ಓಂಕಾರೇಶ್ವರ, ಅವಿಮುಕ್ತಕೇಶ್ವರ, ಸಂವರ್ತಕೇಶ್ವರ ಮುಂತಾದ ಹೆಸರಿನ ಶಿವಲಿಂಗಗಳಿದ್ದು, ತಮಿಳುನಾಡಿನ ೬೩ ಪುರಾತನ ಶೈವಭಕ್ತರಲ್ಲಿ ೧೫ ಭಕ್ತರ ವಿಗ್ರಹಗಳಿಲ್ಲಿವೆ. ಕಿಲಗೆರೆ (ಚಾಮರಾಜನಗರ ತಾ.) ಯ ಕ್ರಿ.ಶ.೧೬೧೧ರ ಶಾಸನದಿಂದ ಹಿಂದೆ ಇಲ್ಲಿ ವೀರಶೈವ ಮಠವಿದ್ದ ಅಂಶ ವೇದ್ಯವಾಗುತ್ತದೆ. ಗಂಗಾಧರೇಶ್ವರ ಗುಡಿಯ ಬಲಮುಂಭಾಗದಲ್ಲಿರುವ ನಿವೇಶನವೇ ಹೈದರ್ ಹಾಗೂ ಟಿಪ್ಪು ಸುಲ್ತಾನರ 'ಲಾಲ್ ಮಹಲ್' ಅರಮನೆ ಇದ್ದ ಸ್ಥಳವಾಗಿದ್ದು, ಇಂದು ಅದರ ಅಡಿಪಾಯ ಗೋಡೆಗಳಷ್ಟೇ ಉಳಿದಿವೆ. ಟಿಪ್ಪು ಕಾಲದಲ್ಲಿ ವೈಭವಾಲಂಕಾರಗಳಿಂದ ವಿಜೃಂಭಿಸುತ್ತಿದ್ದು, ಅದರ ಒಂದು ಭಾಗವು, ಸ್ವಲ್ಪಕಾಲ ಗಂಧದ ತುಂಡುಗಳನ್ನು ಶೇಖರಿಸಿಡುವ ಉಗ್ರಾಣವೂ ಆಗಿತ್ತು.

ಶ್ರೀರಂಗಪಟ್ಟಣದ ಪ್ರಧಾನ ದೈವ ಶ್ರೀರಂಗನಾಥನಿಂದಾಗಿ ಅವನ ಹೆಸರೇ ಊರಿಗೂ ಅನ್ವಯವಾಗಿದ್ದು, ಉತ್ತರದಿಂದ ಬಂದ ಗೌತಮ–ಅಹಲ್ಯಾ ಋಷಿದಂಪತಿ, ಇಲ್ಲೇ ಆಶ್ರಮವಾಸಿಗಳಾಗಿ ನೆಲೆಸಿ, ತುಳಸೀವನದಲ್ಲಿದ್ದ ರಂಗನಾಥನನ್ನು ಆರಾಧಿಸುತ್ತಿದ್ದರೆಂದು, ಅದರಿಂದಾಗಿ 'ಗೌತಮ ಕ್ಷೇತ್ರ' ಎಂದು ಹೆಸರಾಯಿತೆಂಬ ದಂತಕತೆಯೂ ಇದೆ. ಗಂಗ ದಂಡನಾಯಕ ತಿರುಮಲಯ್ಯನು ಇಲ್ಲಿ ರಂಗನಾಥ ಹಾಗೂ ತಿರುಮಲದೇವರ ಗುಡಿಗಳನ್ನು ನಿರ್ಮಿಸಿ, ಊರಿಗೆ ಶ್ರೀರಂಗಪುರ ಎಂದು ನಾಮಕರಣ ಮಾಡಿದನೆಂದೂ ಶಿಕಾರಿಪುರ ತಾಲೂಕಿನ ಕ್ರಿ.ಶ.೮೯೪ರ ಶಾಸನವೊಂದನ್ನು ಉಲ್ಲೇಖಿಸಲಾಗುತ್ತಿದೆ. ಆದರೆ ಇದನ್ನು ಸಮರ್ಥಿಸುವ ದಾಖಲೆಗಳ ಅಲಭ್ಯತೆಯಿಂದಾಗಿ ಈ ಅಭಿಪ್ರಾಯವನ್ನು ಪುನರ್ ಪರಿಶೀಲಿಸಬೇಕಾಗಿದೆ. ಪ್ರಾಚೀನ ಶಾಸನಗಳಲ್ಲಿ 'ತಿರುವರಂಗ ನಾರಾಯಣ' (ಕ್ರಿ.ಶ.೧೨೧೦), ಸೌಮ್ಯರಾಜ–

ಶ್ರೀರಂಗನಾಥ (ಕ್ರಿ.ಶ.೧೪೩೧), ಪಶ್ಚಿಮರಂಗನಾಥ (ಕ್ರಿ.ಶ.೧೫೨೦) ಎಂದೆಲ್ಲಾ ಉಲ್ಲೇಖಿತಗೊಂಡಿರುವ ಶ್ರೀರಂಗನಾಥನಿಗೆ ಸಂಬಂಧಿಸಿದಂತೆ ಇಲ್ಲಿಂದ ಈವರೆಗೆ ೨೦ ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ರಂಗನಾಥ ಗುಡಿಯ ದಕ್ಷಿಣ ತಳಪಾದಿ ಕಲ್ಲ ಮೇಲಿರುವ ಹೊಯ್ಸಳ ಇಮ್ಮಡಿ ಬಲ್ಲಾಳನ ಕ್ರಿ.ಶ.೧೨೧೦ರ ತಮಿಳು ಶಾಸನವೇ ಪ್ರಾಚೀನದ್ದಾಗಿದ್ದು, ಶ್ರೀರಂಗಪಟ್ಟಣದ ವರಂತರುವ ಪೆರುಮಾಳನು ಚತುರ್ಮುಖ ನಾರಾಯಣ ಚತುರ್ವೇದಿ ಮಂಗಲವಾದ ಬ್ರಹ್ಮಪುರವನ್ನು ಖರೀದಿಸಿ, ೮೫ ಬ್ರಾಹಣರಿಗೆ ಹಂಚುವುದರ ಜೊತೆಗೆ ಶ್ರೀರಂಗದೇವರಿಗೂ ದಾನ ಬಿಟ್ಟಿರುವುದನ್ನು ದಾಖಲಿಸಿದರೆ, ಉಳಿದವು ವಿಜಯನಗರದ ಅರಸರು, ಸಾಮಂತರು, ಮೈಸೂರು ಅರಸರು, ಕಳಲೆ ದಳವಾಯಿ ಹಾಗೂ ಟಿಪ್ಪು ಸುಲ್ತಾನರ ಕಾಲದ ದತ್ತಿಗಳಾಗಿವೆ.

ಪೂರ್ವಾಭಿಮುಖವಾಗಿರುವ ದ್ರಾವಿಡ ಶೈಲಿಯ ಶ್ರೀರಂಗನಾಥ ದೇವಾಲಯವು ರಾಜ್ಯದ ಕೆಲವೇ ವಿಶಾಲ ಗುಡಿಗಳಲ್ಲಿ ಒಂದಾಗಿದ್ದು, ವಿಶಾಲವಾದ ಪ್ರಾಕಾರದ ನಡುವೆ ಇರುವ, ಹೊಯ್ಸಳರ ಕಾಲದಷ್ಟು ಪುರಾತನವಾದ ಗರ್ಭಗೃಹದಲ್ಲಿ ಆದಿಶೇಷನ ಮೇಲೆ ಬಲಮಗ್ಗಲಾಗಿ, ಬಲಗೈ ಮೇಲೆ ತಲೆಯೂರಿ ಪವಡಿಸಿರುವ ಕಿರೀಟಧಾರಿ ಶ್ರೀರಂಗನಾಥನು ಸರ್ವಾಭರಣ ಭೂಷಿತನಾಗಿದ್ದು, ಸ್ವಲ್ಪ ಸ್ವಲ್ಪವೇ ಮೇಲೇಳುತ್ತಿರುವಂತೆ ಭಾಸವಾಗುತ್ತಿದ್ದು, ಅವನು ಪೂರ್ಣ ಎದ್ದು ಕುಳಿತಾಗ, ಪ್ರಳಯವಾಗುತ್ತದೆಂಬ ಜನಪದ ಹೇಳಿಕೆ ಇದೆ. ಶ್ರೀರಂಗಪಟ್ಟಣದ ಕ್ರಿ.ಶ.೧೫೨೮ರ ಶಾಸನವೊಂದು ಇವನನ್ನು 'ಪನ್ನಗಶಾಯಿ ಪಶ್ಚಿಮರಂಗ' ನೆಂದೇ ವರ್ಣಿಸಿದೆ. ಗರ್ಭಗುಡಿಯನ್ನು ಉತ್ತರ-ದಕ್ಷಿಣವಾಗಿ ವ್ಯಾಪಿಸಿರುವ ಸುಮಾರು ಹತ್ತು ಅಡಿ ಉದ್ದದ ಈ ಅಖಂಡ ಶಿಲ್ಪವು ಮನಮೋಹಕವಾಗಿದ್ದು, ಪದತಲದಲ್ಲಿ ಆರಾಧನಾ ಭಂಗಿಯ ಕಾವೇರಿ ಹಾಗೂ ಗೌತಮ ಮುನಿಯ ಕಿರುಶಿಲ್ಪಗಳಿದ್ದು, ಸರ್ಪರಾಜನ ಏಳು ಹೆಡೆಗಳೇ ಛತ್ರಿಯಂತೆ ನೆರಳು ನೀಡುತ್ತಿವೆ. ಗರ್ಭಗೃಹದ ದ್ವಾರಬಂಧ ಆಕರ್ಷಕವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ, ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದು, ಅಷ್ಟಕೋನಾಕಾರದ ಛತ್ತಲ್ಲಿ ಕಮಲಾಲಂಕಾರವಿದೆ. ಈ ದೇವಾಲಯವು ನಾಗಮಂಗಲ ರಾಜ್ಯದ ಪ್ರಭು, ಸಾಮಂತ ತಿಮ್ಮಣ್ಣ ದಂಡನಾಯಕನ ಕಾಲದಲ್ಲಿ (ಕ್ರಿ.ಶ.೧೪೫೮) ನೂತನ ಸೇರ್ಪಡೆಗಳೊಂದಿಗೆ ವಿಸ್ತಾರಗೊಂಡು ಮತ್ತಷ್ಟು ಮಹತ್ವ ಪಡೆಯಿತು. ವಿಜಯನಗರದ ಅರಸರ ಕಾಲದಲ್ಲಿ ರಂಗನಾಯಕಿ ಅಮ್ಮನವರ ಗುಡಿ ಸೇರ್ಪಡೆಗೊಂಡು ಅದರ ಮೊದಲ ಉಲ್ಲೇಖ ಶ್ರೀರಂಗಪಟ್ಟಣದ ಕ್ರಿ.ಶ.೧೫೨೮ರ ಶಾಸನದಲ್ಲಿ ಕಂಡುಬರುತ್ತದೆ. ವಿಜಯನಗರದ ರಾಜಪ್ರತಿನಿಧಿಯಾದ ತಿರುಮಲರಾಯನ ಮಡದಿ ಆಲಮೇಲಮ್ಮನು, ಪ್ರತೀ ಮಂಗಳವಾರ-ಶುಕ್ರವಾರಗಳಲ್ಲಿ ತನ್ನ ವಶದಲ್ಲಿದ್ದ ರಂಗನಾಯಕಿ ಅಮ್ಮನವರ ಆಭರಣಗಳನ್ನು ದೇವಿಗೆ ಅಲಂಕಾರ ಮಾಡಲು ನೀಡುತ್ತಿದ್ದು, ಈಗಲೂ ದೇವಿಯ ಮೂಗನ್ನು ಅಪ್ಪಿರುವ ಮುತ್ತಿನ ಮೂಗುತಿ ಆಲಮೇಲಮ್ಮನದೇ ಎಂಬ ಹೇಳಿಕೆ ಇದೆ. ಮುಂದೆ ರಾಜ ಒಡೆಯರು ದೇವಿಯ ಸಲುವಾಗಿ ಆ ಆಭರಣಗಳಿಗಾಗಿ ಒತ್ತಾಯಿಸಿ ಆಲಮೇಲಮ್ಮನ ಶಾಪಕ್ಕೆ ಗುರಿಯಾದರೆಂದೂ, ಶಪಿಸಿದ ಆಲಮೇಲಮ್ಮನು ಮಾಲಂಗಿ (ತಲಕಾಡು) ಬಳಿ ಮಡುವಿನಲ್ಲಿ ಮುಳುಗಿದಳೆಂಬ ಜನಪದ ನಂಬಿಕೆಯೂ ಚಾಲ್ತಿಯಲ್ಲಿದೆ. ಈ ದೇವಾಲಯದ ಪ್ರಾಕಾರದ್ವಾರವು ಭವ್ಯವಾದ ಐದು ಅಂತಸ್ತಿನ ರಾಯಗೋಪುರವನ್ನು ಹೊಂದಿದ್ದು, ಸುಮಾರು ೧೭ನೆಯ ಶತಮಾನದ ರಚನೆಯಂತೆ ತೋರುತ್ತದೆ. ಗುಡಿಯ ಹೊರಪ್ರಾಕಾರದಲ್ಲಿ ಗರುಡ, ಸೂರ್ಯನಾರಾಯಣ, ಲಕ್ಷ್ಮೀನರಸಿಂಹ, ಕೋದಂಡರಾಮ, ಗಜೇಂದ್ರವರಪ್ರಸಾದ, ಪ್ರಸನ್ನ ವೆಂಕಟರಮಣ, ಹನುಮಂತಾದಿ ದೇವತೆಗಳ ಪ್ರತ್ಯೇಕ ಗುಡಿಗಳಿದ್ದು, ಒಳಗೆ ಭವ್ಯ ಮೂರ್ತಿಗಳಿವೆ. ಅಲ್ಲದೆ ಶ್ರೀವೈಷ್ಣವ ಆಚಾರ್ಯರ ಹಾಗೂ ಆಳ್ವಾರರ ಶಿಲ್ಪಗಳೂ ಇವೆ. ಶ್ರೀರಂಗಪಟ್ಟಣದ ಕ್ರಿ.ಶ.೧೬೮೬ರ ತಾಮ್ರಶಾಸನದಿಂದ, ಕೋದಂಡರಾಮ ದೇವರ ಗುಡಿಯು ಮೈಸೂರು ಅರಸರ ಕಾಲದ ಸೇರ್ಪಡೆ ಎಂದು ಊಹಿಸಬಹುದಾಗಿದೆ. ಸುಮಾರು ಕ್ರಿ.ಶ.೧೭೭೪ರಲ್ಲಿ ಶ್ರೀರಂಗನಾಥ ದೇವಾಲಯದ ಒಂದು ಭಾಗಕ್ಕೆ ಬೆಂಕಿ ಬಿದ್ದಾಗ, ಹೈದರನು ಅದನ್ನು ದುರಸ್ತಿಗೊಳಿಸಿದನೆಂದು 'ಹೈದರ್ ನಾಮಾ' ಹೇಳುತ್ತಿದ್ದು, ಗುಡಿಯ ಪಾತಾಳಾಂಕಣ ಭಾಗವೇ ಅದಾಗಿದೆ. ಇಲ್ಲಿಯ ಪ್ರಸನ್ನ ವೆಂಕಟರಮಣಸ್ವಾಮಿ ಗುಡಿಯಲ್ಲಿರುವ ಕ್ರಿ.ಶ.೧೮೨೯ರ

ಶಾಸನದಿಂದ ರಂಗನಾಥ ಗುಡಿಯ ವಾಯುವ್ಯಕ್ಕಿರುವ ಪ್ರಸನ್ನ ವೆಂಕಟರಮಣ ದೇವರಿಗೆಂದು ಮುಂದಿನ ಬಾವಿ ಹಾಗೂ ಶಿಲಾಮಂಟಪಗಳು ನಿರ್ಮಾಣಗೊಂಡ ಅಂಶ ಗೊತ್ತಾಗುತ್ತದೆ.

ರಂಗನಾಥ ಗುಡಿಯ ಸಮೀಪದಲ್ಲೇ ಫ್ರೆಂಚ್ ತಂತ್ರಜ್ಞ (ಕಮಾನು) ಕರ್ನಲ್ ಡಿ.ಹೆವಿಲ್ಯಾಂಡನು ಕ್ರಿ.ಶ.೧೮೦೮ರಲ್ಲಿ ಪ್ರಯೋಗಾರ್ಥವಾಗಿ ಇಟ್ಟಿಗೆ-ಗಾರೆಗಳನ್ನು ಬಳಸಿ ನಿರ್ಮಿಸಿದ ಸುಮಾರು ೧೧೨ ಅಡಿ ಉದ್ದದ ತೂಗು (ಕಮಾನು) ಸೇತುವೆಯು ಸ್ಪ್ರಿಂಗಿನಂತೆ ಸುಮಾರು ಒಂದೆರಡು ಇಂಚು ಮೇಲಕ್ಕೂ ಕೆಳಕ್ಕೂ ಜಗ್ಗಾಡುತ್ತಿದ್ದು, ೧೯೩೬ರಲ್ಲಿ ನೆಲವಪ್ಪಿತೆಂದು ತಿಳಿದು ಬರುತ್ತಿದ್ದು, ಇಂದು ಅದರ ಅವಶೇಷವಷ್ಟೇ ಉಳಿದಿದೆ.

ರಂಗನಾಥ ದೇವಾಲಯದ ಮುಂಭಾಗದಲ್ಲೇ ಆರಂಭದಲ್ಲಿ ವಿಜಯನಗರದ ರಾಜಪ್ರತಿನಿಧಿಗಳು, ನಂತರ ಮೈಸೂರು ಅರಸರ ವಾಸಸ್ಥಾನವಾಗಿದ್ದ ಅರಮನೆಯ ಪಾಳು ಕಟ್ಟಡವಿದ್ದು, ಟಿಪ್ಪು ಕಾಲದಲ್ಲಿ ಮೈಸೂರು ಅರಸು ಕುಟುಂಬವು ಶ್ರೀರಂಗನಾಥನ ಗುಡಿಯ ಆವರಣದಲ್ಲಿ ಆಶ್ರಯ ಪಡೆದಿತ್ತೆಂದು ತಿಳಿದುಬರುತ್ತದೆ. ಅರಮನೆ ನಿವೇಶನಕ್ಕೆ ಅನತಿ ದೂರದಲ್ಲಿರುವ ಲಕ್ಷ್ಮೀನರಸಿಂಹಸ್ವಾಮಿಯ ಗುಡಿಯೂ ವಿಶಾಲವಾಗಿದ್ದು, ಹೊರಪ್ರಾಕಾರ ಭಗ್ನವಾಗಿದೆ. ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ನಿರ್ಮಾಣಗೊಂಡಿರುವ ಈ ಗುಡಿಯ ಗರ್ಭಗೃಹದಲ್ಲಿ ಎತ್ತರದ ಪೀಠದ ಮೇಲೆ ಲಕ್ಷ್ಮಿಯನ್ನು ಆಲಿಂಗನ ಭಂಗಿಯಲ್ಲಿ ಕೂರಿಸಿಕೊಂಡಿರುವ ನರಸಿಂಹನ ಶಿಲ್ಪ ಹಾಗೂ ಅಂಬೆಗಾಲು ಕೃಷ್ಣನ ವಿಗ್ರಹಗಳು ಉಲ್ಲೇಖಾರ್ಹವಾಗಿವೆ. ಈ ದೇವಾಲಯದ ರಂಗಮಂಟಪದ ಎಡಭಾಗದ ಕೊಠಡಿಯಲ್ಲಿ ಕಂಠೀರವ ನರಸರಾಜರ ಸುಮಾರು ಮೂರೂವರೆ ಅಡಿ ಎತ್ತರದ ಶಾಸನಯುಕ್ತ ಪ್ರತಿಮೆ ಇದೆ. ಇಲ್ಲಿರುವ ಲಕ್ಷ್ಮೀನರಸಿಂಹನ ಶಿಲ್ಪವನ್ನು ಒಡೆಯರು ತಿರುಚನಾಪಳ್ಳಿಯಿಂದ ತಂದು ಪ್ರತಿಷ್ಠಾಪಿಸಿದರೆಂಬ ಅಭಿಪ್ರಾಯವಿದೆ. ಚಿಕ್ಕದೇವರಾಜ ಒಡೆಯರ ಕಾಲದಲ್ಲೂ ಈ ದೇವಾಲಯ ಸಾಕಷ್ಟು ಅಭಿವೃದ್ಧಿ ಹೊಂದಿತೆಂದು ತಿಳಿದುಬರುತ್ತದೆ. ಮುಂದೆ ಈ ದೇವಾಲಯದ ಪ್ರಾಕಾರದ ದ್ವಾರಗೋಪುರವನ್ನು ಕೆಡವಿಸಿದ ಟಿಪ್ಪು ಅದನ್ನು ತನ್ನ ಟಂಕಸಾಲೆಯನ್ನಾಗಿ ಮಾಡಿಕೊಂಡಿದ್ದನೆಂದೂ ತಿಳಿದುಬರುತ್ತದೆ. ಆದರೆ ಟೀಪ್ಪು ಪತನಾ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರು ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿದರೆಂದು ಗೊತ್ತಾಗುತ್ತದೆ. ಅನತಿ ದೂರದಲ್ಲೇ ಇರುವ ಕೃಷ್ಣರಾಜ ಮಂದಿರವನ್ನು ಕೃಷ್ಣರಾಜ ಒಡೆಯರು ಜನಿಸಿದ ಸ್ಥಳದಲ್ಲಿ ಕಟ್ಟಲಾಗಿದ್ದು, ಅದರಲ್ಲಿ ಈಗ ರಾಜ್ಯ ಪುರಾತತ್ವ ಇಲಾಖೆಯ ಪ್ರಾಚ್ಯ ವಸ್ತುಸಂಗ್ರಹಾಲಯವಿದೆ.

ಕೋಟೆಯ ಪೇಟೆ ಬೀದಿಯಲ್ಲಿರುವ ಪೇಟೆರಾಮನ ದೇವಾಲಯವು ಕ್ಷೌರಿಕ ಜನಾಂಗದವರಿಂದ ನಿರ್ವಹಿಸಲ್ಪಡುತ್ತಿದ್ದು, ಅಲ್ಲಿರುವ ಕ್ರಿ.ಶ.೧೫೩೭ರ ಶಾಸನವು ಮಹಾಮಂಡಳೇಶ್ವರ ರಾಮರಾಜಯ್ಯ ಮಹಾಅರಸುಗಳು ಶ್ರೀರಂಗಪಟ್ಟಣ ಸೀಮೆಯ ನಾಯಿಂದರಿಗೆ ಕೆಲವು ಸುಂಕಗಳನ್ನು ಮನ್ನಾ ಮಾಡಿದ ಅಂಶವನ್ನು ತಿಳಿಸುತ್ತದೆ. ಇತ್ತೀಚೆಗೆ ತಿರುವೆಯ್ಯಾರಿನ ತ್ಯಾಗರಾಜರ ಸಮಾಧಿಯ ಮೃತ್ತಿಕೆಯನ್ನು ತಂದು ಅವರ ಸಮಾಧಿಯನ್ನು ಪ್ರಾತಿನಿಧಿಕವಾಗಿ ಸ್ಥಾಪಿಸಿ ಅವರ ಮೂರ್ತಿಯೊಂದನ್ನೂ ಪ್ರತಿಷ್ಠಾಪಿಸಿ, ಪ್ರತೀ ವರ್ಷ ತ್ಯಾಗರಾಜರ ಆರಾಧನೆ, ಸಂಗೀತೋತ್ಸವಗಳನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು, ಪುರಂಧರರ ಆರಾಧನೆಯು ನಡೆಯುತ್ತದೆ. ಅದೇ ರಸ್ತೆಯಲ್ಲಿರುವ ಜ್ಯೋತಿರ್ಮಹೇಶ್ವರ ದೇವಾಲಯವೂ ದೊಡ್ಡದಿದ್ದು, ಕಾಳಮ್ಮನ ಗುಡಿಗೆ ಸಂಬಂಧಿಸಿದಂತೆ ಕ್ರಿ.ಶ.೧೮೫೨ ರಿಂದ ಕ್ರಿ.ಶ.೧೮೬೪ರ ಕಾಲಾವಧಿಯ ಮೂರು ದತ್ತಿ ಶಾಸನಗಳಿವೆ. ಇಲ್ಲಿಯ ಆದಿನಾಥ ಬಸದಿಯು ಪ್ರಥಮ ತೀರ್ಥಂಕರ ವೃಷಭನಾಥನದಾಗಿದ್ದು, ಪೂರ್ಣ ಜೀರ್ಣೋದ್ಧಾರಗೊಂಡಿದೆ. ಒಳಗಿರುವ ಗಂಗರ ಕಾಲದ ತೀರ್ಥಂಕರ ಶಿಲ್ಪವೂ ಸೇರಿದಂತೆ, ಧರಣೇಂದ್ರ ಯಕ್ಷ, ಪದ್ಮಾವತಿ ಯಕ್ಷಿಯರ ಶಿಲ್ಪಗಳೂ ಗಮನಾರ್ಹವಾಗಿವೆ. ಬಸದಿಯ ಮುಖಮಂಟಪದ ಎಡಗೋಡೆಗೆ ಸೇರಿರುವ ಕ್ರಿ.ಶ.೧೬೬೬ರ ಶಾಸನವು ಚಾರುಕೀರ್ತಿ ಪಂಡಿತಾಚಾರ್ಯರ ಶಿಷ್ಯರಾದ ಪಾಯಣ್ಣ ಹಾಗೂ

(ರಾ)ಜಯ್ಯರು ಶ್ರೀರಂಗಪಟ್ಟಣದ ಆದೀಶ್ವರರ ಭಂಡಾರಕ್ಕೆ ನೀಡಿದ ದಾನವನ್ನು ದಾಖಲಿಸಿದೆ. ಅಲ್ಲೇ ಕೋಟೆಯ ಆಗ್ನೇಯ ಮೂಲೆಯಲ್ಲಿರುವ ಝಂಡಾ ಬತೇರಿಯು ಕಾಲಕಾಲಕ್ಕೆ ವಿಜಯನಗರ, ಮೈಸೂರು, ಟೀಪ್ಪು ಹಾಗೂ ಬ್ರಿಟೀಷರ ಧ್ವಜಗಳು ಮುಗಿಲೆತ್ತರಕ್ಕೆ ಹಾರಿದ್ದನ್ನು ಕಂಡ ಸ್ಥಳವಾಗಿದ್ದು, ಈಗ ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರಧ್ವಜವನ್ನು ಏರಿಸಲಾಗುತ್ತದೆ. ಸಮೀಪದಲ್ಲೇ ಟೀಪ್ಪು ಕಾಲದ ಪಾಳು ಮದ್ದಿನಮನೆ ಇದ್ದು, ಕೋಟೆಯಲ್ಲಿ ಅಂಕಾಳಮ್ಮ, ಲಕ್ಷ್ಮೀನಾರಾಯಣ, ಸಂತಾನ ಗೋಪಾಲಕೃಷ್ಣ, ನಗರೇಶ್ವರ, ಜನಾರ್ದನ, ಆಂಜನೇಯ ಮುಂತಾದ ಹಳೆಯ ಗುಡಿಗಳೊಂದಿಗೆ ಅಯ್ಯಪ್ಪ, ಸುಬ್ರಮಣ್ಯ, ಶತಕೋಟಿ ರಾಮಮಂದಿರ ಮುಂತಾದ ನವೀನ ಗುಡಿಗಳೂ ಇವೆ. ಉತ್ತರಾದಿಮಠ, ರಾಘವೇಂದ್ರ ಮಠ, ಯತಿರಾಜ ಮಠಗಳೊಂದಿಗೆ ಜ್ಞಾನನಿಧಿ ಮಾಧ್ವಸ್ವಾಮಿಗಳ ಸನ್ನಿಧಿಯು 'ನೀರಬಾಗಿಲ' ಬಳಿ ಇದೆ. **ದರಿಯಾದೌಲತ್** : ಕೋಟೆಯ ಹೊರಗೆ, ಪೂರ್ವಕ್ಕಾದಂತೆ ಸಂಗಮಕ್ಕೆ ಹೋಗುವ ದಾರಿಯಲ್ಲಿ, ಕಾಲ್ನಡಿಗೆ ಅಂತರದಲ್ಲಿರುವ ದರಿಯ ದೌಲತ್ (ಸಾಗರ ಸಂಪತ್ತಿನ) ತೋಟ ಹಾಗೂ ಬೇಸಿಗೆ ಅರಮನೆಗಳು ಟಿಪ್ಪುವಿನ ವಿಶ್ರಾಂತಿ-ವಿಹಾರ ತಾಣವಾಗಿದ್ದು, ಆಕರ್ಷಕವಾಗಿವೆ. ಅರಮನೆಯ ಭಿತ್ತಿಯನ್ನೆಲ್ಲಾ ವ್ಯಾಪಿಸಿರುವ ವರ್ಣಚಿತ್ರಗಳ ಶ್ರೀಮಂತ ಅಲಂಕಾರಿಕೆಗೆ, ಈಸ್ಪಾನಿನ ಅರಮನೆಯೊಂದನ್ನು ಬಿಟ್ಟರೆ, ಭಾರತದಲ್ಲಿ ಇಂತಹ ಮತ್ತೊಂದು ನಿದರ್ಶನ ಕಾಣಸಿಗದೆಂದು ವಿದೇಶಿ ಪ್ರವಾಸಿ ರೀಸ್ ದಾಖಲಿಸಿದ್ದಾನೆ. ಇಂಡೋ-ಸಾರ್ಸೆನಿಕ್ ಶೈಲಿಯಲ್ಲಿರುವ ಬೇಸಿಗೆ ಅರಮನೆಯನ್ನು ಕೇಂದ್ರ ಪುರಾತತ್ವ ಇಲಾಖೆಯು ವಸ್ತು ಸಂಗ್ರಹಾಲಯವನ್ನಾಗಿ ಮಾರ್ಪಡಿಸಿ ಸಂರಕ್ಷಿಸುತ್ತಿದ್ದು, ಕಟ್ಟಡದ ಪೂರ್ವ-ಪಶ್ಚಿಮ ಭಿತ್ತಿಗಳ ಮೇಲೆ ಕ್ರಿ.ಶ.೧೭೮೦ರ ಕಾಂಚೀಪುರ ಯುದ್ಧ ದೃಶ್ಯ, ಹೈದರ್-ಟೀಪ್ಪು, ವಿವಿಧ ಪಾಳೇಗಾರರು ಹಾಗೂ ರಾಜರುಗಳನ್ನು ವಿವಿಧ ವರ್ಣಗಳಲ್ಲಿ ಚಿತ್ರಿಸಲಾಗಿದ್ದು, ಇವನ್ನು ಕ್ರಿ.ಶ.೧೭೯೯ರ ಶ್ರೀರಂಗಪಟ್ಟಣ ಮುತ್ತಿಗೆಗೆ ಮೊದಲು ಟೀಪ್ಪು ಅಳಿಸಿ ಹಾಕಿಸಿದ್ದನು. ಆದರೆ ಶ್ರೀರಂಗಪಟ್ಟಣದ ಪತನಾ ನಂತರ ಸ್ವಲ್ಪ ಕಾಲ ಇದು ಕರ್ನಲ್ ವೆಲ್ಲೆಸ್ಲಿಯ ವಾಸಸ್ಥಾನವಾಗಿದ್ದಾಗ, ಅವನ ಆದೇಶದಂತೆ, ಹಿಂದೆ ಅಲ್ಲಿದ್ದ ಭಿತ್ತಿವರ್ಣಚಿತ್ರಗಳನ್ನು ಪುನಾರಚಿಸಲಾಯಿತು. ಮುಂದೆ ಲಾರ್ಡ್ ಡಾಲ್‌ಹೌಸಿಯ ಸೂಚನೆಯಂತೆ ಕ್ರಿ.ಶ.೧೮೫೫ರಲ್ಲಿ ಶಿಥಿಲವಾಗಿದ್ದ ಈ ವರ್ಣಚಿತ್ರಗಳನ್ನು ದೇಶೀಯ ಕಲಾವಿದರಿಂದ ಪುನರ್ ಊರ್ಜಿತಗೊಳಿಸಲಾಯಿತು. ಇಲ್ಲಿಯ ಭಿತ್ತಿ ವರ್ಣಚಿತ್ರ ಒಂದಲ್ಲಾ ಎರಡು ಬಾರಿ ಪುನಾರಚನೆಗೊಂಡಿದ್ದರೂ ಮೂಲವನ್ನು ಯಥಾರೀತಿ ಉಳಿಸಿಕೊಳ್ಳಲಾಗಿದ್ದು, ಬ್ರಿಟೀಷ್, ಫ್ರೆಂಚ್, ಮರಾಠ, ನಿಜಾಮ ಹಾಗೂ ದೇಶೀಯ ಪಾಳೇಗಾರರ ಸೈನಿಕರನ್ನು ಚಿತ್ರಿಸುವಲ್ಲಿ ಕಲಾವಿದನು ಸಾಂಸ್ಕೃತಿಕ ಅಂಶಗಳಿಗೆ ನೀಡಿರುವ ಒತ್ತು ಗಮನಾರ್ಹವಾಗಿದೆ. (ವಿವರಗಳಿಗೆ ಅಧ್ಯಾಯ ೧೪ : ಸಂಸ್ಕೃತಿ ನೋಡಿ) ಶಿರಾದಲ್ಲಿ ಮೊಘಲ್ ರಾಜ್ಯಪಾಲ ದಿಲಾವರ ಖಾನನು ನಿರ್ಮಿಸಿದ್ದ ಅರಮನೆಯ ಮಾದರಿಯಲ್ಲೇ ಈ ಅರಮನೆಯನ್ನು ಟೀಪ್ಪು ಕ್ರಿ.ಶ.೧೭೮೪ರಲ್ಲಿ ನಿರ್ಮಿಸಿದ್ದು, ರಾಯಭಾರಿಗಳಿಗೆ ಇಲ್ಲೇ ಸಂದರ್ಶನ ನೀಡುತ್ತಿದ್ದು, ರಾತ್ರಿಯಾಗುತ್ತಿದ್ದಂತೆ ಕೋಟೆ ಅರಮನೆಗೆ ಹಿಂತಿರುಗುತ್ತಿದ್ದನಂತೆ. ಇಲ್ಲಿ ಹಿಂದೆ ಮಹಾನವಮಿ ಮಂಟಪವಿದ್ದು, ಮೈಸೂರರಸರು ದಸರಾ ಹಬ್ಬವನ್ನು ಆಚರಿಸುತ್ತಿದ್ದರೆಂದೂ ಮುಂದೆ ಹೈದರನು ಕ್ರಿ.ಶ.೧೭೬೧ ರಿಂದ ಅದನ್ನು ಸೈನಿಕ ಶಿಬಿರವನ್ನಾಗಿ ಮಾಡಿಕೊಂಡನೆಂದೂ ತಿಳಿದು ಬರುತ್ತದೆ.

ಇಲ್ಲಿಂದ ಎಡಕ್ಕೆ ಹೊರಳಿದರೆ ಸಿಗುವ **ಷಾಹರ್ ಗಂಜಾಂ** ಟೀಪ್ಪು ಕಾಲದಲ್ಲಿ ಶ್ರೀರಂಗಪಟ್ಟಣದ ಬಜಾರ್ ಆಗಿದ್ದು, ಪೇಪರ್ ಹಾಗೂ ಜರಿಯ ರುಮಾಲುಗಳನ್ನು ತಯಾರಿಸಲೆಂದು ತಾನು ಶಿರಾದಿಂದ ಕರೆತಂದ ಕುಶಲಕರ್ಮಿ ಕುಟುಂಬಗಳ ವಸತಿಗಾಗಿ ಟೀಪ್ಪು ನಿರ್ಮಿಸಿದ ಪಟ್ಟಣ ಇದಾಗಿದ್ದು, ಶಾಸನವೊಂದರಲ್ಲಿ ಇಲ್ಲಿದ್ದ ಶಿರಾ ಬಜಾರಿನ ಉಲ್ಲೇಖವಿದ್ದು, ಹಿಂದೆ ಜನಸಂದಣಿಯಿಂದ ಕೂಡಿದ್ದ ಇದು ಕ್ರಿ.ಶ.೧೯೯೯ರ ಪ್ಲೇಗ್‌ಗೆ ಬಲಿಯಾಗಿ ಕುಗ್ರಾಮವಾಯಿತು. ಇಲ್ಲಿಗೆ ಅನತಿ ದೂರದಲ್ಲೇ ಇರುವ **ಅಬ್ಬೆದುಬೆ ಇಗರ್ಜಿಯು** ಕ್ರಿ.ಶ.೧೮೦೦-೧೮೨೩ರವರೆಗೆ ಇಲ್ಲೇ ನೆಲೆಸಿದ್ದ ಫ್ರೆಂಚ್ ಪಾದ್ರಿ ಅಬ್ಬೆದುಬೆಯಿಂದ ನಿರ್ಮಿಸಲ್ಪಟ್ಟಿರುವ ಅಂಶ ಇಗರ್ಜಿಯ ಘಂಟೆಗೋಪುರದ ಮೇಲಿರುವ ೧೮೦೦ರ

ಶಾಸನದಿಂದ ಗೊತ್ತಾಗುತ್ತಿದ್ದು, ಇದೊಂದು ಇಂಡೋ-ಫ್ರೇಂಚ್ ಶೈಲಿಯ ಸರಳ ಸುಂದರ ರಚನೆಯಾಗಿದೆ. ಇಗರ್ಜಿಯ ಒಳಗೆ ಈ ಪಾದ್ರಿಯ ಭಾವಚಿತ್ರ, ಉಡುಗೆ-ತೊಡುಗೆ, ಕುರ್ಚಿ-ಮೇಜು, ಈಗಲೂ ಸುಸ್ಥಿತಿಯಲ್ಲಿರುವ ಆ ಕಾಲದ ಫ್ರೆಂಚ್ ಗಡಿಯಾರ, ಕಲಾತ್ಮಕ ಶಿಲುಬೆ, ಏಸುಪ್ರತಿಮೆ, ಮುಂತಾದವುಗಳಿದ್ದು, ಆವರಣದಲ್ಲಿರುವ ಸುಮಾರು ೨೦೦ ಕಿ.ಗ್ರಾಂ. ತೂಕದ ಕಂಚಿನ ಗೋಪುರ ಗಂಟೆ ಗಮನಾರ್ಹವಾಗಿದೆ. **ನಿಮಿಷಾಂಬ ದೇವಾಲಯ** : ಗಂಜಾಮಿನಲ್ಲಿ ಉತ್ತರ ಕಾವೇರಿಯ ದಂಡೆ ಮೇಲಿರುವ ನಿಮಿಷಾಂಬ-ಮೌಕ್ತಿಕೇಶ್ವರ ದೇವಾಲಯವು, ಮುಕ್ತಕಮುನಿಯ ಕೋರಿಕೆಯಂತೆ ಆದಿಶಕ್ತಿಯು ನಿಮಿಷನಿಮಿಷಕ್ಕೂ ರೂಪು ಬದಲಿಸಿಕೊಳ್ಳುತ್ತಿದ್ದ ರಕ್ಕಸ ಜಾನುಮಂಡಲನನ್ನು ಸಂಹರಿಸಲು ನಿಮಿಷನಿಮಿಷಕ್ಕೂ ಭಿನ್ನರೂಪು ತಾಳಿದ್ದರಿಂದ ನಿಮಿಷಾಂಬ ಎಂಬ ನಾಮ ಪಡೆದಳೆಂಬ ಪೌರಾಣಿಕ ಹಿನ್ನೆಲೆಯಲ್ಲಿ ನಿರ್ಮಾಣಗೊಂಡಿದ್ದು, ನದಿ ತೀರದಲ್ಲಿರುವುದರಿಂದ ರಮಣೀಯವಾಗಿದ್ದು, ದೋಣಿ ವಿಹಾರಕ್ಕೆ ಹರಿಗೋಲಿನ ಸೌಲಭ್ಯವಿದೆ. ಪ್ರತೀ ಮಂಗಳವಾರ, ಶುಕ್ರವಾರಗಳಂದು ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಇಲ್ಲಿಗೆ ಭೇಟಿ ನೀಡುತ್ತಾರೆ. **ಗೋಸಾಯಿಘಾಟ್** : ಗುಂಬಜ್‌ಗೆ ಹೋಗುವ ಹಾದಿಯ ಬಲಕ್ಕೆ ಒಂದು ಕಿ.ಮೀ. ಅಂತರದಲ್ಲಿ ದಕ್ಷಿಣ ಕಾವೇರಿ ತೀರದಲ್ಲಿ ಶಿಥಿಲಾವಸ್ಥೆಯಲ್ಲಿದ್ದು, ಸಂರಕ್ಷಿಸಬೇಕಾಗಿದೆ. ಇಲ್ಲಿರುವ ಎರಡು ಗೋಸಾಯಿ ಘಾಟ್‌ಗಳಲ್ಲಿ ಚಿಕ್ಕ ಗೋಸಾಯಿಘಾಟಿನಲ್ಲಿ, ಕಿರು ದೇಗುಲ ಹಾಗೂ ಸ್ನಾನಘಟ್ಟಗಳಿದ್ದರೆ, ದೊಡ್ಡ ಗೋಸಾಯಿ ಘಾಟಿನ ಸ್ನಾನಘಟ್ಟದಂಚಲ್ಲಿರುವ ದೇಗುಲ ಸಮುಚ್ಛಯದ ಈಶ್ವರ, ಹನುಮಂತ ಹಾಗೂ ಕಾಶಿವಿಶ್ವೇಶ್ವರ ಗುಡಿಗಳು ಉಲ್ಲೇಖಾರ್ಹವಾಗಿವೆ. ಅದರಲ್ಲೂ ವಿಶಾಲವಾದ ಕಾಶಿವಿಶ್ವೇಶ್ವರ ದೇವಾಲಯವು ಪ್ರಧಾನವಾಗಿದ್ದು, ಮುಂದೆ ಹರಿದಿರುವ ಕಾವೇರಿ ಪ್ರವಾಸಿಗರಿಗೆ ಮುದ ನೀಡುತ್ತದೆ.

ಗುಂಬಜಿನ ಈಶಾನ್ಯ ಮೂಲೆಯಲ್ಲಿರುವ **ಕರ್ನಲ್ ಬೇಲಿಯ ಸ್ಮಾರಕ ಸಮಾಧಿ**ಯನ್ನು ಅವನ ದಾಯಾದಿ ಲೆ.ಕರ್ನಲ್ ಜಾನ್ ಬೇಲಿಯು ನಿರ್ಮಿಸಿದನೆಂದು ಅಲ್ಲೇ ಇರುವ ಕ್ರಿ.ಶ.೧೮೧೬ರ ಶಾಸನ ತಿಳಿಸುತ್ತದೆ. ಅದರ ಬದಿಯಲ್ಲೇ ಇರುವ ಅರಮನೆ ನಿವೇಶನದಲ್ಲಿ ಹಿಂದೆ ಹೈದರ್ ಕಟ್ಟಲಾರಂಭಿಸಿ, ಟೀಪ್ಪುವಿನ ಕೈಲಿ ಪೂರ್ಣಗೊಂಡಿದ್ದ **ಲಾಲ್‌ಬಾಗ್** ಅರಮನೆ ಎರಡು ಅಂತಸ್ತಿನದಾಗಿದ್ದು, ಮೇಲಿನ ಅಂತಸ್ತಿನಲ್ಲಿದ್ದ ಕೋಣೆ, ಮೊಗಸಾಲೆಗಳು ಆಕರ್ಷಕವಾಗಿತ್ತೆಂದು ತಿಳಿದುಬರುತ್ತದೆ. ಕ್ರಿ.ಶ.೧೭೯೨ರಲ್ಲಿ ಶ್ರೀರಂಗಪಟ್ಟಣ ಕೋಟೆಗೆ ಮುತ್ತಿಗೆ ಹಾಕಿದ್ದಾಗ ಲಾರ್ಡ್ ಕಾರ್ನ್‌ವಾಲೀಸ್ ಅಲ್ಲಿ ತಂಗಿದ್ದನೆಂದು ತಿಳಿದು ಬರುತ್ತಿದ್ದು, ಆಗ ಸತ್ತ ಬ್ರಿಟೀಷ್ ಸೈನಿಕರ ಶವಗಳನ್ನೂ ಅಲ್ಲೇ ಹೂಳಲಾಗಿತ್ತು. ಕ್ರಿ.ಶ.೧೮೦೪ರಲ್ಲಿ ಆ ಅರಮನೆಯನ್ನು ದುರಸ್ತಿಗೊಳಿಸಿ, ಕರ್ನಲ್ ಬ್ಯಾರಿಬೆಸ್ಟ್‌ಗೆ ವಸತಿ ಕಲ್ಪಿಸಲಾಗಿದ್ದು, ತದನಂತರ ಅದು ಪೂರ್ಣ ಹಾಳಾಯಿತು. ರೆವರೆಂಟ್ ಹೂಲೆ ಕ್ರಿ.ಶ.೧೮೨೨ರಲ್ಲಿ ಭೇಟಿ ನೀಡುವ ವೇಳೆಗಾಗಲೇ ಅದು ಶಿಥಿಲಗೊಂಡಿದ್ದ ಅಂಶ ವೇದ್ಯವಾಗುತ್ತದೆ. ಬ್ರಿಟೀಷ್ ಕಾರ್ಯದರ್ಶಿಯ ಸೂಚನೆಯಂತೆ ಕ್ರಿ.ಶ.೧೮೫೪ರಲ್ಲಿ ಆ ಕಟ್ಟಡವನ್ನು ಕೆಡವಿ ಅದಕ್ಕೆ ಬಳಸಿದ್ದ ತೇಗದ ಮರದ ಸರಂಜಾಮುಗಳನ್ನು ಊಟಿಯ ಸಂತ ಸ್ಟೀಫನ್ ಇಗರ್ಜಿಯ ನಿರ್ಮಾಣ ಹಾಗೂ ತ್ರಿನಿಟಿ ಇಗರ್ಜಿಯ ಪುನರುತ್ಥಾನ ಕಾರ್ಯಗಳಲ್ಲಿ ಬಳಸಿಕೊಳ್ಳಲಾಯಿತೆಂದು ಬ್ರಿಟಿಷ್ ದಾಖಲೆಗಳಿಂದ ತಿಳಿದು ಬರುತ್ತದೆ. **ಗುಂಬಜ್ :** ಗೋಸಾಯಿ ಘಾಟಿನಿಂದ ಸಂಗಮಕ್ಕೆ ಹೋಗುವ ಮಾರ್ಗದ ಬಲಭಾಗದಲ್ಲಿ ಆಕರ್ಷಕ ದ್ವಾರವಿರುವ ವಿಶಾಲವಾದ ಪ್ರಾಕಾರದ ಒಳಗೆ ಹೈದರ್, ಟೀಪ್ಪು ಮತ್ತವರ ಕುಟುಂಬದ ಸದಸ್ಯರ ಸಮಾಧಿಗಳಿವೆ. ತನ್ನ ತಂದೆ ಹೈದರನ ಸಮಾಧಿಗಾಗಿ ಟೀಪ್ಪು ಕ್ರಿ.ಶ.೧೭೮೪ರಲ್ಲಿ ನಿರ್ಮಿಸಿದ ಗುಂಬಜ್-ಲಾಲ್‌ಬಾಗ್ ಪರಿಸರವನ್ನು ಕಾಬೂಲ್ ಹಾಗೂ ಕಾಂದಹಾರುಗಳಿಂದ ತರಿಸಿದ ಫಲ-ಪುಷ್ಪ ವೃಕ್ಷಗಳಿಂದ ಶ್ರೀಮಂತಗೊಳಿಸಿದ ಟಿಪ್ಪು ಅಪಾರ ಹಣವೆಚ್ಚ ಮಾಡಿ ಮಾವು, ಸೇಬು, ಕಿತ್ತಳೆ, ನಿಂಬೆ, ಸೀತಾಫಲ, ದಾಳಿಂಬೆ, ಮರಸೇಬು (Rose Apple) ಮತ್ತು ಹಿಪ್ಪುನೇರಳೆ ವನವನ್ನೂ ರೂಪಿಸಿದ್ದನೆಂದು ತಿಳಿದುಬರುತ್ತದೆ. ಆಕರ್ಷಕ ಕಮಾನಿನ ನಗಾರಖಾನಾ ಮೂಲಕ ಗುಂಬಜಿನ ಒಳಗೆ ಪ್ರವೇಶಿಸಿದರೆ, ಎದುರಾಗುವ ಹೈದರ್-ಟಿಪ್ಪು ಸಮಾಧಿಗಳು ಎತ್ತರದ ಅಧಿಷ್ಠಾನದ ಮೇಲೆ ರಚಿಸಿರುವ, ಗುಮ್ಮಟ ಛಾವಣಿಯಿರುವ ಚೌಕಾಕಾರದ ತಳವಿನ್ಯಾಸದ ಸ್ಮಾರಕವಾಗಿದ್ದು, ಗುಮ್ಮಟವೂ

ಚಿತ್ತಾಕರ್ಷಕವಾಗಿದೆ. ದಂತಕೆತ್ತನೆಯುಳ್ಳ ಗುಂಬಜಿನ ಬಾಗಿಲುಗಳನ್ನು ಡಾಲ್‌ಹೌಸಿಯು ಕ್ರಿ.ಶ.೧೮೫೫ರಲ್ಲಿ ಮಾಡಿಸಿದನೆಂದು ತಿಳಿದುಬರುತ್ತದೆ. ಗುಂಬಜ್ ಒಳಗೆ ನಡುವೆ ಹೈದರನದು, ಪೂರ್ವಕ್ಕೆ ರಾಣಿ ಫಕ್ರುನ್ನಿಸಾ ಸೆಯ್ದಾನಿ ಬೇಗಮ್ ಹಾಗೂ ಪಶ್ಚಿಮಕ್ಕೆ ಪುತ್ರ ಟಿಪ್ಪುವಿನ ಸಮಾಧಿಗಳಿದ್ದು, ಅವರ ಶವಸಂಪುಟಗಳನ್ನು ನೆಲಮಾಳಿಗೆಯಲ್ಲಿ ಹೂಳಲಾಗಿದ್ದು, ಸಮಾಧಿಯ ಮೇಲೆ ವಿವಿಧ ವರ್ಣದ ಶಾಲುಗಳನ್ನು ಹೊದಿಸಲಾಗಿದ್ದು, ನಿತ್ಯ ಆರಾಧಿಸಲ್ಪಡುತ್ತವೆ. ವಿಶೇಷ ಸಂದರ್ಭಗಳಲ್ಲಿ ಅಲಂಕರಿಸಲ್ಪಡುವ ಚಿನ್ನದ ಜರಿಯ ಪೀತಾಂಬರಗಳನ್ನು ಟಿಪ್ಪುವಿನ ಎಂಟನೇ ಮಗ ಗುಲಾಮ್ ಮಹಮದನು ಕಾಣಿಕೆಯಾಗಿ ಸಲ್ಲಿಸಿದ್ದನೆಂದು ತಿಳಿದುಬರುತ್ತದೆ. ಪ್ರತೀ ವರ್ಷ ಇಲ್ಲಿ ಜರುಗುವ ಟೀಪ್ಪು ಉರುಸ್ ಗಮನಾರ್ಹ. ಹೈದರಾಲಿ (ಕ್ರಿ.ಶ.೧೭೮೨), ಟಿಪ್ಪು (ಕ್ರಿ.ಶ.೧೭೯೯) ಸಮಾಧಿಗಳೊಂದಿಗೆ ದಂಡನಾಯಕರಾದ ಬೆಂಕಿ ನವಾಬ (೧೭೯೯), ಇಮಾಮ್ ಸಾಬ್, ಸಯ್ಯಾದ್ ಅಮೀದ್, (ಟಿಪ್ಪುವಿನ ಸಾಕು ತಾಯಿ) ದಾಯಾದಿ ಕಮರುದ್ದೀನ್ ಮತ್ತವನ ಮಡದಿ ಮುಂತಾದವರ ಗೋರಿಗಳಿವೆ. ವೇದಿಕೆಯ ಮಗ್ಗುಲಲ್ಲೇ ಮಸೀದಿ ಇದೆ. ಸುತ್ತ ಕೈಸಾಲೆ ಮಂಟಪವಿದ್ದು ಉತ್ತಮ ಗ್ರಂಥಾಲಯವೂ ಇದೆ.

ಗುಂಬಜಿನಲ್ಲಿರುವ ಏಳು ಪರ್ಷಿಯನ್ ಶಾಸನಗಳಲ್ಲಿ, ಪಶ್ಚಿಮಗೋಡೆ ಮೇಲಿರುವ ಎಂಟು ಪರ್ಷಿಯನ್ ಪದ್ಯವನ್ನುಳ್ಳ ಶಾಸನವು ಟಿಪ್ಪು ಕ್ರಿ.ಶ.೧೭೮೨ರಲ್ಲಿ ನಿರ್ಮಿಸಿದ ಹೈದರನ ಸಮಾಧಿಯನ್ನು ರಂಜನೀಯವಾಗಿ ವರ್ಣಿಸಿದರೆ, ಟಿಪ್ಪು ಸಮಾಧಿ ಮೇಲಿನ ಕ್ರಿ.ಶ. ೧೭೯೯ರ ಶಾಸನದಲ್ಲಿರುವ ಏಳು ಪರ್ಷಿಯನ್ ಹಾಗೂ ಎರಡು ಅರಾಬಿಕ್ ಪದ್ಯಗಳು ಧರ್ಮಕ್ಕಾಗಿ ಹೋರಾಡುತ್ತಾ ಮಡಿದು ಹುತಾತ್ಮನಾದನೆಂದು ಟಿಪ್ಪುವಿನ ವ್ಯಕ್ತಿತ್ವವನ್ನು ಉತ್ಪ್ರೇಕ್ಷಿಸಿವೆ. **ಸಂಗಮ:** ಗುಂಬಜಿನಿಂದ ಪೂರ್ವಕ್ಕೆ ಸಾಗಿದರೆ, ಗೌತಮಾಶ್ರಮದ ಬಳಿ ಕವಲೊಡೆದು ಈ ದ್ವೀಪವನ್ನು ಕಲ್ಪಿಸಿರುವ ಕಾವೇರಿಯ ಉತ್ತರ–ದಕ್ಷಿಣ ಶಾಖೆಗಳು ಸಂಗಮದಲ್ಲಿ ಒಂದಾಗಿ ಮುಂದೆ ಹರಿಯುವ ರಮಣೀಯ ದೃಶ್ಯ ನಿಸರ್ಗಪ್ರೇಮಿಗಳಿಗೆ ಮುದ ನೀಡುತ್ತಿದ್ದು, ಅನತಿ ದೂರದಲ್ಲೇ ಕಾವೇರಿಯೊಂದಿಗೆ ಲೋಕಪಾವನಿಯು ಸಂಗಮಿಸುವ ತಾಣವನ್ನು ನೋಡಬಹುದಾಗಿದೆ.

ಮೈಸೂರು ರಸ್ತೆಯಲ್ಲಿ ಟೋಲ್‌ಗೇಟಿನಿಂದ ಸ್ವಲ್ಪ ಎಡಕ್ಕಾದಂತೆ ಕಾವೇರಿ ತೀರದಲ್ಲಿ ಇರುವ ದಿವಾನ್ ಪೂರ್ಣಯ್ಯನವರ ಬಂಗಲೆಯಲ್ಲಿ (ಹಾಲಿ ಪಿ.ಡಬ್ಲ್ಯೂ.ಡಿ ಪ್ರವಾಸಿ ಮಂದಿರ) ಹಿಂದೆ ಹ್ಯಾರೀಸ್ ವಾಸವಾಗಿದ್ದನೆಂದು ಅಲ್ಲೇ ಇರುವ ಕಲ್ಬರಹವೊಂದರಿಂದ ತಿಳಿದುಬರುತ್ತದೆ. ಅನತಿ ದೂರದಲ್ಲಿರುವ ಸ್ಕಾಟ್ ಬಂಗಲೆಯು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ರಚನೆಯಾಗಿದ್ದು, ಬ್ರಿಟೀಷ್ ಫಿರಂಗಿ ದಳದ ಅಧಿಕಾರಿ ಕರ್ನಲ್ ಸ್ಕಾಟ್‌ನ ವಸತಿ ಸ್ಥಳವಾಗಿದ್ದು, ಕಾಲರಾಕ್ಕೆ ಬಲಿಯಾದ ಹೆಂಡತಿ ಮಗಳ ನಿಧನದಿಂದಾಗಿ ಹುಚ್ಚನಂತೆ ಕ್ರಿ.ಶ.೧೮೦೭ರಲ್ಲಿ ವಿಧಿವಶನಾದದ್ದನ್ನು ಇಲ್ಲಿಯ ಒಂದು ಬರಹ ದಾಖಲಿಸಿದೆ. ಶ್ರೀರಂಗನಾಥನ ಇನ್ನೊಂದು ಪ್ರಾಚೀನ ದೇವಾಲಯವೂ ಇದೇ ಪರಿಸರದಲ್ಲಿದ್ದರೂ, ಹೆಚ್ಚು ಪ್ರಚಾರಕ್ಕೆ ಬಂದಿಲ್ಲ. **ಪಶ್ಚಿಮವಾಹಿನಿ** : ದಕ್ಷಿಣ ಕಾವೇರಿಯ ಉಪಶಾಖೆಯಾದ ಪಶ್ಚಿಮವಾಹಿನಿಯು, ಶ್ರೀರಂಗಪಟ್ಟಣದ ನೈಋತ್ಯ ಭಾಗದಲ್ಲಿ ಸಣ್ಣ ಖಡ್ಗದಂತೆ ವಾಯುವ್ಯ–ಆಗ್ನೇಯವಾಗಿ ರೂಪಿಸಿರುವ ದ್ವೀಪವಾಗಿದ್ದು, ಕಾವೇರಿಯು ಇಲ್ಲಿ ಸ್ವಲ್ಪ ಪಶ್ಚಿಮಕ್ಕಾದಂತೆ ಹರಿದು ಮತ್ತೆ ಪೂರ್ವಾಭಿಮುಖವಾಗಿ ಪ್ರವಹಿಸುವುದರಿಂದ ಪಶ್ಚಿಮವಾಹಿನಿ ಎಂಬ ಹೆಸರು ಆ ಶಾಖೆಗೂ ಹಾಗೂ ಅದು ಸೃಷ್ಟಿಸಿರುವ ದ್ವೀಪಕ್ಕೂ ಬಂದಿದ್ದು ಇದೊಂದು ಪುಣ್ಯಕ್ಷೇತ್ರವಾಗಿದೆ. ಸಂಕ್ರಾಂತಿಯ ಸ್ನಾನಕ್ಕೂ ಇದು ಪ್ರಸಿದ್ಧವಾಗಿದ್ದು, ಇಲ್ಲಿ ಮೈಸೂರು ಅರಸರ ಕಾಲದ ರಾಜಘಟ್ಟ ಸ್ನಾನಘಟ್ಟ, ಮಂಟಪ, ಅರವಟ್ಟಿಗೆ, ದೇವಾಲಯ, ಛತ್ರಗಳಿದ್ದು, ಸತ್ತವರ ಅಸ್ಥಿ, ಚಿತಾಭಸ್ಮ ವಿಸರ್ಜನೆ ಹಾಗೂ ಪಿಂಡವೂ ಸೇರಿದಂತೆ ವಾರ್ಷಿಕ ಶ್ರಾದ್ಧಾದಿಗಳಂತಹ ಅಪರ ಕರ್ಮಾಂತರಗಳನ್ನು ಮಾಡುವುದರಿಂದ ಸತ್ತವರಿಗೆ ಮೋಕ್ಷ ಲಭಿಸುತ್ತದೆಂಬ ನಂಬಿಕೆ ಇದ್ದು, ಇತ್ತೀಚಿನ ದಿನಗಳಲ್ಲಿ ಕಲ್ಯಾಣ ಸಮಾರಂಭಗಳೂ ನಡೆಯುತ್ತಿವೆ. ಇಲ್ಲಿ ವಿಸರ್ಜಿಸಲ್ಪಟ್ಟಿರುವ ರಾಷ್ಟ್ರನಾಯಕರ ಚಿತಾಭಸ್ಮಗಳಲ್ಲಿ ಮಹಾತ್ಮ ಗಾಂಧೀಜಿಯವರದು ದಾಖಲಾರ್ಹವಾಗಿದೆ.

ಇಲ್ಲಿರುವ ಹನುಮಂತನ ಮೂರ್ತಿಯು ವ್ಯಾಸ ಪ್ರತಿಷ್ಠಿತವೆಂಬ ಅಭಿಪ್ರಾಯವಿದೆ. ನಂದಿಬಸಪ್ಪ, ಗಾಡಿಚೆಲುವರಾಯಶೆಟ್ಟಿ, ಚೌಡಯ್ಯ, ಅಂಡಾಪುರದ ರಂಗಾಚಾರ್ಯ ಹಾಗೂ ಮಹಾರಾಜರ ಛತ್ರಗಳಿಂದು ಶಿಥಿಲಾವಸ್ಥೆಯಲ್ಲಿದ್ದು, ದುರಸ್ತಿಯಾಗಬೇಕಿದೆ. ಸುಮಾರು ಕ್ರಿ.ಶ.೧೯೩೪ರಲ್ಲಿ ಗತಿಸಿದ ರಾಣಿ ಕೆಂಪನಂಜಮ್ಮಣ್ಣಿಯವರ (ಖಾಸ ಚಾಮರಾಜ ಒಡೆಯರ ಪತ್ನಿ) ಸಮಾಧಿಯು ರೈಲ್ವೆ ಹಳಿಯ ಬದಿಯಲ್ಲಿದೆ. **ಚಂದ್ರವನ** : ಪಶ್ಚಿಮವಾಹಿನಿಗೆ ಒಂದು ಕಿ.ಮೀ. ಅಂತರದಲ್ಲಿದ್ದು, ಹೊಯ್ಸಳ ನರಸಿಂಹನ ಕಾಲದಲ್ಲಿ ಕಾವೇರಿಗೆ ಕಲ್ಲ ಕಟ್ಟೆಯನ್ನು ಕಟ್ಟಿಸಿದ ಅಂಶವನ್ನು ಅಲ್ಲಿರುವ ಒಂದು ಶಾಸನ ತಿಳಿಸಿದರೆ, ಉಳಿದವು ಚೆಲುವರಾಯಸ್ವಾಮಿ ಗುಡಿಯ ನಾರಾಯಣ, ಚೆಲುವರಾಯ ಹಾಗೂ ಕೇಶವರ ಗಾರೆಯ ಶಿಲ್ಪಗಳನ್ನು ಹೆಸರಿಸುತ್ತವೆ. ಅಲ್ಲಿರುವ ಎರಡು ದೇವಾಲಯಗಳಲ್ಲಿ ಒಂದು, ಮುಮ್ಮಡಿ ಕೃಷ್ಣರಾಜ ಒಡೆಯರು, ತಮ್ಮ ತಂದೆ ಚಾಮರಾಜ ಒಡೆಯರ ಸಲುವಾಗಿ ೧೮೪೮ರಲ್ಲಿ ನಿರ್ಮಿಸಿದ ಚಾಮರಾಜೇಶ್ವರ ಗುಡಿಯಾಗಿದೆ. ಅಲ್ಲೇ ಇರುವ ಚೆಲುವರಾಯಸ್ವಾಮಿ ಗುಡಿಯೂ ಮೈಸೂರು ಅರಸರ ಕಾಲದ್ದಾಗಿದ್ದು, ಶಿಖರದಲ್ಲಿ ಸುಂದರವಾದ ಗಾರೆ ಶಿಲ್ಪಗಳಿವೆ. ಇಲ್ಲಿಗೆ ಅನತಿ ದೂರದಲ್ಲೇ ಕಾವೇರಿ ಕವಲೊಡೆಯುವ ಸ್ಥಳದಲ್ಲಿರುವ ಮಂಟಪವನ್ನು ಗೌತಮ ಮಂಟಪವೆಂದು ಕರೆಯಲಾಗುತ್ತದೆ. **ಗೌತಮ ಕ್ಷೇತ್ರ** : ಕಾವೇರಿಯ ಆಚೆ ದಡದಲ್ಲಿ ಕಾಣುವುದೇ ಗೌತಮ ಋಷಿಗಳು ವಾಸಮಾಡುತ್ತಾ ರಂಗನಾಥ ಹಾಗೂ ತಿರುಮಲರಾಯ ದೇವರುಗಳನ್ನು ಆರಾಧಿಸುತ್ತಿದ್ದ ಗೌತಮ ಆಶ್ರಮವಿದ್ದ ಗೌತಮ ಕ್ಷೇತ್ರವಾಗಿದ್ದು, ಅದನ್ನು ಪಶ್ಚಿಮವಾಹಿನಿಯಿಂದ ಹಳೆ ಸೇತುವೆಗಳ ಮೂಲಕ ಕಾವೇರಿ ಶಾಖೆಗಳನ್ನು ದಾಟಿ ರಾಂಪುರ ಮಾರ್ಗವಾಗಿ ತಲುಪಬಹುದಾಗಿದೆ. ವಿಶ್ವವಿಖ್ಯಾತ ರಂಗನತಿಟ್ಟು ಪಕ್ಷಿಧಾಮ, ಪಶ್ಚಿಮವಾಹಿನಿಗೆ ಅನತಿ ದೂರದಲ್ಲಿದ್ದು, ಪ್ರಾಕೃತಿಕ ಮಹತ್ವದ ಪ್ರವಾಸಿ ಕೇಂದ್ರವಾಗಿದೆ.

**ಸಂತೇಬಾಚಹಳ್ಳಿ (೨೩೭೭)** : ಹೋಬಳಿ ಕೇಂದ್ರವೂ ಆದ ಇದು ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೨೪ ಕಿ.ಮೀ. ವಾಯವ್ಯಕ್ಕಿದೆ. ಪ್ರಾಚೀನ ಶಾಸನಗಳಲ್ಲಿ 'ಬಾಚಹಳ್ಳಿ' ಎಂದೇ ಉಲ್ಲೇಖಿತಗೊಂಡಿರುವ ಇದು ಹೊಯ್ಸಳರ ಕಾಲದಲ್ಲಿ ಪ್ರಮುಖ ಅಗ್ರಹಾರವಾಗಿದ್ದು, ಈವರೆಗೆ ಇಲ್ಲಿಂದ ವರದಿಯಾಗಿರುವ ಎರಡು ದತ್ತಿ ಶಾಸನಗಳು ಅಲ್ಲಿಯ ಗುಡಿಗಳಿಗೆ ದಾನ ನೀಡಿದ್ದನ್ನು ದಾಖಲಿಸಿವೆ. ಊರ ಉತ್ತರಕ್ಕೆ ಕೆರೆಯ ಬಳಿಯಿರುವ ಮಹಾಲಿಂಗೇಶ್ವರ ಗುಡಿಯು ಗರ್ಭಗೃಹ, ಅಂತರಾಳ ನವರಂಗ ಹಾಗೂ ಮುಖಮಂಟಪಗಳಿರುವ ಹೊಯ್ಸಳ ದೇವಾಲಯವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗ, ಲಲಾಟದಲ್ಲಿ ಗಜಲಕ್ಷ್ಮಿಯರಿದ್ದು, ಬಾಗಿಲವಾಡಕ್ಕೆ ದ್ವಾರಪಾಲಕರಿದ್ದಾರೆ. ಚರಕಿ ಕಂಬಗಳಿರುವ ನವರಂಗದ ಛತ್ತು ವೈವಿಧ್ಯಮಯವಾಗಿದ್ದು, ಉತ್ಕೃಷ್ಟವಾಗಿದೆ. ಅಲ್ಲಿರುವ ನಾಲ್ಕು ದೇವಕೋಷ್ಠಗಳಲ್ಲಿ ಎರಡರಲ್ಲಿ ಬ್ರಹ್ಮ ಹಾಗೂ ಕೇಶವ ಶಿಲ್ಪಗಳಿದ್ದು, ಅವೂ ಕಿರುಗುಡಿಗಳಂತೆ ಶೋಭಿಸುತ್ತವೆ. ದೇವಾಲಯದ ಭಿತ್ತಿಯು ಸೂಕ್ಷ್ಮ ಅಲಂಕಾರಿಕ ಕೆತ್ತನೆಗಳಿಂದ ಕೂಡಿದ್ದು, ನವರಂಗದ ಭಿತ್ತಿ ದುರಸ್ತಿಗೊಂಡಿದ್ದು, ಮೇಲೆ ಶಿಖರವಿದೆ. ಇಲ್ಲಿಯ ನಾರಾಯಣ ಗುಡಿಯೇ ಕ್ರಿ.ಶ.೧೫೦೩ರ ಶಾಸನೋಕ್ತ ವೀರನಾರಾಯಣ ಗುಡಿಯಾಗಿದ್ದು, ಒಳಗಿರುವ ನಾರಾಯಣ ಶಿಲ್ಪದ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆ ಇದ್ದು, ಇಕ್ಕೆಲದಲ್ಲಿ ಶ್ರೀದೇವಿ–ಭೂದೇವಿಯರಿದ್ದಾರೆ. ವಿಜಯನಗರ ಕಾಲದ ಕ್ರಿ.ಶ.೧೫೫೩ರ ಶಾಸನದಲ್ಲಿ ಉಕ್ತವಾಗಿರುವ ಗುಡಿಯಲ್ಲಿ ವೀರಭದ್ರ, ಕಾಳಿ ಹಾಗೂ ನಂದಿ ಇದ್ದು, ಮುಖಮಂಟಪದ ಕಂಬಗಳು ಆಕರ್ಷಕವಾಗಿದ್ದು, ಗುಡಿಗೆ ಇಟ್ಟಿಗೆ–ಗಾರೆ ಶಿಖರವಿದೆ. ವಿಜಯನಗರ ಕಾಲದ ಆಂಜನೇಯ ಗುಡಿಯಲ್ಲಿ ವೀರಾಂಜನೇಯನಿದ್ದು, ಮಾರಮ್ಮನ ಗುಡಿ ಬಳಿ ವೀರಗಲ್ಲು–ಮಾಸ್ತಿಕಲ್ಲುಗಳು ಸಾಕಷ್ಟು ಸಂಖ್ಯೆಯಲ್ಲಿವೆ.

**ಮಾಳಗೂರು (೮೯೫)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೨೦ ಕಿ.ಮೀ. ಈಶಾನ್ಯಕ್ಕಿದ್ದು, ಹೊಯ್ಸಳ ಶಾಸನಗಳಲ್ಲಿ ಮಾಳಿಗೆ, ಮಾಳಿಗೆಯೂರು ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಕಬ್ಬಾಹು–೧೦೦೦ ದೊಳಗಿದ್ದು, ಮೈಸೂರು ಅರಸರ ಕ್ರಿ.ಶ.೧೬೬೩ರ ಶಾಸನದಿಂದ ಅಗ್ರಹಾರ ದೇವರಾಜಪುರ ಎಂಬ ಪ್ರತಿನಾಮಧೇಯವನ್ನೂ

ಇದು ಹೊಂದಿದ್ದ ಅಂಶ ಗೊತ್ತಾಗುತ್ತದೆ. ಕೆರೆ ಹಿಂದಣ ಈಶ್ವರ (ಶಾಸನಸ್ಥ ಕಮ್ಮಟೇಶ್ವರ) ಗುಡಿಯ ಬಳಿಯಿರುವ ಹೊಯ್ಸಳ ವಿಷ್ಣುವರ್ಧನನ ಕ್ರಿ.ಶ.೧೧೧೭ರ ಶಾಸನವು, ಮಾಳಿಗೆಯ ವಿಶ್ವಕರ್ಮ ಕುಲನ್ವಯ ಕೊತ್ತಳಿಗೆ ಸೇರಿದ ವಿಶ್ವಕರ್ಮಾಚಾರಿಗಳು ಸಂಯುಕ್ತವಾಗಿ ಮಾಳಿಗೆಯಲ್ಲಿ ಪ್ರತಿಷ್ಠಾಪಿಸಿದ ಕಮ್ಮಟೇಶ್ವರ ದೇವರ ಸೇವೆಗೆಂದು ಬಲ್ಲೆಯನಾಯಕನೂ ಸೇರಿದಂತೆ ಹಲವರು ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ. ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನುಳ್ಳ ಇದರ ಭಿತ್ತಿಯು ಅಲಂಕಾರಿಕ ಕಂಬಗಳನ್ನು ಹೊಂದಿದ್ದು, ಕದಂಬನಾಗರ ಶಿಖರ ಗರ್ಭಗೃಹವನ್ನು ಅಲಂಕರಿಸಿದೆ. ಶಿಥಿಲಾವಸ್ಥೆಯಲ್ಲಿರುವ ನವರಂಗಕ್ಕೆ ಕಮಲ ಛತ್ತಿದ್ದು, ಒಳಗೆ ಶಿವಲಿಂಗವಿದೆ. ಇದರ ದಕ್ಷಿಣಕ್ಕಿರುವ ಹರಿಹರ ಗುಡಿಯು ಸರಳವಾಗಿದ್ದು, ಗರ್ಭಗೃಹದಲ್ಲಿರುವ ಐದು ಅಡಿಯ ಸುಂದರ ಹರಿಹರ ಶಿಲ್ಪದ ಗರುಡ-ನಂದಿ ಪೀಠದ ಮೇಲಿರುವ ನಾಲ್ಕು ಸಾಲಿನ ಶಾಸನದಿಂದ ಅದನ್ನು ರಾಣಿ ಶಾಂತಲೆಯ ಮೈದುನ ಬಲ್ಲೆಯನಾಯಕನು ಪ್ರತಿಷ್ಠಾಪಿಸಿದ ಅಂಶ ಗೊತ್ತಾಗುತ್ತದೆ. ಶಿವಭಾಗದ ಪ್ರಭಾವಳಿಯಲ್ಲಿ ಏಕಾದಶ ರುದ್ರರ ಕೆತ್ತನೆಯಿದ್ದರೆ, ವಿಷ್ಣು ಭಾಗದಲ್ಲಿ ದಶಾವತಾರ ಕೆತ್ತನೆಯಿದೆ. ಅಂತರಾಳದ ಬಾಗಿಲವಾಡಕ್ಕೆ ಜಾಲಂಧ್ರವಿದ್ದು, ನವರಂಗದ ಕಂಬಗಳು ಆಕರ್ಷಕವಾಗಿವೆ. ಕಲ್ಲೇಶ್ವರ ಗುಡಿಯು ಶಿಥಿಲಾವಸ್ಥೆಯಲ್ಲಿದ್ದು, ಒಳಗೆ ಶಿವಲಿಂಗ ನಂದಿಗಳಿವೆ ವೀರಭದ್ರ ಗುಡಿಯು ಸುಮಾರು ೧೭ನೇ ಶತಮಾನದಾಗಿದ್ದು, ಒಳಗೆ ವೀರಭದ್ರ, ನಂದಿ ಹಾಗೂ ಗಣೇಶನ ಮೂರ್ತಿಗಳಿವೆ.

**ಸಾತನೂರು (೪೯೪೨)** : ತಾಲೂಕು ಕೇಂದ್ರ ಮಂಡ್ಯದಿಂದ ನಾಲ್ಕು ಕಿ.ಮೀ. ಉತ್ತರಕ್ಕಿದ್ದು, ಮಂಡ್ಯದ ಕ್ರಿ.ಶ. ೧೫೧೬ರ ತಾಮ್ರ ಶಾಸನದಲ್ಲಿ ಸಾತನೂರು ಎಂದೇ ಉಲ್ಲೇಖಿಸಲ್ಪಟ್ಟಿದೆ. ಸಾತನೂರು ಬೆಟ್ಟದ ಆಂಜನೇಯನ ಗುಡಿ ಬಳಿಯಿರುವ ಸುಮಾರು ಇದೇ ಕಾಲಕ್ಕೆ ಸೇರಿದ ಶಾಸನವು ಸಿಂಗಯ್ಯನು ಶ್ರೀ ಕಂಬದ ತಿರುಮಲದೇವರ ರಥೋತ್ಸವಕ್ಕೆಂದು ಬೆಟ್ಟದ ಬಳಿ ನಾಲ್ಕು ದಿಕ್ಕಲ್ಲೂ ಶಂಖ-ಚಕ್ರ ಕಲ್ಲುಗಳನ್ನು ನಿಲ್ಲಿಸಿ, ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಶಾಸನೋಕ್ತ ತಿರುಮಲ ದೇವರೇ ಸಾತನೂರು ಬೆಟ್ಟದ ಮೇಲಿರುವ ಕಂಬದ ನರಸಿಂಹನಾಗಿದ್ದು, ಅದನ್ನು ಮಾಂಡವ್ಯ ಮುನಿ, ರಾಮಾನುಜ, ಪ್ರತಿಷ್ಠಾಪಿತವೆಂಬ ಅಭಿಪ್ರಾಯವಿದೆ. ಸಾತನೂರಿನಿಂದ ಸುಮಾರು ಎರಡು ಕಿ.ಮೀ. ದೂರದ ಸಣ್ಣ ಬೆಟ್ಟದ ಮೇಲಿರುವ ಇದಕ್ಕೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆದ ಮುಖಮಂಟಪಗಳಿದ್ದು, ಗರ್ಭಗೃಹದಲ್ಲಿ ಕಂಬಕ್ಕೆ ನರಸಿಂಹನ ಮುಖವನ್ನು ಧರಿಸಿ ಆರಾಧಿಸಲಾಗುತ್ತಿದ್ದು, ಶಿಖರದಲ್ಲಿ ಲಕ್ಷ್ಮಿ ಇದ್ದಾಳೆ. ಸುಮಾರು ೧೫ ನೆಯ ಶತಮಾನಕ್ಕೆ ಸೇರಿದ ಈ ಗುಡಿಯ ಮುಂದೆ ಪಾದಗಟ್ಟೆ ಇದ್ದು ಅಲ್ಲೇ ಆಂಜನೇಯ ಹಾಗೂ ಲಕ್ಷ್ಮಿ ಗುಡಿಗಳೂ ಇವೆ. ಭಕ್ತ ಪ್ರಹ್ಲಾದನ ಮೊರೆಗೆ ಓಗೊಟ್ಟು ಕಂಬದಿಂದ ಬಂದು ಹಿರಣ್ಯಕಶಿಪುವನ್ನು ಕೊಂದ ಉಗ್ರನರಸಿಂಹಾವತಾರವೇ ಕಂಬದ ನರಸಿಂಹನ ಹಿಂದಿರುವ ಪೌರಾಣಿಕ ಕಲ್ಪನೆಯಾಗಿದೆ. ಯುಗಾದಿ, ರಥಸಪ್ತಮಿ, ಗೋಕುಲಾಷ್ಟಮಿ ಹಾಗೂ ಕಡೆ ಶ್ರಾವಣಗಳಲ್ಲಿ ವಿಶೇಷ ಪೂಜೆ ನಡೆಯುತ್ತಿದ್ದು, ಪ್ರತೀ ಶನಿವಾರದಂದು ಪೂಜೆ ಇರುತ್ತದೆ. ಸಾತನೂರಿನಲ್ಲಿರುವ ಮೈಸೂರು ಅರಸರ ಕಾಲದ ಬೀರೇಶ್ವರನ ಎರಡು ಗುಡಿಗಳು ಒಂದು ಇನ್ನೊಂದರ ಪ್ರತಿರೂಪವಾಗಿದ್ದು, ವಿಶಾಲವಾಗಿವೆ. ಊರ ರಸ್ತೆ ಬದಿಯಲ್ಲಿರುವ ಶಂಭುಲಿಂಗೇಶ್ವರ ಗುಡಿಯು ಮಂಡ್ಯದ ಕ್ರಿ.ಶ.೧೫೧೬ರ ತಾಮ್ರ ಶಾಸನದಲ್ಲಿ ಉಲ್ಲೇಖಿತಗೊಂಡಿದ್ದು, ಬಳಿಯಲ್ಲಿರುವ ವೃಂದಾವನಗಳು ೧೯ನೆಯ ಶತಮಾನದ್ದಾಗಿವೆ. **ಕೊಮ್ಮೇರಹಳ್ಳಿ** : ಸಾತನೂರಿನ ನೆರೆಯ ಗ್ರಾಮವಾಗಿದ್ದು, ಊರಾಚೆ ಹೊಲದಲ್ಲಿರುವ ಗಂಗರ ಕಾಲದ ಹಿರಿಯಮ್ಮನ ಗುಡಿಯು ೧೨ ಕಂಬಗಳನ್ನು ಹೊಂದಿರುವ ಆರಂಕಣದ ಕಿರು ಗುಡಿಯಾಗಿದ್ದು ಎರಡು ಅಡಿ ಎತ್ತರದ ವೀರಭದ್ರ, ಕೌಮಾರಿ, ಬ್ರಾಹ್ಮಿ, ಮಹೇಶ್ವರಿ, ವೈಷ್ಣವಿ, ವಾರಾಹಿ, ಚಾಮುಂಡಿ, ಭೈರವಿ, ಗಣಪ ಹಾಗೂ ಅನ್ನಪೂರ್ಣೇಶ್ವರಿ ಮೂರ್ತಿಗಳನ್ನು ಹೊಂದಿದ್ದು, ಎಡಭಾಗದ ಕಿರುಗುಡಿಯಲ್ಲಿ ಭೈರವನ ಶಿಲ್ಪವಿದೆ. ಇದು ಸುತ್ತಲಿನ ಏಳೂ ಊರವರಿಂದ ಆರಾಧಿಸಲ್ಪಡುತ್ತಿದ್ದು, ಮಡೆಹಬ್ಬ ಆಚರಿಸಲಾಗುತ್ತದೆ. ಇಲ್ಲಿಯ ವೀರಗೂಳೇಶ್ವರ

ಗುಡಿಯಲ್ಲಿರುವ ಖಡ್ಗ, ಕುದುರೆ ಸವಾರರ ಶಿಲ್ಪಗಳನ್ನು ಅವರ ವಂಶಜರು ಈಗಲೂ ಪೂಜಿಸುತ್ತಾರೆ. ಉಳಿದಂತೆ ಊರಲ್ಲಿ ವೃಂದಾವನದಲ್ಲಿರುವ ಅಶ್ವತ್ಥಮ್ಮನ ಕಟ್ಟೆ, ಬಸವೇಶ್ವರ ಹಾಗೂ ಏಳೂರಮ್ಮನ ಗುಡಿಗಳಿದ್ದು, ಮೂರ್‍ನಾಲ್ಕು ವೀರಗಲ್ಲುಗಳೂ ಇವೆ.

**ಸಾಸಲು (೧೧೬೨)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ಸುಮಾರು ೨೫ ಕಿ.ಮೀ. ವಾಯುವ್ಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ ಸಾಸಲು ಎಂದೇ ಉಲ್ಲೇಖಿತಗೊಂಡಿದ್ದು, ಇಲ್ಲಿಂದ ಈವರೆಗೆ ವರದಿಯಾಗಿರುವ ಮೂರು ಶಾಸನಗಳಲ್ಲಿ, ಹೊಯ್ಸಳ ವಿಷ್ಣುವರ್ಧನನ ಕ್ರಿ.ಶ.೧೧೨೧ರ ಶಾಸನವು ಸಾಸಲಿನ ಭೋಗೇಶ್ವರ ದೇವರ ಸೇವೆಗೆಂದು ಕರೆಕಂಠಜೀಯರಿಗೆ ದಾನ ಬಿಟ್ಟ ಅಂಶವನ್ನು ತಿಳಿಸುತ್ತಿದ್ದು, ಶಾಸನೋಕ್ತ ಭೋಗೇಶ್ವರವೇ ಊರಾಚೆ ತೋಪಲ್ಲಿರುವ ಶಂಭುಲಿಂಗೇಶ್ವರವಾಗಿದೆ. ಇದಕ್ಕೆ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿದ್ದು, ಮುಂದೆ ಅವುಗಳಿಗೆ ತೆರೆದ ಅರ್ಧಮಂಟಪ, ಪ್ರಾಕಾರಗಳನ್ನು ಸೇರಿಸಿ ವಿಸ್ತರಿಸಲಾಗಿದೆ. ಗುಡಿಯ ಮುಂದಿರುವ ದೀಪಮಾಲೆ ಕಂಬ ಸಿರಿವನಹಳ್ಳಿಯ ಮಾಯಿಗೊಂಡನ ಧರ್ಮವೆಂದು ಕ್ರಿ.ಶ.೧೭೫೩ರ ಶಾಸನವು ತಿಳಿಸುತ್ತದೆ. ಅದರ ಬಳಿಯಿರುವ ಕಲ್ಗಾಣದಿಂದ ಜಾತ್ರೆ ಸಂದರ್ಭದಲ್ಲಿ ಭಕ್ತರೇ ಗಾಣ ಎಳೆದು ಎಣ್ಣೆ ತೆಗೆದು ದೀಪ ಬೆಳಗಿಸುತ್ತಾರೆ. ಬಳಿಯಲ್ಲೇ ಇರುವ ಮಜ್ಜನಕೊಳ್ಳ ಪವಿತ್ರವೆಂಬ ನಂಬಿಕೆ ಇದೆ. ಊರಲ್ಲಿಯ ಸೋಮೇಶ್ವರ ಗುಡಿಯಲ್ಲಿರುವ ಶಾಸನವು ಲಿಂಗಯ್ಯದೇವ ಮಹಾಅರಸು ಸೋಮೇಶ್ವರ ದೇವರಿಗೆ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಈ ದೇವಾಲಯದಲ್ಲಿ ನಂದಿ ಹಾಗೂ ಪುರಾತನರ ಹಲವು ಶಿಲ್ಪಗಳಿದ್ದು, ಮುಂದೆ ನಂದಿ ಸ್ತಂಭವಿದ್ದು, ಗರ್ಭಗೃಹಕ್ಕೆ ಕದಂಬ ನಾಗರ ಮಾದರಿಯ ಇತ್ತೀಚಿನ ಶಿಖರವಿದೆ. ಹಾವು ಕಡಿದವರು ಇಲ್ಲಿಗೆ ಬಂದು, ದೇವರ ಪ್ರಸಾದ ಸೇವಿಸಿದರೆ ಗುಣಮುಖರಾಗುತ್ತಾರೆಂಬ ಅಚಲ ನಂಬಿಕೆ ಇದೆ. ಪ್ರತೀವರ್ಷ ಕಾರ್ತಿಕ ಮಾಸದ ಸೋಮವಾರದಂದು ಜರುಗುವ ಮಾಣಿಕ್ಯಸೆಟ್ಟಿ ಮೆರವಣಿಗೆ ಅತ್ಯಂತ ವಿಶಿಷ್ಟವಾಗಿದ್ದು, ಹಿಂದಿನ ಯಾವುದೋ ಧಾರ್ಮಿಕ ಸಂಘರ್ಷದ ಸಾಂಕೇತಿಕ ಆಚರಣೆಯಾಗಿ ಉಳಿದು ಬಂದಿದೆ. ಪರಸ್ಥಳದವನಾದ ಭೈರವರಾಜ ಹಾಗೂ ಸ್ಥಳೀಕನಾದ ಸೋಮೇಶ್ವರರ ನಡುವೆ ಹಿಂದೆ ಯಾವಾಗಲೋ ನಡೆದ ವಿವಿಧ ಶಕ್ತಿ ಪರೀಕ್ಷೆಯಲ್ಲಿ ಕುರುಬರ ಬೆಂಬಲವಿದ್ದ ಭೈರವರಾಜನು, ಲಿಂಗಾಯತರ ಬೆಂಬಲವಿದ್ದ ಸೋಮೇಶ್ವರನನ್ನು ಬಗ್ಗಿಸಿದನಷ್ಟೇ ಅಲ್ಲದೇ ಅಂತಿಮವಾಗಿ ಅವನನ್ನು ಪೂರ್ಣ ಸೋಲಿಸಿದನು. ಪಂಥದಂತೆ ಸೋತ ಸೋಮೇಶ್ವರ ಕತ್ತೆ ಏರಿದ. ಈ ಘಟನೆಯಿಂದ ಜಿಗುಪ್ಸೆಗೊಂಡ ಭೈರವರಾಜನು ಕಾಯ ಸಹಿತ ಕೈಲಾಸ ಸೇರಿದನೆಂದು ಹೇಳಲಾಗುತ್ತದೆ. ಕೈಲಾಸ ಸೇರಿದ ಭೈರವರಾಜನು, ಸೋಮೇಶ್ವರನನ್ನು ಕರೆದೊಯ್ಯಲು ಧರೆಗೆ ಮತ್ತೆ ಇಳಿದು ಬರುತ್ತಾನೆಂಬ ನಿರೀಕ್ಷೆಯಲ್ಲಿ ಮುಗಿಲತ್ತ ಮುಖ ಮಾಡಿ ನೋಡುತ್ತಿರುವ ಬಸವನ (ನಂದಿ) ಮೂರ್ತಿಯು ಆಕರ್ಷಕವಾಗಿದೆ. ಇದು ಬಹುಶ: ಭೈರವರಾಜನ ಸಮಾಧಿ ಸ್ಥಳವಾಗಿದೆ. ಈಗಲೂ ಮೊದಲ ಕಾರ್ತಿಕ ಸೋಮವಾರದಂದು ಭೈರವರಾಜ–ಸೋಮೇಶ್ವರರ ನಡುವಣ ಪಂಥದ ನೆನಪಿಗಾಗಿ ಸೋಮೇಶ್ವರ ದೇವರ ಅರ್ಚಕರ ಕುಟುಂಬಕ್ಕೆ ಸೇರಿದ ಬಾಲಕನ ತಲೆ ಬೋಳಿಸಿ, ಮೀಸೆ ಬಳಿದು, ತೆಂಗಿನ ಗರಿಯ ಕಿರೀಟ ತೊಡಿಸಿ, ಮಾನಿಗಸೆಟ್ಟಿ (ಅಂದು ಕತ್ತೆಯನ್ನು ಮಾನಿಗಸೆಟ್ಟಿ ಎಂದೇ ಕರೆಯಬೇಕೆಂದು ಭೈರವರಾಜನ ಅಪ್ಪಣೆ ಇದೆಯಂತೆ)ಯ ಮೇಲೆ ಕೂರಿಸಿ ಊರಿನ ಮುಖ್ಯ ಬೀದಿಯಲ್ಲಿ ಮೆರೆಸಿದ ನಂತರ ಸೋಮೇಶ್ವರ ಗುಡಿಯ ಪಕ್ಕದ ರಂಗದಲ್ಲಿ ಮೆರವಣಿಗೆ ಅಂತ್ಯವಾಗುತ್ತದೆ. ನಂತರ ಕುರುಬರು ಮತ್ತು ಲಿಂಗಾಯತರ ನಡುವೆ ನಡೆಯುವ ತೊಪ್ಪೆಯೋಕುಳಿಯಲ್ಲಿ ಕೊನೆಗೆ ಲಿಂಗಾಯತರೇ ಸೋಲಬೇಕು. ಇದರೊಂದಿಗೆ ಮಾನಿಗಸೆಟ್ಟಿಯ ಮೆರವಣಿಗೋತ್ಸವ ಅಂತ್ಯವಾಗುತ್ತದೆ. ಇದೊಂದು ವಿಶಿಷ್ಟ ಸಾಂಸ್ಕೃತಿಕ ಆಚರಣೆಯಾಗಿದ್ದು, ಅಂದಿನ ಸಾಮಾಜಿಕ ಧಾರ್ಮಿಕ ಸಂಘರ್ಷವನ್ನು ತನ್ನ ಮಡಿಲಲ್ಲಿ ಹಿಡಿದಿಟ್ಟುಕೊಂಡಿದ್ದು, ಸೂಕ್ತ ಅಧ್ಯಯನದ ಅಗತ್ಯವಿದೆ. ಈ ಘಟನೆಯನ್ನೇ ಅಲ್ಪಸ್ವಲ್ಪ ಮಾರ್ಪಾಡಿನೊಂದಿಗೆ ಕಿಕ್ಕೇರಿಯ ನಂಜುಂಡರಾಧ್ಯಕವಿಯು ತನ್ನ ಭೈರವೇಶ್ವರ ಕಾವ್ಯಕ್ಕೆ (ಸುಮಾರು ಕ್ರಿ.ಶ.೧೫೫೦) ಕಥಾವಸ್ತುವನ್ನಾಗಿ ಮಾಡಿಕೊಂಡಿದ್ದರೂ, ಅದರಲ್ಲಿ ಮಾನಿಗಸೆಟ್ಟಿಯ ಮೆರವಣಿಗೆಯ ಪ್ರಸ್ತಾಪವಿಲ್ಲ.

ಊರ ಅಗಸಿ ಬಳಿ ಇರುವ ಆರು ವೀರಗಲ್ಲುಗಳು ಊರ ಉಳಿವಿಗಾಗಿ ಹೋರಾಡಿ ಮಡಿದ ವೀರರ ಸ್ಮಾರಕಗಳಾಗಿವೆ. ಉಳಿದಂತೆ ಊರಲ್ಲಿ ಕುದುರೆ ಮಂಡಮ್ಮ, ಸಂಗಮ್ಮ, ಮಾರಮ್ಮ, ಬಸವಣ್ಣ, ಮುಂತಾದ ನವೀನ ಗುಡಿಗಳಿವೆ. ವರ್ಷದಲ್ಲೊಮ್ಮೆ ಕುದುರೆಮಂಡಮ್ಮನ ಜಾತ್ರೆಯ ಸಂದರ್ಭದಲ್ಲಿ ಹಸಿರು ಬಂಡಿ ಹಾಗೂ ಕೊಂಡ ಹಾಯುವ ಸೇವೆ ಜರುಗುತ್ತದೆ. **ತೊಳಸಿ (೭೪೪)** : ಸಾಸಲಿಗೆ ಅನತಿ ದೂರದಲ್ಲಿರುವ ಈ ಊರು, ಪ್ರಾಚೀನ ಶಾಸನಗಳಲ್ಲಿ 'ತೊಳಂಚೆ' , 'ತೊಳಚೆ' ಎಂದೇ ಉಲ್ಲೇಖಿತಗೊಂಡಿದ್ದು, ಊರಿಂದ ಒಂದು ಕಿ.ಮೀ. ಈಶಾನ್ಯಕ್ಕೆ ಐಕನಹಳ್ಳಿ ರಸ್ತೆಯಲ್ಲಿರುವ ಎರಡು ಹೊಯ್ಸಳ ದೇವಾಲಯಗಳಿಂದಾಗಿ ದಾಖಲಾರ್ಹ. ಇಲ್ಲಿಂದ ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಏಳು ಶಾಸನಗಳು ವರದಿಯಾಗಿದ್ದು, ಆದಿ ಹೊಯ್ಸಳ ದೊರೆ ವಿನಯಾದಿತ್ಯನ (ಕ್ರಿ.ಶ.೧೦೪೯) ಶಾಸನ, ತೊಳಂಚಿಯ ಅಂಕಕಾರ ಹಾಗೂ ನಗರೇಶ್ವರ ದೇವರುಗಳಿಗೆ ಬೀರವಣ ಮುಂತಾದ ಆದಾಯಗಳನ್ನು ಅರಸನು ದಾನಬಿಟ್ಟ ಅಂಶವನ್ನು ತಿಳಿಸುತ್ತಿದ್ದು, ಶಾಸನವಿರುವ ಬಸವೇಶ್ವರ (ಶಾಸನೋಕ್ತ ಅಂಕಕಾರ-ನಗರೇಶ್ವರ) ದೇವಾಲಯವು ದ್ವಿಕೂಟವಾಗಿದ್ದು, ಹೊಯ್ಸಳರ ಕಾಲದ ಕೆಲವೇ ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದೆ. ಪೂರ್ವಾಭಿಮುಖವಾಗಿರುವ ಪ್ರಧಾನ ಗರ್ಭಗೃಹಕ್ಕೆ ಕದಂಬ ನಾಗರ ಶಿಖರವಿದ್ದರೆ, ಇನ್ನೊಂದು ದಕ್ಷಿಣಾಭಿಮುಖವಾಗಿದ್ದು, ಎದುರುಮುಖನಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯಕ್ಕೆ ಪಾರ್ಶ್ವ ಪ್ರವೇಶದ್ವಾರವಿದ್ದು, ನವರಂಗದ ಛತ್ತು ಆಕರ್ಷಕವಾಗಿದ್ದು, ಭಿತ್ತಿಗಳು ನಿರಾಡಂಬರವಾಗಿವೆ. ಇಲ್ಲಿಯ ಸೂರ್ಯ, ಚಲುವನಾರಾಯಣ, ಸಪ್ತಮಾತೃಕಾ ಶಿಲ್ಪಗಳು ಆಕರ್ಷಕವಾಗಿದ್ದು, ದೇಗುಲದ ಆವರಣದಲ್ಲಿ ಸುಮಾರು ೧೮ ಅಡಿ ಎತ್ತರದ ನಂದಿ ಕಂಬವಿದೆ. ಅಲ್ಲೇ ಬಲಕ್ಕಾದಂತೆ ಈಶ್ವರ ಗುಡಿ ಮುಂದಿರುವ, ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಕಾಲದ (ಕ್ರಿ.ಶ.೧೧೯೧) ಶಾಸನವು, ತೊಳಚೆಯ ಸಿದ್ಧನಾಥ ದೇವರಿಗೆ ದಾನ ಬಿಟ್ಟ ಅಂಶವನ್ನು ದಾಖಲಿಸುತ್ತಿದ್ದು, ಶಾಸನವಿರುವ ಈಶ್ವರ ದೇವಾಲಯವೇ ಶಾಸನೋಕ್ತ ಸಿದ್ಧನಾಥ ದೇವಾಲಯವೆಂದು ಗೊತ್ತಾಗುತ್ತದೆ. ಪೂರ್ವಾಭಿಮುಖವಾಗಿರುವ ಈ ಗುಡಿಗೆ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿದ್ದು, ಮುಂದಿರುವ ತೆರೆದಮಂಟಪ, ನಂತರದ ಸೇರ್ಪಡೆಯಾಗಿದೆ. ಒಳಗೆ ಶಿವಲಿಂಗವಿದ್ದು, ಮೇಲಿರುವ ದ್ರಾವಿಡ ಶಿಖರವು ಭಾಗಶ: ಜೀರ್ಣೋದ್ಧಾರಗೊಂಡಿದೆ. ಅಂತರಾಳದ ಬಾಗಿಲವಾಡಕ್ಕೆ ಜಾಲಂದ್ರವಿದ್ದು, ನವರಂಗದ ಛತ್ತಲ್ಲಿ ತ್ರಿದಳ ಕಮಲವಿದೆ. ಉಳಿದಂತೆ ಊರಿನಲ್ಲಿ ಆಂಜನೇಯ ಹಾಗೂ ಗ್ರಾಮದೇವತೆಯ ಇತ್ತೀಚಿನ ಗುಡಿಗಳಿವೆ.

**ಸಿಂದಘಟ್ಟ (೩,೫೩೬)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ಎಂಟು ಕಿ.ಮೀ. ಈಶಾನ್ಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ಸಿಂದಗಟ್ಟ, ಸಿಂದುಘಟ್ಟ' ಎಂದೇ ಉಲ್ಲೇಖಿತಗೊಂಡಿದ್ದು, ಸಮೀಪದ ಘಟ್ಟದಲ್ಲಿ ಸಿದ್ಧರು ತಪಸ್ಸು ಮಾಡಿದ್ದರಿಂದ ಸಿದ್ಧರಘಟ್ಟ ಎಂಬ ಹೆಸರು ಬಂದು, ಮುಂದೆ ಅದೇ ಸಿಂದಗಟ್ಟ ಆಯಿತೆಂಬ ಅಭಿಪ್ರಾಯವೂ ಇದೆ. 'ಅನಾದಿ ಅಗ್ರಹಾರ ಸಂಗಮೇಶ್ವರಪುರ' ಎಂಬ ಅಭಿದಾನದೊಂದಿಗೆ ವಿದ್ಯಾಕೇಂದ್ರವಾಗಿ ಹೊಯ್ಸಳ ಶಾಸನಗಳಲ್ಲಿ ಇದು ಉಲ್ಲೇಖಿತಗೊಂಡಿದ್ದು, ನೆರೆಯ ತೊಣ್ಣೂರಿನ (ಕ್ರಿ.ಶ.೧೧೫೭ರ) ಶಾಸನದಲ್ಲಿ ಎರಡು ಸಿಂಧಗಟ್ಟಗಳು ಮೊದಲಿಗೆ ನಮೂದಾಗಿದ್ದು, ಹಿಂದೆ ಇಲ್ಲಿ ದೊಡ್ಡ ಹಾಗೂ ಚಿಕ್ಕ ಸಿಂದಘಟ್ಟಗಳಿದ್ದು, ಮುಂದೆ ಅದಾವಾಗಲೋ ಎರಡೂ ಸೇರಿ ಒಂದಾದಂತೆ ತೋರುತ್ತದೆ. ಊರ ಕೆರೆಯಾಚೆ ಇರುವ ಗಿರಿ ಶ್ರೇಣಿಯೇ ನಾರಾಯಣ ದುರ್ಗವಾಗಿದ್ದು, ಅದಕ್ಕೆ ಹೊಂದಿಕೊಂಡಂತೆ ಮಾದಗಿತ್ತಿಬೆಟ್ಟ, ಹಂದಿಬೆಟ್ಟ ಹಾಗೂ ಮುದಿಬೆಟ್ಟಗಳಿವೆ. ಮುದಿಬೆಟ್ಟದಲ್ಲಿರುವ ಗವಿಗಳು ಶಿಲಾಯುಗ ಮಾನವನ ನೆಲೆಯಾಗಿರುವ ಸಾಧ್ಯತೆಗಳಿವೆ. ರಾಮಾಯಣ-ಮಹಾಭಾರತಗಳ ಪುರಾಣ ಪುರುಷರು ಇಲ್ಲಿಗೆ ಬಂದಿದ್ದರೆಂದು ಪೌರಾಣಿಕ ಸಂಬಂಧ ಕಲ್ಪಿಸುವ ಐತಿಹ್ಯಗಳಿವೆ. ಬೆಟ್ಟದ ಬುಡದಲ್ಲಿರುವ ಸಿದ್ಧರಗವಿ ವಿಶಾಲವಾಗಿದ್ದು, ಇಲ್ಲಿಂದ ಮೇಲಿನ ದೇವಾಲಯಕ್ಕೆ ಗುಪ್ತಮಾರ್ಗವಿದೆ ಎಂಬ ನಂಬಿಕೆಯಿದೆ. ಬೆಟ್ಟದ ಒಂದು ಪಾರ್ಶ್ವ ತೀರಾ ಕಡಿದಾಗಿದ್ದು, ಇನ್ನೊಂದು ಪಾರ್ಶ್ವದಲ್ಲಿ ಎಡೆಯಿರುವಲ್ಲಿ

ಕೋಟೆಯನ್ನು ನಿರ್ಮಿಸುವ ಮೂಲಕ ಶತ್ರುವಿನ ಮುನ್ನಡೆಯನ್ನು ನಿಯಂತ್ರಿಸಲು ಯತ್ನಿಸಲಾಗಿದೆ. ಏಳು ಸುತ್ತಿನ ಕೋಟೆಯ ಅವಶೇಷಗಳು ಇಲ್ಲಿದ್ದು, ಹಿಂದೆ ಇದನ್ನು ಹೊಳೆನರಸೀಪುರದ ಪಾಳೇಗಾರರಲ್ಲೊಬ್ಬನಾದ ದೇವರಾಜನು ನಿರ್ಮಿಸಿರುವ ಸಾಧ್ಯತೆಗಳಿದ್ದು, ನಿಖರ ದಾಖಲೆಗಳು ಲಭ್ಯವಿಲ್ಲ. ಕೆಳಗಿನ ಆರು ಸುತ್ತು, ಬೆಟ್ಟದ ಬಂಡೆಗಳ ನಡುವಣ ಬಯಲನ್ನು ಮುಚ್ಚುವ ಅಡ್ಡ ಗೋಡೆಗಳಾದರೆ, ಏಳನೆಯ ಸುತ್ತು ಪೂರ್ಣಕೋಟೆಯಾಗಿದ್ದು, ಒಂದೊಂದು ಸುತ್ತಿಗೂ ಇರುವ ಹೆಬ್ಬಾಗಿಲುಗಳಲ್ಲಿ ಕೆಲವು ಶಿಥಿಲಾವಸ್ಥೆಯಲ್ಲಿದ್ದರೂ ಕಲಾತ್ಮಕವಾಗಿವೆ. ಇವು ಏಕರೇಖೆಯಲ್ಲಿರದೇ ಅಂಕುಡೊಂಕಾಗಿದ್ದು ಒಳ ನುಸುಳಿದವರನ್ನು ದಾರಿತಪ್ಪಿಸುತ್ತವೆ. ತುತ್ತತುದಿಯ ಕೋಟೆಯ ಆವರಣದಲ್ಲಿ ಕೈಲಾಸೇಶ್ವರ ದೇವಾಲಯ, ಮದ್ದಿನ ಮನೆ, ಕಣಜ ಹಾಗೂ ನೀರಿನ ಅನೇಕ ಡೋಣೆಗಳಿದ್ದು, ಅಲ್ಲಿರುವ ಒಕ್ಕರಸಿ ಕಲ್ಲ ಮೇಲಿಂದ ಶತ್ರುಗಳನ್ನು ಹಿಂದೆ ಪಾಳೇಗಾರರು ಆಳವಾದ ಪ್ರಪಾತಕ್ಕೆ ತಳ್ಳಿಸುತ್ತಿದ್ದರಂತೆ.

'ಸಿಂದಗಟ್ಟದ ತಿಮ್ಮಪ್ಪ ತಿರುಗ ಮುರುಗ' ಎಂಬ ನಾಣ್ಣುಡಿಗೆ ಹೆಸರಾಗಿರುವ ಇಲ್ಲಿಯ ತಿಮ್ಮಪ್ಪನ ಗುಡಿಯು ಸುಮಾರು ೧೮ನೆಯ ಶತಮಾನದ ರಚನೆಯಾಗಿದ್ದು, ಗರ್ಭಗೃಹ, ನವರಂಗಗಳನ್ನು ಹೊಂದಿದ್ದು, ಪೀಠದ ಮೇಲೆ ಹಿಂದು ಮುಂದಾದ ತಿಮ್ಮಪ್ಪನ ಕೈಮುಕ್ಕಾದ ಶಿಲ್ಪವಿದೆ. ಮೂರ್ತಿ ಹಿಂದು ಮುಂದಾದುದಕ್ಕೆ ಶತ್ರು ಧಾಳಿ ಕಾರಣವಾಗಿದ್ದರೂ, ಜನಮನದಲ್ಲಿ ಇದು ತಿರುಗ ಮುರುಗ ತಿಮ್ಮಪ್ಪನೆಂಬ ಅತಿಶಯೋಕ್ತಿಗೆ ಒಳಪಟ್ಟಿದೆ. ಬ್ರಾಹ್ಮಣರ ಬೀದಿಯಲ್ಲಿರುವ ಲಕ್ಷ್ಮೀನಾರಾಯಣನ ಗುಡಿಗೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಪಗಳಿದ್ದು, ಜಗತಿಯನ್ನೂ ಹೊಂದಿದೆ. ಗರ್ಭಗೃಹದಲ್ಲಿರುವ ಲಕ್ಷ್ಮೀನಾರಾಯಣ ಶಿಲ್ಪವು ಸುಂದರ ಕಲಾಕೃತಿಯಾಗಿದ್ದು, ಹೊರಗೆ ಬೆಳ್ಳಿ ಹೊದಿಕೆ ಇರುವ ಗರುಡನೂ ಸೇರಿದಂತೆ ಅನೇಕ ವಾಹನಗಳಿವೆ. ಈ ದೇವಾಲಯದಲ್ಲಿರುವ ಕ್ರಿ.ಶ.೧೧೭೮ರ ಕ್ರಯ ಶಾಸನವು, ಮಹಾಜನರು ದೇವಾಲಯದ ಆಡಳಿತ ಹಾಗೂ ಆ ದೇವರ ಎರಡೂ ವೃತ್ತಿಗಳನ್ನು ಗಂಡಸೆಯ ದೇವಣ್ಣನ ಮಕ್ಕಳಾದ ಮಾದಣ್ಣ ಹಾಗೂ ಸೇನಬೋವಿ ಬೊಮ್ಮಣ್ಣರಿಗೆ ೪೬ ಗದ್ಯಾಣ ವರಾಹಗಳಿಗೆ ಮಾರಿದ ಅಪರೂಪದ ಅಂಶವನ್ನು ದಾಖಲಿಸಿದೆ. ಈ ದೇವಾಲಯದ ಮುಂದಿರುವ ಗರುಡಗಂಬದ ಮೇಲಿನ ಶಾಸನದಿಂದ, ಆ ಕಂಬವನ್ನು ದೇವರಸನು ಕ್ರಿ.ಶ.೧೬೬೦ರಲ್ಲಿ ಪ್ರತಿಷ್ಠಾಪಿಸಿದ ಅಂಶ ಗೊತ್ತಾಗುತ್ತದೆ. ಇದೇ ದೇವಾಲಯದ ಮುಖಮಂಟಪದ ಎಡಭಾಗದಲ್ಲಿರುವ ಸುಮಾರು ೧೮ನೆಯ ಶತಮಾನದ ಎರಡು ಶಾಸನಗಳಿಂದ ಈ ದೇವಾಲಯದ ಶಿಥಿಲ ಭಾಗವನ್ನು ಪರ್ವತಸೆಟ್ಟಿ ಹಾಗೂ ವಿರೂಪಾಕ್ಷದೇವರು ದುರಸ್ತಿ ಮಾಡಿಸಿದರೆಂದು ಊಹಿಸಬಹುದಾಗಿದೆ. ಕಳೆದ ಶತಮಾನದ ಉತ್ತರಾರ್ಧ ಭಾಗದಲ್ಲಿ ಶಿಥಿಲವಾಗಿದ್ದ ಈ ದೇವಾಲಯವನ್ನು ಕೇಂದ್ರ ಪುರಾತತ್ವ ಇಲಾಖೆಯು ದುರಸ್ತಿ ಮಾಡಿ, ಸಂರಕ್ಷಿತ ಸ್ಮಾರಕವೆಂದು ಘೋಷಿಸಿದೆ. ಸಿಂಧಘಟ್ಟದ ಮಹಾಜನಗಳು ಸಂಗಮೇಶ್ವರ-ಜಂನ್ನೇಶ್ವರ (ದ್ವಿಕೂಟ) ದೇವಾಲಯದ ಸ್ಥಾನಪತಿತ್ವ ಮತ್ತು ಅದರ ಎರಡು ವೃತ್ತಿಗಳನ್ನು ದೇವಾಲಯದ ಸಾಲ ತೀರಿಸುವ ಸಂಬಂಧ ಅಗ್ರಹಾರ ಬಿಜ್ಜಳಪುರವಾದ ಮಾಚನಘಟ್ಟದ ಸ್ಥಾನಪತಿ ರಾವುಳ ಮಲ್ಲೆಯನಾಯಕನಿಗೆ ೮೫ ಗದ್ಯಾಣಕ್ಕೆ ಗುತ್ತಿಗೆ ನೀಡಿದ್ದನ್ನು ಸಂಗಮೇಶ್ವರ ದೇವಾಲಯದ ೧೪೯೮ರ ಶಾಸನ ತಿಳಿಸುತ್ತದೆ. ಇಲ್ಲಿಯ ಸಂಗಮೇಶ್ವರ-ಜಂನ್ನೇಶ್ವರ ದೇವಾಲಯವು ಎದುರುಬದುರಾಗಿ ನಿರ್ಮಿಸಿರುವ ದ್ವಿಕೂಟ ವಿನ್ಯಾಸಕ್ಕಿಂತ ಸ್ವಲ್ಪ ಭಿನ್ನವಾಗಿದ್ದು, ಒಂದೇ ಸಾಲಲ್ಲಿ ಅಕ್ಕಪಕ್ಕದಲ್ಲಿ ನಿರ್ಮಿಸಿರುವ ದ್ವಿಕೂಟವಾಗಿದ್ದು, ಅಘಲಯ, ಸೋಮನಾಥಪುರ (ತ್ರಿಕೂಟ), ಗೋವಿಂದನಹಳ್ಳಿ, ಸೋಮನಾಥಪುರ ಹಾಗೂ ದೊಡ್ಡಗದ್ದವಳ್ಳಿಯ (ಪಂಚಕೂಟ) ದೇವಾಲಯ ವಿನ್ಯಾಸಕ್ಕೆ ಪೂರ್ವಭಾವಿ ಪ್ರಯೋಗವಾಗಿದೆ. ಈ ದೇವಾಲಯವನ್ನು ಸುಮಾರು ೧೧೭೦ರಲ್ಲಿ ನಿರ್ಮಿಸಲಾಗಿದೆ ಎಂಬ ಅಭಿಪ್ರಾಯ ವಿದ್ವಾಂಸರಲ್ಲಿದೆಯಾದರೂ ನೆರೆಯ ತಮ್ಮಡಿಹಳ್ಳಿಯಲ್ಲಿರುವ ಹೊಯ್ಸಳ ವಿಷ್ಣುವರ್ಧನನ ಕಾಲದ ತ್ರುಟಿತ ಶೈವದತ್ತಿ ಶಾಸನವನ್ನು ಆಧರಿಸಿ, ಈ ದೇವಾಲಯದ ನಿರ್ಮಾಣ ಕಾಲವನ್ನು ಕ್ರಿ.ಶ.೧೧೨೦ಕ್ಕೆ ಗುರುತಿಸಬಹುದಾಗಿದೆ.

ಪೂರ್ವಾಭಿಮುಖವಾಗಿರುವ ಇದು ಎರಡು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು, ಮುಂದೆ ಎರಡಕ್ಕೂ ಸೇರಿದಂತೆ ಒಂದೇ ನವರಂಗವಿದ್ದು, ಪ್ರಧಾನ ದ್ವಾರಗಳೆರಡಕ್ಕೂ ಕಕ್ಷಾಸನವುಳ್ಳ ಮುಖಮಂಟಪಗಳಿವೆ. ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು, ಬಾಗಿಲವಾಡಗಳು ಚಿತ್ತಾಕರ್ಷಕವಾಗಿವೆ. ನವರಂಗದಲ್ಲಿರುವ ನಂದಿ, ಗಣಪತಿ, ಕಾರ್ತಿಕೇಯ, ಸಪ್ತಮಾತೃಕಾ ಪಟ್ಟಿಕೆ ಹಾಗೂ ಮಹಿಷಮರ್ಧಿನಿ ಶಿಲ್ಪಗಳೊಂದಿಗೆ, ನವರಂಗದ ಛತ್ತನ್ನು ಅಲಂಕರಿಸಿರುವ ವಿವಿಧ ವಿನ್ಯಾಸದ ಛತ್ತುಗಳೂ ಮನಮೋಹಕವಾಗಿವೆ. ಅದರಲ್ಲೂ ವಿಶೇಷವಾಗಿ ಇಲ್ಲಿಯ ನಂದಿ ಶಿಲ್ಪವು ಉತ್ಕೃಷ್ಟ ಕುಸುರಿಕೆಲಸಕ್ಕೆ ಮಾದರಿಯಾಗಿದೆ. ಈ ದೇವಾಲಯದ ದಕ್ಷಿಣ ಭಾಗದ ಮಂಟಪದ ತಳಪಾಯದ ಕಲ್ಲಿನ ಮೇಲಿರುವ ಶಾಸನದಿಂದ ಇದರ ಜೀರ್ಣೋದ್ಧಾರ ಕಾರ್ಯವನ್ನು ದೇವರಸನು ಕ್ರಿ.ಶ.೧೬೬೦ರಲ್ಲಿ ಕೈಗೊಂಡಿದ್ದ ಅಂಶ ವೇದ್ಯವಾಗುತ್ತದೆ. ಈ ದೇವಾಲಯದ ದಕ್ಷಿಣ ಭಾಗದಲ್ಲಿದ್ದ ಹೊಯ್ಸಳರ ಕಾಲದ ಎರಡು ಮಂಟಪಗಳನ್ನು ಕ್ರಿ.ಶ.೧೨೪೯ರ ಶಾಸನವು ಗ್ರಾಮದಕಟ್ಟೆ ಎಂದೇ ಕರೆದಿದ್ದು, ಮಹಾಜನರು ಹಳ್ಳಿಯ ಆಡಳಿತವನ್ನು ಅಲ್ಲಿ ಕುಳಿತೇ ನಡೆಸುತ್ತಿದ್ದರೆಂದೂ ಗೊತ್ತಾಗುತ್ತದೆ. ಆದರೆ ಈ ಗುಡಿಯ ಸಂರಕ್ಷಣೆ ಸಂದರ್ಭದಲ್ಲಿ ಆ ಮಂಟಪಗಳನ್ನು ಇತ್ತೀಚೆಗೆ ತೆಗೆದು ಹಾಕಲಾಗಿದೆ. ಪೂರ್ಣ ಶಿಥಿಲಾವಸ್ಥೆಯಲ್ಲಿದ್ದ ಈ ಗುಡಿಯನ್ನು ಪುನರ್ ಜೀರ್ಣೋದ್ಧಾರ ಮಾಡುವಲ್ಲಿ ಸ್ಥಳೀಕರು, ಜಿಲ್ಲಾಡಳಿತ ಹಾಗೂ ಧರ್ಮಸ್ಥಳದ ಶ್ರೀ ಮಂಜುನಾಥ ಧರ್ಮೋತ್ಥಾನ ಟ್ರಸ್ಟ್‌ಗಳು ಕೈಜೋಡಿಸಿವೆ. ತತ್ಪರಿಣಾಮವಾಗಿ ಈ ದೇವಾಲಯವು ತನ್ನ ಗತ ಕಲಾ ಐಸಿರಿಯನ್ನು ಪುನ: ಪಡೆಯುವಲ್ಲಿ ಯಶಸ್ವಿಯಾಗಿದ್ದು, ಜಿಲ್ಲೆಯ ಕಲಾತ್ಮಕ ಹೊಯ್ಸಳ ದೇಗುಲಗಳ ಸಾಲಿನಲ್ಲಿ ನಿಲ್ಲುವಂತಾಗಿದೆ. ಊರ ವಾಯವ್ಯ ಭಾಗದಲ್ಲಿರುವ ಮಹಾನವಮಿ ಮಂಟಪಕ್ಕೆ ಹೋಗುವ ಹಾದಿಯಲ್ಲಿ ಕರಿಕಲ್ಲೆಂದು ಕರೆಯಲ್ಪಡುವ ಗಜಲಕ್ಷ್ಮಿ ತೋರಣ ಶಿಲ್ಪವಿದೆ. ಜೈನ(ಬಳೆಗಾರ)ರ ಬೀದಿ ಹಾಗೂ ಜೈನರ ಗದ್ದುಗೆ ಹಿಂದೆ ಅಲ್ಲಿತ್ತೆಂದು ಹೇಳಲಾಗುತ್ತಿದ್ದು, ಇಂದು ಗದ್ದುಗೆಯಷ್ಟೇ ಹೊಲಗಳ ನಡುವೆ ಉಳಿದಿದ್ದು, ಅದರ ಶಿಲಾ ಫಲಕದ ಮೇಲೆ ಪದ್ಮಾಸೀನ ತೀರ್ಥಂಕರ ಕೆತ್ತನೆ ಇದೆ. ಇಲ್ಲಿಯ ಸಾಬರ ಬೀದಿ (ಒಳಕೆರೆ)ಯಲ್ಲಿರುವ ಕಲ್ಲು ಮಸೀದಿಯನ್ನು ಕ್ರಿ.ಶ.೧೫೩೭ರಲ್ಲಿ ರಂಗಯ್ಯನಾಯಕ ಹಾಗೂ ಬಾಬುಸೆಟ್ಟಿಯರು ನಿರ್ಮಿಸಿ, ಅದಕ್ಕೆ ದಾನ ನೀಡಿದ ಅಪರೂಪದ ಅಂಶವನ್ನು ಅಲ್ಲಿಯ ಶಾಸನವೊಂದು ವ್ಯಕ್ತಪಡಿಸುತ್ತಿದ್ದು, ಧಾರ್ಮಿಕ ಸೌಹಾರ್ದತೆ, ಸಾಮರಸ್ಯಕ್ಕೆ ಇದೊಂದು ಉತ್ತಮ ನಿದರ್ಶನವಾಗಿದೆ. ಇಲ್ಲಿ ಬಾಬಯ್ಯನ ಹಬ್ಬವನ್ನು ಪ್ರತೀ ವರ್ಷ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಊರ ದಕ್ಷಿಣಕ್ಕೆ ಮರವನಹಳ್ಳಿಗೆ ಹೋಗುವ ಹಾದಿಯಲ್ಲಿ ಮಂಟೇಗುಡ್ಡದ ಬಳಿ ಇರುವ ಪಾಳು ಮಲ್ಲೇಶ್ವರ ಗುಡಿಯು ಸುಮಾರು ೧೧ನೇ ಶತಮಾನದ್ದಾಗಿದೆ. ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನುಳ್ಳ ಇದರಲ್ಲಿ ಶಿವಲಿಂಗ, ನಂದಿ, ಭೈರವ ಹಾಗೂ ಸೂರ್ಯನ ಶಿಲ್ಪಗಳಿದ್ದು, ಸಂರಕ್ಷಿಸಬೇಕಿದೆ. ತಿಮ್ಮಪ್ಪನ ಗುಡಿಗೆ ಹೊಗುವ ಮಾರ್ಗದಲ್ಲೇ ಸಿಗುವ ಗ್ರಾಮದೇವತೆ (ಸಿಂದಗಟ್ಟದಮ್ಮ)ಗುಡಿಯು ಮಹತ್ವದ್ದಾಗಿದ್ದು, ಅದರ ಬಳಿಯಲ್ಲಿ ತಿಮ್ಮಪ್ಪಯ್ಯನ ಕೊಳವಿದೆ. ಈ ದೇವಿಯ ಜಾತ್ರೆ ಜೂನ್ ತಿಂಗಳಲ್ಲಿ ನಡೆಯುತ್ತದೆ. ಊರ ನಡುವೆ ಕೋಟೆ ಬಳಿ ಇರುವ ಬಸವೇಶ್ವರ ದೇವಾಲಯದಲ್ಲಿ ನಂದಿಕಂಬವಿದ್ದು ಅದನ್ನೇ ಪೂಜಿಸಲಾಗುತ್ತದೆ. ಉಳಿದಂತೆ ಊರಲ್ಲಿ ತಗ್ಗಿನ ತಾಳಮ್ಮ, ಮಲೆಮಹಾದೇಶ್ವರ, ವಿನಾಯಕ, ಈಶ್ವರ, ಆಂಜನೇಯ ಮುಂತಾದ ನವೀನ ಗುಡಿಗಳ ಜೊತೆಗೆ ಉಯ್ಯಾಲೆಮಂಟಪ, ಸಂಕ್ರಾಂತಿ ಮಂಟಪ, ಮಹಾನವಮಿ ಮಂಟಪ, ಮೂರು ಕಾಲಿನ ಮಂಟಪ ಮುಂತಾದವುಗಳಿದ್ದು, ದರ್ಗಾ ಕೂಡ ಇದೆ.

**ಸುಂಕಾತೊಣ್ಣೂರು (೨,೪೩೫)** : ತಾಲೂಕು ಕೇಂದ್ರ ಪಾಂಡವಪುರದಿಂದ ೧೨ ಕಿ.ಮೀ. ಈಶಾನ್ಯಕ್ಕಿದ್ದು, ಹೊಯ್ಸಳ ಶಾಸನಗಳಲ್ಲಿ ತೊಂಡನೂರು ಎಂದೂ ವಿಜಯನಗರ ಕಾಲದ ಮೇನಾಗರ (ಕ್ರಿ.ಶ.೧೫೫೮) ಹಾಗೂ ನರಿಹಳ್ಳಿ (ಕ್ರಿ.ಶ.೧೫೮೫) ಯ ಶಾಸನಗಳಲ್ಲಿ 'ಸುಂಕತೊಂಡನೂರು' ಎಂದೂ ಉಲ್ಲೇಖಿತಗೊಂಡಿದ್ದು, ಇಲ್ಲಿಂದ ಈವರೆಗೆ ಸುಮಾರು ಕ್ರಿ.ಶ. ೧೦–೧೬ನೇ ಶತಮಾನದ ಎಂಟು ಶಾಸನಗಳು ವರದಿಯಾಗಿವೆ. ಊರ ನಡುವೆ

ಇರುವ ಚಲುವನಾರಾಯಣ ಗುಡಿಯೇ ಒಂದನೆಯ ನರಸಿಂಹನ ದತ್ತಿ ಶಾಸನದಲ್ಲಿ ಉಕ್ತವಾಗಿರುವ ನಾರಾಯಣ ಗುಡಿಯಾಗಿದ್ದು, ಸುಮಾರು ೧೨ನೆಯ ಶತಮಾನದ ಹೊಯ್ಸಳ ರಚನೆಯಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯು ಎತ್ತರದ ಸ್ಥಳದಲ್ಲಿದ್ದು, ಪ್ರಾಕಾರ ನಂತರದ ಸೇರ್ಪಡೆಯಾಗಿದೆ. ಬಹುಕೋನಾಕಾರದ ತಳವಿನ್ಯಾಸವನ್ನು ಹೊಂದಿರುವ ಇದು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಗರುಡ ಪೀಠದ ಮೇಲೆ ಚತುರ್ಭುಜಧಾರಿ ನಾರಾಯಣನ ಆಳೆತ್ತರದ ಸುಂದರ ಶಿಲ್ಪವಿದ್ದು, ಚತುರ್ ಶಾಖಾಲಂಕೃತ ಬಾಗಿಲವಾಡವಿದೆ. ಅಂತರಾಳದ ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದು, ನವರಂಗದ ಚರಕಿಕಂಬಗಳು ಅಲಂಕಾರಿಕವಾಗಿದ್ದು, ಕಮಲಾಲಂಕೃತ ನಡುವಣ ಛತ್ತು ವಿಶಿಷ್ಟವಾಗಿದೆ. ಗರ್ಭಗುಡಿಯು ದ್ರಾವಿಡ ಶಿಖರದಿಂದ ಕೂಡಿದ್ದು, ಗರ್ಭಗೃಹ ಹಾಗೂ ನವರಂಗದ ಭಿತ್ತಿಯಲ್ಲಿರುವ ದೇವಕೋಷ್ಠಗಳಿಂದು ಬರಿದಾಗಿದ್ದು, ಭಿತ್ತಿಯನ್ನು ವಜ್ರ, ಕಮಲ, ಅಲಂಕಾರಿಕ ಅರೆಕಂಬ ಹಾಗೂ ಸ್ತಂಭಗೋಪುರ ಮಾದರಿಗಳಿಂದ ಅಲಂಕರಿಸಲಾಗಿದೆ. ಊರ ಪ್ರವೇಶದಲ್ಲಿರುವ, ಪೂರ್ಣ ಜೀರ್ಣೋದ್ಧಾರಗೊಂಡಿರುವ ರಾಕ್ಷಸಮ್ಮನ ಗುಡಿಯು ಗರ್ಭಗೃಹ, ನವರಂಗ ಹಾಗೂ ಸಭಾಂಗಣಗಳನ್ನು ಹೊಂದಿದೆ. ಇವಳಿಗೆ ಸಂಬಂಧಿಸಿದಂತೆ 'ಕರಿಭಂಟನ ಕಾಳಗ' ಎಂಬ ಜನಪದ ಕಥೆಯೊಂದಿದೆ. ಆ ಪ್ರಕಾರ ಗ್ರಾಮದೇವತೆ ರಾಕ್ಷಸಮ್ಮ ಕೆರೆತೊಣ್ಣೂರಿನವಳಾಗಿದ್ದು, ಸೋದರ ಬೊಮ್ಮರಾಕ್ಷಸನಿಗೆ ಮಗಳು ಪುಂಡರೀಕಾಕ್ಷಿಯನ್ನು ಕೊಟ್ಟು ಮದುವೆ ಮಾಡಬೇಕೆಂದಿದ್ದಳು. ಆದರೆ ಬಲ್ಲಾಳರಾಯನ ಮಗ ಕರೀಭಂಟ ಪುಂಡರೀಕಾಕ್ಷಿಯನ್ನು ಪ್ರೇಮಿಸಿದ್ದು, ರಾಕ್ಷಸಮ್ಮ ಇಲ್ಲದಿದ್ದಾಗ ಇಬ್ಬರೂ ಗುಪ್ತವಾಗಿ ಸಂಧಿಸುತ್ತಿದ್ದರು. ಆದರೆ ಅವರ ಪ್ರೇಮ ವ್ಯವಹಾರ ತಿಳಿದ ರಾಕ್ಷಸಮ್ಮ, ಕರಿಭಂಟನನ್ನು ಕೊಲ್ಲಲು ಸಂಚು ಹೂಡಿದಳು. ರಾಕ್ಷಸಮ್ಮನಿಗೆ ಹೆದರಿ ಪಲಾಯನ ಮಾಡಿದ ಕರಿಭಂಟನನ್ನು ಬೆನ್ನಟ್ಟಿಕೊಂಡು ಸುಂಕಾತೊಣ್ಣೂರಿಗೆ ಬಂದಳು. ರಾಜಕುಮಾರ ಊರವರ ಆಶ್ರಯ ಬೇಡಿದ. ರಾಕ್ಷಸಮ್ಮನು ಅವನನ್ನು ತನ್ನ ಗಂಡನೆಂದು ಹೇಳಿ ನ್ಯಾಯ ಕೇಳಿದಳು. ಅವಳನ್ನು ಸೋಮೇಶ್ವರ ಗುಡಿಯಲ್ಲಿ ಕೂಡಿ ಹಾಕಿದರು. ಸರಿರಾತ್ರಿಯಲ್ಲಿ ಗುಡಿಯ ಮೇಲು ಚಪ್ಪಡಿ ಹಾರಿಸಿ ಬಂದು ಕರಿಭಂಟನನ್ನು ಕೊಂದು ಹೋದಳು. ಅವನನ್ನು ರಕ್ಷಿಸಲಾರದ ಊರ ಪಂಚರು ಆತ್ಮಾರ್ಪಣೆ ಮಾಡಿಕೊಂಡಾಗ, ಶಿವ ಪ್ರತ್ಯಕ್ಷನಾಗಿ ಊರಿಗೆ ಕ್ಷಾಮ ಬಾರದಂತೆ ವರ ನೀಡಿದನೆಂಬ ಜನಪದ ಐತಿಹ್ಯ ಈ ಭಾಗದಲ್ಲಿ ರೂಢಿಯಲ್ಲಿದೆ. ರಾಕ್ಷಸಮ್ಮನ ಗುಡಿಯ ಗರ್ಭಗೃಹದಲ್ಲಿ ನೆಟ್ಟಿರುವ ಕಲ್ಲಿನ ಮೇಲೆ ಆಯುಧಧಾರಿ ಹೆಣ್ಣು ಗಂಡುಗಳ ನಡುವೆ ಬುಡದಲ್ಲಿ ಪುಟ್ಟಮಗುವೊಂದರ ಕೆತ್ತನೆಯಿದ್ದು, ಹಿಂಬದಿಯಲ್ಲಿ ರಾಕ್ಷಸಮ್ಮ ಶಿಲೆಯಾಗಿ ನೆಲೆಗೊಂಡಳೆಂದು ತೋರಿಸುವ ಕಿರುಬಂಡೆಯೊಂದಿದ್ದು, ಅದನ್ನೇ ರಾಕ್ಷಸಮ್ಮ ಎಂದು ಕರೆಯಲಾಗುತ್ತದೆ. ಆ ಕಾರಣದಿಂದಾಗಿ ಇಲ್ಲಿ ರಾಕ್ಷಸಮ್ಮನ ಬೆನ್ನಿಗೆ ಪೂಜೆ ಮಾಡುವ ಸಂಪ್ರದಾಯವಿದೆ. ಈ ಗುಡಿಯ ಹಿಂಬದಿಯಲ್ಲಿ ಹೊಯ್ಸಳ–ವಿಜಯನಗರ ಕಾಲದ ಏಳು, ಕೆರೆ ದಂಡೆ ಮೇಲೆ ಮೈಸೂರರಸರ ಕಾಲದ ವಿವಿಧ ಗಾತ್ರದ ಹತ್ತಾರು ಹಾಗೂ ಆರಳಿಮರದ ಬಳಿ ಐದು ವೀರಗಲ್ಲುಗಳ ಜೊತೆಗೆ ಶ್ರೀವೈಷ್ಣವ ಮುದ್ರಾಂಕಿತ ಕಲ್ಲಿದೆ. ರಾಕ್ಷಸಮ್ಮನ ಗುಡಿ ಬಯಲಲ್ಲಿರುವ ವೀರಗಲ್ಲುಗಳು ಹಿಂದೆ ಅಲ್ಲಿ ಜರುಗಿರಬಹುದಾದ ಭೀಕರ ಯುದ್ಧದ ಕುರುಹುಗಳಾಗಿ ನಿಂತಿವೆ. ಉಳಿದಂತೆ ಊರಲ್ಲಿ ಸೋಮೇಶ್ವರ, ಮಹಾದೇಶ್ವರ, ಹುಚ್ಚಮ್ಮ, ಬನ್ನಂತಮ್ಮ, ಮುಂತಾದ ಕಿರುಗುಡಿಗಳಿವೆ.

**ಸೋಮನಹಳ್ಳಿ (೨,೨೭೬) :** ತಾಲೂಕು ಕೇಂದ್ರ ಮಳವಳ್ಳಿಯಿಂದ ೨೭ಕಿ.ಮೀ. ದಕ್ಷಿಣಕ್ಕಿದೆ. ಊರಿಂದ ಸುಮಾರು ಎರಡು ಕಿ.ಮೀ. ಅಂತರದಲ್ಲಿ, ಕಾವೇರಿಯ ಎಡದಂಡೆಯ ಮೇಲಿರುವ ಪುರಾತನ ಕಾಶಿವಿಶ್ವನಾಥ ದೇವಾಲಯವನ್ನು ತಲುಪಲು ನೆರೆಯ ಬಿಳಿಜಗಲಿಮೋಳೆಯಿಂದ ಮಾರ್ಗವಿದೆ. ಇಲ್ಲಿಂದ ವರದಿಯಾಗಿರುವ ಐದು ಶಾಸನಗಳಲ್ಲಿ ವಿಶ್ವನಾಥ ಗುಡಿಯ ತಳಪಾದಿ ಕಲ್ಲಿನ ಮೇಲಿರುವ ನಾಲ್ಕು ಶಾಸನಗಳು, ಹೊಯ್ಸಳ ವಿಷ್ಣುವರ್ಧನ ಹಾಗೂ ಇಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ್ದು,ಈ ದೇವಾಲಯದ ಪೂಜಾ ಹಕ್ಕಿನ ಹಂಚಿಕೆ – ಮರುಹಂಚಿಕೆಗಳ

ಬಗ್ಗೆ ತಿಳಿಸುತ್ತಿದ್ದು, ಹಿಂದೆ ಇದಕ್ಕೆ 'ವಾಗೀಶ್ವರ ಮಂಗಲ' ಎಂದೂ ಕರೆಯಲಾಗುತ್ತಿದ್ದ ಅಂಶ ಗೊತ್ತಾಗುತ್ತದೆ. ಕಾವೇರಿಯ ಎಡದಂಡೆಯ ಮೇಲೆ ಪೂರ್ವಾಭಿಮುಖವಾಗಿರುವ ಕಾಶಿವಿಶ್ವನಾಥ (ಶಾಸನೋಕ್ತ ವೀರಶ್ರೀಶ್ವರ) ದೇವಾಲಯಕ್ಕೆ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳಿವೆ. ಗರ್ಭಗೃಹದಲ್ಲಿ ಸುಮಾರು ಆರು ಅಡಿ ಎತ್ತರದ ಬೃಹತ್ ಶಿವಲಿಂಗವಿದ್ದು,ಅಂತರಾಳದಲ್ಲಿ ನಂದಿ ಇದೆ. ನವರಂಗದ ನಡುವಣ ಛತ್ತು ಅಷ್ಟಕೋನಾಕಾರದಲ್ಲಿದ್ದು, ಭಿತ್ತಿಯು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ವಾರಾಂತ್ಯದ ಪ್ರವಾಸಕ್ಕೆ ಪ್ರಶಸ್ತವಾಗಿರುವ ಇದು ಪ್ರಸಿದ್ಧ ಕ್ಷೇತ್ರಗಳಾದ ಮುಡುಕುತೊರೆ ಹಾಗೂ ತಲಕಾಡು (ತಿರಮಕೂಡಲು ನರಸೀಪುರ ತಾ.) ಗಳಿಗೆ ಅನತಿ ದೂರದಲ್ಲಿದೆ.

**ಸೋಮನಹಳ್ಳಿ ಕೊಪ್ಪಲು** : ತಾಲೂಕು ಕೇಂದ್ರ ನಾಗಮಂಗಲದಿಂದ ೧೫ ಕಿ.ಮೀ. ದಕ್ಷಿಣಕ್ಕೆ ಹಾಗೂ ಚಿಣ್ಯದಿಂದ ಎರಡು ಕಿ.ಮಿ. ಉತ್ತರಕ್ಕಿರುವ ಇದೊಂದು ಉಪಗ್ರಾಮ. ಊರಿಗೆ ಅನತಿ ದೂರದಲ್ಲಿರುವ ಸುಮಾರು ೧೫ ಎಕರೆ ವಿಸ್ತೀರ್ಣದ ಈ ಕೋಟೆಯು ಸುಮಾರು ೧೭ನೆಯ ಶತಮಾನದಲ್ಲಿ ಆಳುತ್ತಿದ್ದನೆಂದು ಹೇಳಲಾಗುವ ಸೋಮನಾಯಕನ ಕಾಲದ್ದಾಗಿದ್ದು, ಇಂದು ಕಂದಕ ಹಾಗೂ ಅಗಸೆ ಬಾಗಿಲುಗಳಷ್ಟೇ ಉಳಿದಿದ್ದು, ಕೋಟೆಯ ಒಳಗಿರುವ ಲಕ್ಷ್ಮೀನರಸಿಂಹನ ಗುಡಿಯು ಸುಮಾರು ೧೪ನೆಯ ಶತಮಾನದಲ್ಲಿ ನಿರ್ಮಾಣಗೊಂಡಿರುವ ಚೋಳ ಮಾದರಿಯ ಹೊಯ್ಸಳ ಗುಡಿಯಾಗಿದ್ದು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ನವರಂಗ ಹಾಗೂ ಅರ್ಧಮಂಟಪಗಳಲ್ಲಿ ಲಕ್ಷ್ಮೀನರಸಿಂಹನ ಶಿಲ್ಪಗಳಿವೆ. ದೇವಾಲಯದ ಭಿತ್ತಿಯಲ್ಲಿ ಕಿರುದೇವಕೋಷ್ಠ, ಅಲಂಕಾರಿಕ ಅರೆಗಂಬಗಳಷ್ಟೇ ಇದ್ದು, ಮುಖಮಂಟಪವನ್ನು ಪ್ರವೇಶಿಸಲು ಇಕ್ಕೆಲದಲ್ಲಿ ಸೋಪಾನವಿದೆ. ಶಿಥಿಲಾವಸ್ಥೆಯಲ್ಲಿರುವ ಈ ಗುಡಿಯು ಸಂರಕ್ಷಣೆಗೆ ಒಳಪಡಬೇಕಾಗಿದ್ದು, ಅನತಿ ದೂರದಲ್ಲಿ ಕರುಗಲ್ಲಿದೆ. ಕೋಟೆಯ ಹೊರಗೆ ಆಂಜನೇಯ ಗುಡಿಯಲ್ಲಿರುವ ಹನುಮನ ಆಕರ್ಷಕ ಶಿಲ್ಪವು ವ್ಯಾಸ ಪ್ರತಿಷ್ಠಿತವೆಂಬ ಅಭಿಪ್ರಾಯವಿದೆ. ಇಲ್ಲಿಯ ವಿಶೇಷ ಆಕರ್ಷಣೆಯಾದ ಸೋಮನಾಳಮ್ಮನ ಗುಡಿಯು ನೂತನ ರಚನೆಯಾಗಿದ್ದು, ಗರ್ಭಗೃಹದಲ್ಲಿರುವ ಮೂರು ದೇವಿಶಿಲೆಗಳು ಸ್ವಯಂಭೂ ಎಂಬ ಅಭಿಪ್ರಾಯವಿದ್ದು, ಶಿವರಾತ್ರಿಗೆ ಒಂದು ವಾರ ಮೊದಲೇ ಜಾತ್ರೆಯಾಗುತ್ತದೆ. **ಚಿಣ್ಯ (೨೨೦೩)** : ಅನತಿ ದೂರದಲ್ಲಿರುವ ಚಿಣ್ಯವು ಭಾನುವಾರದ ಸಂತೆಗೆ ಹೆಸರಾಗಿದ್ದು, ಕಂಬಳಿಗೆ ಪ್ರಸಿದ್ಧವಾಗಿದೆ. ಚಿಣ್ಯದಲ್ಲಿ ಸೋಮನಾಳಮ್ಮ, ಕೇಶವ, ಶ್ರೀನಿವಾಸ, ವಿನಾಯಕ, ಲಕ್ಷ್ಮೀದೇವಮ್ಮ, ಮಾಸ್ತಮ್ಮ, ಮುಂತಾದ ಗುಡಿಗಳಷ್ಟೇ ಅಲ್ಲದೇ ಮಸೀದಿ ಹಾಗೂ ರಾಜ ಬಾಗ್ ಸವಾರರ ದರ್ಗಾ ಕೂಡ ಇವೆ.

**ಹನುಮಂತನಗರ** : ತಾಲೂಕು ಕೇಂದ್ರ ಮದ್ದೂರಿನಿಂದ ೧೬ ಕಿ.ಮೀ. ನೈಋತ್ಯಕ್ಕೆ ಹಾಗೂ ಕಾಳಮುದ್ದನದೊಡ್ಡಿಯಿಂದ ಐದು ಕಿ.ಮೀ. ಅಂತರದಲ್ಲಿ ಕರಡಕೆರೆ ಗ್ರಾಮದ ಗಡಿಯಲ್ಲಿ ಮಂಡ್ಯ-ಕೆ.ಎಂ.ದೊಡ್ಡಿ ಮಾರ್ಗದಲ್ಲಿದ್ದು, ಅಲ್ಲಿಯ ಪ್ರಸಿದ್ಧ ಆಂಜನೇಯ ಗುಡಿಯಿಂದಾಗಿ ಆತ್ಮಲಿಂಗೇಶ್ವರ ಗುಡಿ ಇರುವ ಈ ಪರಿಸರಕ್ಕೆ ಹನುಮಂತನಗರ ಎಂಬ ಹೆಸರು ಬಂದಿದೆ. ಭಾರತೀಯ ಶಿಕ್ಷಣ ಟ್ರಸ್ಟಿನ ಅಧ್ಯಕ್ಷ ಹಾಗೂ ಮಾಜಿ ಸಂಸದ ಜಿ.ಮಾದೇಗೌಡರು, ಸುಮಾರು ೪೦ ಎಕರೆ ಪ್ರದೇಶವನ್ನು ಹೊಂದಿರುವ ಇದನ್ನು ೧೯೮೮ರಲ್ಲಿ ನಿರ್ಮಿಸಲು ಜಿಲ್ಲೆಯ ಜನತೆಯ ಸಹಕಾರದೊಂದಿಗೆ ಮುಂದಾದುದರ ಪರಿಣಾಮವಾಗಿ ೧೯೯೩ರಲ್ಲಿ ಪೂರ್ಣಗೊಂಡ ಈ ದೇವಾಲಯದ ಬಳಿಯಲ್ಲೇ ವಸತಿ ಶಾಲೆ, ಸುಸಜ್ಜಿತ ಅತಿಥಿ ಗೃಹ, ಯಾತ್ರಿನಿವಾಸ ಅಣ್ಣೂರು ಸಿದ್ದೇಗೌಡ ಕ್ರೀಡಾಂಗಣ ಹಾಗೂ ಕಲ್ಯಾಣ ಮಂಟಪಗಳಿವೆ. ಆತ್ಮಲಿಂಗೇಶ್ವರದ ಹೆಬ್ಬಾಗಿಲ ಎಡಭಾಗದಲ್ಲಿ ಭಕ್ತಿಗಾಗಿ ನಿರ್ಮಿಸಿರುವ ತ್ರಿಕೋನಾಕಾರದ ಪಾವನಗಂಗಾ ಕೊಳವು ನೂರಡಿ ಉದ್ದಗಲವಿದ್ದು, ವಿಶ್ವೇಶ್ವರಯ್ಯ ನಾಲೆಯಿಂದ ಇಲ್ಲಿಗೆ ನೀರು ಹರಿದು ಬರುವಂತೆ ಮಾಡಲಾಗಿದೆ. ಸುಮಾರು ೯೦ ಅಡಿ ಎತ್ತರದ ಸುಂದರ ಗೋಪುರವಿರುವ ಪ್ರಧಾನ ದ್ವಾರದ ಮೂಲಕ, ೩೨೦ ಕಂಬಗಳನ್ನು ಹೊಂದಿರುವ ಪ್ರಾಂಗಣವನ್ನು ಪ್ರವೇಶಿಸಿದಾಗ, ನಡುವೆ ಕಂಗೊಳಿಸುವ ಆತ್ಮಲಿಂಗೇಶ್ವರ ಸ್ಥಾನ, ಮುಂದಿರುವ

೭೫ ಅಡಿ ಉದ್ದದ ಹಜಾರ ಹಾಗೂ ಸುತ್ತ ಕಣ್ಮನ ಸೆಳೆಯುವ ಹಸಿರು, ವೀಕ್ಷಕರ ಮನಸ್ಸಿಗೆ ಮುದ ನೀಡುತ್ತದೆ. ಮಹಾದ್ವಾರದ ಬಲಕ್ಕೆ ನವಗ್ರಹ ಮಂದಿರ, ಎಡಕ್ಕೆ ಪಾರ್ವತಿ ಮಂದಿರಗಳಿದ್ದು, ಬದಿಯಲ್ಲೇ ದರ್ಪಣ ಮಂದಿರವಿದೆ. ಪ್ರಾಂಗಣದಲ್ಲಿ ಧರ್ಮಪೀಠ, ನ್ಯಾಯಪೀಠ ಹಾಗೂ ಕಲ್ಯಾಣಪೀಠಗಳಿದ್ದು, ಯಾತ್ರಾರ್ಥಿಗಳಿಗಾಗಿ ದಾನಿಗಳು ಹಾಗೂ ರಾಜ್ಯ ಪ್ರವಾಸೋದ್ಯಮ ಇಲಾಖೆಯವರು ನಿರ್ಮಿಸಿಕೊಟ್ಟಿರುವ ಅತಿಥಿಗೃಹಗಳಿವೆ. ದೇವಾಲಯದ ಬದಿಯಲ್ಲೇ ೨೫ ಲಕ್ಷ ರೂ. ವೆಚ್ಚದಲ್ಲಿ ೧೨ ಕೊಠಡಿಗಳಿರುವ ಸುಂದರ ಯಾತ್ರಿ ನಿವಾಸವನ್ನು ನಿರ್ಮಿಸಲಾಗಿದೆ. ಆತ್ಮಲಿಂಗೇಶ್ವರನನ್ನು ಪ್ರತೀ ಹಬ್ಬದಲ್ಲೂ ಲಕ್ಷಾಂತರ ರೂ. ಮೌಲ್ಯದ ವಿಶೇಷ ಆಭರಣಗಳಿಂದ ಅಲಂಕರಿಸಲಾಗುತ್ತಿದ್ದು, ಶಿವರಾತ್ರಿಯಲ್ಲಿ ಜರುಗುವ ಜಾತ್ರೆಯ ಸಂದರ್ಭದಲ್ಲಿ ರಥೋತ್ಸವವಿರುತ್ತದೆ. **ಕಾಡಕೊತ್ತನಹಳ್ಳಿ (೩೭೬೮)** : ತಾಲೂಕು ಕೇಂದ್ರ ಮದ್ದೂರಿನಿಂದ ೨೦ ಕಿ.ಮೀ. ಹಾಗೂ ಹನುಮಂತನಗರದಿಂದ ೧೦ ಕಿ.ಮೀ. ಅಂತರದಲ್ಲಿರುವ ಇದು ದೊಡ್ಡಅರಸಿನಕೆರೆಯ ಕ್ರಿ.ಶ.೧೩೪೨ರ ಶಾಸನದಲ್ಲಿ 'ಕಾಡುಕೊತ್ತನಹಳ್ಳಿ' ಎಂದೇ ಉಲ್ಲೇಖಿತಗೊಂಡಿದ್ದು, ಈವರೆಗೆ ಕ್ರಿ.ಶ.೯೮೭ರ ಏಕೈಕ ತ್ರುಟಿತ ಶಾಸನ ಇಲ್ಲಿಂದ ವರದಿಯಾಗಿದೆ. ಚೌಡೇಶ್ವರಿ ಹಾಗೂ ಭೈರವನ ಗುಡಿ ಬಳಿ ಅಪ್ರಕಟಿತ ಶಾಸನಗಳನ್ನು ಇತ್ತೀಚೆಗೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಇಲ್ಲಿರುವ ಸುಮಾರು ೧೯ನೆಯ ಶತಮಾನದ ವೀರಭದ್ರನ ಗುಡಿಗೆ ವಿಶಾಲ ಪ್ರಾಕಾರ, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿದ್ದು, ಒಳಗೆ ಮೂರುವರೆ ಅಡಿ ಎತ್ತರದ ವೀರಭದ್ರನಮೂರ್ತಿ ಇದ್ದು, ಮೇಲೆ ಗಾರೆ ಶಿಖರವಿದೆ. ನವರಂಗದಲ್ಲಿ ಭೈರವನ ಶಿಲ್ಪವಿದ್ದು, ಛತ್ತು ಚಪ್ಪಟೆಯಾಗಿದೆ. ಊರಾಚೆ ಕಾಲುವೆ ಬಳಿ ಇರುವ ಸ್ವರ್ಗದ ಬಾಗಿಲು ಸೋಮೇಶ್ವರ ಗುಡಿಯ ಗರ್ಭಗೃಹ, ಅಂತರಾಳಗಳಷ್ಟೇ ಉಳಿದಿದ್ದು, ಒಳಗೆ ಶಿವಲಿಂಗ ಹಾಗೂ ನಂದಿಶಿಲ್ಪಗಳಿದ್ದು ಹೊರಗೆ ಕ್ರಿ.ಶ.೯೮೭ರ ಶಾಸನವಿದೆ. ಇಲ್ಲಿಂದ ಎರಡು ಕಿ.ಮೀ. ಅಂತರದಲ್ಲಿ ಗದ್ದೆಗಳ ನಡುವೆ ಇರುವ ೧೬ ಕಿರು ಕಂಬಗಳನ್ನುಳ್ಳ ಒಂಭತ್ತು ಅಂಕಣದ ಸಾಕುದೇವಮ್ಮನ ಗುಡಿಯು ಸುತ್ತ ಮಣ್ಣಿನಿಂದ ಮುಚ್ಚಲ್ಪಟ್ಟಿದ್ದು, ಒಳಹೋಗಲು ಕಿರಿದಾದ ಮಾರ್ಗವಿದೆ. ಒಳಗೆ ಗಂಗರ ಕಾಲದ ಸಪ್ತಮಾತೃಕೆಯರ ಬಿಡಿ ಶಿಲ್ಪಗಳಿದ್ದರೆ, ಇಕ್ಕೆಲಗಳಲ್ಲಿ ವೀರಭದ್ರ ಹಾಗೂ ಗಣಪತಿಯ ಶಿಲ್ಪಗಳಿವೆ. ಈ ಗುಡಿಯ ಎಡಭಾಗದ ಒಂದಂಕಣದ ಗುಡಿಯಲ್ಲಿ ಕ್ಷೇತ್ರಪಾಲ ಭೈರವನ ಶಿಲ್ಪವಿದ್ದು, ಈ ಸಂಕೀರ್ಣವನ್ನು ಪ್ರವೇಶಿಸಲು ತೋರಣಕಂಬಗಳಿವೆ. ಉಳಿದಂತೆ ಊರಲ್ಲಿ ಮಾರಮ್ಮ, ದೇವಮ್ಮ, ಮಹಾದೇವಮ್ಮ, ಚೌಡಮ್ಮ, ರಾಕ್ಷಸಮ್ಮ, ಬಮ್ಮಮ್ಮ, ಶನಿಮಹಾತ್ಮಾ ಹಾಗೂ ಭೈರವರ ಗುಡಿಗಳೊಂದಿಗೆ ಹತ್ತಾರು ವೀರಗಲ್ಲು ಮೈಲಾರ, ರಾವಳೇಶ್ವರ ಮುಂತಾದ ಶಿಲ್ಪಗಳಿವೆ.

**ಹರವು (೧೮೭೫):** ತಾಲೂಕು ಕೇಂದ್ರ ಪಾಂಡವಪುರದಿಂದ ಹತ್ತು ಕಿ.ಮೀ. ನೈಋತ್ಯಕ್ಕೆ ಕಟ್ಟೇರಿ ರಸ್ತೆಯಲ್ಲಿದ್ದು, ಪ್ರಾಚೀನ ಶಾಸನಗಳಲ್ಲಿ 'ಹರಹು' ಎಂದೇ ಉಲ್ಲೇಖಿತಗೊಂಡಿದ್ದು, ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಅತ್ಯಂತ ವಿಶಾಲವಾದ ಪ್ರದೇಶದಲ್ಲಿರುವ ಇಲ್ಲಿಯ ರಾಮಚಂದ್ರ ದೇವಾಲಯವು ವಿಜಯನಗರ ಕಾಲದ ರಚನೆಯಾಗಿದ್ದು, ಕ್ರಿ.ಶ.೧೪೬೭ರಲ್ಲಿ ಈ ದೇವಾಲಯಕ್ಕೆ ದತ್ತಿ ಬಿಟ್ಟಿರುವ ಅಂಶ ನೆರೆಯ ಸೀತಾಪುರ ಶಾಸನದಿಂದ ವ್ಯಕ್ತವಾಗುತ್ತದೆ. ಆಕರ್ಷಕವಾದ ದ್ವಾರಮಂಟಪವನ್ನುಳ್ಳ ಇದು ಬೃಹತ್ ಪ್ರಾಕಾರದ ನಡುವೆ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ೩೫ ಅಂಕಣದ ವಿಶಾಲ ನವರಂಗ, ಮುಖಮಂಟಪ ಹಾಗೂ ೭೮ ಬೃಹತ್ ಸ್ತಂಭಗಳನ್ನುಳ್ಳ ಹಜಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ಮೂಲತಃ ಇದ್ದ ಶ್ರೀರಾಮಶಿಲ್ಪವು ಐದು ದಶಕಗಳ ಹಿಂದೆ ನಾಪತ್ತೆಯಾದ ನಂತರ, ಪ್ರತಿಷ್ಠಾಪಿಸಲ್ಪಟ್ಟ ಲಕ್ಷ್ಮೀನಾರಾಯಣನ ಸುಂದರ ಶಿಲ್ಪವಿದ್ದರೂ ಉತ್ಸವ ಮೂರ್ತಿಗಳು, ಶ್ರೀರಾಮ, ಲಕ್ಷ್ಮಣ ಸೀತೆಯರನ್ನೊಳಗೊಂಡ ಪಂಚಲೋಹದ ಮೂರ್ತಿಗಳಾಗಿದ್ದು ಆಕರ್ಷಕವಾಗಿವೆ. ಇಲ್ಲಿರುವ ಏಕಶಿಲಾ ಸಾಲಿಗ್ರಾಮವು ಕಿರಿದಾಗಿದ್ದು, ಅದರ ಮೇಲಿರುವ ಅಷ್ಟದಿಕ್ಪಾಲಕ ಕೆತ್ತನೆಯುಳ್ಳ ಕಿರುಗಂಬಗಳು ಗಮನಾರ್ಹವಾಗಿದೆ. ನವರಂಗದ ಕಂಬಗಳ ನಾಲ್ಕು ಮುಖಗಳಲ್ಲೂ ದೀಪದ ಗೂಡನ್ನು ಒದಗಿಸಿರುವುದು

ಉಲ್ಲೇಖಾರ್ಹವಾಗಿದ್ದು, ಗುಡಿಯ ಎದುರಲ್ಲಿ ೩೦ ಅಡಿ ಎತ್ತರದ ಗರುಡಗಂಬವಿದೆ. ಪೂರ್ಣ ಶಿಥಿಲಾವಸ್ಥೆಯಲ್ಲಿದ್ದ ಈ ದೇವಾಲಯದ ಸಂರಕ್ಷಣಾ ಕಾರ್ಯ ಪ್ರಗತಿಯಲ್ಲಿದ್ದು, ಪ್ರಾಕಾರದ ದುರಸ್ತಿ, ಪುನಾರಚನೆ ಕಾರ್ಯ ನಡೆದಿದೆ. ಊರಿಂದ ಪೂರ್ವಕ್ಕೆ ಹರಿದಿರುವ ಚಿಕ್ಕದೇವರಾಜ ನಾಲೆಯ ಎಡದಂಡೆಯ ಮೇಲೆ ಗದ್ದೆ ಬಯಲಲ್ಲಿರುವ ಕಲ್ಲಿನಾಥ ಗುಡಿಯೂ ವಿಜಯನಗರ ಕಾಲದ್ದಾಗಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಬಳಸಿದ್ದ ಪ್ರಾಕಾರದ ಗೋಡೆಯು ನಾಶವಾಗಿದ್ದರೂ ಅದರ ದ್ವಾರಮಂಟಪವಿನ್ನೂ ಗುಡಿಯ ದಕ್ಷಿಣ ಭಾಗದಲ್ಲಿ ಉಳಿದಿದೆ. ಒಳಗೆ ಶಿವಲಿಂಗ ನಂದಿಗಳಿದ್ದು, ಗುಡಿಯ ಶಿಖರ ಹಾಳಾಗಿದ್ದು, ದೇವಾಲಯವು ನಿರಾಡಂಬರವಾಗಿದೆ.

**ಹಳೇಬೀಡು(೧೯೧೦):** ತಾಲೂಕು ಕೇಂದ್ರ ಪಾಂಡವಪುರದಿಂದ ೧೦ ಕಿ.ಮೀ. ಉತ್ತರಕ್ಕಿದ್ದು ಪ್ರಾಚೀನ ಶಾಸನಗಳಲ್ಲೂ ಹಳೇಬೀಡು ಎಂದೇ ಉಲ್ಲೇಖಿತಗೊಂಡಿದೆ. ಇಲ್ಲಿಂದ ಈವರೆಗೆ ಹೊಯ್ಸಳರ ಮೂರು ಹಾಗೂ ವಿಜಯನಗರದರಸರ ಎರಡು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ವೀರಬಲ್ಲಾಳನ ಕಾಲದ ಒಂದು ಶಾಸನ, ಬನದ ತೊಂಡನೂರ ಕಂಭೇಶ್ವರ ದೇವರಿಗೆ, ಮಠಕ್ಕೆ, ಪೂಜಾರಿ ಹಾಗೂ ಪರಿಚಾರಕರುಗಳಿಗೆಂದು ಕೆರಗೋಡು ನಾಡ ಮಲೆಯನಹಳ್ಳಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಇನ್ನೊಂದು ಶಾಸನ ಆ ದೇವರ ತಿಂಗಳ ಭಟ್ಟವೃತ್ತಿಯನ್ನು ಐವರು ಅರ್ಚಕರ ನಡುವೆ ಹಂಚಿದ್ದನ್ನು ತಿಳಿಸುತ್ತದೆ. ಅದೇ ಈಶ್ವರ ಗುಡಿಯ ಬಳಿಯಿರುವ ಕ್ರಿ.ಶ.೧೫೩೮ರ ಶಾಸನ, ೨೦೦ ವರ್ಷಗಳಿಂದ ಪೂಜೆ ಇಲ್ಲದೆ ಪಾಳು ಬಿದ್ದಿದ್ದ ಹಳೇಬೀಡಿನ ಈ ದೇವಾಲಯವನ್ನು ಮಂಜಯ್ಯಪ್ಪ ಹಾಗೂ ಇತರರು ಜೀರ್ಣೋದ್ಧಾರ ಮಾಡಿ, ದೇವತಾರ್ಚನೆಯನ್ನು ಪುನರಾರಂಭಿಸಿದ್ದನ್ನು ತಿಳಿಸುತ್ತದೆ. ಊರಾಚೆ ಇರುವ ಪಾಳು ಈಶ್ವರ ಗುಡಿಯೇ ಮೇಲಿನ ಶಾಸನೋಕ್ತ ಕಂಭೇಶ್ವರ ದೇವಾಲಯುವಾಗಿದೆ. ಪೂರ್ವಾಭಿಮುಖವಾಗಿರುವ ಇದಕ್ಕೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆದ ಮುಖಮಂಟಪಗಳಿದ್ದು, ಜೀರ್ಣಾವಸ್ಥೆಯಲ್ಲಿದೆ. ಮೂಲತಃ ಹೊಯ್ಸಳ ರಚನೆಯಾಗಿದ್ದು, ಕಾರಣಾಂತರಗಳಿಂದ ೨೦೦ ವರ್ಷ ಕಾಲ ಮೂಲೆಗುಂಪಾಗಿದ್ದ ಇದನ್ನು ಕ್ರಿ.ಶ.೧೫೩೮ರಲ್ಲಿ ಜೀರ್ಣೋದ್ಧಾರಗೊಳಿಸಿದ ಅಂಶವನ್ನು ಈಗಾಗಲೇ ಗಮನಿಸಲಾಗಿದೆ. ಗರ್ಭಗೃಹದಲ್ಲಿ ಶಿವಲಿಂಗ, ಅಂತರಾಳದಲ್ಲಿ ಗಣಪತಿ ಹಾಗೂ ನವರಂಗದಲ್ಲಿ ವಿನಾಯಕ, ಭೈರವ ಮುಂತಾದ ಶಿಲ್ಪಗಳಿದ್ದು, ಈ ಭೈರವನೇ ಮೇಲಿನ ಶಾಸನೋಕ್ತ ಭೈರವನಾಗಿದ್ದಾನೆ. ಊರಿನಲ್ಲಿ ಕರಿತಿಮ್ಮಪ್ಪ, ಹಿರಿಯಮ್ಮ, ಮಾರಮ್ಮ, ಪಟ್ಟಲದಮ್ಮ, ಮುಂತಾದ ದೇವಾಲಯಗಳಿದ್ದು, ಮಾರಮ್ಮನ ಗುಡಿಯ ಬಳಿ ವೀರಗಲ್ಲಿದೆ.

**ಹುಲಿಕೆರೆ(೨೯೧೫) :** ತಾಲೂಕು ಕೇಂದ್ರ ಮಂಡ್ಯದಿಂದ ೧೮ ಕಿ.ಮೀ.ವಾಯುವ್ಯಕ್ಕಿದ್ದು, ವಿಶ್ವೇಶ್ವರಯ್ಯ ನಾಲೆಯ ಸುರಂಗ ಕಾಲುವೆ (ಬುಗೆ) ಯಿಂದಾಗಿ ಪ್ರಸಿದ್ಧವಾಗಿದೆ. ಕಾವೇರಿಯ ಎಡದಂಡೆ ನಾಲೆ (ವಿಶ್ವೇಶ್ವರಯ್ಯ)ಯು, ಪಾಂಡವಪುರ ತಾಲೂಕಿನ ಕಾಳೇನಹಳ್ಳಿಗೆ ಒಂದು ಕಿ.ಮೀ.ಅಂತರದಲ್ಲಿ ಮೂರೂಮುಕ್ಕಾಲು ಮೀಟರ್ ಅಗಲದ ಹಾಗೂ ನಾಲ್ಕೂವರೆ ಮೀ. ಆಳದ ಸುರಂಗ ಕಾಲುವೆಯಲ್ಲಿ, ಸುಮಾರು ೨.೮ಕಿ.ಮೀ.ದೂರ ಸಾಗುತ್ತಿದ್ದು, ಹುಲಿಕೆರೆ ಗ್ರಾಮಕ್ಕೆ ಅರ್ಧ ಕಿ.ಮೀ. ಅಂತರದಲ್ಲಿ ಸುರಂಗ ಕಾಲುವೆ ಅಂತ್ಯಗೊಂಡು, ತೆರೆದ ಕಾಲುವೆಯಲ್ಲಿ ನಾಲೆಯ ನೀರು ಮುಂದೆ ಸಾಗುತ್ತದೆ. ಏಷ್ಯಾ ಖಂಡದಲ್ಲೇ ಪ್ರಪ್ರಥಮವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಇದನ್ನು ಮಿರ್ಜಾ ಇಸ್ಮಾಯಿಲರು ದೀವಾನರಾಗಿದ್ದಾಗ, ೧೯೨೮ರ ಜೂನ್‌ನಿಂದ ೧೯೩೧ರ ಅಕ್ಟೋಬರ್ ಅವಧಿಯಲ್ಲಿ ಪೂರ್ಣಗೊಳಿಸಲಾಯಿತು. ವಿಶ್ವೇಶ್ವರಯ್ಯ ನಾಲಾ ನೀರು ಈ ಸುರಂಗ ಕಾಲುವೆಯನ್ನು ಪ್ರವೇಶಿಸುವ ಹಾಗೂ ಸುರಂಗ ಕಾಲುವೆಯಿಂದ ನಿರ್ಗಮಿಸುವ ಸ್ಥಳಗಳಲ್ಲಿ ಸುಂದರವಾದ ಅಲಂಕಾರಿಕ ದ್ವಾರಗಳನ್ನು ರಚಿಸಲಾಗಿದ್ದು ಅಲ್ಲಿರುವ ಕಲ್ಬರಹದಿಂದ ಈ ಸುರಂಗ ಕಾಲುವೆಯು, ಮುಖ್ಯ ಇಂಜಿನಿಯರ್ ಆದ ಕೆ.ಆರ್.ಶೇಷಾಚಾರ್, ಸೂಪರಿಂಟೆಂಡಿಂಗ್ ಇಂಜಿನಿಯರಾದ ಎಸ್.ಶ್ರೀನಿವಾಸ ಅಯ್ಯಂಗಾರ್ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್‌ರಾದ ಬಿ.ಕೃಷ್ಣರಾವ್ ಅವರ ಮುಂದಾಳತ್ವದಲ್ಲಿ ಸುಮಾರು ರೂ.೫೮.೩೮

ಲಕ್ಷ ವೆಚ್ಚದಲ್ಲಿ ಪೂರ್ಣಗೊಂಡ ಅಂಶ ವೇದ್ಯವಾಗುತ್ತದೆ. ನಾಲಾ ನೀರು ಈ ಸುರಂಗ ಕಾಲುವೆಯನ್ನು ಕಾಳೇನಹಳ್ಳಿ ಬಳಿ ಪ್ರವೇಶಿಸುವುದಕ್ಕೆ ನಾಲ್ಕೈದು ಕಿ.ಮೀ. ಮೊದಲೇ ಕುರಿಹಟ್ಟಿ ಬಳಿ ಲೋಕಪಾವನಿ ನದಿಯನ್ನು ಮೇಲ್ಕಾಲುವೆ ಮೂಲಕ ದಾಟುತ್ತದೆ. ಸುರಂಗ ಕಾಲುವೆಯ ನೀರನ್ನು ಅಲ್ಲಲ್ಲಿ ಪಂಪ್ಸೆಟ್ಟು ಮೂಲಕ ಮೇಲಕ್ಕೆತ್ತಿ ಜಮೀನಿಗೆ ನೀರಾವರಿ ಸೌಕರ್ಯ ಕಲ್ಪಿಸಿರುವುದನ್ನು ಗಮನಿಸಬಹುದಾಗಿದ್ದು, ಹುಲಿಕೆರೆ ಟನಲ್ ಅಥವಾ ಬುಗೆ ಮಾನವನ ಕ್ರಿಯಾಶೀಲತೆಗೊಂದು ಉತ್ತಮ ನಿದರ್ಶನವಾಗಿದ್ದು ವಾರಾಂತ್ಯದ ವಿಹಾರಕ್ಕೆ ಯೋಗ್ಯಧಾಮವಾಗಿದ್ದು, ಪ್ರವಾಸೋದ್ಯಮದ ಅಭಿವೃದ್ಧಿಗೆ ಅವಕಾಶಗಳಿವೆ. ಸುರಂಗ ಕಾಲುವೆಯ ಮುಕ್ತಾಯ ಭಾಗಕ್ಕೆ ಸಮೀಪದಲ್ಲಿರುವ ಹುಲಿಕೆರೆ ಗ್ರಾಮದ ಹೆಬ್ಬಾಗಿಲ ಬಳಿ ನಂದಿ ಕಂಬವನ್ನೇ ದೇವರನ್ನಾಗಿ ಹೊಂದಿರುವ ಬಸವೇಶ್ವರ, ಸುಮಾರು ನಾಲ್ಕೂವರೆ ಅಡಿ ಎತ್ತರದ ಭೈರವ ಶಿಲ್ಪವಿರುವ ಭೈರವನ ಗುಡಿ, ಗಣೇಶ ಹಾಗೂ ಮಾರಮ್ಮನ ಗುಡಿಗಳಿದ್ದು ಬಳಿಯಲ್ಲೇ ಇರುವ ಎರಡು ನಾರಾಯಣ ಮುದ್ರೆ ಕಲ್ಲುಗಳಲ್ಲೊಂದರಲ್ಲಿ ಶಾಸನವಿದ್ದು ಪ್ರಕಟವಾಗಬೇಕಾಗಿದೆ. **ಕಾಳೇನಹಳ್ಳಿ (೧೦೧೬):** ಸುರಂಗ ಕಾಲುವೆಯ ಆರಂಭ ತಾಣದಿಂದ ಒಂದು ಕಿ.ಮೀ. ಅಂತರದಲ್ಲಿರುವ ಇದು ತಾಲೂಕು ಕೇಂದ್ರ ಪಾಂಡವಪುರದಿಂದ ೧೨ ಕಿ.ಮೀ. ದೂರದಲ್ಲಿದ್ದು ಊರ ಹೆಬ್ಬಾಗಿಲ ಬಳಿಯಿರುವ ಬಸವೇಶ್ವರ ಗುಡಿ ಜೀರ್ಣೋದ್ಧಾರಗೊಂಡಿದ್ದು ಬಳಿಯ ಮಾರಮ್ಮನ ಗುಡಿ ಬಯಲಲ್ಲಿ ವಿವಿಧ ಪ್ರಮಾಣದ ೨೦ಕ್ಕೂ ಹೆಚ್ಚು ವೀರಗಲ್ಲುಗಳಿವೆ.

**ಹೆಬ್ಬೆರಳು (ಹೆಬ್ಬಾಳು) (೧೩೧೨)** : ತಾಲೂಕು ಕೇಂದ್ರ ಮದ್ದೂರಿನಿಂದ ೨೬ ಕಿ.ಮೀ.ಉತ್ತರಕ್ಕಿದ್ದು, ಊರಾಚೆ ಅಂಕನಾಥಪುರದ ರಸ್ತೆಯಲ್ಲಿ ಲಿಂಗಯ್ಯನ ತೋಪಿನಲ್ಲಿರುವ ಸುಮಾರು ೧೨ನೆಯ ಶತಮಾನದ ವೀರಗಲ್ಲು ಶಾಸನ ವರದಿಯಾಗಿದೆ. ಅಲ್ಲೇ ಇರುವ ಸುಮಾರು ೧೨ನೆಯ ಶತಮಾನದ ಈಶ್ವರ ದೇವಾಲಯಕ್ಕೆ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿದ್ದು, ಹುತ್ತ, ಪೊದೆಗಳಿಂದಾವೃತ್ತವಾಗಿದೆ. ದೊಡ್ಡ ಅಂಕನಹಳ್ಳಿಯ ಮಾರ್ಗದಲ್ಲಿ ಕೆರೆ ಏರಿಯ ತಗ್ಗಲ್ಲಿರುವ ಸುಮಾರು ೧೩ನೆಯ ಶತಮಾನದ ಸೋಮೇಶ್ವರ (ಸಗ್ಗದ ಬಾಗಿಲು) ಗುಡಿಗೆ ಗರ್ಭಗೃಹ ಹಾಗೂ ಸಭಾಮಂಟಪಗಳಿದ್ದು, ಒಳಗೆ ಶಿವಲಿಂಗ –ನಂದಿಗಳಿವೆ. ಬ್ರಾಹ್ಮಣರ ಓಣಿಯಲ್ಲಿರುವ ತಿರುಮಲರಾಯನ ಗುಡಿಯಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಶ್ರೀನಿವಾಸಮೂರ್ತಿ ಇದೆ. ಹಿರಿಯಮ್ಮನ ಗುಡಿ ಬಳಿ ಒಂದು ಹಾಗೂ ಕೆರೆಯಂಗಳದಲ್ಲಿ ಎಂಟು ವೀರಗಲ್ಲುಗಳಿವೆ. **ನವಿಲೆ (೧೧೦೪)** : ಅನತಿ ದೂರದಲ್ಲಿರುವ ಇದು ಶಿಂಷಾ ಎಡದಂಡೆಯ ಮೇಲಿದ್ದು, ಶಿಂಷಾ ನದಿ ಇಲ್ಲಿ ಸ್ವಲ್ಪ ಪಶ್ಚಿಮಾಭಿಮುಖಿಯಾಗುವುದರಿಂದ ಪಶ್ಚಿಮವಾಹಿನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಊರಿಂದ ಅನತಿ ದೂರದ ಶಿಂಷಾ ತೀರದ ಗುಡ್ಡದ ಮೇಲಿರುವ ರಂಗನಾಥ (ಅಥವಾ ಹೊಳೆ ರಂಗನಾಥ)ನ ಗುಡಿಯು ೧೯೧೦ರಲ್ಲಿ ಜೀರ್ಣೋದ್ಧಾರಗೊಂಡಿದ್ದರೂ ಸುಮಾರು ೧೭ನೇ ಶತಮಾನದ ರಚನೆಯಾಗಿದ್ದು ಗರ್ಭಗೃಹದಲ್ಲಿ ಗರುಡಪೀಠದ ಮೇಲೆ ಸ್ಥಾನಕ ಭಂಗಿಯಲ್ಲಿರುವ ನಾರಾಯಣ ಶಿಲ್ಪವು ಐದು ಅಡಿ ಎತ್ತರವಿದ್ದು ಶಂಖ, ಚಕ್ರ, ವರದ ಹಾಗೂ ಕಟಿ ಹಸ್ತಧಾರಿಯಾಗಿದ್ದು, ಅದರ ಜಾತ್ರೆಯನ್ನು ನೆರೆಯ ಬಂಡಹಳ್ಳಿಯ ಮಾರಮ್ಮನ ಜಾತ್ರೆಯೊಂದಿಗೆ ಶಿವರಾತ್ರಿ–ಹೋಳಿ ಹುಣ್ಣಿಮೆ ಸಂದರ್ಭದಲ್ಲಿ ಆಚರಿಸಲಾಗುತ್ತದೆ. ಈ ಗುಡಿಗೆ ಮೈಸೂರು ಅರಸರು ೧೯೦೨ರಲ್ಲಿ ಇನಾಂ ನೀಡಿದ್ದರೆಂದು ತಿಳಿದುಬರುತ್ತದೆ. ಊರಲ್ಲಿರುವ ಮಾರಮ್ಮ, ಆಂಜನೇಯ, ಹೊಸ ರಂಗನಾಥ, (ಉತ್ಸವ ಮೂರ್ತಿ) ಗುಡಿಗಳನ್ನು ಇತ್ತೀಚೆಗೆ ನಿರ್ಮಿಸಲಾಗಿದ್ದು ಆಂಜನೇಯನ ಗುಡಿಯು ಲಾಳಾಕಾರದ ಜಗತಿಯನ್ನು ಹೊಂದಿದ್ದು, ಶಿಖರಗಳು ಆಕರ್ಷಕವಾಗಿವೆ. ಗುಡ್ಡಕ್ಕೆ ಹೋಗುವ ಹಾದಿಯಲ್ಲಿರುವ ಪಾಳುಮಂಟಪದ ಬಳಿ ಮೂರು ವೀರಗಲ್ಲುಗಳಿವೆ.

**ಹೇಮಗಿರಿ :** ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ಎಂಟು ಕಿ.ಮೀ.ಪೂರ್ವಕ್ಕಿರುವ ಇದು ಹೇಮಾವತಿಯಿಂದ ಸುತ್ತುವರಿದ ಗಿರಿಯಾಗಿರುವುದರಿಂದ ಹೇಮಗಿರಿ ಎಂದೇ ಚಿರಪರಿಚಿತವಾಗಿದೆ. ಇಲ್ಲಿಯ ಗುಡ್ಡದ ಮೇಲಿರುವ ವೆಂಕಟರಮಣ ಸ್ವಾಮಿ ಗುಡಿಯು ಆಧುನಿಕ ಕಾಲದಾಗಿದ್ದು, ವೈಕುಂಠವಾಸಿ ವಿಷ್ಣುವು ಬದಲಾವಣೆಗಾಗಿ ಇಲ್ಲಿಗೆ ಬಂದು ವಿಶ್ರಾಂತಿ ಪಡೆಯುತ್ತಿದ್ದ ಪುಣ್ಯಕ್ಷೇತ್ರ ಇದೆಂಬ ಐತಿಹ್ಯವಿದ್ದು, ಇಲ್ಲಿ ಪ್ರತೀ ವರ್ಷ ಜನವರಿ ತಿಂಗಳಲ್ಲಿ ನಡೆಯುವ ವೆಂಕಟರಮಣಸ್ವಾಮಿಯ ವಾರ್ಷಿಕ ರಥೋತ್ಸವ, ತೆಪ್ಪೋತ್ಸವಕ್ಕೆ ೧೫ ದಿನ ಮೊದಲಿನಿಂದಲೇ, ಸುಮಾರು ಒಂದು ಚದುರ ಮೈಲಿ ವಿಶಾಲವಾದ ಹೋರಿಮಾಳದಲ್ಲಿ ನಡೆಯುವ ದನಗಳ ಜಾತ್ರೆಗೆ ರಾಜ್ಯದ ಮೂಲೆಮೂಲೆಗಳಿಂದ ರೈತರು ಬಂದು ಸೇರುತ್ತಿದ್ದು, ಎಲ್ಲಾ ದೃಷ್ಟಿಯಿಂದಲೂ ಈ ಜಾತ್ರೆ ಜಿಲ್ಲೆಯ ವಿಶಿಷ್ಟ ಆಕರ್ಷಣೆಯಾಗಿದ್ದು, ಅದನ್ನು ನೋಡೇ ಆಸ್ವಾದಿಸಬೇಕು. ಹೇಮಾವತಿ ನದಿಗೆ ಇಲ್ಲಿ ೪೧೫ ಮೀ. ಉದ್ದದ ಅಣೆಕಟ್ಟನ್ನು ಕ್ರಿ.ಶ.೧೮೮೦ರಲ್ಲಿ ನಿರ್ಮಿಸಲಾಗಿದ್ದು, ಪ್ರೇಕ್ಷಣೀಯವಾಗಿದೆ. ಅಲ್ಲದೇ ಇಲ್ಲಿ ಸುಮಾರು ೩೧೦ ಎಕರೆಯಷ್ಟು ವಿಶಾಲವಾದ ದ್ವೀಪವನ್ನು (ಹೊಸಪಟ್ಟಣ) ಹೇಮಾವತಿಯು ಸೃಷ್ಟಿಸಿದ್ದು, ಅಲ್ಲಿ ಪ್ರಾಚೀನ ಕಾಲದ ಕೋಟೆಯ ಅವಶೇಷಗಳಿದ್ದು, ಮರಗಿಡಗಳಿಂದ ಆವೃತ್ತವಾಗಿರುವ ಈ ಕಾನನ ರಂಗನತಿಟ್ಟು, ಕೊಕ್ಕರೆ ಬೆಳ್ಳೂರುಗಳಿಗೆ ಸರಿಸಾಟಿಯಾದ ಪಕ್ಷಿಧಾಮವಾಗಿದ್ದು, ಅದನ್ನು ತಲುಪಲು ತೆಪ್ಪ-ದೋಣಿಗಳ ಮೂಲಕವೇ ಹೋಗಬೇಕು. ಜನಜಂಗುಳಿಯಿಂದ ದೂರವಿರುವ, ಪರಿಸರ ಮಾಲಿನ್ಯಕ್ಕೆ ಹೊರತಾಗಿರುವ ಇಲ್ಲಿಗೆ ಬಿಲ್ ಸ್ಪಾರ್ಕ್, ಲೈಟ್ ಫ್ಲೆಮಿಂಗ್, ಹೇಬಿಸ್. ಕ್ರಿಸ್ಟರ್, ಕಾಜಾಣ, ಬೆಳವ, ಬೆಳಕ್ಕಿ ಮುಂತಾದ ಪಕ್ಷಿಗಳು ಬಹು ದೂರದ ಸೈಬೀರಿಯಾ, ಬರ್ಮ, ಆಫ್ಘಾನಿಸ್ತಾನ, ಆಸ್ಟ್ರಿಯಾ, ಸಿಲೋನ್, ದೇಶಗಳಿಂದ ಹಾಗೂ ಉತ್ತರ ಭಾರತದ ಗುಜರಾತ್, ರಾಜಸ್ಥಾನಗಳಿಂದಲೂ ವಲಸೆ ಬರಬಹುದೆಂದು ಊಹಿಸಲಾಗಿದ್ದು, ವಿವಿಧ ಗಾತ್ರದ, ವಿವಿಧ ವರ್ಣದ ಈ ಪಕ್ಷಿಗಳು ಬಂದು ಹೋಗುವ ಈ ಪಕ್ಷಿಧಾಮವನ್ನು ಪರಿಸರ ನೈರ್ಮಲ್ಯ ಧಾಮವೆಂದು ಘೋಷಿಸಿ ಸಂರಕ್ಷಿಸಬೇಕಾಗಿದೆ. **ಕುಂದನಹಳ್ಳಿ (೩೦೭) :** ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ಏಳು ಕಿ.ಮೀ. ವಾಯವ್ಯಕ್ಕಿದ್ದು, ಹೊಯ್ಸಳರ ಕಾಲದ ಈಶ್ವರ ದೇವಾಲಯದಿಂದಾಗಿ ಉಲ್ಲೇಖಾರ್ಹವಾಗಿದೆ. ಊರಾಚೆ ಕೆರೆಯ ಬದಿಯಲ್ಲಿರುವ ಈ ಪಾಳು ಗುಡಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ನವರಂಗದ ಕಂಬಗಳು ನಿರಾಡಂಬರವಾಗಿದ್ದು, ಪ್ರವೇಶದ್ವಾರಕ್ಕೂ ದ್ವಾರಪಾಲಕರಿದ್ದಾರೆ. ಗುಡಿಯ ಹೊರಗೆ ಇರುವ ಶಾಸನ, ಶಿಲ್ಪ, ಗಾಣದ ಕಲ್ಲುಗಳ ಸುತ್ತ ಮುಳ್ಳುಪೊದೆ ಬೆಳೆದು ಶಿಥಿಲಾವಸ್ಥೆಯಲ್ಲಿದ್ದು, ಸಂರಕ್ಷಣೆ ಆಗಬೇಕಾಗಿದೆ. **ಮಾಕವಳ್ಳಿ (೧,೨೧೬) :** ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೫ ಕಿ.ಮೀ. ವಾಯವ್ಯಕ್ಕಿದ್ದು, ಇಲ್ಲಿರುವ ಹೊಯ್ಸಳರ ಕಾಲದ ಈಶ್ವರ ದೇವಾಲಯದ ಮುಂದೆ ನಿಂತಿರುವ ನಾಲ್ಕು ವೀರಗಲ್ಲುಗಳಲ್ಲಿ ಒಂದರ ಮೇಲಿರುವ ಅಪ್ರಕಟಿತ ಶಾಸನ, ಯುದ್ಧದಲ್ಲಿ ಮಡಿದ ಯೋಧನದಾಗಿದೆ. ಇಲ್ಲಿರುವ ವೀರಗಲ್ಲುಗಳಲ್ಲಿ ಎರಡು ಹಂದಿಬೇಟೆಯ ವೀರಗಲ್ಲುಗಳಾಗಿದ್ದು, ಅವುಗಳಲ್ಲೊಂದು ವೀರ ಹಂದಿಯೊಂದಿಗೆ ಹೋರಾಡುತ್ತಿದ್ದು, ಹಂದಿಯ ದುಬ್ಬದ ಮೇಲೆ ಕುಳಿತು ಧಾಳಿ ನಡೆಸಿರುವ ಬೇಟೆ ನಾಯಿಯ ಅಪರೂಪದ ದೃಶ್ಯವಿದೆ. **ಹಿರಿಕಳಲೆ (೨೧೬೪):** ಕೃಷ್ಣರಾಜಪೇಯಿಂದ ಎಂಟು ಕಿ.ಮೀ. ವಾಯುವ್ಯಕ್ಕೆ ಎಂಟು ಕಿ.ಮೀ. ದೂರದಲ್ಲಿದ್ದು, ಪ್ರಾಚೀನ ಶಾಸನಗಳಲ್ಲಿ 'ಪಿರಿಯಕಳಲೆ' (ಹಿರಿಕಳಲೆ ಕ್ರಿ.ಶ.೧೧೧೩) ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಕಬ್ಬಾಹು-೧೦೦೦ ನಾಡಿಗೆ ಸೇರಿದ ಕಿಕ್ಕೇರಿ-೭೦ರಲ್ಲಿ ಅಂತರ್ಗತವಾಗಿತ್ತು. ಇಲ್ಲಿಂದ ಈವರೆಗೆ ವರದಿಯಾಗಿರುವ ನಾಲ್ಕು ಶಾಸನಗಳನ್ನು ಅರ್ಕೇಶ್ವರ ಗುಡಿ (ಬಸವನ ಗುಡಿ) ಬಳಿಯಿರುವ ಒಂದೇ ಕಲ್ಲಿನ ನಾಲ್ಕು ಮುಖಗಳ ಮೇಲೆ ಕೆತ್ತಲಾಗಿದ್ದು, ಎಲ್ಲವೂ ಪಿರಿಯ ಕಳಿಲೆಯ ಸ್ವಯಂಭೂ ಅಂಕಕಾರದೇವರಿಗೆ ಬಿಟ್ಟ ದತ್ತಿ ಶಾಸನಗಳಾಗಿವೆ. ಊರಾಚೆ, ಚಿಕ್ಕಳಲೆ-ಹಿರಿಕಳಲೆ ಗ್ರಾಮಗಳ ಗಡಿಯಂಚಲ್ಲಿರುವ ಅರ್ಕೇಶ್ವರ (ಬಸವ) ದೇವಾಲಯವೇ ಮೇಲಿನ ಶಾಸನೋಕ್ತ ಸ್ವಯಂಭೂ ಅಂಕಕಾರ ದೇವಾಲಯವಾಗಿದ್ದು, ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಉಳಿದಿದೆ.

ಮೂಲತ: ಗರ್ಭಗೃಹ, ಅಂತರಾಳ, ನವರಂಗಗಳನ್ನು ಹೊಂದಿದ್ದ ಇದು ಜೀರ್ಣೋದ್ಧಾರದ ನಂತರ ವಿಶಾಲವಾದ ಮೊಗಸಾಲೆ, ಪೌಳಿಗೋಡೆ ಹಾಗೂ ಮಂಟಪಗಳ ಸೇರ್ಪಡೆಯೊಂದಿಗೆ ವಿಸ್ತಾರಗೊಂಡಿದೆ. ಗರ್ಭಗೃಹದಲ್ಲಿ ಸ್ವಯಂಭೂಲಿಂಗ, ಅಂತರಾಳದಲ್ಲಿ ಶಿವಲಿಂಗ, ನಂದಿ, ಗಣಪತಿ, ಸೂರ್ಯ ಮತ್ತು ನವರಂಗದಲ್ಲಿ ಭೈರವ, ವೀರಭದ್ರ ಶಿಲ್ಪಗಳಿದ್ದು, ನವರಂಗದ ಕಂಬಗಳು ಹೊಯ್ಸಳ ಶೈಲಿಯಲ್ಲಿವೆ. ಗರ್ಭಗೃಹಕ್ಕೆ ಗಾರೆ ಶಿಲ್ಪಗಳಿಂದ ಕೂಡಿದ ಶಿಖರವಿದೆ. ಗುಡಿಯ ಮುಂದಿರುವ ಶಾಸನದ (ಕ್ರಿ.ಶ.೧೧೧೩) ಶಿಲ್ಪವು ಪೂರ್ಣಕುಂಬವನ್ನು ಹೊಂದಿದೆ. ದೇವಾಲಯದ ಎದುರಿಗೆ ನಂದಿಕಂಬವಿದ್ದು, ಎಡಕ್ಕೆ ಸಣ್ಣ ಕೊಳವಿದೆ. ಬುದ್ಧ ಪೂರ್ಣಿಮೆಯ ಮಾರನೆಯ ದಿನ ನಡೆಯುವ ವಾರ್ಷಿಕ ಜಾತ್ರೆಗೆ ನೆರೆಯ ಚಿಕ್ಕಳಲೆಯಿಂದ ಬಸವಣ್ಣನ ಉತ್ಸವ ಮೂರ್ತಿಯನ್ನು ಹೊರಡಿಸಿಕೊಂಡು ಬರಲಾಗುತ್ತದೆ. ಊರ ಹೆಬ್ಬಾಗಿಲ ಬಳಿ ತಲಾ ಎರಡೆರಡು ವೀರಗಲ್ಲು, ಮಾಸ್ತಿಕಲ್ಲು ಹಾಗೂ ವಾಮನಮುದ್ರೆ ಕಲ್ಲುಗಳಿದ್ದು, ಉಳಿದಂತೆ ಊರಿನಲ್ಲಿ ಗ್ರಾಮದೇವತೆ, ಬೀರದೇವರು ಮತ್ತು ಕೆರೆಕೋಡಿಯಮ್ಮನ ದೇವಸ್ಥಾನಗಳಿವೆ.

**ಹೊನ್ನೇನಹಳ್ಳಿ (೩೬೫)** : ತಾಲೂಕು ಕೇಂದ್ರ ನಾಗಮಂಗಲದಿಂದ ೩೦ ಕಿ.ಮೀ. ವಾಯುವ್ಯಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ ಹೊನ್ನಯ್ಯನಹಳ್ಳಿ ಎಂದೇ ಉಲ್ಲೇಖಿತಗೊಂಡಿದ್ದು, ಕ್ರಿ.ಶ.೧೫೪೫ರ ತಾಮ್ರ ಶಾಸನದಿಂದ ಇದು ಅಗ್ರಹಾರವಾಗಿ ಮಾರ್ಪಟ್ಟು, ವೆಂಕಟಾದ್ರಿ ಸಮುದ್ರ ಎಂಬ ಅಭಿದಾನವನ್ನೂ ಧರಿಸಿದ್ದ ಅಂಶ ಗೊತ್ತಾಗುತ್ತದೆ. ಊರ ಪ್ರವೇಶದಲ್ಲಿ ಪೂರ್ವಾಭಿಮುಖವಾಗಿರುವ ಈಶ್ವರ ದೇವಾಲಯವು ಹೊಯ್ಸಳ ಶೈಲಿಯಲ್ಲಿರುವ ಸುಮಾರು ಹನ್ನೆರಡನೇ ಶತಮಾನದ ರಚನೆಯಾಗಿದ್ದು, ಎತ್ತರದ ದಿಬ್ಬದಲ್ಲಿರುವ ಈ ಗುಡಿಗೆ ಗರ್ಭಗೃಹ, ಅಂತರಾಳ ಹಾಗೂ ದಕ್ಷಿಣಕ್ಕೆ ಪಾರ್ಶ್ವದ್ವಾರವುಳ್ಳ ನವರಂಗವಿದೆ. ಗರ್ಭಗೃಹದಲ್ಲಿ ಶಿವಲಿಂಗ ಮತ್ತು ಅದರ ಛತ್ತಲ್ಲಿ ಕಮಲವಿದ್ದು, ಪಂಚಶಿಖರವುಳ್ಳ ಪಂಚಶಾಖಾಲಂಕೃತ ಬಾಗಿಲವಾಡವನ್ನು ಹೊಂದಿದೆ. ಅಂತರಾಳದ ಛತ್ತಲ್ಲೂ ಕಮಲಾಲಂಕಾರವಿದ್ದು, ನವರಂಗದ ಚರಕಿಕಂಬಗಳು ಆಕರ್ಷಕವಾಗಿದ್ದು, ನಡುವಣ ಛತ್ತನ್ನು ಇಳಿಬಿದ್ದ ಕಮಲದ ಮೊಗ್ಗಿನಿಂದ ಅಲಂಕರಿಸಲಾಗಿದೆ. ಅಲ್ಲೇ ವಿನಾಯಕ, ಮಹಿಷಮರ್ಧಿನಿ, ಷಣ್ಮುಖ, ಕೇಶವ, ಭೈರವ, ನಾಗರಾಜ ಹಾಗೂ ಸಪ್ತಮಾತೃಕಾ ಶಿಲ್ಪಗಳಿದ್ದು, ನವರಂಗದ ಪೂರ್ವಭಿತ್ತಿಯಲ್ಲಿ ಜಾಲಂಧ್ರವಿದೆ. ಗರ್ಭಗೃಹದ ಮೇಲೆ ನವೀನ ಶಿಖರವಿದ್ದು, ಜೀರ್ಣೋದ್ಧಾರದಿಂದಾಗಿ ಹೊರಗಿನಿಂದ ನೋಡಿದವರಿಗೆ ಅದು ಹೊಯ್ಸಳರ ಕಾಲದ್ದೆಂದೇ ಅನ್ನಿಸುವುದಿಲ್ಲ. ಊರೊಳಗೆ ಇರುವ ಗೋಪಾಲಕೃಷ್ಣ ಗುಡಿಯು ಗರ್ಭಗೃಹ, ಅಂತರಾಳ, ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ಸ್ಥಾನಕ ಭಂಗಿಯಲ್ಲಿರುವ ಗೋಪಾಲಕೃಷ್ಣನ ಶಿಲ್ಪದ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆ ಇದ್ದು, ಸನ್ನಿಧಿಯಲ್ಲಿ ರುಕ್ಮಿಣಿ-ಸತ್ಯಭಾಮೆಯರ ಶಿಲ್ಪಗಳಿವೆ. ಬಾಗಿಲವಾಡದ ಮೇಲೆ ತ್ರಿಶಾಖಾಲಂಕಾರವಿದ್ದು, ಇಕ್ಕೆಲದಲ್ಲಿ ದ್ವಾರಪಾಲಕರಿದ್ದಾರೆ. ಅಂತರಾಳದ ಬಾಗಿಲವಾಡಕ್ಕೆ ಮೇಲೆ ಸಪ್ತಶಿಖರಾಲಂಕಾರವಿದ್ದು, ಬುಡದಲ್ಲಿ ಜಾಲಂಧ್ರ ಹಾಗೂ ಜಯ-ವಿಜಯರಿದ್ದಾರೆ. ನವರಂಗದಲ್ಲಿ ಗಣಪತಿಯ ಶಿಲ್ಪವಿದ್ದು, ಗುಡಿಗೆ ನವೀನ ಶಿಖರವಿದೆ. ಸುಮಾರು ೧೪ನೆಯ ಶತಮಾನದ ರಚನೆಯಾಗಿರುವ ಈ ಗುಡಿಯ ಸಂರಕ್ಷಣೆ ಆಗಬೇಕಾಗಿದೆ. ಉಳಿದಂತೆ ಊರಿನಲ್ಲಿ ಆಂಜನೇಯ, ಕೆಂಪಮ್ಮ, ಹುಸಲಮ್ಮ, ಮಾರಮ್ಮ, ಮುಂತಾದ ಗುಡಿಗಳಿದ್ದು, ಚೈತ್ರ ಶುದ್ಧ ಸಪ್ತಮಿಯಂದು ಹುಸಲಮ್ಮನ ಜಾತ್ರೆಯಾಗುತ್ತದೆ.

**ಹೊಸಕೋಟೆ (೧೦೭೧):** ತಾಲೂಕು ಕೇಂದ್ರ ಪಾಂಡವಪುರದಿಂದ ೧೨ ಕಿ.ಮೀ. ಉತ್ತರಕ್ಕಿದ್ದು, ಪ್ರಾಚೀನ ಶಾಸನಗಳಲ್ಲಿ 'ಯಾದವಪುರ' ಎಂದೇ ಉಲ್ಲೇಖಿತಗೊಂಡಿರುವ ಇದಕ್ಕೆ ಕನ್ನಪಳ್ಳಿ ಎಂಬ ಹೆಸರಿದುದ್ದಕ್ಕೆ ಹೊಯ್ಸಳ ಶಾಸನಗಳಲ್ಲಿ ಸುಳಿವಿದೆ. ಈ ಊರಿನಿಂದ ಈವರೆಗೆ ತಮಿಳಿನ ಮೂರು, ಸಂಸ್ಕೃತ ಹಾಗೂ ಕನ್ನಡದ ಒಂದೊಂದು ಶಾಸನಗಳು ವರದಿಯಾಗಿವೆ. ಈ ಶಾಸನಗಳಿಂದ ನಿಕ್ಕೇಶ್ವರ ಗುಡಿಯ ಉಂಬಳಿಯನ್ನು ಅದರ ಸ್ಥಾನಿಕರು ಒಂದಲ್ಲಾ ಮೂರು ಬಾರಿ ಮಾರಲು ಮುಂದಾದದ್ದು, ಮಿಗಿಲಾಗಿ ಅದನ್ನು ತಲಕಾಡಿನ ನಿಸ್ಕಾಮೀಶ್ವರದ ಸ್ಥಾನಪತಿಗಳ ಮಕ್ಕಳು

ಖರೀದಿಸಿದ ವಿಷಯ ಗೊತ್ತಾಗುವುದರ ಜೊತೆಗೆ, ಆ ದಿನಗಳಲ್ಲಿ ಈ ಊರಿನ ಅರ್ಚಕರು ತಲಕಾಡಿನ ಅರ್ಚಕರೊಂದಿಗೆ ಹೊಂದಿದ್ದ ಸಂಬಂಧದ ಸುಳಿವೂ ಲಭಿಸುತ್ತದೆ. ಊರಾಚೆ ಇರುವ ನಿಷ್ಕಾಮೇಶ್ವರ (ಶಾಸನೋಕ್ತ ನಿಕ್ಕೇಶ್ವರ) ಗುಡಿಯ ಉಲ್ಲೇಖ ಕ್ರಿ.ಶ.೧೨೭೩ರ ಶಾಸನದಲ್ಲಿದೆ. ಮೂರನೆಯ ನರಸಿಂಹನ ಕಾಲದಲ್ಲಿ ಹೊನ್ನೆಮಡುವಿನ ಪಾಳೇಗಾರನಾದ ಭುಜಂಗರಾಯನು ಇದನ್ನು ನಿರ್ಮಿಸಿದನೆಂಬ ಅಭಿಪ್ರಾಯವಿದೆಯಾದರೂ, ಇದು ದಂಡನಾಯಕ ನಿಕ್ಕೇಶ್ವರನ ಹೆಸರಲ್ಲಿ ನಿರ್ಮಾಣಗೊಂಡಿರುವಂತೆ ತೋರುತ್ತದೆ. ಪೂರ್ವಾಭಿಮುಖವಾಗಿರುವ ಇದಕ್ಕೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಅಷ್ಟಕೋನಾಕಾರದ ತೆರೆದ ಮಂಟಪಗಳಿದ್ದು, ಎದುರಲ್ಲಿ ಪುಷ್ಕರಣಿ ಇದೆ. ಗುಡಿಯೊಳಗೆ ಶಿವಲಿಂಗ, ನಂದಿ, ನವರಂಗದಲ್ಲಿ ಸಪ್ತಮಾತೃಕಾ ಶಿಲ್ಪಗಳಿದ್ದು, ಮೇಲಿನ ಛತ್ತಲ್ಲಿ ಕಮಲಾಲಂಕಾರವಿದೆ.

ಗರ್ಭಗೃಹಕ್ಕಿದ್ದ ಇಟ್ಟಿಗೆ-ಗಾರೆ ಶಿಖರವನ್ನು ಜೀರ್ಣೋದ್ಧಾರ ಸಂದರ್ಭದಲ್ಲಿ ತೆಗೆದು ನವೀನ ಶಿಖರವನ್ನು ಒದಗಿಸಲಾಗಿದೆ. ದೇವಕೋಷ್ಠಗಳನ್ನುಳ್ಳ ಗರ್ಭಗೃಹ ಹಾಗೂ ನವರಂಗಗಳ ಭಿತ್ತಿಯು ಅಲಂಕಾರಿಕ ಅರೆಗಂಬಗಳನ್ನು ಹೊಂದಿದ್ದು, ದೇವಾಲಯದ ಉತ್ತರ, ಪಶ್ಚಿಮ ಹಾಗೂ ದಕ್ಷಿಣ ಭಿತ್ತಿಯ ಮೇಲೆ ಶಾಸನಗಳಿವೆ. ಪೂರ್ಣ ಶಿಥಿಲಾವಸ್ಥೆಯಲ್ಲಿದ್ದ ಈ ಗುಡಿಯ ಸಂರಕ್ಷಣಾ ಕಾರ್ಯವನ್ನು ರಾಜ್ಯ ಸರ್ಕಾರ, ಜಿಲ್ಲಾ ಆಡಳಿತ ಹಾಗೂ ಸ್ಥಳೀಕರ ಸಹಕಾರದೊಂದಿಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಸಮಿತಿಯು ವೈಜ್ಞಾನಿಕವಾಗಿ ನಿರ್ವಹಿಸಿದೆ. ಅನತಿ ದೂರದಲ್ಲಿರುವ ಪಾಳು ಗುಡಿಯಲ್ಲಿ ಭೈರವನ ಶಿಲ್ಪವಿದೆ. ಉಳಿದಂತೆ ಊರಿನಲ್ಲಿ ಆಂಜನೇಯ, ಹಿರಿಯಮ್ಮ, ಮಾಯಮ್ಮ, ಮಂಚಮ್ಮ, ಪಟ್ಟಲದಮ್ಮ, ಮುಂತಾದ ನವೀನ ಗುಡಿಗಳಿದ್ದು, ನಾಲ್ಕಾರು ವೀರಗಲ್ಲು-ಮಾಸ್ತಿಕಲ್ಲುಗಳೂ ಇವೆ.

**ಹೊಸಬೂದನೂರು** : ತಾಲೂಕು ಕೇಂದ್ರ ಮಂಡ್ಯದಿಂದ ಐದು ಕಿ.ಮೀ. ಅಂತರದಲ್ಲಿರುವ ಇಲ್ಲಿಂದ ವರದಿಯಾಗಿರುವ ಮೂರು ಶಾಸನಗಳಲ್ಲಿ, ಅನಂತಪದ್ಮನಾಭ (ಕೇಶವ) ಗುಡಿಯ ನವರಂಗದಲ್ಲಿರುವ ಹೊಯ್ಸಳ ಮುಮ್ಮಡಿ ನರಸಿಂಹನ ಕ್ರಿ.ಶ.೧೨೭೬ರ ಶಾಸನವು, ಉದ್ಭವ ಸರ್ವಜ್ಞ ಪದ್ಮನಾಭಪುರವಾದ ಬೂದನೂರಿನ ಮಹಾಜನಗಳಿಗೆ ಯಾದವನಾರಾಯಣಪುರವಾದ ಗುತ್ತಲಿನ ಕೇಶವ ದೇವರ ಸ್ಥಾನಿಕ ಪುರುಷೋತ್ತಮದೇವ ಹಾಗೂ ನಂಬಿಪಿಳ್ಳೆಯರು ಸಂಯುಕ್ತವಾಗಿ ಗುತ್ತಲಿನ ಮರ-ಕಾಡುಗಳುಳ್ಳ ಪ್ರದೇಶವನ್ನು ದತ್ತಿ ನೀಡಿ, ಕೇಶವದೇವರ ಅಮೃತಪಡಿಗೆಂದು ಪ್ರತ್ಯೇಕವಾಗಿ ದಾನ ಬಿಟ್ಟ ಅಂಶವನ್ನೂ ತಿಳಿಸುತ್ತದೆ. ಶಾಸನದ ಕೊನೆಯಲ್ಲಿ ಸರ್ವಜ್ಞ ವೀರನರಸಿಂಹಪುರ (ಅರಕೆರೆ), ಬಲ್ಲಾಳ ಚತುರ್ವೇದಿ ನರಸಿಂಹಪುರ (ಮದ್ದೂರು), ಅನಾದಿ ಅಗ್ರಹಾರ ಹಿರಿಯ ಅರಸನಕೆರೆ, ಅಗ್ರಹಾರ ಮಂಡೆಯ ಹಾಗೂ ಅಗ್ರಹಾರ ಮಲ್ಲಿಕಾರ್ಜುನಪುರ (ಗುತ್ತಲು)ಗಳ ಮಹಾಜನರನ್ನು ಸಾಕ್ಷಿಯಾಗಿ ದಾಖಲಿಸಲಾಗಿದೆ.

ಇಲ್ಲಿಯ ಅನಂತಪದ್ಮನಾಭ (ಶಾಸನೋಕ್ತ ಕೇಶವ) ದೇವಾಲಯವು, ಸುಮಾರು ಮೂರು ಅಡಿ ಎತ್ತರದ ಜಗತಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಶಿಥಿಲಾವಸ್ಥೆಯಲ್ಲಿದ್ದ ಈ ದೇವಾಲಯವನ್ನು ರಾಜ್ಯ ಪುರಾತತ್ವ ಇಲಾಖೆಯು ಸುಮಾರು ೧೪ ಲಕ್ಷ ರೂ. ವೆಚ್ಚದಲ್ಲಿ ದುರಸ್ತಿ ಮಾಡಿ ಸಂರಕ್ಷಿತ ಸ್ಮಾರಕವೆಂದು ಘೋಷಿಸಿದೆ. ಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ಸ್ಥಾನಕ ಭಂಗಿಯಲ್ಲಿರುವ ಕೇಶವನ ಆಳೆತ್ತರದ ಶಿಲ್ಪದ ನಾಲ್ಕು ಕೈಗಳಲ್ಲಿ ಚಕ್ರ, ಅಷ್ಟಬಂಧ, ಗದೆ ಹಾಗೂ ಶಂಖಗಳಿವೆ. ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದ್ದು, ಎಡಬಲದಲ್ಲಿ ಶ್ರೀದೇವಿ-ಭೂದೇವಿಯರಿದ್ದಾರೆ. ನವರಂಗದ ಎರಡು ಕಿರು ದೇವಕೊಷ್ಠಗಳಲ್ಲಿ ಇತ್ತೀಚಿನ ಗಣಪತಿ ಹಾಗೂ ಲಕ್ಷ್ಮಿ ಶಿಲ್ಪಗಳಿವೆ. ನವರಂಗದ ನಡುವಣ ಕಂಬ ಚರಕಿಯಂತ್ರ ನಿರ್ಮಿತವಾಗಿದ್ದು, ಛಾವಣಿಯನ್ನು ಕಮಲಗಳಿಂದ ಅಲಂಕರಿಸಲಾಗಿದೆ. ಮುಂದಿರುವ ಮುಖಮಂಟಪಕ್ಕೆ ಕಕ್ಷಾಸನವಿದೆ.

ಗರ್ಭಗುಡಿ, ಅಂತರಾಳ ಹಾಗೂ ನವರಂಗಗಳ ಬಾಗಿಲವಾಡಗಳು ಪಂಚ ಹಾಗೂ ಸಪ್ತಶಾಖಾಲಂಕಾರಗಳಿಂದ ಕೂಡಿದ್ದು, ಆಕರ್ಷಕವಾಗಿವೆ. ಆರು ಪಟ್ಟಿಕೆಯ ಅಧಿಷ್ಠಾನದ ಮೇಲೆ ನಿಂತಿರುವ ಎರಡು ಹಂತದ ಭಿತ್ತಿಯು ನಿರಾಡಂಬರವಾಗಿದ್ದು, ಅಲಂಕಾರಿಕ ಸ್ತಂಭ, ದ್ವಾರಗೋಪುರ, ಸ್ತಂಭಗೋಪುರಗಳಿಂದ ಅಲಂಕೃತಗೊಂಡಿದ್ದು, ಮೇಲೆ ಸುಂದರ ದ್ರಾವಿಡ ಶಿಖರ ಹಾಗೂ ಮುಂಚಾಚಿದ ಶುಕನಾಸಿಗಳಿದ್ದು, ಈ ದೇವರ ಜಾತ್ರೆಯು ಅನಂತ ಚತುರ್ದಶಿಯಂದು ನಡೆಯುತ್ತದೆ. ಈ ದೇವಾಲಯವು ರಾಜ್ಯ ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲ್ಪಡುತ್ತಿದೆ.

ಕಾಶಿವಿಶ್ವನಾಥಗುಡಿಯು ಇಲ್ಲಿಯ ಇನ್ನೊಂದು ಹೊಯ್ಸಳ ದೇವಾಲಯವಾಗಿದ್ದು, ಅನಂತಪದ್ಮನಾಭ ಗುಡಿಯ ವಿನ್ಯಾಸವನ್ನೇ ಹೊಂದಿದೆ. ಈ ದೇವಾಲಯದ ನವರಂಗದಲ್ಲಿ ಎರಡಕ್ಕೆ ಬದಲು ನಾಲ್ಕು ದೇವಕೋಷ್ಠಗಳಿದ್ದು, ನಡುವಣ ಛತ್ತು ವೈವಿಧ್ಯಮಯ ಕೆತ್ತನೆಯಿಂದಾಗಿ ಆಕರ್ಷಕವಾಗಿದೆ. ದೇವಾಲಯದ ಮುಖಮಂಟಪ ಹಾಗೂ ಗರ್ಭಗೃಹದ ಎಡಭಾಗಗಳು ಶಿಥಿಲಗೊಂಡಿದ್ದು, ಗಿಡಗಂಟಿಗಳಿಂದ ಮುಚ್ಚಿಹೋಗಿದ್ದು, ಸಂರಕ್ಷಣೆಯಾಗಬೇಕಿದೆ. ದೇವಾಲಯದ ಬಲಕ್ಕಾದಂತೆ ಇರುವ ಮಂಟಪವೂ ದುಸ್ಥಿತಿಯಲ್ಲಿದೆ. ಈ ದೇವಾಲಯದಲ್ಲಿದ್ದ ಶಿವಲಿಂಗ, ನಂದಿ, ಸಪ್ತಮಾತೃಕಾ, ಗಣಪತಿ ಹಾಗೂ ಷಣ್ಮುಖ ಶಿಲ್ಪಗಳನ್ನು ಗುಡಿಯ ಮುಂದೆ ನೂತನವಾಗಿ ನಿರ್ಮಿಸಿರುವ ಈಶ್ವರ ಗುಡಿಯಲ್ಲಿಡಲಾಗಿದ್ದು, ಪೂಜಿಸಲ್ಪಡುತ್ತಿವೆ. ಹನುಮಂತನ ಗುಡಿ ಬಳಿಯ ವೃಂದಾವನ ಕಟ್ಟೆಯ ಮೇಲೆ ಸುಮಾರು ೧೪ನೆಯ ಶತಮಾನಕ್ಕೆ ಸೇರಿದ ಮೂರು ವೀರಗಲ್ಲುಗಳಿದ್ದು, ರಾವಳೇಶ್ವರ ಶಿಲ್ಪವೂ ಇದೆ. ಉಳಿದಂತೆ ಇಲ್ಲಿ ಸಿದ್ಧಪ್ಪಾಜಿ, ಬೀರಪ್ಪ, ಮುತ್ತಪ್ಪ, ಮಾರಮ್ಮ, ಚಿಕ್ಕಮ್ಮ, ಲಕ್ಷ್ಮಿ, ಮುಂತಾದ ಗುಡಿಗಳಿವೆ.

**ಹೊಸಹೊಳಲು (೭೨೪):** ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ಮೂರು ಕಿ.ಮೀ. ನೈರುತ್ಯಕ್ಕಿದ್ದು, ಹೊಯ್ಸಳರ ಕಾಲದ ನಯನಮನೋಹರ ದೇವಾಲಯದಿಂದಾಗಿ ಪ್ರಸಿದ್ಧವಾಗಿದ್ದು ನೇಕಾರಿಕೆಗೂ ಹೆಸರಾಗಿದೆ. ಊರ ಹೆಸರಿಗೆ ಸಂಬಂಧಿಸಿದಂತೆ ನರಸನಾಯಕನೆಂಬ ಪಾಳೇಗಾರನು ಹೊಸಪಟ್ಟಣ (ಹೊಸಹೊಳಲು)ನಲ್ಲಿ ಆಂಜನೇಯ ಗುಡಿ ನಿರ್ಮಿಸಿ, ಗರುಡಗಂಬದ ಪ್ರತಿಷ್ಠಾಪನೆಗಾಗಿ ಅಗೆದಾಗ ಹೊಳಪಿನ ಹರಳುಗಳು ಸಿಕ್ಕಿದ್ದರಿಂದ ಊರಿಗೆ 'ಹೊಸಹರುಳು' ಎಂಬ ಹೆಸರು ಬಂದು ಮುಂದೆ ಅದು ಜನರ ಬಾಯಲ್ಲಿ ಹೊಸಹೊಳಲು ಆಯಿತೆಂದು ಹೇಳುವ ಜನಪದ ನಂಬಿಕೆಯೊಂದು ಈ ಭಾಗದಲ್ಲಿ ರೂಢಿಯಲ್ಲಿದೆ. ಆದರೆ ಕ್ರಿ.ಶ.೧೧೬೦ರ ಶಾಸನದಲ್ಲೇ 'ಅನಾದಿ ಅಗ್ರಹಾರ ರಾಯಪುರ'ವಾದ ಹೊಸಹೊಳಲಿನ ಉಲ್ಲೇಖ ಬರುವುದರಿಂದ ಈ ನಿಷ್ಪತ್ತಿಯನ್ನು ಕೈಬಿಡಬೇಕಾಗುತ್ತದೆ. ಇಲ್ಲಿಂದ ವರದಿಯಾಗಿರುವ ಎಂಟು ಶಿಲಾಶಾಸನಗಳಲ್ಲಿ, ಹೊಯ್ಸಳ ವಿಷ್ಣುವರ್ಧನನ ಕಾಲದ ಜೈನ ಶಾಸನವು ಎರಡು ಕಿ.ಮೀ. ಅಂತರದಲ್ಲಿರುವ ಕತ್ತರಘಟ್ಟದ್ದಾಗಿದೆ. ಪಟ್ಟಣಸ್ವಾಮಿ, ಪೊಯ್ಸಳಸೆಟ್ಟಿ ಎಂದು ಬಿರುದಾಂಕಿತನಾದ ನೊಣಂಬಿಸೆಟ್ಟಿಯ ಮಡದಿ ದೇಮಾಂಬಿಕೆ ಸೆಟ್ಟಿತಿಯು ಕತ್ತರಿಘಟ್ಟದಲ್ಲಿ ತ್ರಿಕೂಟ ಜಿನಾಲಯವನ್ನು ಕ್ರಿ.ಶ.೧೧೧೮ರಲ್ಲಿ ನಿರ್ಮಿಸಿ ಗುರು ಶುಭಚಂದ್ರ ಸಿದ್ಧಾಂತ ದೇವರಿಗೆ ಅರ್ಪಿಸಿ, ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಆದರೆ ಇಂದು ಅಲ್ಲಿ(ಕತ್ತರಿಗಟ್ಟ) ಏನೂ ಉಳಿದಿರದೆ. ಹೊಸಹೊಳಲಿನಲ್ಲಿರುವ ಪಾರ್ಶ್ವನಾಥ ಜೈನಬಸದಿ ನಂತರದ ಕಾಲದ್ದಾಗಿದೆ. ಇಲ್ಲಿಯ ಪದ್ಮಾವತಿ ಶಿಲ್ಪದ ಪೀಠದ ಮೇಲಿರುವ ಸುಮಾರು ೧೩ನೆಯ ಶತಮಾನ ಶಾಸನದಿಂದ, ಆ ಮೂರ್ತಿಯನ್ನು ವಿಜಯಕೀರ್ತಿ ದೇವರ ಶಿಷ್ಯನು ಮಾಡಿಸಿದ ಅಂಶ ಗೊತ್ತಾದರೆ ಬಸದಿಯ ಕೈಪಿಡಿ ಮೇಲಿನ ಸುಮಾರು ೧೫ನೆಯ ಶತಮಾನದ ಶಾಸನ ನೇಮಿಭದ್ರನನ್ನು ಉಲ್ಲೇಖಿಸುತ್ತದೆ.

ಇಲ್ಲಿಯ ಲಕ್ಷ್ಮೀನಾರಾಯಣ ದೇವಾಲಯವು ಹೊಯ್ಸಳ ವಾಸ್ತುಶಿಲ್ಪ ಕಲಾ ಐಸಿರಿಯ ಸುಂದರ ನಿದರ್ಶನವಾಗಿದೆ. ಸೂಕ್ಷ್ಮ ಕೆತ್ತನೆಯಿಂದೊಡಗೂಡಿದ ಉತ್ಕೃಷ್ಟ ಅಲಂಕಾರಿಕ ಶಿಲ್ಪಗಳ ಸಂಯೋಜನೆಯಲ್ಲಿ ಕಂಡು ಬರುವ ಹೊಂದಾಣಿಕೆ, ಪ್ರಮಾಣಬದ್ಧತೆ ಹಾಗೂ ಪ್ರಬುದ್ಧತೆಗಳಿಂದಾಗಿ ವೀಕ್ಷಕರಿಗೆ ಅವಿಸ್ಮರಣೀಯ ಆನಂದ ನೀಡುತ್ತದೆ. ಆರು ಪಟ್ಟಿಕೆಯನ್ನುಳ್ಳ

ಮೂರು ಅಡಿ ಎತ್ತರದ ಜಗತಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ, ಬಹುಕೋನಾಕಾರದ ತಳವಿನ್ಯಾಸವನ್ನು ಹೊಂದಿರುವ ಇದು ಮೂರು ಗರ್ಭಗೃಹಗಳನ್ನು ಹೊಂದಿದ್ದು, ಪ್ರಧಾನ ಗರ್ಭಗೃಹಕ್ಕಷ್ಟೇ ಅಂತರಾಳವಿದ್ದು, ಎಲ್ಲವನ್ನೂ ನಡುವೆ ಇರುವ ಒಂದೇ ನವರಂಗವು ಒಗ್ಗೂಡಿಸಿದೆ. ಪ್ರಧಾನ ಗರ್ಭಗೃಹದ ಬಾಗಿಲವಾಡವು ಸಪ್ತಶಾಖಾಲಂಕೃತವಾಗಿದ್ದು, ಆಕರ್ಷಕವಾಗಿದೆ. ಒಳಗೆ ಸ್ಥಾನಕ ಭಂಗಿಯಲ್ಲಿರುವ ಪದ್ಮಾ, ಗದಾ, ಶಂಖ, ಚಕ್ರಧಾರಿ, ನಂಬಿನಾರಾಯಣ, ಶ್ರೀದೇವಿ–ಭೂದೇವಿಯರ ಭವ್ಯ ಶಿಲ್ಪದ ಜೊತೆಗೆ ಉತ್ಸವ ಮೂರ್ತಿಗಳೂ ಇವೆ. ನವರಂಗದ ಉತ್ತರಕ್ಕಿರುವ ಗರ್ಭಗೃಹದಲ್ಲಿ ಆಳೆತ್ತರದ ಲಕ್ಷ್ಮೀನಾರಾಯಣನ ಮೂರ್ತಿ ಇದ್ದರೆ, ದಕ್ಷಿಣದ ಗರ್ಭಗೃಹದಲ್ಲಿ ಹಿಂದೆ ಪ್ರತಿಷ್ಠಾಪಿಸಲ್ಪಟ್ಟಿದ್ದ ವೇಣುಗೋಪಾಲನ ಮೂರ್ತಿಯನ್ನು ನರಸರಾಜ ಒಡೆಯರ ಕಾಲದಲ್ಲಿ ಕನ್ನಂಬಾಡಿ ದೇವಾಲಯಕ್ಕೆ ಕೊಂಡೊಯ್ದು ಅಲ್ಲೇ ಪ್ರತಿಷ್ಠಾಪಿಸಿರುವ ಸಾಧ್ಯತೆಗಳಿವೆ ಎಂದು ಹಯವದನರಾಯರು ಮೈಸೂರು ಗ್ಯಾಸೆಟಿಯರಿನಲ್ಲಿ ದಾಖಲಿಸಿದ್ದಾರೆ. (ಆದರೆ ಕನ್ನಂಬಾಡಿಯಲ್ಲಿಂದು ಮುಳುಗಡೆಯಾಗಿರುವ ಗೋಪಾಲಕೃಷ್ಣ ದೇವಾಲಯದ ಕಂಬವೊಂದರ ಮೇಲಿರುವ ಕ್ರಿ.ಶ.೧೫೩೨ರ ಶಾಸನದಲ್ಲೇ ಗೋಪಾಲಕೃಷ್ಣ ದೇವರ ಉಲ್ಲೇಖವಿರುವುದರಿಂದ ಈ ಅಂಶವನ್ನು ಪುನರ್ ಪರಿಶೀಲಿಸಬೇಕೆಂದು ತೋರುತ್ತದೆ). ಇಲ್ಲಿರುವ ಗೋಪಾಲಕೃಷ್ಣನ ನವೀನ ಮೂರ್ತಿಯನ್ನು ೧೯೫೩ರಲ್ಲಿ ಪ್ರತಿಷ್ಠಾಪಿಸಲಾಗಿದೆ. ಪ್ರಧಾನ ಗರ್ಭಗೃಹಕ್ಕೆ ಆಕರ್ಷಕವಾದ ದ್ರಾವಿಡ ಶಿಖರ, ಶುಕನಾಸಿಗಳಿದ್ದು, ಕಲಾತ್ಮಕ ಕುಸುರಿ ಶಿಲ್ಪಗಳಿಂದ ಕೂಡಿದ ಶಿಖರವು ಆಕರ್ಷಕವಾಗಿದೆ. ನವರಂಗದ ದೇವಕೋಷ್ಠಗಳಲ್ಲಿ ಗಣಪತಿ ಹಾಗೂ ಮಹಿಷಮರ್ಧಿನಿಯರ ಸುಂದರ ಶಿಲ್ಪಗಳಿವೆ. ನವರಂಗವನ್ನು ಹೊತ್ತು ನಿಂತಿರುವ ಬೃಹದಾಕಾರದ ಚರಕಿ ಕಂಬಗಳು ಹೊಳಪಿನಿಂದ ಕೂಡಿದ್ದು, ಬೋದಿಗೆಯಲ್ಲಿ ಅಲ್ಲಲ್ಲಿ ಮದನಿಕೆಯರ ಸುಂದರ ಕಿರುಶಿಲ್ಪಗಳಿದ್ದು, ಕಮಲಾಲಂಕೃತ ಛತ್ತಿನ ನಡುವೆ ಕಾಳಿಂಗಮರ್ಧನ ಕೃಷ್ಣನನ್ನು ಕೆತ್ತಲಾಗಿದ್ದು ಚಿತ್ತಾಕರ್ಷಕವಾಗಿದೆ. ಇಲ್ಲಿಯ ಕಂಬವೊಂದರ ಬೋದಿಗೆಯಲ್ಲಿರುವ 'ಹೆಬ್ಬೆಟ್ಟು ಆಂಜನೇಯ' ನು ಗಂಭೀರವಾಗಿ ಕುಳಿತು ಎಳನೀರು ಕುಡಿಯುತ್ತಿದ್ದು, 'ಕಪಿ ಬಲ್ಲದೇ ಎಳನೀರ ಸಾರ' ಎಂಬ ಗಾದೆಗೆ ಹೊರತಾಗಿರುವಂತೆ ತೋರುತ್ತದೆ. ನವರಂಗದ ಒಳ ಭಾಗದಲ್ಲಿ ಕಕ್ಷಾಸನ ವ್ಯವಸ್ಥೆ ಇದ್ದುದಕ್ಕೆ ಕುರುಹುಗಳಿದ್ದು, ನವರಂಗದ ಹೊರ ಮುಂಬದಿಯಲ್ಲಿ ಪ್ರಾಚೀನ ಕಂಬಗಳನ್ನು ಬಳಸಿ, ವಿಶಾಲವಾದ ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಸುಮಾರು ೧೭ನೇ ಶತಮಾನದಲ್ಲಿ ನಿರ್ಮಿಸಲಾಗಿದ್ದು, ಉತ್ಸವಕ್ಕೆ ಬಳಸುವ ವಾಹನಗಳಿಲ್ಲಿವೆ. ದೇವಾಲಯದ ಒಳಾಂಗಣದ ಅಲಂಕಾರಿಕ ಕೆತ್ತನೆಗಳನ್ನು ಮೀರಿಸುವ ಶಿಲ್ಪಕಲಾ ಸಿರಿಯಿಂದ ತುಂಬಿ ತುಳುಕುವ ಇದರ ಅಧಿಷ್ಠಾನ, ಭಿತ್ತಿ, ಶಿಖರ, ಶುಕನಾಸಿಗಳು ಮತ್ತೊಂದು ಲೋಕವನ್ನೇ ಸೃಷ್ಟಿಸಿ ಪ್ರವಾಸಿಗರನ್ನು ವಿಸ್ಮಯಗೊಳಿಸುತ್ತವೆ. ದೇವಾಲಯದ ಅಧಿಷ್ಠಾನವನ್ನು ಆನೆ, ಕುದುರೆ, ಲತೆ, ಪೌರಾಣಿಕ ಕಥನ, ಮಕರ, ಹಂಸ ಹಾಗೂ ಬಳ್ಳಿಯ ಅಲಂಕಾರಿಕ ಕೆತ್ತನೆಯುಳ್ಳ ಪಟ್ಟಿಕೆಗಳಿಂದ ಅಲಂಕರಿಸಲಾಗಿದೆ. ದೇವಾಲಯದ ಎತ್ತರವನ್ನು ಹೆಚ್ಚಿಸಲು ಎರಡು ಹಂತದಲ್ಲಿ ಭಿತ್ತಿಯನ್ನು ನಿರ್ಮಿಸಲಾಗಿದೆ. ಕೆಳಗಿನ ಹಂತ ಚಲುವನಾರಾಯಣ, ಬ್ರಹ್ಮ, ವಿಷ್ಣು, ಲಕ್ಷ್ಮೀನಾರಾಯಣ, ಕೇಶವ, ಚತುರ್ ವಿಂಶತಿ ವಿಷ್ಣುಮೂರ್ತಿ, ಪರವಾಸುದೇವ, ಯೋಗಾನರಸಿಂಹ, ಲಕ್ಷ್ಮೀನರಸಿಂಹ, ಇಂದ್ರ, ರಾಮ–ಲಕ್ಷ್ಮಣ, ಹರಿಹರ, ಭೈರವ, ಭೈರವಿ, ಕಾಳಿ, ಆದಿಶಕ್ತಿ, ಗೋವರ್ಧನಧಾರಿ ಕೃಷ್ಣ, ಕಾಳಿಂಗಮರ್ಧನ, ಲಕ್ಷ್ಮಿ, ನಾಟ್ಯ ಸರಸ್ವತಿ ಮುಂತಾದ ದೇವಾನುದೇವತೆಗಳ ಕೆತ್ತನೆಯಿಂದ ಕೂಡಿದೆ. ಮೇಲಿನ ಹಂತವು ಕಿರಿದಾದ ಅಲಂಕಾರಿಕ ಏಕ, ದ್ವಿ ಸ್ತಂಭ, ಶಿಖರ ಹಾಗೂ ಕಿರುದೇವಕೋಷ್ಠಗಳಿಂದ ತುಂಬಿದ್ದು, ಕೆಲವೆಡೆ ಕಿರು ಮೂರ್ತಿಗಳೂ ಇವೆ. ಇಲ್ಲಿ ಮಹಾಭಾರತ, ರಾಮಾಯಣ ಹಾಗೂ ಭಾಗವತ ಕಥನ ಶಿಲ್ಪಗಳ ಪಟ್ಟಿಯನ್ನೇ ಕೆತ್ತಲಾಗಿದ್ದು, ಕಕ್ಷಾಸನ ಭಾಗದಲ್ಲಿ 'ಕತ್ತೆ ಮುಂದೆ ಕೈಮುಗಿದು ನಿಂತಿರುವ ವಸುದೇವನ' ದೃಶ್ಯಾವಳಿ 'ಕಾರ್ಯವಾಸಿ ಕತ್ತೆಕಾಲು ಕಟ್ಟು' ಗಾದೆಯನ್ನು ನೆನಪಿಸುತ್ತದೆ. ಇದೇ ರೀತಿ ದೇವಾಲಯದ ಎಡ ಕಕ್ಷಾಸನ ಭಾಗದ ಹಿಂಬದಿಯಲ್ಲಿ ವಿಷ್ಣುವಿನ ದಶಾವತಾರ ಶಿಲ್ಪಗಳನ್ನು ಸುಂದರವಾಗಿ ಕೆತ್ತಲಾಗಿದ್ದು, ಅಲ್ಲಲ್ಲಿ ಮಿಥುನ ಶಿಲ್ಪಗಳೂ ಇವೆ. ಗರ್ಭಗೃಹದ

ಹೊರಗೆ ಪೂರ್ವ, ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿರುವ ಎರಡು ಅಂತಸ್ತಿನ ಕಿರು ದೇವಕೋಷ್ಠಗಳಿಗೆ ಸುಂದರ ಕಿರು ಶಿಖರಗಳಿವೆಯಾದರೂ, ಮೂರ್ತಿಗಳಿಂದು ಕಣ್ಮರೆಯಾಗಿವೆ. ಈ ದೇವಾಲಯದ ಎಡಭಾಗದಲ್ಲಿ ಇತ್ತೀಚೆಗೆ ದೇವಿಗುಡಿಯನ್ನು ನಿರ್ಮಿಸಲಾಗಿದೆ. ಈ ದೇವಾಲಯ ಸಂಕೀರ್ಣಕ್ಕೆ ನಂತರದ ಕಾಲದ ದ್ವಾರಗೋಪುರವಿದ್ದು, ಮುಂದೆ ಗರುಡಗಂಭವೂ ಇದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಶಾಸನಾಧಾರಗಳು ಲಭ್ಯವಿಲ್ಲದಿರುವ ಹಿನ್ನೆಲೆಯಲ್ಲಿ ಅದರ ನಿರ್ಮಾಣ ಕಾಲವನ್ನು ಸುಮಾರು ಕ್ರಿ.ಶ.೧೧೯೯ ಎಂದು ಈ ಹಿಂದೆ ಊಹಿಸಲಾಗಿತ್ತಾದರೂ ಇದು ನುಗ್ಗೆಹಳ್ಳಿ ಹಾಗೂ ಜಾವಗಲ್‌ನ ತ್ರಿಕೂಟ ದೇವಾಲಯಗಳ ವಾಸ್ತು ವಿನ್ಯಾಸವನ್ನು ಹೋಲುವುದರಿಂದ ಇದರ ನಿರ್ಮಾಣ ಕಾಲವನ್ನು ಸುಮಾರು ಕ್ರಿ.ಶ.೧೨೪೦ ಎಂದು ವಿದ್ವಾಂಸರು ನಿಷ್ಕರ್ಷಿಸಿದ್ದು, ಈ ದೇವಾಲಯದ ನಿರ್ಮಾಣದಲ್ಲಿ ಶಿಲ್ಪಿ ಮಲ್ಲಿತಮ್ಮನ ಪ್ರಭಾವವಿರಬಹುದೆಂದು ಅನುಮಾನಿಸಿದ್ದಾರೆ. ಪ್ರತೀ ವರ್ಷ ಪಾಲ್ಗುಣ ಶುದ್ಧ ದ್ವಿತೀಯದಿಂದ ಫಾಲ್ಗುಣ ಶುದ್ಧ ದಶಮಿಯವರೆಗೆ (ಫೆಬ್ರವರಿ– ಮಾರ್ಚ್) ನಡೆಯುವ ವಾರ್ಷಿಕ ಜಾತ್ರೆಯಲ್ಲಿ ಶುದ್ಧ ಸಪ್ತಮಿಯಂದು ಜರುಗುವ ಬ್ರಹ್ಮ ರಥೋತ್ಸವ ವಿಶಿಷ್ಟವಾಗಿದ್ದು, ಅಪಾರ ಭಕ್ತರನ್ನು ಆಕರ್ಷಿಸುತ್ತದೆ. ಬೇಲೂರು ಹಳೇಬೀಡುಗಳ ಶಿಲ್ಪಕಲಾ ವೈಭವವನ್ನು ನೆನಪಿಸುವ ಈ ದೇವಾಲಯವು ಕೇಂದ್ರ ಪುರಾತತ್ವ ಇಲಾಖೆಯ ಸಂರಕ್ಷಣೆಗೆ ಒಳಪಟ್ಟಿವೆ.

ಈ ದೇವಾಲಯದ ಎಡಕ್ಕೆ ಕೋಟೆ ಹೆಬ್ಬಾಗಿಲ ದಾರಿಯಲ್ಲಿರುವ ಪಾರ್ಶ್ವನಾಥ ಬಸದಿಯು ಪುನರ್ ನಿರ್ಮಿತ ರಚನೆಯಾಗಿದ್ದು, ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ತೆರೆದ ಮುಖಮಂಟಪಗಳನ್ನು ಹೊಂದಿದ್ದು, ಜೀರ್ಣೋದ್ಧಾರಗೊಂಡಿದೆ. ಪೂರ್ವಾಭಿಮುಖವಾಗಿರುವ ಇದರ ಗರ್ಭಗೃಹದಲ್ಲಿ ಪಾರ್ಶ್ವನಾಥ, ಅನಂತನಾಥ ಹಾಗೂ ಪದ್ಮಾವತಿ ಯಕ್ಷಿಯರ ಶಿಲ್ಪಗಳಿದ್ದು, ಬೆಳ್ಳಿಬೆಟ್ಟದಿಂದ ತಂದಿಟ್ಟಿರುವುದಾಗಿ ಹೇಳುವ ಧರಣೇಂದ್ರ–ಪದ್ಮಾವತಿಯರ ಶಿಲ್ಪಗಳು ನವರಂಗದಲ್ಲಿವೆ. ಬದಿಯಲ್ಲೇ ಇರುವ ಬಾಹುಬಲಿಯ ಆಳೆತ್ತರದ ಸುಂದರ ಮೂರ್ತಿ ಇಂದು ಮುಕ್ಕಾಗಿದೆ. ಇಲ್ಲಿಂದ ಸ್ವಲ್ಪ ಮುಂದೆ ಗದ್ದೆಯಲ್ಲಿರುವ ಹರಿಹರ ದೇವಾಲಯವೇ ಇಲ್ಲಿಯ ಕ್ರಿ.ಶ.೧೩೦೬ರ ಶಾಸನದಲ್ಲಿ ಉಕ್ತವಾಗಿರುವ ಸೋಮನಾಥ ದೇವಾಲಯವಾಗಿದ್ದು ಇಂದು ಪೂರ್ಣ ನಾಶವಾಗಿದೆ. ಊರ ಕೆರೆಯಂಚಿನ ಲಿಂಗಬಸವೇಶ್ವರ ಗುಡಿಯ ಮುಂದಿರುವ ಮೂರು ಹಂತದ ವೀರಗಲ್ಲು, ಮಕರ ತೋರಣಾಲಂಕಾರವನ್ನು ಹೊಂದಿದ್ದು, ಯೋಧನ ತೋಳುಗಳನ್ನು ವಿಶಿಷ್ಟವಾದ ತೋಳ್ಬಂಧಿಗಳಿಂದ ಅಲಂಕರಿಸಲಾಗಿದೆ. ವೀರ ಶಿವಸಾನಿಧ್ಯ ಪಡೆದ ಅಂಶವನ್ನು ಮೇಲಿನ ಹಂತದಲ್ಲಿ ಬಹಳ ಮನೋಜ್ಞವಾಗಿ ಕಂಡರಿಸಲಾಗಿದೆ. ಇಲ್ಲಿಯ ಆಂಜನೇಯ ಗುಡಿಯಲ್ಲಿರುವ ಸುಮಾರು ಆರು ಅಡಿ ಎತ್ತರದ ಹನುಮಂತನ ಶಿಲ್ಪವನ್ನು ವಾದಿರಾಜ ಪ್ರತಿಷ್ಠಿತ ಮೂರ್ತಿ ಎಂದು ಪರಿಗಣಿಸಲಾಗಿದ್ದು, ಎದುರಲ್ಲಿ ಸುಮಾರು ೩೦ ಅಡಿಯ ಎತ್ತರದ ಗರುಡಗಂಬವಿದೆ. ತಾಮ್ರದ ವಜ್ರಾಂಗ ಅಲಂಕೃತ ಹನುಮಂತನ ಜಾತ್ರೆಯು ಯುಗಾದಿಯಾದ ಒಂದು ವಾರಕ್ಕಾಗುತ್ತದೆ. ಉಳಿದಂತೆ ಊರಿನಲ್ಲಿ ಆಂಜನೇಯ, ಗಣಪತಿ, ನವಗ್ರಹ, ಭೈರವ ಮುಂತಾದ ಗುಡಿಗಳಿವೆ. ಅಲ್ಲದೆ ಮಸೀದಿ ಹಾಗೂ ದರ್ಗಾ ಕೂಡ ಇವೆ. ಇಲ್ಲಿಯ ರಂಗದ ಹಬ್ಬ, ಹುಲಿವೇಷಗಳು ವಿಶಿಷ್ಟವಾಗಿವೆ. **ಹರಿಹರಪುರ (೨೦೮೮)** : ತಾಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೧೦ ಕಿ.ಮೀ. ನೈಋತ್ಯಕ್ಕಿದ್ದು, ಹೇಮಾವತಿ ಯೋಜನೆಯಿಂದಾಗಿ ಈಗಿರುವಲ್ಲಿಗೆ ಸ್ಥಳಾಂತರಗೊಂಡಿದೆ. ಎರಡು ಕಿ.ಮೀ. ಅಂತರದಲ್ಲಿದ್ದ ಹಳೆ ಊರು ಹೊಯ್ಸಳರ ಕಾಲದ ಅಗ್ರಹಾರಗಳಲ್ಲಿ ಒಂದಾಗಿದ್ದು, ಕ್ರಿ.ಶ.೧೩೧೦ರ ಶಾಸನದಲ್ಲಿ 'ಸರ್ವನಮಸ್ಯದ ಅಗ್ರಹಾರ ಶ್ರೀಮದ್ ಧರ್ಮಭೋಜ ವಿಷ್ಣುವರ್ಧನ ಹರಿಹರಪುರ' ಎಂದೇ ದಾಖಲಿಸಲ್ಪಟ್ಟಿದ್ದು, ಇದರ ಪ್ರಾಚೀನತೆಯನ್ನು ವಿಷ್ಣುವರ್ಧನನ (ಕ್ರಿ.ಶ.೧೧೦೮– ೧೧೪೮) ಆಳ್ವಿಕೆಯಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಹಳೆ ಊರ ನಿವೇಶನದಲ್ಲಿ ಪೂರ್ವಾಭಿಮುಖವಾಗಿ ನಿಂತಿರುವ ಹರಿಹರೇಶ್ವರ ದೇವಾಲಯವು ದ್ವಿಕೂಟವಾಗಿದ್ದು, ಒಂದೇ ಸಾಲಿನಲ್ಲಿ ಎರಡು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳಿದ್ದು, ಎರಡಕ್ಕೂ ಸೇರಿದಂತೆ ಇರುವ ಒಂದೇ ನವರಂಗಕ್ಕೆ ಎರಡು ಪ್ರತ್ಯೇಕ ದ್ವಾರಗಳಿವೆ. ಈ ದೇವಾಲಯದ ಬಲಭಾಗದ

ಗರ್ಭಗೃಹದಲ್ಲಿ ಹರಿಹರೇಶ್ವರರ ಸುಂದರ ಶಿಲ್ಪವಿದ್ದರೆ, ಇನ್ನೊಂದರಲ್ಲಿ ಶಿವಲಿಂಗವಿದ್ದು, ಅಂತರಾಳದ ಬಾಗಿಲವಾಡಗಳು ಪಂಚಶಾಖಾಲಂಕೃತವಾಗಿವೆ. ನವರಂಗದಲ್ಲಿ ನಂದಿ, ಗಣಪತಿ ಶಿಲ್ಪಗಳಿದ್ದು, ನಡುವಣ ಛತ್ತು ಕಮಲಾಲಂಕಾರದಿಂದ ಕೂಡಿದ್ದು, ಗಾರೆ ಶಿಖರಗಳಿದ್ದು ಜೀರ್ಣೋದ್ಧಾರಗೊಂಡಿದೆ. ಇದಕ್ಕೆ ಅನತಿ ದೂರದಲ್ಲೇ ಇರುವ ನಾರಾಯಣ ಗುಡಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ನಂತರದಲ್ಲಿ ಪಡಸಾಲೆಯನ್ನು ಸೇರಿಸಲಾಗಿದ್ದು, ಮುಂದೆ ಮಂಟಪವೂ ಇದೆ. ಪಂಚಶಾಖಾಲಂಕೃತ ಬಾಗಿಲವಾಡವನ್ನು ಹೊಂದಿರುವ ಗರ್ಭಗೃಹದಲ್ಲಿ ಕೇಶವನ ಆಳೆತ್ತರದ ಶಿಲ್ಪವಿದೆ. ಉಳಿದಂತೆ ಹೊಸ ಊರಿನಲ್ಲಿ ಬಸವೇಶ್ವರ, ರಾಮದೇವರು, ಆಂಜನೇಯ, ಗಣಪತಿ, ನವಗ್ರಹ, ಮಾರಮ್ಮ, ಮೊಸಳಕಮ್ಮ ಮುಂತಾದ ನವೀನ ಗುಡಿಗಳಿದ್ದು, ಪ್ರತೀ ಗುರುವಾರ ಸಂಜೆ ಸಂತೆಯಾಗುತ್ತದೆ. **ಮೆಳ್ಳಹಳ್ಳಿ (೫೯೭) :** ಹರಿಹರಪುರದ ನೆರೆಯ ಗ್ರಾಮವಾಗಿದ್ದು, ಇಲ್ಲಿಯ ಈಶ್ವರ ದೇವಾಲಯದ ಬಳಿಯಿರುವ ಕ್ರಿ.ಶ.೧೧೧೫ರ ವೀರಗಲ್ಲು ಶಾಸನವು ಮೆಳೆಯೂರ ಗೋರಕ್ಷಣೆಗಾಗಿ ಮಡಿದ ಸೆಟ್ಟಿಯಣ್ಣನ ಹೆಸರಲ್ಲಿ ಮೈದುನಹಳ್ಳಿಯ ಶಿವಾಲಯಕ್ಕೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿರುವ ಶಿವಾಲಯವು ಹೊಯ್ಸಳರ ಕಾಲದ್ದಾಗಿದ್ದು, ಶಿಥಿಲಾವಸ್ಥೆಯಲ್ಲಿದೆ.

# Index

## Symbols


¢ªÀiÁì¯É 900, 908

¢ªÀiÁì¯É PÀÄlÂvÀ, 894

£À«¯É 986

£Á¹gïdÃUï 915

£ÀªÀ²¯ÁAiÀÄÄÄUÀ 955

£ÀAdÄAqÀ PÀ« 908

£ÀAdÄAqÀgÁzsÀåPÀ« 978

£ÀÆvÀ£À ²¯ÁAiÀÄÄÄUÀ 968

«£ÀAiÀiÁ¢vÀå 979

£ÀÄUÉÎ°À½Î 919, 992

£ÀÈvÀå PÁgÀAf 911

£ÀgÀ¸ÀªÀÄÄAUÀ®zÀ gÁªÀÄ£ÁxÉÃ±ÀégÀ 903

£ÀgÀ¸ÀgÁd MqÉAiÀÄgÀ 991

£ÀgÀ¹A°À 925, 950

£ÀgÀ¹A°À UÀÄr 950

£ÁgÁAiÀÄt 947

£ÁgÁAiÀÄt¸Áé«Ä 921

£ÁUÀªÀÄÄAUÀ® 930, 958, 960

£ÁUÀgÀWÀlÖ 934

£ÀUÀgÉÃ±ÀégÀ 979

£ÁUÉÃ±ÀégÀ 906

£Áxïð¨ÁåAPï 912, 913, 914

¤µÁÌªÉÄÃ±ÀégÀ 989

¤Ã®UÁgÀ 938, 956

¤Ã¯Á ªÀÄ¸ÀÆzï SÁ¢æ zÀUÁð 968

¤«ÄµÁA§ zÉÃªÁ®AiÀÄ 974

¤qÀWÀlÖ 894, 938

¥Á®UÀæ°ÁgÀ 933

¥Á±Àéð£ÁxÀ §¸À¢ 992

¥Á±Àéðf£Á®AiÀÄ 945

¥À²Ñ ªÀÄªÁ»¤ 975

¥ÁªÀðw 901

¥ÁAqÀªÀ¥ÀÄgÀ 934

¥ÁAqÀªÀgÀ UÀÄr 957

¥ÀAQÛ ¸ÉÃªÉ 939
¥ÀAZÀ §¸À¢ 924
¥ÀAZÀ°AUÉÃ±ÀégÀ 919, 956
¥ÀAZÀªÀiÁvÀÈPÁ 946
¥ÀAZÀPÀÆ¯ï §¸À¢ 902
¥ÀQëzsÁªÀÄ 964, 987
¥ÉæÃPÀëtÃAiÀÄ ¸ÀÜ¼ÀUÀ¼ÀÄ 892
¥sÀQÃgï µÁªÀ¯É 944
¥sÉæAZïgÁPïì 934
§®ªÀÄÄj 940
§¸ÀªÉÃ±ÀégÀ 906
§¸ÀgÁ¼ÀÄ 935
§¸ÀgÁ¼£À ¥Á¼ÉÃUÁwð 925
§¹Û °ÉÆ¸ÀPÉÆÃmÉ 938
§æ°ÉäÃ±ÀégÀ 907
§ÄUÉ 986
§ÉAzÁªÀ£À 911
§È°Àvï ²ÃAiÀÄÄUÀ 921, 938, 957
§qÀUÉÆÃqÀªÀÄä 932
¨Á¼ÀZÀAzÀæzÉÃªÀ 922
¨Á¼ÉÃ°ÉÆ£ÀÆgÀÄ 930
¨É¼ÀÆîgÀÄ 940
¨É¼ÀÆîgÀÄ (PÉÆPÀÌgÉ) 945
¨É¼ÀPÀªÁr 938
¨É¼ÀUÉÆ¼À 939
¨É½¨ÉlÖ 992
¨ÉÃ®Æj 915
¨ÉÆ¥ÀàUËqÀ£À¥ÀÄgÀ 910, 938
¨ÉÆÃgÉzÉÃªÀgÀ 897
¨ÉÆÃUÁ¢ 947
¨sÀÄªÀ£ÉÃ±ÀégÀ 931
¨sÀÆªÀiÁ¥À£À 948
¨sÀÆªÀiÁ¥À£ÀP 944
«¨sÀÆw ¥Á¼ÀÄ 963
¨sÁgÀwÃ¥ÀÄgÀ 947
¨sÀPÀÛªÀvÀì® 939
¨sÉÆÃUÉÃ±ÀégÀ 978
¨sÉÊgÁ¥ÀÄgÀ 947, 954
¨sÉÊgÀªÀ 901
¨sÉÊgÀªÉÃ±ÀégÀ PÁªÀå 979
¨sÉÊgÀªÉÃ±ÀégÀ PÁªÀåzÀ PÀvÀÈð 908
¨sÉÊgÀªÉÃÃ±ÀégÀ 947
©¹®Ä ªÀiÁgÀªÀÄä£À 899
©Ar£À«¯ÉAiÀÄ 902
©ArUÀ£À«¯É 904

©ÜÃªÉÄÃ±Àéj 956
®QëöäÃ£ÀgÀ¹A°À 895
®QëöäÃ£ÀgÀ¹A°À£À 893, 899, 908, 915, 983
®QëöäÃ£ÁgÁAiÀÄt 980, 984
®QëöäÃ£ÁgÁAiÀÄt UÀÄr 915
®QëöäÃ£ÁgÁAiÀÄt zÉÃªÁ®AiÀÄ 990
®QëöäÃ£ÁgÁAiÀÄt£À 926
®QëöäÃd£ÁzÀð£À 948, 949
®QëöäÃPÁAvÀ zÉÃªÀgÀ 926
®QëöäUÀÄr 915
¯Á ï¨ÁUï 974
¯Á¼À£ÀPÉgÉ 964
±ÀA¨sÀÄ°AUÉÃ±ÀégÀ 896
±ÀAÆ®zÀ °À§â 899, 900
±ÀAÆ®zÀ °À§â,’ 894
±ÀæªÀt¨É¼ÀUÉÆ¼À 897, 922, 923
±ÀæªÀt¨É¼ÀUÉÆ¼ÀzÀ ZÁªÀÄÄqÀgÁAiÀÄ §¸À¢ 903
±ÁYÎð¥Át 953
«±ÉéÃ±ÀégÀ, 950
«±ÉéÃ±ÀégÀAiÀÄå 911
«±ÉéÃ±ÀégÀAiÀÄå £Á¯É 911
²¯ÁAiÀÄÄÄUÀ 979
²¯ÁAiÀÄÄÄzsÀ PÁAiÀiÁðUÁgÀ 968
²°à ªÀÄ°vÀªÀÄÄä 919
²AµÁ d®¥ÁvÀ 967
²AµÁ¥ÀÄgÀ 966
²Ã¼À£ÉgÉ 967
²ªÀ¥ÀÄgÀ 951
²ªÀ¸ÀªÀÄÄÄzÀæ 911, 966
²ªÀ¸ÀªÀÄÄÄzÀæ (§è¥sï) 965
²ªÀUÀAUÁzsÀgÉÃ±ÀégÀ 941
²æÃ gÁªÀÄ£ÁxÀ zÉÃªÀgÀ 919
²æÃ¤ªÁ¸À PÉëÃvÀæ 939
²æÃ¤ªÁ¸ÀPÉëÃvÀæ 940
²æÃ¥ÀÄgÀÄµÀ 926
²æÃªÉÊµÀÚªÀ 893
²æÃgÀAUÀ£ÁxÀ 893, 971
²æÃgÀAUÀ£ÁxÀ£ 966
²æÃgÀAUÀ¥ÀÄgÀ 942, 943
²æÃgÀAUÀ¥ÀlÖt 968, 970, 972
²æÃgÀAUÀP 962
²æÃPÀgÀtzÀ f£Á®AiÀÄ 947
«µÀÄÚªÀzsÀð£À 929, 980
µÁ°Àgï UÀAeÁA 973
µÀqÀPÀëgÀzÉÃªÀgÀÄ 930

¸ÁºÀUÁªÉ 919
¸Á¸À®Ä 908, 978
¸ÀA¸ÀÌøvÀ ¸ÀA±ÉÆÃzsÀ£Á C¥ÁqÉ«Ä 962
¸ÀÄ¸ÀUÀ® UÀÄr 931
¸ÀªÀÕzsÀªÀÄÐ D±Àæ ªÀÄ 940
¸ÀÄAPÁvÉÆtÆÚgÀÄ 981
¸ÀÄAPÁvÉÆtÆÚj 918
¸ÀªÉÃÕ±ÀégÀ UÀÄr 929
¸ÀÆgÀ£À°À½î 942, 943
¸ÀÄgÀAUÀ PÁ®ÄªÉ 985, 986
¸ÀAgÀQëvÀ ¸ÁägÀPÀ 902
¸Á«AiÀÄ¨ÉâÃ±ÀégÀ UÀÄr 913
¸ÀAiÀÄåzï ¸Á¯Ágï ªÀÄ¸ÀfzÀï ¸Á¨ï zÀUÁð 917
¸ÀAUÀªÀÄ 956, 975
¸ÀAvÉÃ¨ÁZÀ°À½î 976
¸ÁgÀAUÀ¥Át 968
¸ÀPÀ¯ÉÃ±ÀégÀ 948
¸ÀPÀÌgÉ PÁSÁð£É 949
¸Àt§ 917
¸ÁvÀ£ÀÆgÀÄ 977
¸ËªÀÄåPÉÃ±ÀªÀ 930, 981
¸ÉÆÃªÀÄ£À°À½î 952, 982
¸ÉÆÃªÀÄ£À°À½î PÉÆ¥Àà®Ä 983
¸ÉÆÃªÀÄ£ÁxÀ¥ÀÄgÀ 919
¸ÉÆÃªÉÃÃ±ÀégÀ 909, 924, 925, 944, 966, 978, 986
¸ÉÆÃªÉÃÃ±ÀégÀ (ZÉÆÃ¼ÀgÀ) 898
¸ÉÆÃªÉÃÃ±ÀégÀ UÀÄr 968
¸ÉÃvÀÄªÉ 972
¸ÉÊAiÀÄzï EÀjÃªÀÄÄÄ¯Áè µÁ SÁ¢æ 898
¹AzÀUÀÌlÖ 980
¹AzÀWÀÌlÖ 979
¹AzsÀWÀÌlÖ 954
¹zÀÞ£ÁxÀ 979
¹zÀÞ¥Àà 894
¹zÀÞ¥Áàf 909, 938

A

Á®¨sÉÊgÀªÉÃ±ÀégÀ 902
ªÀ¸ÀÄÛ ¸ÀAUÀæºÁ®AiÀÄ 973
«ªÀÄ®£ÁxÀ §¸À¢ 942
ªÀÄ¯ÉèÃ±ÀégÀ 897, 922, 934, 954, 964, 981
ªÀÄºÁèPÁdÄÕ£À 918, 934, 935, 936, 946
ªÁå¸ÀgÁd 922
ªÀÄ¼À°À½î 953

ªÀÄÄa©ÃqÀÄ 896
ªÀÄÄªÀÄär gÁeÉÃAzÀæ ZÉÆÃ¼À 928
ªÀÄÄdÄ£ÁxÀ læ¸ïÖ 920
ªÀÄÆ®¸ÁÜ£À zÉÃªÀjUÉ 909
ªÀÄÆ¯É¹AUÉÃ±ÀégÀ 941, 942
ªÀÄÆEUÀÄw 964
ªÀÄÄAl¥À 962
ªÀÄÄAl¥ÀUÀ¼ÀÄ 961
ªÀÄÄmÉÃ¸Áé«Ä 894, 909, 938
ªÀÄÄqÀ¯ÉÃ±ÀégÀ 941
ªÀÄÄqÀå 948
ªÀÄÄÄvÀìAzÀæ 926
ªÀÄÄÄvÀÛwÛ 955
ªÀÄÄÄvÉÛvÀÛgÁAiÀÄÄ£À 955
ªÀÄÄÄzÀÄªÉÇ¼À®Ä 945
ªÀÄÄAzÀUÉgÉ 909
ªÀÄÄAzÀUÉgÉ §½ CuÉPÀlÖ£ÀÄß 909
ªÀÄgÀ¼ÉÃ±ÀégÀ 899
ªÀÄ°Á§¯ÉÃ±ÀégÀ 946
ªÀÄ°Á§º¥ÀÄgÀA 903
ªÀÄ°Á®QëöäÃ 914
ªÀÄ°Á°AUÉÃ±ÀégÀ 920, 976
ªÀÄoÀUÀ¼ÀÄ 961
ªÀÄ°ÁvÀä UÁA¢üÃf 975
ªÀÄ°ÁzÉÃªÀ zÉÃªÀjUÉ 934
ªÀÄqÀÄ«£ÀPÉÆÃr 949
ªÀÄwÛvÁ¼ÉÃ±ÀégÀ 953
ªÀÄzÁæ¸ï gÉÃfªÉÄAn 935
ªÀÄzÀÆÉÝgÀÄ 950, 989
ªÀÄzÀÆÉÝgÀÄ ªÀqÉ 950
ªÀÄzsÀågÀAUÀ 966
ªÀgÁ°À£ÁxÀ PÀ®è°À½î 965
ªÀgÀzÀgÁd (C¯Áè¼À£ÁxÀ) 951
ªÀgÀzÀgÁd¸Áé«Ä 918
ªÀiÁ¼ÀUÀÆgÀÄ 976
ªÀiÁAqÀªÀå 948
ªÀiÁgÉÃ°À½î 954
ªÀiÁPÀªÀ½î 987
ªÀiÁtÂPÀå¸ÉnÖ ªÉÄgÀªÀtÂUÉ 978
ªÀiÁUÉÆÃð£À°À½î 920
ªÀiÁzÀ£ÁAiÀÄPÀ£À°À½î 946
ªÀiÁzÁ¥ÀÄgÀ 920
ªÀiÁZÀ®WÀlÖ 954
ªÀiÁzÉÃ±ÀégÀ 965
ªÉÄ¼ÀÌî°À½î 993

ªÉÄÃ®ÄPÉÆÃmÉ 901, 948, 957, 965
ªÉÄÃ®ÄPÉÆÃmÉAiÀÄÄÄ gÁªÀiÁ£ÀÄdgÀ 962
ªÉÄÊ¸ÁgÀ¥ÀlÖt 934
ªÉÄÊ¸ÀÆgÀÄ 893
ªÉÆÃw vÀ¯Á¨ï 915
ªÉÆÃzÀÆgÀÄ 963
ªÉÆPÀlgÀªÀÄÄt 933
ªÉÆPÀlgÀªÀÄÄt¸Áé«Ä 905, 971, 987
ªÉÄgÀªÀÄÄÄr 960
ªÉÊzÀå£ÁxÀ, 950
ªÉÊzÀå£ÁxÀ¥ÀÄgÀ 950, 951
ªÉÊzÀå£ÁxÉÃ±ÀégÀ 952
«ÃgÀ¨sÀzÀæ 910, 918, 922, 932, 938, 953, 966, 984
«ÃgÀ¨sÀzÀæ£À 945
«ÃgÀ¨sÀzÀæ£À UÀÄr 898
«ÃgÀ±ÉÊªÀ 894
«ÃgÀ±ÉÊªÀ ªÀiÁUÀð 938
«ÃgÁA§Ä¢AiÀÄÆgÁ 932
AiÀiÁzÀªÀVj £ÃuÉÆÃðzÁ£gÀPÀ 930, 958
AiÉÆÃUÁ£ÀgÀ¹A°À 917, 920, 922, 957, 961
AiÉÆÃUÁ£ÀgÀ¹A°À£À 893, 924
aPÀÌ ªÀÄÄvÀÛwÛ 965
aPÀÌ¨ÁV®Ä 921
aPÁÌ®Æj 910
aPÀÌCgÀ¹£ÀPÉgÉ 928
atå 983
azÁ£ÀÀzÀ PÀ« 936

B

bÀ®ªÁ¢ UÀAmÉ §lÖ®Ä 933
bÀ®ªÁ¢UÀ¼À UÀAmÉ §lÖ®Ä 925

C

C¢ªÀiÁzsÀªÀ 928
C£ÀAvÀ¥ÀzÀä£Á¨sÀ 989
C£ÀAvÀ¥ÀzÀä£Á¨sÀ 901
C¨ÉâzÀÄ¨É EUÀÎ 973
C©ü£ÀªÀ ªÉÄgÀªÀÄÄÄr GvÀìªÀ 949
C¨Áè¼À£ÁxÀ, 950
C¼ÀvÉPÉÆÃ®£ÀÄß 944
C¼ÀvÉUÉÆÃ® 948
CªÀÄÈvÁ¥ÀÄgÀ 919
CªÀÄÈvÉÃ±ÀégÀ 955
CAiÀÄåªÉÇ¼É - 500 929

CAPÀPÁgÀ 979, 987
CAvÀgÀªÀ½î 898
CgÀÄªÀ£À°À½î 923
CgÀPÉgÉ 899, 989
CgÉªÀÄ°èPÁdÄðÉ£À 909
CPÉÃð±ÀégÀ 900, 949
CPÉÃð±ÀégÀ UÀÄr 987
CQÌ°É¨Áâ¼ÀÄ 895
CUÀ¸ÉÛÃ±ÀégÀ 940
CUÀæ°ÁgÀ 919, 924, 928, 939, 940, 941, 947, 950, 965, 968, 976, 979, 989, 990
CUÀæ°ÁgÀ ¨ÁZÀ°À½î 897
CUÀæ°ÁgÀ ªÀÄAoÉÃAiÀÄ 948
CUÀæ°ÁgÀ ªÀÄAqÉAiÀÄ 989
CWÀ®AiÀÄ 897
CWÛPÀÄ¥Éà 910

D

D(°Á)®wVj 933
D¢£ÁxÀ §¸À¢ 972
D¢ªÀiÁzsÀªÀ 941
D¢ZÀÄAZÀ£ÀVj 901
D¢ZÀÄAZÀ£ÀVj £À«®Ä ªÀ£ÀåzsÁªÀÄ 902
d®«zÀÄåvï GvÁàzÀ£Á PÉÃAzÀæ 966
D¯ÉÃ£À°À½î 896
«dAiÀÄ£ÀUÀgÀ 905, 931, 932, 942, 955, 968, 981
«dAiÀÄ£ÀUÀgÀ PÁ® 931
«dAiÀÄ£ÀUÀgÀzÀ 893
«dAiÀÄ£ÀUÀgÉÃ±Àéj 906
DgÀt 943
Dq½vÀ «¨sÁUÀ 892
Dq½vÀ WÀlPÀ 893
DvÀPÀÆgÀÄ 900

E

eÁ«ÄAiÀiÁ ªÀÄ¹Ã¢ 969
eÁªÀUÀ¯ï 919, 992
eÁvÉæ 987
eÉÆÃr°AUÀ 929
eÉÊ£ÀPÉÃAzÀæ 940
eÉÊ£ÀzsÀªÀÄð 893
eÉÊ£ÉÃ±Àéj 923

F

F±ÀégÀ 896, 897, 920, 923, 928, 929, 940, 967, 986, 987, 988

F±ÀégÀ UÀÄr 985
F±ÀégÁ®AiÀÄ 955
fÃUÀÄAr¥ÀlÖt 921

G

G¥ÀàjUÉ §¸À¥Àà 930
G¥ÀàjUÉ §¸ÀªÉÃ±ÀégÀ 898
gÁ§mïÐ §Æe¸ï ¥sÀÆemï 968
gÁ§mïÐ §Æe¸ï¥sÀÆmï 934
gÁ² ZÀPÀæ PÀ®Äè 967
gÁµÀÖçPÀ¥É1 900, 913
gÁ¶ÖçÃAiÀÄ ¥ÀQëzsÁªÀÄ 963
gÀA¨sÁ¥ÀÄj ¦ÃoÀ 930
gÁªÀÄ°AUÉÃ±ÀégÀ 947, 963
gÁªÀÄZÀAzÀæ zÉÃªÁ®AiÀÄ 984
gÁªÀiÁ£ÀÄd 893, 957, 958, 960
gÁªÀiÁ£ÀÄdgÀÄ 915, 959
gÁªÀuÉ(¼É)Ã±ÀégÀ, 921
gÁªÀuÉÃ±ÀégÀ 894
gÁªÀuÉÃ±ÀégÀ ²®à 894
gÁªÀuÉÃ±ÀégÀ UÀÄr 906
gÁªÉÄÃ±ÀégÀ 949
gÀAUÀ£ÀwlÄÖ 963
gÀAUÀ£ÁxÀ 986
gÀAUÁA©PÉ 960
gÁdgÁdZÉÆÃ¼À 940
gÁPÀë¸ÀªÀÄä£À UÀÄr 982
gÁWÀªÀ¥ÀÄgÀ 917
gÁZÀ¥Áàf 938
»gÉªÀÄAZÀzÀ PÁ¼ÀªÀÄä 906
»gÉÆÃqÉ 934
»gÉÆÃqÉ, 935
GvÀÄÛAUÀ ZÉÊvÁå®AiÀÄ 927

J

J¯ÉÆèÃgÁ 903
J¸ï.ªÀÄ°ÁzÉÃªÀÅ 968
J¸ï.JA. PÀÈµÀÚ 952
JA.J.®QëöäÃvÁvÁZÁAiÀÄð 962
»jAiÀÄªÀÄä£À UÀÄr 986
»jÃPÀ¼À¯ÉAiÀÄ 907
»jPÀ¼À¯É 987
JqÀwlÄÖ 940
»jzÉÃªÀªÀÄä 939

## L

LªÀvÀÄÛ UÉÃLÂ£À UÀrA§ 944

## M

MAzÀ£ÉAiÀÄ gÁdgÁd 954
MAzÀ£ÉAiÀÄ gÁeÉÃAzÀæ 940
MAzÀ£ÉAiÀÄ gÁeÉÃAzÀæ ZÉÆÃ¼À 924
MAzÀ£ÉAiÀÄ PÀÈµÀÚ 913

## N

n¥ÀÄà 953, 968
nÃ¥ÀÆ 961

## O

°À£ÀÄªÀÄAvÀ£ÀUÀgÀ 983
°Á°ÛVj 933
°À¼ÉÃ©ÃqÀÄ 985
°À¼ÉÃªÀiÁzÁ¥ÀÄgÀ 920
°ÀÄ®è°À½î 899
°ÀÄ°PÉgÉ 985
°ÀÄ°PÉgÉ l£À¯ï 986
°ÀAiÀÄªÀzÀ£ÀgÁAiÀÄgÀÄ 912
°ÀgÀªÀÅ 984
°ÁgÀß°À½î 919
°ÁgÉÆÃ°À½î, 935
°Àj°ÀgÀ zÀAqÀ£ÁAiÀÄPÀ 935
°Àj°ÀgÀ¥ÀÄgÀ 992
°ÀlÖt 944
°É¨ÉâgÀ¼ÀÄ 986
°É¨ÉâlÄÖ DAd£ÉÃAiÀÄ 991
°ÉªÀÄä£À°À½î 900
°ÉÃªÀÄVj 987
°ÉÃªÀÄVj ¥ÀQëzsÁªÀÄ 910
°ÉÃªÀiÁªÀw 965
°ÉÃªÉÄÃ±ÀégÀ 944
°ÉÆ£Áß ªÀgÀ 905
°ÉÆ£ÉßÃ£À°À½î 896, 988
°ÉÆ¸À§ÆzÀ£ÀÆgÀÄ 928, 989
°ÉÆ¸À§ÆzÀ£ÀÆj£À 948
°ÉÆ¸À°ÉÆ¼À®Ä 910, 990
°ÉÆ¸À°ÉÆ¼À°£À 912
°ÉÆ¸ÀPÀ£ÀßA¨Ár 914
°ÉÆ¸ÀPÉÆÃmÉ 988

°ÉÆ¼À®Ä 949
°ÉÆ¼É£ÀgÀ¹Ã¥ÀÄgÀzÀ ¥Á¼ÉÃUÁgÀ 980
°ÉÆA¨Á¼À) ªÀÄä£À 949
°ÉÆA¨Á¼ÀªÀÄä 923
°ÉÆAiÀÄì¼À
892, 896, 898, 915, 922, 929, 934, 938, 942, 945, 951, 953, 954, 957, 958, 959, 964, 965, 967, 978, 979, 980, 984, 988, 985, 988, 990
°ÉÆAiÀÄì¼À ªÀÄÄªÀÄär 947
°ÉÆAiÀÄì¼Àg 949
°ÉÆAiÀÄì¼ÀgÀ 893, 895, 897, 904, 908, 912, 925, 931, 941, 987
°ÉÆAiÀÄì¼ÉÃ±ÀégÀ 907, 908, 917
°ÉÆAUÀ£ÀÆgÀÄ 892
°ÉÆUÀgÀªÀÄä£À 959
°ÉeÁÓ¯ÉÕ 945
°ÉÊzÀgÀ£ÀÄ 971
°ÉÊzÀgÁ° 953, 968

P

PÀ« µÀqÀPÀëgÀzÉÃªÀ 894
PÀ£ÀÕ¯ï ¨ÉÃ°AiÀÄ ¸ÁägÀPÀ ¸ÀªÀiÁ¢ 974
PÀ£ÀßA¨Ár 912, 991
PÀ£ÉßÃ±ÀégÀ UÀÄr 913
PÁ®¨sÉÊgÀªÀ 901
PÀ®Äè ªÀÄ¹Ã¢ 981
PÀ®ÄÌtÂ 906
PÀ¯ÉèÃ±ÀégÀ 942
PÀ¯ÉèÃ±ÀégÀ UÀÄr 927
PÀ°è£ÁxÀ UÀÄr 985
PÁ²«±Àé£ÁxÀ 982, 990
PÁ²«±ÉéÃ±ÀégÀ 953
PÀ¸À®UÉgÉ 927
PÁ¼À¨sÉÊgÀªÉÃ±ÀégÀ 929
PÀ¼À¯É £ÁrUÉ 900
PÁ¼ÉÃ£À°À½î 986
PÀA§zÀ wgÀÄªÀÄ®zÉÃªÀ 977
PÀA§zÀ°À½î 902
PÀA¨sÉÃ±ÀégÀ 985
PÀªÀÄämÉÃ±ÀégÀ 977
PÀÄÄAw¨É1Ö 934
PÀÄÄAzÀ£À°À½î 987
PÀÆ¼ÀUÉgÉ 922, 923
PÁªÉÃj 966
PÀÈµÀÚ£À UÀÄr 916
PÀÈµÀÚgÁd¥ÉÃmÉ 910
PÀÈµÀÚgÁd¸ÁUÀgÀ 910

PÀÈµÀÚzÉÃªÀgÁAiÀÄ 948
PÀj¨sÀAl£À PÁ¼ÀUÀ 982
PÀjWÀlÖ 905
PÀmÉÖ ¥ÀgÀªÉÄÃ±Àéj 909
PÀqÀ§ vÁªÀÄæ ±Á¸À£À 913
PÁqÀPÉÆvÀÛ£À°À½î 984
PÀqÉ°É«ÄãUÉ 921
PÀtê¥ÀÄjPÉëÃvÀ 912
PÀuÉéÃ±ÀégÀ 912
PÀvÀÛjWÀlÖ 990
PÉ®UÉgÉ 918
PÉÃ±ÀªÀ 944
PÉÆ¼À 961
PÉÆªÉÄäÃgÀ°À½î 977
PÉÆÃmÉ¨ÉlÖ 933
PÉÆÃmÉgÁAiÀÄ 933
PÉÆAPÀuÉÃ±ÀégÀ 895
PÉÆqÉÃPÀ¯ï §¸ÀªÀtÚ 938
PÉÊ¯Á¸ÉÃ±ÀégÀ 910, 950
PÉÊ¯Á¸ÉÃ±ÀégÀ UÀÄr 916
PÉgÉvÉÆtÆÚgÀÄ 914
PÉgÉvÉÆtÆÚj 982
PÉgÉvÉÆtÆÚj£À 958

Q

QPÉÌÃgÀªÀÄä£À 908
QPÉÌÃj 906, 910
QPÉÌÃjAiÀÄ 908
QZÁÑ ªÀiÁ¹Û 938

R

rAPÁ 922

U

UÀÄ½UÉ °ÉÆ£ÀÄß 933
UÀÄÄ§eï 974
UÀÄªÀÄä£À°À½î 935
UÀÄÄqÀUÀ®è UÀÄr 931
UÀÄqÀÄUÀ£À°À½î 967
UÀAUÀ 892, 906, 924, 926, 946, 949, 950, 958
UÀAUÀ-°ÉÆAiÀÄì¼ÀgÀ 902
UÀAUÀ-ZÉÆÃ¼À 952
UÀAUÀgÀ 893, 900, 906
UÀAUÁzsÀgÉÃ±ÀégÀ 901, 902, 953

UÀd¥ÀÄµÁ×PÁgÀ 939
UÀgÀÄqÀ 937
UÀgÀÄqÀ PÉÆ¼À 955
UÀgÀÄqÀªÀÄÄÆwð 904
UÀgÀÄqÀgÀ 897
UÀUÀ£ÀZÀÄQÌ 966
UÉÆÃ¥Á®gÁAiÀÄ£À ¨ÁV¯ÉÃ 958
UÉÆÃ¥Á®PÀÈµÀÚ 912, 918, 921
UÉÆÃ¥Á®PÀÈµÀÚ UÀÄr 911
UÉÆÃ¥Á®PÀÈµÀÚ zÉÃªÁ®AiÀÄ 943
UÉÆÃ¸Á¬ÄWÁmï 974
UÉÆªÀÄðlªÀÄÄÆwð 938
UÉÆÃ«AzÀ£À°Àè½î 910, 919, 920
UÉÆÃ«AzÀ£À°Àè½îAiÀÄ ¥ÀAZÀ°AUÉÃ±ÀégÀ 898
UÉÆgÀªÀgÀ UÀÄr 931
UÉÆqÉ°ÉÆ¸À°Àè½î 919
UËgÉÃ±ÀégÀ 941
UËjÃ±ÀégÀ 929
UËvÀªÀÄ PÉëÃvÀæ 968, 976

V

vÀ¥À¹gÁAiÀÄ£À 926
vÁ®ÆPÀÄ PÉÃAzÀæ ªÀÄ¼ÀªÀ½î 982
vÀªÀÄär°À½î 980
vÀÆUÀÄ 972
vÁAqÀªÉÃ±ÀégÀ 949
vÀPÉÆÌÃ®A 900
vÉÆ¼À¹ 979
vÉÆAqÀ£ÀÆgÀÄ 914
vÉÆtÆÚj 968
vÉAV£ÀPÀlÖ 919
vÉAVÉÀWÀlÖ 908
vÉAVÉÀWÀlÖzÀ 907
vÉÊ®ÆgÀÄ 946
vÉgÀPÀuÁA© 917

W

w¥ÀÆgÀgÀÄ 922
wªÀÄätÚzÀAqÀ£ÁAiÀÄPÀ 960
wæPÀÆl ¥Á±ÀéðÀ f£Á®AiÀÄ 943
wæPÀÆl f£Á®AiÀÄ 990
WÀnPÁ¸ÁÜ£À 957
wgÀÄUÀuÉªÀÄqÀÄ 956

Z

ZÀ£ÀßÀlÖtzÀ ¥Á¼ÉÃUÁgÀ 904, 933
ZÀ£ÀßPÉÃ±ÀªÀ 895, 897, 899, 900, 904, 909, 953
ZÀ®ÄªÀ£ÁgÁAiÀÄt 982
ZÀ®ÄªÀ£ÁgÁAiÀÄt UÀÄr 982
ZÀ¯ÉèÃ±ÀégÀ 900
ZÁªÀÄÄAr¨ÉlÖ 915
zÀAqÀ£ÁAiÀÄPÀ 935
zÀÄUÁð-¥ÀgÀªÉÄÃ±Àéj 939
ZÀAzÀæªÀ£À 976
ZÀAzÀæªÀÄÆ°Ã±ÀégÀ 898
ZÀAzÀæªÀiË¼ÉÃ±ÀégÀ 921
ZÀAzÀæªÀiË¼ÉÃ±ÀégÀ, 901
zÀÄzÀÝ 925
zÀÄzÀÝzÀ ¥Á¼ÉÃUÁgÀ 925
zÁézÀ±Á¢vÀå 898
zÀjAiÀiÁzË®vï 973
ZÀlÖAUÉgÉ 917, 968
ZÀPÀæPÉÆ¼À 933
zÀqÀUÀ 924
ZÀZïð D¥sï ¢ C¸ÀªÀiïµÀ£ï 935
ZÉºßUÀgÁAiÀÄ 924
ZÉ®ÄªÀ£ÁgÁAiÀÄt 958, 959
zÉÃ±ÉÃ±ÀégÀ 910
zÉÃ±ÉÃ±ÀégÀ, 950
zÉÃ²¸ï' ¸Ëh 933
zÉÃ²PÀgÀ PÀAa£À ¸ËlÄ 925
zÉÃªÁ®AiÀÄ 957
zÉÃªÁ®AiÀÄUÀ¼ÀÄ 961
zÉÃªÀ¯Á¥ÀÄgÀ 926
zÉÃªÀgÀ°À½î 926
ZÉÆÃ¼À 892, 900, 940, 954, 959
ZÉÆÃ¼ÀgÀ 893
ZÉÆÃ¼ÀgÀ UÀÄr 935
zÉÆÃgÀ¸ÀªÀÄÄzÀæ 918
zÉÆArAiÀiÁªÁWÀ 969
zÉÆqÀØ CgÀ¹£ÀPÉgÉ 928
zÉÆqÀØ dlPÁ 933
zÉÆqÀØdlPÁ 944
zÉÆqÀØUÁrUÀ£À°À½î 929
ZËqÉÃ±Àéj 900, 925, 934
zsÀ£ÀUÀÆgÀÄ 929
zsÀªÀÄð¸ÀÜ¼ÀzÀ zsÀªÉÆÃðvÁÜ£À læ¸ïÖ 898
zsÀªÉÆÃðvÁÜ£À ¸À«Äw 896, 947

zsÀªÉAiÀÄÕvÀÁÜEÀ læ¸ïÖ 981